ಶ್ರೀಮತೇ ರಾಮಾನುಜಾಯನಮಃ

ತಿರುವರಂಗತ್ತಮುದನಾರ್ರವರಿಂದ ವಿರಚಿತವಾದ

# ಇರಾಮಾನುಶನೂತ್ತಂದಾದಿ
# ಕನ್ನಡ ಪ್ರತಿಪದಾರ್ಥ ತಾತ್ಪರ್ಯ


ಅನುವಾದಕ :

ಯಂ. ಸಿ. ವರದಾಚಾರ್



1959

ಈ ನನ್ನ ಉದ್ಯಮದಲ್ಲಿ ಸಲಹೆಗಳನ್ನು ಕೊಟ್ಟು ಸಹಕರಿಸಿದ ನಿವೃತ್ತ ಶಿರಸ್ತೇದಾರ್ ಶ್ರೀ ಯಂ. ಟಿ. ನಾರಾಯಣ ಐಯ್ಯಂಗಾರ್ಯರಿಗೂ ಮತ್ತು ಶ್ರೀ ಬಾಲಧನ್ವಿ ಕುಲತಿಲಕ ಶ್ರೀ ಯಂ ಸಿ. ಕೃಷ್ಣಸ್ವಾಮಿ ಅಯ್ಯಂಗಾರ್ಯರಿಗೂ ನನ್ನ ಅನಂತಾನಂತ ಧನ್ಯವಾದಗಳು.

—ಗ್ರಂಥಕರ್ತ

The Jupiter Press, Balepet, Bangalore 2.



ಶ್ರೀ ಭಾಷ್ಯಕಾರರು

# ಉಪೋದ್ಘಾತ

ಶ್ರಿಯಃಪತಿಯಾಗಿಯೂ, ಶ್ರೀ ವೈಕುಂಠನಿಕೇತನನಾಗಿಯೂ, ಅವಾಪ್ತಸಮಸ್ತಕಾಮನಾಗಿಯೂ, ಸಮಸ್ತ ಕಲ್ಯಾಣಗುಣಾತ್ಮಕನಾಗಿಯೂ, ನಿರತಿಶಯಾನಂದಯುಕ್ತನಾಗಿಯೂ, ಪರಮಕಾರುಣಿಕನಾಗಿಯೂ ಇರುವ ಸರ್ವೇಶ್ವರನಾದ ಶ್ರೀಮನ್ನಾರಾಯಣನು, ನಿತ್ಯವಿಭೂತಿಯಲ್ಲಿ ಭೋಗೋಪಕರಣನಾಗಿದ್ದು, ಲೀಲಾವಿಭೂತಿಯಲ್ಲಿರುವ ಸಂಸಾರಿಚೇತನರ ಉಜ್ಜೀವನಾರ್ಥಕ್ಕಾಗಿ ವೇದಾಂತಶಾಸ್ತ್ರಾರ್ಥವನ್ನು ಚತುರ್ಮುಖಬ್ರಹ್ಮನ ಮೂಲಕ ಅನುಗ್ರಹಿಸಿದನು.

ಈ ಶಾಸ್ತ್ರದ ಅರ್ಥವು ಸರ್ವೇಶ್ವರನ ಅನುಗ್ರಹಕ್ಕೆ ಪಾತ್ರರಲ್ಲದ ಸಾಮಾನ್ಯ ಚೇತನರಿಗೆ ಸುಲಭಸಾಧ್ಯವಾಗದೆ, ಕಾಲಕ್ರಮೇಣ ತತ್ವಜ್ಞಾನವು ಲೀನವಾಗಿ, ಜನರು ತಮ್ಮ ಇಷ್ಟಪ್ರಕಾರ ಅರ್ಥಮಾಡಿ ಬ್ರಹ್ಮಾನಂದಸುಖವನ್ನು ಕಳೆದುಕೊಂಡು ಸಂಸಾರ ಚಕ್ರದಲ್ಲಿ ಸಿಕ್ಕಿ ನರಳುತ್ತಿದ್ದರು.

ದ್ವಾಪರಯುಗದಲ್ಲಿ ಸರ್ವೇಶ್ವರನು ತಾನೇ ಶ್ರೀಕೃಷ್ಣನಾಗಿ ಅವತಾರವನ್ನು ತಾಳಿ, ಅರ್ಜುನನನ್ನು ಮುಂದಿಟ್ಟುಕೊಂಡು ಸರ್ವರಿಗೂ ಮನಮುಟ್ಟುವಂತೆ ಗೀತೋಪದೇಶವನ್ನು ಮಾಡಿ, ತತ್ವಜ್ಞಾನವನ್ನು ತಿಳಿಯಪಡಿಸಿ, ಕಲಿಯುಗವು ಆರಂಭವಾದ ನಲವತ್ತನೇ ದಿವಸದಲ್ಲಿ ನಿತ್ಯವಿಭೂತಿಗೆ ತೆರಳಿದನು. ತಾನು ಅನುಗ್ರಹಿಸಿ ಬಂದ ಗೀತೋಪದೇಶ ತತ್ವಜ್ಞಾನಪ್ರಚಾರವು ಮುಂದುವರಿಯಬೇಕೆಂದು ಉದ್ದೇಶಿಸಿ, ತಾನು ಹಿಂತೆರಳಿದ ಮೂರುದಿನಗಳಲ್ಲೇ ನಿತ್ಯವಿಭೂತಿಗೋಷ್ಠಿಯಿಂದ ಒಬ್ಬರಿಗೆ ದಿವ್ಯಜ್ಞಾನ ಚಕ್ಷುಸ್ಸುಗಳನ್ನು ದಯಪಾಲಿಸಿ, ಶ್ರೀ 'ಕುರುಕಾಪುರಿ' ಎಂಬ ನಗರದಲ್ಲಿ ಕಾರಿಯಾರ್ ಎಂಬುವರ ಪತ್ನಿಯಾದ ಉಡೈಯನಂಗೈಯಾರ್ [1]. ಎಂಬುವರ ಗರ್ಭದಲ್ಲಿ ಜನನವಾಗುವಂತೆ ಅನುಗ್ರಹಿಸಿದನು. ಇವರೇ ಸುಪ್ರಸಿದ್ಧರಾದ ನಮ್ಮಾಳ್ವಾರ್ರವರು. ಇವರು ಎಲ್ಲಾ ವೇದಗಳ ಸಾರವನ್ನು ದ್ರಾವಿಡಭಾಷೆಯಲ್ಲಿ ಸಕಲರಿಗೂ ವೇದ್ಯವಾಗುವಂತೆ ಪಾಶುರಗಳೆಂಬ ಪದ್ಯರೂಪದಲ್ಲಿ ಹಾಡಿ, ಮಧುರಕವಿ ಆಳ್ವಾರ್ರವರೇ ಮೊದಲಾದ ಸರ್ವರಿಗೂ ಉಪದೇಶಿಸಿ ಪ್ರಸಿದ್ಧರಾಗಿದ್ದರು. ಇವರ ಮುವತ್ತೈದನೇ ವಯಸ್ಸಿನಲ್ಲಿ ಸರ್ವೇಶ್ವರನು ಇವರನ್ನು ತನ್ನ ನಿತ್ಯವಿಭೂತಿಗೆ ಕರೆಸಿಕೊಂಡನು.

1. ನಾಥನಾಯಕಿ

ಕ್ರಮವಾಗಿ ಕಲಿಯುಗದ ಇಪ್ಪತ್ತೊಂಬತನೇ ವರ್ಷದಲ್ಲಿ ಶಠಕೋಪಾಚಾರ್ಯರೂ, ನಲವತ್ತೆಂಟನೇ ವರ್ಷದಲ್ಲಿ ಶೇರಿಯನಾಳ್ವಾರರೂ, ತೊಂಭತ್ತೆಂಟನೇ ವರ್ಷದಲ್ಲಿ ಆಂಡಾಳ್ ಎಂಬ ಗೋದಾದೇವಿಯೂ, ಇನ್ನೂರ ಎಂಭತ್ತೊಂಭತ್ತನೇ ವರ್ಷದಲ್ಲಿ ತೊಂಡರಡಿಪ್ಪೊಡಿಯಾಳ್ವಾರರೂ, ಮೂನ್ನೂರ ನಲವತ್ತಮೂರನೇ ವರ್ಷದಲ್ಲಿ ತಿರುಪ್ಪಾಣಾಳ್ವಾರರೂ, ಮೂನ್ನೂರ ತೊಂಭತ್ತೆಂಟನೇ (398) ವರ್ಷದಲ್ಲಿ ತಿರುಮಂಗೈಯಾಳ್ವಾರರೂ ಅವತರಿಸಿ, ಸಮುದ್ಯಾರ್ಚ್ಯನೆಯೆಂ ಪರತತ್ವವನ್ನು ವಿಶದವಾಗಿ ದ್ರಾವಿಡಶಾಸ್ತ್ರರೂಪದಲ್ಲಿ ಹಾಡಿ, ಲೋಕದ ಜನರಿಗೆಲ್ಲಾ ಮೋಕ್ಷಮಾರ್ಗವನ್ನು ತೋರಿಸಿಕೊಟ್ಟರು.

ಕಾಲವೈಪರೀತ್ಯದಿಂದ ಇವುಗಳೆಲ್ಲಾ ಕ್ರಮೇಣ ಲುಪ್ತವಾಗುತ್ತಾ ಬಂದುವು. ಪ್ರಸ್ಥಾನತ್ರಯ ಅರ್ಥಗಳನ್ನು ಮರೆತು, ಲೋಕದವರೆಲ್ಲಾ ಸಂಸಾರಚಕ್ರದಲ್ಲಿ ಸಿಲುಕಿ ತೊಳಲುವ ಸಂಭವವು ಪುನಃ ಒದಗಿತು.

ಹೀಗಿರಲು ಸುಮಾರು ನೂರಾರು ವರ್ಷಗಳ ನಂತರ, ಕಲಿಯುಗದ ಮೂರು ಸಾವಿರದ ಆರನೂರ ಎಂಭತ್ತೈದನೇ ವರ್ಷದಲ್ಲಿ [1], ವೀರನಾರಾಯಣಪುರದಲ್ಲಿ ನಾಥಮುನಿಗಳೆಂಬ ಆಚಾರ್ಯರು ಅವತರಿಸಿದರು. ಇವರು ತಮ್ಮ ಯೋಗಾಭ್ಯಾಸಬಲದಿಂದ ತ್ರಿನಗರಿಯಲ್ಲಿ ಅಂತರ್ಧಾನದಲ್ಲಿ ಬಿಜಯಮಾಡಿರುವ ಶಠಾರಿ ಆಳ್ವಾರನ್ನು ಪ್ರತ್ಯಕ್ಷ ಸಾಕ್ಷಾತ್ಕರಿಸಿಕೊಂಡು ಅವರಿಂದ ದಿವ್ಯಪ್ರಬಂಧ ರತ್ನವನ್ನು ಪಡೆದು, ರಹಸ್ಯತ್ರಯಗಳೆಂಬ, ತಿರುಮಂತ್ರ, ದ್ವಯ, ಚರಮಶ್ಲೋಕಾದಿಗಳನ್ನೂ, (4000) ನಾಲ್ಕುಸಾವಿರ ದಿವ್ಯಪ್ರಬಂಧ ಗ್ರಂಥಗಳನ್ನೂ, ಅಖಿಲ ದರ್ಶನ ತಾತ್ಪರ್ಯಗಳನ್ನು, ಅಷ್ಟಾಂಗ ಯೋಗರಹಸ್ಯವನ್ನೂ ಪ್ರಸಾದರೂಪವಾಗಿ ಪಡೆದು ಕೃತಾರ್ಥರಾಗಿ, ತಮ್ಮ ಜನ್ಮಭೂಮಿಯಾದ ವೀರನಾರಾಯಣಪುರಕ್ಕೆ ಹಿಂತಿರುಗಿ ಮನ್ನನಾರ್ ಸನ್ನಿಧಿಯಲ್ಲಿ, ತಾವು ಅಂತರಂಗದಿಂದ ಬಂದವುಗಳನ್ನೆಲ್ಲಾ ಪಠಿಸಿ, ಶ್ರೀ ವೈಷ್ಣವರೆಲ್ಲಾ ಉದ್ಧರಿಸಿ, ಲುಪ್ತವಾಗಿದ್ದ ದಿವ್ಯಪ್ರಬಂಧ ಗ್ರಂಥಗಳಿಗೆ ಪುನರ್ಜನ್ಮವಿತ್ತರು.

ಅಲ್ಲಿಂದ ಮುಂದೆ, ಶ್ರೀ ಪುಂಡರೀಕಾಕ್ಷರು ಶ್ರೀ ರಾಮಮಿಶ್ರರು, ಶ್ರೀ ಯಾಮುನಾಚಾರ್ಯರು, ಶ್ರೀ ರಾಮಾನುಜಾಚಾರ್ಯರು, ಮೊದಲಾದ ಅನೇಕ ಆಚಾರ್ಯರುಗಳು ತಮ್ಮ ಶಕ್ತ್ಯನುಸಾರ ಪರತತ್ವ ವಿಚಾರವನ್ನು ಪ್ರಚಾರಮಾಡುತ್ತಾ ಶ್ರೀ ವೈಷ್ಣವಮತವನ್ನು ವೃದ್ಧಿಪಡಿಸಿಕೊಂಡು ಬಂದರು.

---

1. 506 ಶಾ-ಶಕ (584 A.D.) ವರ್ಷದಲ್ಲಿ.

ಇದ್ದರೂ ಪರತತ್ವ ವಿಚಾರವು ಚೇತನವರ್ಗಕ್ಕೆ ಮನವಟ್ಟುವಂತೆ ಪ್ರಚಾರ ಕಾರ್ಯವು ನಡೆಯುತ್ತಿಲ್ಲವೆಂದು ಯೋಚಿಸಿಟ್ಟು, ಸರ್ವೇಶ್ವರನು ನಿತ್ಯವಿಭೂತಿಯಲ್ಲಿರುವ ಆದಿಶೇಷನನ್ನು ಈ ಲೀಲಾವಿಭೂತಿ ಎಂಬ ಭೂಲೋಕದಲ್ಲಿ ಈ ಕಾರ್ಯಕ್ಕಾಗಿ ಅವತಾರಮಾಡಲು ನಿಯಮಿಸಿದನು.

ಅದರಂತೆ ಆದಿಶೇಷನು, ಕಲಿಯುಗ ಪ್ರಾರಂಭವಾದ (4119) ನೇ ವರ್ಷದಲ್ಲಿ ಅಂದರೆ (ಕ್ರಿ. ಶ.) 1018 ನೇ ವರ್ಷದಲ್ಲಿ, ಇಲ್ಲಿಗೆ ಒಂಭೈನೂರ ನಲವತ್ತಾರನೇ ವರ್ಷದ ಹಿಂದೆ (5065–4119), ಕಾಂಚೀಪುರದ ಸಮೀಪದಲ್ಲಿರುವ ಶ್ರೀ ಪೆರುಂಬೂದೂರ್ ಎಂಬ ಗ್ರಾಮದಲ್ಲಿ, ಆಸೂರಿ ಕುಲ ತಿಲಕರಾದ ಕೇಶವಸೋಮಯಾಜಿಯವರ ಧರ್ಮಪತ್ನಿಯೂ, ಶ್ರೀ ಯಾಮುನಾಚಾರ್ಯರ ಮುಖ್ಯಶಿಷ್ಯರಾದ ಪೆರಿಯತಿರುಮಲೈನಂಬಿಯವರ ಸಹೋದರಿಯೂ ಆದ ಭೂದೇವಿ (ಕಾಂತಿಮತಿ)ಯು ಗರ್ಭಾಂಬುಧಿಯಲ್ಲಿ "ರಾಮಾನುಜ ದಿವಾಕರ" ರೂಪಿಯಾಗಿ ಅವತರಿಸಿದನು.

ಅನನ್ತಃ ಪ್ರಥಮಂ ರೂಪಂ, ಲಕ್ಷ್ಮಣಸ್ತು ತತಃ ಪರಂ ।
ಬಲಭದ್ರಸ್ತೃತೀಯಸ್ತು, ಕಲೌ ಕಶ್ಚಿದ್ಭವಿಷ್ಯತಿ ॥

ಎನ್ನುವಂತೆ ಭವಿಷ್ಯದಾಚಾರ್ಯರಾದ ಈ ಮಹಾಪ್ರಭುಗಳ ಅವತಾರದಿನದಿಂದಲೇ ಭೂಲೋಕಕ್ಕೇ ಅದ್ಭುತವಾದ ಕಾಂತಿಯುಂಟಾಯಿತು.

ಇವರಿಗೆ ಸಕಾಲದಲ್ಲಿ ಚೌಲೋಪನಯನಗಳು ಶಾಸ್ತ್ರೋಕ್ತವಾಗಿ ನಡೆದುವು. ವಿದ್ಯಾಭ್ಯಾಸಂಗಗಳು ಯಥಾಕ್ರಮದಲ್ಲಿ ನಡೆದಮೇಲೆ, ತಮ್ಮ ಹದಿನಾರನೇ ವರ್ಷದೊಳಗೆ ಸಂಪೂರ್ಣವಾದ ಶಿಕ್ಷಣವನ್ನು ಹೊಂದಿ ಇವರು ಗೃಹಸ್ಥಾಶ್ರಮವನ್ನು ಸ್ವೀಕರಿಸಿದರು.

ಇವರು, ತಮ್ಮ ಪಾಂಡಿತ್ಯದಿಂದಲೂ, ಆದಿಶೇಷಾವತಾರ ಬಲದ ಜ್ಞಾನ ವಿಕಾಸದಿಂದಲೂ, ಸರ್ವೇಶ್ವರನ ಅನುಗ್ರಹದಿಂದಲೂ, ಬ್ರಹ್ಮಸೂತ್ರಕ್ಕೆ ಬರೆಯಲ್ಪಟ್ಟಿದ್ದ "ಬೋಧಾಯನ" "ಶಂಕರ" "ಭಾಸ್ಕರ" "ಯಾದವ ಪ್ರಕಾಶಾದಿ"ಗಳ ವ್ಯಾಖ್ಯಾನಗಳನ್ನು ಮತಭೇದವಿಲ್ಲದೆ ಕೂಲಂಕುಷವಾಗಿ ಪರಿಶೀಲಿಸಿ ಸತ್ಯಾಂಶವನ್ನು ಗ್ರಹಿಸಿ ಬುದ್ಧಿಗನುಸೃತವೇ ಮುಖ್ಯವೆಂದು ನಿರ್ಧರಿಸಿ, ನಿಷ್ಪಕ್ಷಪಾತ ಮನಸ್ಸಿನಿಂದ ಶೋಧಿಸಿ, "ಬೋಧಾಯನ" ವೃತ್ತಿಯೇ ಆಧಾರವೆಂದು ನಿರ್ಧರಿಸಿದರು.

ಇವರು, ಕಾಂಚೀಪುರದಲ್ಲಿ ಏಕದಂಡಿಯಾದ "ಯಾದವಪ್ರಕಾಶ"ರೆಂಬ ಸನ್ಯಾಸಿಗಳು ವೇದಾಂತ ಪೂರ್ವಪಕ್ಷವನ್ನು ಅರ್ಥಸಹಿತ ಹೇಳುತ್ತಿರುವರೆಂದು ತಿಳಿದು, ತಾವೂ (ರಾಮಾನುಜರೂ) ಚಿಕ್ಕವಯಸ್ಸಿನಲ್ಲೇ ಮತಭೇದವಿಲ್ಲದೆ ಅವರಲ್ಲಿ ಪಾಠಕಲಿಯಲು ಸೇರಿದರು. ಆ ಗುರುಗಳಿಂದ ಸಮಂಜಸಾರ್ಥಗಳು ಬರದಿದ್ದ ಕಡೆಗಳೆಲ್ಲಾ ವಿಮರ್ಶಿಸಿ ಸಮೀಚೀನವಾದ ಅರ್ಥಗಳನ್ನು ಸೂಚಿಸುತ್ತಿದ್ದರು. ಇದು ಗುರುಗಳಿಗೆ ಸರಿಬೀಳದಿದ್ದುದರಿಂದ, ಇವರೂ ಅವರ ಬಳಿ ಪಾಠಕ್ಕೆ ಹೋಗುತ್ತಿದ್ದುದನ್ನು ನಿಲ್ಲಿಸಿ, ಶ್ರೀ ತಿರುಕ್ಕಚ್ಚಿನಂಬಿಯವರನ್ನು ಆಶ್ರಯಿಸಿ, ಶ್ರೀ ಕಾಂಚೀಪುರದಲ್ಲಿ ಬಿಜಯಿಸಿರುವ "ಶ್ರೀ ವರದರಾಜ" ಸ್ವಾಮಿಯವರಿಗೆ ನಿತ್ಯವೂ ಅಭಿಷೇಕ ತೀರ್ಥವನ್ನು ತಂದು ಸಮರ್ಪಿಸುವ ಕೈಂಕರ್ಯವನ್ನು ಮಾಡುತ್ತಾ ಬಂದರು.

ಈ ಪ್ರಕಾರ ಎಲ್ಲಾ ಗ್ರಂಥಗಳನ್ನೂ ಪರಿಶೀಲಿಸಿ, ಸಕಲ ಶಾಸ್ತ್ರ ಪ್ರವೀಣರಾಗಿ, ತಿರುಕ್ಕಚ್ಚಿನಂಬಿಯವರ ಮುಖೇನ "ವರದರಾಜ" ದೇವರು ಅನುಗ್ರಹಿಸಿದ ಆರು ಸೂಕ್ತಿಗಳಿಂದ ತತ್ವಹಿತಪುರುಷಾರ್ಥಗಳನ್ನೆಲ್ಲಾ ವಿಶದವಾಗಿ ತಿಳಿದು, ಪೆರಿಯನಂಬಿಯವರನ್ನು ("ಮಹಾಪೂರ್ಣ, ಪರಾಂಕುಶದಾಸ") ಆಚಾರ್ಯರನ್ನಾಗಿ ವರಿಸಿ ಅವರಿಂದ ದರ್ಶನದ ರಹಸ್ಯಾರ್ಥಗಳನ್ನೆಲ್ಲಾ ಕೇಳಿ ತಿಳಿದುಕೊಂಡು, ತಿರುಕ್ಕೋಟ್ಟಿಯೂರ್ ನಂಬಿಯವರಿಂದ ತಿರುಮಂತ್ರದ, ರಹಸ್ಯವನ್ನೂ ತಿಳಿದು, ನಂತರ ಅವರ ಮಾತುಲರಾದ (ಸೋದರಮಾವ) ಪೆರಿಯ-ತಿರುಮಲೈನಂಬಿಯವರಿಂದ ಸಂಪೂರ್ಣ ರಾಮಾಯಣಸಾರವನ್ನು ಗ್ರಹಿಸಿಕೊಂಡು, ಸನ್ಯಾಸಾಶ್ರಮವನ್ನು ಸ್ವೀಕರಿಸಿ, ಶ್ರೀ ರಂಗನಾಥಸ್ವಾಮಿಯ ನಿತ್ಯಕೈಂಕರ್ಯದಲ್ಲಿ ನಿರತರಾಗಿದ್ದು, ವಿಶಿಷ್ಟಾದ್ವೈತ ಸಿದ್ಧಾಂತ ಪ್ರಚಾರವನ್ನು ಮಾಡುತ್ತಾ ಬಂದರು. ಇವರ ಪಾಂಡಿತ್ಯವೂ ಕೀರ್ತಿಯೂ ಎಲ್ಲೆಲ್ಲೂ ಹರಡಿ ಸರ್ವದಿಕ್ಕುಗಳಿಂದಲೂ ಯಾದವಪ್ರಕಾಶರೇ ಮೊದಲಾದ ಅನೇಕರು ತಂಡತಂಡವಾಗಿ ಬಂದು ಇವರನ್ನು ಆಶ್ರಯಿಸಿ ಉಜ್ಜೀವಿಸಿದರು.

ನಮ್ಮ ಕರ್ನಾಟಕ ದೇಶದ ಪ್ರಜೆಗಳಲ್ಲಿ ಶ್ರೀ ವೈಷ್ಣವ ತತ್ವವನ್ನು ಉಪದೇಶಮಾಡಬೇಕೆಂಬ ಮನೋದ್ದೇಶದಿಂದ ಕ್ರಿಮಿಕಂಠ ಚೋಳರಾಜನ ಉಪದ್ರವವ್ಯಾಜದಿಂದ ಈ ಮೈಸೂರು ದೇಶಕ್ಕೆ ದಯಮಾಡಿಸಿ, ತೊಂಡನೂರು

ಸಂಸ್ಥಾನದ ರಾಜನಾದ ಬಿಟ್ಟಿದೇವನನ್ನು ತನ್ನ ಶಿಷ್ಯನನ್ನಾಗಿ ಸ್ವೀಕರಿಸಿ, ಅವನಿಗೆ ವಿಷ್ಣುವರ್ಧನನೆಂಬ ನಾಮಧೇಯವನ್ನು ಕೊಟ್ಟು, ಜೈನ-ಮತಾನುಯಾಯಿಗಳನ್ನು ಯಥಾರ್ಥಜ್ಞಾನವಾದದಿಂದ ಜಯಿಸಿ, ತಿರುನಾರಾಯಣಪುರಕ್ಕೆ (ಮೇಲುಕೋಟೆ—ಅಥವಾ ಯಾದವಗಿರಿಗೆ) ದಯಮಾಡಿಸಿ, ಅಲ್ಲಿ ಹುತ್ತದಿಂದ ಆವರಿಸಲ್ಪಟ್ಟು ಅಗೋಚರವಾಗಿದ್ದ ತಿರುನಾರಾಯಣ ಸ್ವಾಮಿಯವರನ್ನು ಸಾಕ್ಷಾತ್ಕರಿಸಿ, ಎಲ್ಲರಿಗೂ ಪ್ರತ್ಯಕ್ಷ ಮಾಡಿಕೊಟ್ಟು, ನಂತರ—ಇಲ್ಲಿಗೆ ತಕ್ಕ ಉತ್ಸವ ಮೂರ್ತಿ ಇಲ್ಲದಿರುವದನ್ನು ಚಿಂತಿಸುತ್ತಿರುವಾಗ, ದೈವಾನುಗ್ರಹದಿಂದ ಸ್ವಪ್ನಮುಖೇನ ಉತ್ಸವ ಮೂರ್ತಿಯು ದೆಹಲಿಯಲ್ಲಿರುವದನ್ನು ತಿಳಿದು, ಅಲ್ಲಿಗೆ ಹೋಗಿ, ನವಾಬರ ಅಂತಃಪುರದಲ್ಲಿ ದಯಮಾಡಿಸಿದ್ದ ಶ್ರೀ ಚಲುವರಾಯಸ್ವಾಮಿಯವರನ್ನು ಪಡೆದು, ಈ ಮೇಲುಕೋಟೆಗೆ ಬಿಜಯಮಾಡಿಕೊಂಡು ಬಂದು ಪ್ರತಿಷ್ಠಿಸಿ, ದೇವಸ್ಥಾನವನ್ನೂ ಗರ್ಭಗುಡಿ ಗೋಪುರಗಳನ್ನೂ ಶ್ರೀ ವಿಷ್ಣುವರ್ಧನರಾಯನ ಮೂಲಕ ಕಟ್ಟಿಸಿ ಹನ್ನೆರಡು ವರುಷಗಳ ಕಾಲ ಈ ನಾಡಿನ ಜನರಿಗೆ ತತ್ವಹಿತ ಪುರುಷಾರ್ಥಗಳನ್ನು ಉಪದೇಶಮಾಡಿ, ಪರಮೋಪಕಾರ ಮಾಡಿದರು.

ಸಕಲ ಶಾಸ್ತ್ರಗಳನ್ನೂ ಕಲಿತು ಪಾಂಡಿತ್ಯವನ್ನು ಪಡೆದಿದ್ದ ಈ ಯತಿವರ್ಯರು ಚೇತನವರ್ಗಗಳ ಉಜ್ಜೀವನಕ್ಕಾಗಿ ಹಗಲೂ ರಾತ್ರಿಯೂ ಶ್ರಮಪಟ್ಟು, "ಸರ್ವರಿಗೂ ಮೋಕ್ಷವು ಸಿಕ್ಕಬೇಕು; ಸರ್ವರೂ ವರ್ಣಭೇದವಿಲ್ಲದೆ ಸರ್ವೇಶ್ವರನನ್ನು ಅರಿಯುವ ಶಕ್ತಿಯನ್ನು ಗಳಿಸಬೇಕು. ಶಾಸ್ತ್ರಗಳ ನಿರ್ಣಯ ಸೂತ್ರಗಳನ್ನು ಸರ್ವರೂ ಕಾರ್ಯರೂಪಕ್ಕೆ ತರಬೇಕು. ಸರ್ವರೂ ಮುಂದ ಸಂತತಿಗಳಿಗಾಗಿ ಶ್ರಮಿಸಿ ಅವರಿಗೆ ಉಜ್ಜೀವನ ಮಾರ್ಗವನ್ನು ಕಲ್ಪಿಸಬೇಕು"—ಎಂದು ಸಂಕಲ್ಪಿಸಿ, ಸರ್ವವಿಧದಲ್ಲಿಯೂ ಸರ್ವ ಕಾಲದಲ್ಲಿಯೂ ಸರ್ವದಾ ಉಜ್ಜೀವನೋಪಾಯವನ್ನು ತಿಳಿಸುವಂತೆ ತಮ್ಮ ಉಪದೇಶವನ್ನು ಪ್ರಚಾರತ್ವೇನ ಬೋಧಿಸಲು ಎಪ್ಪತ್ತನಾಲ್ಕು ಮುಖ್ಯ ಶಿಷ್ಯರನ್ನು ಏರ್ಪಡಿಸಿದರು.

ಹೀಗಿರುವ ಕಾಲದಲ್ಲಿ ಶ್ರೀರಂಗದ ದೇವಾಲಯದ ಅಧಿಕಾರಿಗಳಾದ ಅಮುದನಾರ್ರೆಂಬುವರು ಸರ್ವೇಶ್ವರನನ್ನು ಸಾಕ್ಷಾತ್ಕರಿಸುವ ಮಾರ್ಗವನ್ನು ತಿಳಿಯುವ ಇಷ್ಟವನ್ನು ಗಮನಿಸಿ, ಸ್ವಾಮಿ ಎಂಬೆರುಮಾನಾರ್ರವರು [1] ತಮ್ಮ ನಿರ್ಹೇತುಕ ಕೃಪೆಯಿಂದ ತಮ್ಮ ಪ್ರಥಮ ಶಿಷ್ಯರಾದ ಕೂರತ್ತಾಳ್ವಾರವರ

---

1. ರಾಮಾನುಜಾಚಾರ್ಯರು.

ಮೂಲಕ ಶ್ರೀ ಅಮುದನಾರ್ರಿಗೆ ಶಾಸ್ತ್ರಾರ್ಥಗಳು ಚೆನ್ನಾಗಿ ಉಪದೇಶವಾಗುವಂತೆ ಅನುಗ್ರಹಿಸಿದರು.

ಹೀಗೆ ಯತಿವರ್ಯರ ಚರಣಕಮಲಗಳನ್ನು ಆಶ್ರಯಿಸಿ ತದೇಕ ಚಿತ್ತರಾಗಿ ಶ್ರೀ ಅಮುದನಾರ್ರವರು ಸರ್ವೇಶ್ವರನ ಅನುಭವಮಾಡಿಕೊಂಡಿದ್ದರು.

ಕ್ರಮೇಣ ಈ ಯತಿವರ್ಯರ ಕೃಪಾಗುಣ, ಉದಾರಮನಸ್ಸು, ಸರ್ವ ಜನೋದ್ಧಾರಕ ಆಸಕ್ತಿ, ಆಚಾರ್ಯನಿಷ್ಠೆಯ ಪ್ರಭಾವ, ಸತ್ಯಮಾರ್ಗಪ್ರವರ್ತನೆಯ ಆಕಾಂಕ್ಷೆ, ಸ್ವಪ್ರಯೋಜನತ್ಯಾಗ, ಮುಂತಾದ ಕಲ್ಯಾಣಗುಣಗಳನ್ನು ವಿವರಿಸಿ ದ್ರಾವಿಡ ಭಾಷೆಯಲ್ಲಿ ಪ್ರತಿಯೊಂದು ಪಾಶುರ (ಪದ್ಯ)ದಲ್ಲೂ "ರಾಮಾನುಜ" ಎಂಬ ರಸಾಮೃತ ನಾಮವನ್ನು ಸೇರಿಸಿ ಅಂತಾದಿ ಕ್ರಮದಲ್ಲಿ (108) ಪಾಶುರ (ಪದ್ಯ)ಗಳನ್ನು ಶ್ರೀ ಅಮುದನಾರ್ರವರು ಅದ್ಭುತವಾಗಿ ರಚಿಸಿ ಯತಿವರ್ಯರಿಗೆ ಅರ್ಪಿಸಿದರು. ಈ ಪ್ರಬಂಧವೇ ಶ್ರೀ ವಿಶಿಷ್ಟಾದ್ವೈತ ಸಿದ್ಧಾಂತದವರ "ಪ್ರಪನ್ನ ಗಾಯತ್ರೀ" ಎಂಬುವದು.

ಈ ರಾಮಾನುಜನೂತ್ತಂದಾದಿ ಎಂಬ ಪ್ರಬಂಧದ ಕನ್ನಡ ವ್ಯಾಖ್ಯಾನ ಕರ್ತನಾದ ನಾನು ಶ್ರೀಮಾನ್ ದ್ರಾವಿಡ ಭಾಷಾ ವಿದ್ವಾನ್ ತೋತಾದ್ರಿ ರಾಮಾನುಜಾಚಾರ್ಯರವರಲ್ಲಿ ಕಾಲಕ್ಷೇಪಮಾಡಿ ಅವರ ಅನುಗ್ರಹದಿಂದ ನನ್ನ ಕನ್ನಡ ನಾಡಿನ ಭಕ್ತರ ಉಪಯೋಗಾರ್ಥವಾಗಿ "ಈ ಪ್ರಪನ್ನ ಗಾಯತ್ರಿ" ಯ 108 ಪಾಶುರ (ಪದ್ಯ) ಗಳಿಗೂ ಪ್ರತಿಪದಾರ್ಥ ತಾತ್ಪರ್ಯವನ್ನೂ ಬರೆದು, ಶ್ರೀಮದ್ವೇದಮಾರ್ಗ ಪ್ರತಿಷ್ಠಾಪನಾಚಾರ್ಯರಾಗಿಯೂ ಉಭಯವೇದಾಂತ ಪ್ರವರ್ತನಾಚಾರ್ಯರಾಗಿಯೂ ಶ್ರೀ ವಿಶಿಷ್ಟಾದ್ವೈತ ಸಿದ್ಧಾಂತ ನಿರ್ಧಾರಣ ಸಾರ್ವಭೌಮರಾಗಿಯೂ ಶ್ರೀಮದವನಸ್ಥ್ಯ – ಪೀಠಾಧ್ಯಕ್ಷರಾಗಿಯೂ, ಶ್ರೀ ಮದನಾದಿ ಎಂದ್ಯನೆಂಬ ಸಂಸ್ಥಾನದ ಜಗದ್ಗುರುಗಳಾದ ಅನಂತಾಂಪಿಳ್ಳೈ ವಂಶದ ಸ್ವಾಚಾರ್ಯರಾದ ಶ್ರೀ ಶ್ರೀ ತಿರುಮಲೈ ಅನಂತಾಂಪಿಳ್ಳೈ ಮುಂದೆಯಂ ಅಳ್ವಾರ್ ತಿರುಮಲೈಯಂಗಾರ್ ಸ್ವಾಮಿಗಳವರ ದಿವ್ಯಚರಣಕಮಲಗಳಲ್ಲಿ ಈ ಪ್ರಬಂಧ ಗ್ರಂಥವನ್ನು ಭಕ್ತಿಪುರಸ್ಸರವಾಗಿ ಅರ್ಪಿಸುತ್ತೇನೆ.

**ಯಂ. ಸಿ. ವರದಾಚಾರ್ ಶರ್ಮ.**

# ಮಂಡ್ಯದ ಸಂಸ್ಥಾನದ ಜಗದ್ಗುರುಗಳವರು



ವಿದ್ವತ್ ಸಾರ್ವಭೌಮ

**ಶ್ರೀ।ಉ।ವೆ। ತಿರುಮಲೈ ಅನನ್ದಾಂಪಿಳ್ಳೈ ಮಂಡಯಂ ಆಳ್ವಾರ್ ಸ್ವಾಮಿಗಳ್**

ಶ್ರೀಮಚ್ಛ್ರೀಷ ಕುಲಾಂಬುರಾಶಿ ಶಶಿನಂ ಶ್ರೀತಾತವರ್ಯಾತ್ಮಜಂ ।
ತಲ್ಲಬ್ಧಾಖಿಲ ವೇದಸಾರ ಮನಃರಾಜಾರ್ಥ ತ್ರಯಾಲಂಕೃತಂ ॥
ಶ್ರೀರಾಮಾನುಜ ಯೋಗಿವರ್ಯಕೃಪಯಾ ಪ್ರಾಪ್ತಾಗಮಾನ್ತದ್ವಯಂ ।
ವಾತ್ಸಲ್ಯಾಂಬುನಿಧಿಂ ಪರಾಂಕುಶಮುನಿ ಶ್ರೀಶೈಲವರ್ಯಂ ಭಜೇ ॥ ೧ ॥
ಪೂರ್ವಾಷಾಢಾ ಯುತೇಮಾಸಿ ಕಟಕೇ ಕಲಿತೋದಯಂ ।
ಶ್ರುತ್ಯಂತದ್ವಯಸಾರಜ್ಞಂ ಶ್ರೀ ಶಠಾರಿಗುರುಂ ಭಜೇ ॥ ೨ ॥

ಶ್ರೀಃ

ಶ್ರೀಮತೇ ರಾಮಾನುಜಾಯ ನಮಃ

ಶ್ರೀಮದನನ್ತಾರ್ಯ ಮಹಾಗುರವೇ ನಮಃ

## ಶ್ರೀ ಶಠಗೋಪ ಶ್ರೀಶೈಲಾರ್ಯ ಮಹಾಗುರವೇ ನಮಃ

---

ಶ್ರೀಮನ್ನಿಗಮಾಗಮ ಪ್ರತಿಷ್ಠಾಪನಾಚಾರ್ಯ, ಉಭಯವೇದಾನ್ತ ಪ್ರವರ್ತಕಾಚಾರ್ಯ, ಶಾನ್ತಶಮದಮಾದ್ಯನನ್ತ ಕಲ್ಯಾಣಗುಣಗಣಪರಿಪೂರ್ಣ, ಶ್ರೀಮದ್ರಾಮಾನುಜ ಸಿದ್ಧಾನ್ತನಿರ್ಧಾರಣ ಸಾರ್ವಭೌಮ, ಶ್ರೀಮಂಡಯಂ ಸಂಸ್ಥಾನ ಜಗದ್ಗುರು.

ಶ್ರೀ ಶ್ರೀ ಶ್ರೀ ಪರಮಪೂಜ್ಯ ಅನನ್ತಾಗ್ರಣೀ **ಮಂಡಯಂ ಆಳ್ವಾರ್ ಸ್ವಾಮಿ**ಗಳವರ ಚರಣಕಮಲಗಳಲ್ಲಿ ಆಶ್ರಯಿಸಿರುವವರಲ್ಲಿ ಅಗ್ರಗಣ್ಯರಾದ ಶ್ರೀಮಾನ್ ಮಂಡಯಂ ಚಕ್ರವರ್ತಿ ವರದಾಚಾರ್ಯರು ಶ್ರೀ ಶ್ರೀ ಸ್ವಾಮಿಗಳವರ ಕೃಪಾಕಟಾಕ್ಷದಿಂದ ಹೊಂದಿದ ದಿವ್ಯಜ್ಞಾನದಿಂದ "**ಪ್ರಪನ್ನಗಾಯತ್ರೀ**" ಎಂದು ಪ್ರಸಿದ್ಧವಾದ "**ಶ್ರೀರಾಮಾನುಜ ನೂತ್ತಂದಾದಿ**" ಎಂಬ ಶ್ರೇಷ್ಠತಮವಾದ ದಿವ್ಯಪ್ರಬಂಧವನ್ನು ಕನ್ನಡದೇಶದವರಿಗೆ ಸುಲಭವಾಗಿ ಬೋಧೆಯಾಗುವಂತೆ ಕನ್ನಡಭಾಷೆಯಲ್ಲಿ ರಚಿಸಿರುತ್ತಾರೆ. ಇವರ ಉದ್ಯಮವು ಬಹಳ ಶ್ರೇಯಸ್ಕರವಾದುದು.

"**ಶ್ರೀರಾಮಾನುಜನೂತ್ತಂದಾದಿ**" ಎಂಬ ಪ್ರಬಂಧವು ಶ್ರೀವೈಷ್ಣವ ಸಿದ್ಧಾನ್ತಪ್ರತಿಷ್ಠಾಪನಾಚಾರ್ಯರಾದ "**ಶ್ರೀರಾಮಾನುಜಾಚಾರ್ಯ**"ರ ಶಿಷ್ಯರಾದ "**ತಿರುವರಂಗತ್ತಮುದನಾರ್**" ಎಂಬ ಕವಿಶ್ರೇಷ್ಠರು ರಚಿಸಿ ಶ್ರೀರಾಮಾನುಜಾಚಾರ್ಯರಿಗೆ ಅರ್ಪಿಸಿದ 108 ಪದ್ಯಗಳನ್ನೊಳಗೊಂಡ ಕವಿತಾಮಾಲೆ. ಇದರಲ್ಲಿ ಮೋಕ್ಷಾರ್ಥಿಗಳಾದ ಭಕ್ತರುಗಳಿಗೆ ಅತ್ಯಂತ ಸುಲಭೋಪಾಯವಾದ "ಶರಣಾಗತಿ ತತ್ತ್ವ"ವನ್ನು ಪ್ರತಿಪಾದಿಸಿ ಪ್ರಪನ್ನರುಗಳು ಯಾವರೀತಿ ಸಾಧನಮಾಡಬೇಕೆಂಬುದನ್ನು ನಿರೂಪಿಸಿದೆ. ಶ್ರೀವೈಷ್ಣವಸಿದ್ಧಾಂತದ ಮುಖ್ಯತತ್ತ್ವಗಳೂ ಇದರಲ್ಲಿ ಅಡಕವಾಗಿವೆ. ಈ ಪ್ರಬಂಧದ ಭಾವಾರ್ಥವೆಲ್ಲಾ ಸುಲಭ

ಹಾಗಿಯೂ ರಸವತ್ತಾಗಿಯೂ ಆಹ್ಲಾದಕರವಾಗಿಯೂ ಇದೆ. ಹಿಂದೆ ಶ್ರೀರಂಗನಾಥನು ಈ ದಿವ್ಯಸೂಕ್ತಿಯನ್ನು ತನ್ನ ದಿವ್ಯಸಮ್ಮುಖದಲ್ಲಿ ಹಾಡಿಸಿ ಆನಂದಪಟ್ಟು, ಇದನ್ನು ನಿತ್ಯವೂ ಅನುಸಂಧಾನಮಾಡತಕ್ಕ ಆಳ್ವಾರ್ರುಗಳ ದಿವ್ಯಸೂಕ್ತಿಗಳ ಜತೆಗೆ ಸೇರಿಸಿ, ದೇವಸ್ಥಾನದಲ್ಲಿ ಪಾರಾಯಣಮಾಡಬೇಕೆಂದು ನಿಯಮಿಸಿದ ಪ್ರಕಾರ, ಎಲ್ಲಾ ಶ್ರೀವೈಷ್ಣವ ದೇವಸ್ಥಾನಗಳಲ್ಲಿಯೂ ಶ್ರೀವೈಷ್ಣವರುಗಳ ತಿರುಮಾಳಿಗೆಗಳಲ್ಲಿಯೂ ಇದುವರೆಗೂ **ಈ ಶ್ರೀಸೂಕ್ತಿಗೆ** ಅಗ್ರಪೂಜೆಯು ಸಲ್ಲುತ್ತಾ ಇದೆ. ಒಂದನೂರ ಎಂಟು ಪುಷ್ಪಗಳಿಂದ ಕೂಡಿದ ಈ ಮಾಲೆಯನ್ನು ನಿತ್ಯವೂ ಭಕ್ತಿಶ್ರದ್ಧೆಯಿಂದ ಪಾರಾಯಣ ಮಾಡುವವರಿಗೆ ಇಹಲೋಕದ ಐಶ್ವರ್ಯಾದಿ ಸುಖಸಂಪತ್ತುಗಳೂ ಪರಲೋಕದ ಮೋಕ್ಷಸಾಮ್ರಾಜ್ಯವೂ ಸುಲಭವಾಗಿ ದೊರೆಯುವುದರಲ್ಲಿ ಯಾವ ಸಂದೇಹವೂ ಇಲ್ಲ.

ಶ್ರೀಮಾನ್ ಚಕ್ರವರ್ತಿ ವರದಾಚಾರ್ಯರು ಲೌಕಿಕವಿದ್ಯೆಯಲ್ಲಿ ಪ್ರೌಢ ಪಾಂಡಿತ್ಯವನ್ನು ಪಡೆದು ದೊಡ್ಡ ಉದ್ಯೋಗವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದರೂ, ಕನ್ನಡಿಗರಿಗೆ ಹೆಚ್ಚು ಪರಿಚಯವಿಲ್ಲದ ತಮಿಳು ಪ್ರಬಂಧವನ್ನು ಅಭ್ಯಸಿಸಿ, ಅದರ ತಿರುಳನ್ನು ಈ ಪ್ರಬಂಧಮುಖೇನ ಕನ್ನಡಿಗರಿಗೆ ದಾನಮಾಡಿರುತ್ತಾರೆ. ಇವರ ಶೈಲಿಯು ಸರಳವಾಗಿಯೂ ಸುಂದರವಾಗಿಯೂ ಮೂಲದ ಅರ್ಥವನ್ನು ಯಥಾವತ್ತಾಗಿ ನಿರೂಪಿಸುವುದಾಗಿಯೂ ಇದೆ. ಗಹನವಾದ ಅರ್ಥಗಳನ್ನೊಳಗೊಂಡ ತಮಿಳು ಪ್ರಬಂಧಗಳನ್ನು ಕನ್ನಡಕ್ಕೆ ಪರಿವರ್ತಿಸಿ ಅವರ ಸಾರವನ್ನು ಕನ್ನಡಿಗರಿಗೆ ಉಣಿಸುವ ಶ್ರೀಮಾನ್ ವರದಾಚಾರ್ಯರ ಉದ್ಯಮವು ಶ್ರೇಯಸ್ಕರವಾದುದು. ಕನ್ನಡನಾಡಿನವರು ಇವರ ಉದ್ಯಮಕ್ಕೆ ಪ್ರೋತ್ಸಾಹಕೊಟ್ಟು ಇವರಿಂದ ಇನ್ನೂ ಅನೇಕ ಗ್ರಂಥಗಳು ಪ್ರಕಟವಾಗಲು ಅನುಕೂಲಪಡಿಸಿಕೊಡುವರೆಂದು ನಂಬುತ್ತೇನೆ.

ಶ್ರೀ ಕೌಶಿಕಕುಲ ಚಕ್ರೇಶ ವರದಾರ್ಯಾಯ ಧೀಮತೇ ।

ಶ್ರೀನಿವಾಸಸ್ಸದಾದೇಯಾತ್ ಶ್ರೇಯಃ ಪ್ರಜ್ಞಾಂ ಶ್ರಿಯಂ ಯಶಃ ॥

ಮೋಕ್ಷಂ, ಬೆಂಗಳೂರು } ತಿ. ಅ. ಸುಬ್ಬಯ್ಯನ್ ಅಪ್ಪಿಳ್ಳಾರ್
2- 2-1958 } ತಿರುಮಲೈಅಯ್ಯಂಗಾರ್ಯ.

ಶ್ರೀ

## ಇರಾಮಾನುಜನೂತ್ತಂದಾದಿ

ಶ್ರೀಮತೇ ರಾಮಾನುಜಾಯನಮಃ ॥

ಪ್ರಾಗ್ಜನ್ಮಾರ್ಜಿತ ಕರ್ಮದೋಷಪಹತಯೇ ಸಂಚಾಲ್ಯ ಪತ್ಸನ್ನತೌ
ಜಾತಸ್ಯಾ ಪ್ಯಕಟೇಶಿಕಸ್ಯಕನಕ ಶ್ರೀಮತ್ಪದಾಬ್ಜದ್ವಯಂ ।
ಸುಶ್ಲಿಷ್ಟಂ ಕೃತವಾನಹಂ ಮಮ ಶಿರಸ್ಯಭ್ಯರ್ಹಿತಂ ಭೂಷಣಂ
ಯಾವನ್ಯಸ್ಥಾನ ನಿವಾಸಿನಾವ್ಯಣಮತಃ ಕಿಂವಾ ಪ್ರವರ್ತ್ಯಂ ಮಯಾ ॥

ತಾ:—ಹಿಂದಿನ ಜನ್ಮಗಳಲ್ಲಿ ಸಂಪಾದಿಸಲ್ಪಟ್ಟ ಪಾಪಗಳೆಲ್ಲಾ ಬಿಟ್ಟು,ನಶಿಸಿ ಹೋಗುವಂತೆ "ಮೂಂಗಿಲ್" ಎಂಬ ವಂಶದಲ್ಲಿ ಹುಟ್ಟಿದ ತಿರುವರಂಗತ್ತಮು ದನಾರ್ರವರ ಸ್ವರ್ಣದಂತಿರುವ ಪಾದದ್ವಯಗಳನ್ನು ನನ್ನ ತಲೆಗೆ ಆಭರಣ ವನ್ನಾಗಿ ಧರಿಸಿದೆನು. ಯಮನಪಟ್ಟಣದಲ್ಲಿರುವವರಿಗೆ ನಾನು ಏತಕ್ಕೆ ಅಧೀನ ನಾಗಿರಬೇಕು ?

1 ತನಿಯನ್ :—ಮುನ್ನೈವಿನೈಯಗಲ ಮೂಂಗಿಲ್‌ಕುಡಿ ಯಮುದನ್
ಪೊನ್ನಂಗಳಲ್ ಕಮಲಪ್ಪೋದಿರಣ್ಡುಮ್-ಎನ್ನುಡೈಯ
ಚೆನ್ನಿಕ್ಕಣಿಯಾಗಚ್ಚೇರ್ತ್ತಿನೇನ್ ತೆನ್ಪುಲತ್ತಾರ್ಕ್ಕು
ಎನ್ನುಕ್ಕಡವುಡೈಯೇನ್ ಯಾನ್ ॥

ಅರ್ಥ :—ಮುನ್ನೈ-ಅನಾದಿಕಾಲದಿಂದಲೂ ಸೇರಿಬಂದಿರುವ, ವಿನೈ-ಕರ್ಮವಾಸನೆಯು ಪಾಪಗಳೆಲ್ಲಾ, ಅಗಲ-ತೊಲಗುವಹಾಗೆ, ಮೂಂಗಿಲ್ ಕುಡಿಯಮುದನ್ - "ಮೂಂಗಿಲ್" ವಂಶದಲ್ಲಿ ಹುಟ್ಟಿದ ಅಮುದನಾರೆಂಬುವರ, ಪೊನ್-ಅವನ್ - ಚಿನ್ನದಂತೆ ಸುಂದರವಾದ, ಕಳಲ್ - ಕಮಲಪ್ಪೋದು ಇರಣ್ಡುಮ್-ಪಾದಗಳೆಂಬ ಕಮಲಹೂವೆರಡನ್ನೂ, ಎನ್ನುಡೈಯಚೆನ್ನಿಕ್ಕು-ನನ್ನ ತಲೆಗೆ, ಅಣಿಯಾಗ ಚೇರ್ತ್ತಿನೇನ್ - ಆಭರಣವಾಗಿ ಸೇರಿಸಿದೆನು.

ತೇಪ್ಪುಲತ್ತಾರ್‌ಕ್ಕು - ಯಮಪುರಿವಾಸಿಗಳಾದ ಯಮಕಿಂಕರರಿಗೆ, ಯಾನ್- ನಾನು, ಎನ್ನೈ-ಏತಕ್ಕೆ, ಕಡವುಡೈಯೇನೋ-ಅಧೀನನಾಗಬೇಕು ?

ಅಂದರೆ, ಕರ್ಮಫಲಾನುಭವಮಾಡುವ ಕರ್ತವ್ಯವಿಲ್ಲ.

ತಾ:—ಅನಾದಿಕಾಲದಿಂದಲೂ ಕರ್ಮವಾಸನಾರೂಪ ಫಲವಾಗಿ ಗಳಿಸಿ ಬಂದ ಪಾಪಗಳೆಲ್ಲವೂ ನಾಶವಾಗುವಹಾಗೆ, "ಮೂಂಗಿಲ್" ಎಂಬ ವಂಶದಲ್ಲಿ ಅವತರಿಸಿಬಂದು, ಶ್ರೀರಂಗಕ್ಷೇತ್ರದಲ್ಲಿ ವಾಸವಾಗಿರುವ-ಅಮುದನಾರ್-ಎಂಬುವರ ಸ್ಪೃಹಣೀಯನಾದ, ಸುಂದರವಾಗಿ ತಾವರೆ ಪುಷ್ಪದಳಗಳಂತೆ ಎಸಳಾದ ಪಾದದ್ವಯುಗಳನ್ನು ನನ್ನ ಶಿರಸ್ಸಿಗೆ ಆಭರಣವಾಗಿ ಧರಿಸಿದೆನು. ಇನ್ನು ನಾನು ಯಮಪುರನಿವಾಸಿಗಳಾದ ಯಮಕಿಂಕರರಿಗೆ ಏತಕ್ಕೆ ಅಧೀನನಾಗಿರಬೇಕು ಎನ್ನುತ್ತಾರೆ.

2. ತನಿಯನ್ :—

ನಯಮ್ ತರು ಪೇರಿನ್ಬಮೆಲ್ಲಾಮ್ ಪೞುದೆನ್ರು ನಣ್ಣಿನರ್ ಪಾಲ್
ಶಯಮ್ ತರುಕೀರ್ತ್ತಿ ಯಿರಾಮಾನುಶಮುನಿತಾಳಿಣೈಮೇಲ್
ಉಯರ್‌ನ್ದ ಗುಣತ್ತುತ್ತಿರುವರಂಗತ್ತಮುದೋಂಗುಮನ್ಬಾಲ್
ಇಯಮ್ಬುಮ್ ಕಲಿತ್ತುರೈಯನ್ದಾದಿ ಓದವಿಶೈ ನೆಂಜಮೇ ॥

ಅರ್ಥ :—ನೆಂಜಮೇ - ಓ ಮನಸ್ಸೇ, ನಯಮ್‌ತರು - ಸಾಂಸಾರಿಕ ವಿಷಯಗಳಿಂದ ಬರುವ, ಪೇರಿನ್ಬಮೆಲ್ಲಾಮ್-ವಿಶೇಷವಾದ ಸುಖಗಳೆಲ್ಲವೂ, ಪೞುದು ಎನ್ರು-ಹೇಯವೆಂದು ತಿಳಿದುಕೊಂಡು, ನಣ್ಣಿನರ್ ಪಾಲ್ - ಆಶ್ರಯಿಸಿದವರ ವಿಷಯದಲ್ಲಿ, ಶಯಮ್‌ತರುಮ್-ಜಯವನ್ನು ಉಂಟುಮಾಡತಕ್ಕ, ಕೀರ್ತಿ - ಕೀರ್ತಿಯುಳ್ಳ, ಇರಾಮಾನುಶಮುನಿ-ಎಂಬೆರುಮಾನಾರ್ ಎಂಬ ಯೋಗೀಶ್ವರರ, ತಾಳಿಣೈಮೇಲ್-ಪಾದದ್ವಯುಗಳ ಮೇಲೆ, ಓಂಗುಮ್ - ವೃದ್ಧಿ ಹೊಂದುತ್ತಿರುವ, ಅನ್ಬಾಲ್-ಪ್ರೀತಿಯೊಂದಿಗೆ, ಉಯರ್‌ನ್ದ ಗುಣತ್ತು-ಉತ್ಕೃಷ್ಟವಾದ ಗುಣವುಳ್ಳ, ತಿರುವರಂಗತ್ತಮುದು - ತಿರುವರಂಗತ್ತಮುದನಾರ್, ಇಯಮ್ಬುಮ್ - ಪ್ರಸಾದಿತ್ತ, "ಕಲಿತ್ತುರೈ" – "ಕಲಿತ್ತುರೈ" ಎಂಬ ವೃತ್ತವುಳ್ಳ, ಅನ್ದಾದಿ-ಒಂದು ಪಾಶುರದ ಕೊನೆಯನ್ನು ಇನ್ನೊಂದು ಪಾಶುರದ ಮೊದಲಾಗಿಟ್ಟು ಹೇಳಿರುವ ಪದ್ಯಗಳನ್ನು, ಓದ – ಅಭ್ಯಾಸ ಮಾಡಲು, ಇಶೈ-ಸಮ್ಮತಿಸು.

ತಾ:—ಎಲೈ ಮನಸ್ಸೇ! ಸಾಂಸಾರಿಕ ವಿಷಯಗಳಿಂದ ಉಂಟಾಗುವ ನಿರವಧಿಕ ಸುಖಗಳೆಲ್ಲಾ-ಹೇಯವೆಂದು ತಿಳಿದುಕೊಂಡು, ಸಂಸಾರ ಸಾಗರವನ್ನು ದಾಟುವ ನಿವೃತ್ತಿಮಾರ್ಗವನ್ನು ಬೋಧಿಸಿದ ಕೀರ್ತಿವಂತರಾದ ಶ್ರೀ ರಾಮಾನುಜರ ಪಾದಗಳಮೇಲೆ ಪ್ರಾವಣ್ಯವನ್ನು ಹೊಂದುತ್ತಿರುವ ಉತ್ಕೃಷ್ಟ ಗುಣಗಳ ಮೂಲಕ "ಶ್ರೀರಂಗದ ಅಮುದನಾರ್" ಎಂಬ ಮಹಾಪುರುಷರು ಪ್ರಸಾದಿಸಿದ "ಕಲಿತ್ತುರೈ" ಎಂಬ 'ಅಂತ್ಯ-ಆದಿ, ಶೈಲಿಯಲ್ಲಿರುವ, ಪಾಶುರಗಳನ್ನು ಅಭ್ಯಾಸಮಾಡಲು ಸಮ್ಮತಿಸು. (ಎನ್ನೈತ್ತಾತ್ತಿ.)

3. ಶೊಲ್ಲಿನ್ ತೊಗೈಕೊಂಡು ಉನದಡಿಪ್ಪೋದುಕ್ಕುತ್ತೊಂಡು ಶೆಯ್ಯುಮ್
ನಲ್ಲನ್ಬರೇತ್ತುಮ್ ಉನ್ನಾಮಮೆಲ್ಲಾಮ್, ಎನ್ದನ್ನಾವಿನುಳ್ಳೇ
ಅಲ್ಲುಮ್ ಪಕಲುಮ್ ಅಮರುಮ್ ಪಡಿನಲ್ಗು, ಅರುಸಮಯಮ್
ವೆಲ್ಲುಮ್ ಪರಮ ಇರಾಮಾನುಶಾ ಇದೆನ್ ವಿಣ್ಣಪ್ಪಮೇ!

ಅರ್ಥ:—ಶೊಲ್ಲಿನ್‌ತೊಗೈಕೊಂಡು - ನೂರೆಂಟು ಪದ್ಯಗಳಾಗಿ ಹೇಳಬೇಕೆಂದು ಸಂಖ್ಯಾನಿರ್ದೇಶವನ್ನು ಮನಸ್ಸಿಗೆ ತಂದುಕೊಂಡು, ಶಬ್ದ ಸಮೂಹಗಳನ್ನೂ ತೆಗೆದುಕೊಂಡು, ಉನದು ಅಡಿಪ್ಪೋದುಕ್ಕು-ನಿಮ್ಮ ಚರಣ ಕಮಲಗಳಿಗೆ, ತೊಂಡು ಶೆಯ್ಯುಮ್-ಕೈಂಕರ್ಯಮಾಡುವ, ನಲ್ ಅನ್ಬರ್ - ಅನನ್ಯ ಪ್ರಯೋಜನಭಕ್ತರು, ಏತ್ತುಮ್ - ಸ್ತೋತ್ರಮಾಡತಕ್ಕ, ಉನ್ ತಿರುನಾಮಮ್ ಎಲ್ಲಾಮ್ - ನಿಮ್ಮ ನಾಮಧೇಯಗಳೆಲ್ಲವನ್ನೂ—ಎನ್ದನ್ ನಾವಿನುಳ್ಳೇ - ನನ್ನ ನಾಲಿಗೆಯಲ್ಲಿಯೇ, ಅಲ್ಲುಮ್, ಪಕಲುಮ್ - ರಾತ್ರಿಹಗಲೂ ಎಡೆಬಿಡದೆ, ಅಮರುಂಪಡಿ-ಹೊಂದಿಕೊಂಡಿರುವ ಹಾಗೆ, (ಅಂದರೆ) ಅನುಸಂಧಾನಮಾಡಿಕೊಂಡಿರುವಹಾಗೆ, ನಲ್ಗು-ಕೃಪೆಮಾಡು ; ಅರುಸಮಯಮ್-ಆರುಬಾಹ್ಯಮತಸ್ಥರನ್ನೂ, ವೆಲ್ಲುಮ್-ಜಯಿಸಬಲ್ಲ, ಪರಮ-ಅತ್ಯಂತಶ್ರೇಷ್ಠರಾದ, ಇರಾಮಾನುಶಾ-ಶ್ರೀ ರಾಮಾನುಜರೇ, ಇದು-ಇದುತಾನೆ; ಎನ್ ವಿಣ್ಣಪ್ಪಮೇ-ನನ್ನ ವಿಜ್ಞಾಪನೆಯು.

ತಾ:—ಕುದೃಷ್ಟಿಗಳಾದ ಆರು ಬಾಹ್ಯಮತಸ್ಥರನ್ನೂ ಜಯಿಸಬಲ್ಲ ಸಾಮರ್ಥ್ಯವುಳ್ಳ ಶ್ರೀ ರಾಮಾನುಜರೇ, ನೂರೆಂಟು ಪದ್ಯಗಳನ್ನು ರಚಿಸಲು ನಿರ್ಧರಿಸಿ, ಶಬ್ದಸಮೂಹಗಳನ್ನೂ ತೆಗೆದುಕೊಂಡು, ನಿಮ್ಮ ತಿರುನಾಮಗಳನ್ನು

ಒಳಕೊಂಡ 108 ಪದ್ಯಗಳನ್ನು ಪರಮಭಕ್ತರಾದ ತಿರುವರಂಗತ್ತಮುದನಾರ್ರು ರಚಿಸಿದರು. ಆ ತಿರುನಾಮಗಳನ್ನೊಳಕೊಂಡ ಪದ್ಯಗಳನ್ನು, ಹಗಲೂ ರಾತ್ರಿಯೂ ನನ್ನ ನಾಲಿಗೆಯು, ಎಡೆಬಿಡದೆ ಅನುಸಂಧಾನ ಮಾಡುತ್ತಿರುವಂತೆ ಕೃಪೆಮಾಡಿ ಅನುಗ್ರಹಿಸಬೇಕು, ಎಂದು ರಾಮಾನುಜರಲ್ಲಿ ವಿಜ್ಞಾಪಿಸಿಕೊಳ್ಳುತ್ತಾರೆ.

4. ಇನಿಯೆನ್‌ಕುಱೈನಮಕ್ಕೆಂಬೆರುಮಾನಾರ್ ತಿರುನಾಮತ್ತಾಲ್
ಮುನಿತನ್ದನೂಱ್ಱೆಟ್ಟು ಸಾವಿತ್ತಿರಿಯೆನ್ನುಮ್ ನುಣ್‌ಪೊರುಳೈ
ಕ್ಕನಿತನ್ದ ಸೆಞ್ಜೊಲ್ ಕಲಿತ್ತುರೈಯನ್ದಾದಿ ಪಾಡಿತ್ತನ್ದಾನ್
ಪುನಿದನ್ ತಿರುವರಂಗ ತ್ತಮುದಾಗಿಯ ಪುಣ್ಣಿಯನೇ ।

ಅರ್ಥ:—ಪುನಿದನ್-ಪರಮಪವಿತ್ರರಾದ, ತಿರುವರಂಗತ್ತಮುದಾಗಿಯ ಶ್ರೀರಂಗದ ಅಮುದನಾರೆಂಬ, ಪುಣ್ಣಿಯನ್-ಪುಣ್ಯಪುರುಷರು, ಮುನಿತನ್ದ-ಸರ್ವೇಶ್ವರನು ಬ್ರಹ್ಮನಿಗೆ ಉಪದೇಶಿಸಿದ, ನೂಱ್ಱೆಟ್ಟು-ನೂರೆಂಟು, ಸಾವಿತ್ತಿರಿಯೆನ್ನುಮ್-"ಸಾವಿತ್ರೀ" ಎಂಬ ಗಾಯತ್ರೀಮಂತ್ರವನ್ನು ಪ್ರಣವ ಪೂರ್ವಕವಾಗಿ ಉಪದೇಶಿಸಿದ ಆ ಮಂತ್ರದ, ನುಣ್ ಪೊರುಳೈ-ಸೂಕ್ಷ್ಮಾರ್ಥವನ್ನು, (ಅಂದರೆ, ಅಷ್ಟಾಕ್ಷರ ಮಂತ್ರದ ಸೂಕ್ಷ್ಮಾರ್ಥವನ್ನು 108 ಪಾಶುರವಾಗಿ) ಎಂಬೆರುಮಾನಾರ್ ತಿರುನಾಮತ್ತಾಲ್-ಶ್ರೀರಾಮಾನುಜರ ಹೆಸರನ್ನು ಒಳಕೊಂಡು,ಕನಿತನ್ದ-ಪಕ್ವಶಕ್ತಿಯನ್ನು ಹೊಂದಿರುವ, ಸೆಞ್ಜೊಲ್-ಇಂಪಿನಿಂದಾಗಿರುವ ಗಾನವುಳ್ಳ, ಕಲಿತ್ತುರೈ-"ಕಲಿತ್ತುರೈ" ಎಂಬ ಛಂದಸ್ಸಿನಲ್ಲಿ ಅಂದಾದಿ-ಅಂತ್ಯ ಆದಿ ಎಂಬ ಪಾಶುರಗಳಲ್ಲಿ, ಪಾಡಿತ್ತನ್ದಾನ್ - ಹಾಡಿ ಪ್ರಸಾದಿಸಿದರು. ಇನಿ-ಇನ್ನು ಮೇಲೆ, ಎನ್ ಕುಱೈ ನಮಕ್ಕು - ನಮಗೆ ಏನೊಂದು ಕೊರತೆಯೂ ಇಲ್ಲ.

ತಾ:—ಅಶುದ್ಧರನ್ನು ಶುದ್ಧರನ್ನಾಗಿ ಪರಿವರ್ತಿಸತಕ್ಕವರಾದ ಪುಣ್ಯಪುರುಷರಾದ ಶ್ರೀರಂಗದ ಅಮುದನಾರ್ರವರು, ಸರ್ವೇಶ್ವರನು ಬ್ರಹ್ಮನಿಗೆ ಉಪದೇಶಿಸಿದ-"ಸಾವಿತ್ರಿ" ಎಂಬ ಮಂತ್ರದ-ಸೂಕ್ಷ್ಮಾರ್ಥವನ್ನು (ಅಂದರೆ-ಪ್ರಣವಾರ್ಥವನ್ನು) ಒಳಗೊಂಡ ಅಷ್ಟಾಕ್ಷರ ಮಂತ್ರದ ಸೂಕ್ಷ್ಮಾರ್ಥವನ್ನು-ಪಕ್ವಶಕ್ತಿಯನ್ನು ಹೊಂದಿರುವಂತೆ ಇಂಪಿನಿಂದಾಗಿರುವ ಮಧುರವಾದ ಗಾನ

ನೊಂದನೆ ರೀತಿ, ಶ್ರೀರಾಮಾನುಜರ ನಾಮವನ್ನು ಅಳವಡಿಸಿ, 'ಕಲಿತ್ತುರೈ' ಎಂಬ ಛಂದಸ್ಸಿನಲ್ಲಿ, ಅಂತ್ಯ - ಆದಿ ರೂಪದಲ್ಲಿ 108 ಪದ್ಯಗಳನ್ನೂ ಹಾಡಿ ಪ್ರಕಾಶಿಸಿದರು. ಇನ್ನು ಮೇಲೆ ನಮಗೆ ಯಾವ ವಿಧವಾದ ಕೊರತೆಯೂ ಇಲ್ಲ ಎನ್ನುತ್ತಾರೆ (ಸೋಮಾಸಿಯಾಣ್ಡಾನ್ ಎಂಬುವರು.)

---

1. ಪೂಮನ್ನುಮಾದುಪೊರುನ್ದಿಯಮಾರ್ಬನ್, ಪುಗಳ್ಮಲಿನ್ದ
ಪಾಮನ್ನುಮಾರನಡಿಪಣಿನ್ದುಯ್ನ್ದವನ್, ಪಲ್ಕಲೈಯೋರ್
ತಾಮನ್ನವನ್ದಇರಾಮಾನುಶನ್ ಶರಣಾರವಿನ್ದಮ್
ನಾಮನ್ನಿವಾಳ, ನೆಞ್ಜೇಶೊಲ್ಲುವೋಮವನ್ನಾಮಙ್ಗಳೇ ||

ಅರ್ಥ :—ಪೂ-ಕಮಲ ಪುಷ್ಪದಲ್ಲಿ, ಮನ್ನು-ನಿರಂತರ ವಾಸವಾಗಿರು ಶ್ರೀರೂಪ, ಮಾದು-ಶೋಭಮಾನೆಯಾದ ಮಹಾಲಕ್ಷ್ಮಿಯನ್ನು, ಪೊರುನ್ದಿಯ-ಒಟ್ಟಿಗೆಯೇ ಪ್ರಕಾಶಿಸುವ, ಮಾರ್ಬನ್-ವಕ್ಷಸ್ಥಳವುಳ್ಳ ಸರ್ವೇಶ್ವರನ, ಪುಗಳ್ಮಲಿನ್ದ-ಕೀರ್ತಿಸಲ್ಪಡತಕ್ಕ ಕಲ್ಯಾಣಗುಣಗಳಿಂದ ತುಂಬಿರುವ, ಪಾ-ಪದ್ಯಗಳಾದ (ತಿರುವಾಯ್ಮೊಳಿ ಪ್ರಬಂಧದಲ್ಲಿ) ಮನ್ನು-ಮಗ್ನರಾದ, ಮಾರನ್-ಅಜ್ಞಾನವನ್ನು ಬಡಿದೋಡಿಸುವಲ್ಲಿ ಸಮರ್ಥರಾದ, ಅಡಿ-ಪಾದಾರವಿಂದಗಳನ್ನು, ಪಣಿನ್ದು-ಆಶ್ರಯಿಸಿ-ಉಯ್ನ್ದವನ್-ಉಜ್ಜೀವಿಸಿದವರು, ಪಲ್ ಕಲೈಯೋರ್-ಅನೇಕ ಶಾಸ್ತ್ರಗಳನ್ನು ಅರಿತು ಶಾಸ್ತ್ರಜ್ಞರಾದ ಕೂರೇಶ ಕುರುಕೇಶ ಗೋವಿನ್ದ, ದಾಶರಥಿ ಮೊದಲಾದವರೂ, ತತ್ಪ್ರತಿಪಾದ್ಯ ಪುರುಷಾರ್ಥ ಯಾಥಾತ್ಮ್ಯಜ್ಞಾನ ಪಡೆದ ಯಾದವ ಪ್ರಕಾಶ, ಯಜ್ಞಮೂರ್ತ್ಯಾದಿಗಳೂ, ತಾಮ್ ಮನ್ನ - ಯಥಾವಸ್ಥಿತ-ಜ್ಞಾನದಿಂದ ಸುಪ್ರತಿಷ್ಠಿತರಾಗುವ ಹಾಗೆ, ವನ್ದ - ಪರಮ - ಪದದಿಂದ - ಸರ್ವೇಶ್ವರನ ಆಜ್ಞಾಪ್ರಕಾರ ಭೂಲೋಕದಲ್ಲಿ ಬಂದು ಅವತರಿಸಿದ-ಇರಾಮಾನುಶನ್-ಶ್ರೀರಾಮಾನುಜರ-ಚರಣಾರವಿನ್ದಮ್ - ಪಾದಕಮಲದ್ವಯಗಳನ್ನು - ನಾಮ್ ಮನ್ನಿವಾಳ - ನಾವು ನೆಲೆನಿಂತು ಸುಖಿಸಿ ಅನುಭವಿಸುವ ಹಾಗೆ, ನೆಞ್ಜೇ - ಎಲೈ ಮನಸ್ಸೇ, ಅವನ್ನಾಮಙ್ಗಳೇ-ಆ ಶ್ರೀ ರಾಮಾನುಜರ ನಾಮಗಳನ್ನೇ ಶೊಲ್ಲುವೋಮ್-ಹೇಳೋಣ.

ತಾ :—ಶ್ರೀರಾಮಾನುಜಾಚಾರ್ಯರು ತಾವರೆ ಪುಷ್ಪದಲ್ಲಿ ಉದ್ಭವಿಸಿದ ಮಹಾಲಕ್ಷ್ಮಿಯನ್ನು ನಿರಂತರ ತನ್ನ ವಕ್ಷಸ್ಥಲದಲ್ಲಿ ಹೊಂದಿರುವ ಸರ್ವೇ

ಶ್ವರನ ಅಸಂಖ್ಯೇಯ, ನಿರವದ್ಯ, ನಿರತಿಶಯ, ಕಲ್ಯಾಣಗುಣಗಳನ್ನು ಬೋಧಿಸತಕ್ಕ 'ತಿರುವಾಯ್ಮೊಳಿ' ಎಂಬ ಪ್ರಬಂಧವನ್ನು ಭಕ್ತಿಬಲಾತ್ಕಾರದಿಂದ ಪ್ರಕಾಶಪಡಿಸಿದಂಥಾ ನಮ್ಮಾಳ್ವಾರವರ ಪಾದಕಮಲಗಳನ್ನಾಶ್ರಯಿಸಿ ಉಜ್ಜೀವನವನ್ನು ಪಡೆದರು. ಅನೇಕ ಶಾಸ್ತ್ರಗಳನ್ನು ಪಠನಮಾಡಿ ಪ್ರವೀಣ ರಾದ, ಕೂರೇಶ, ಕುರುಕೇಶ, ಗೋವಿಂದ, ದಾಶರಥಿ-ಮೊದಲಾದವರೂ, ಯಾದವ ಪ್ರಕಾಶ-ಯಜ್ಞಮೂರ್ತ್ಯಾದಿಗಳೂ, ತಮ್ಮ ಸಂದೇಹಗಳನ್ನು ಪರಿಹರಿಸಿಕೊಳ್ಳುವಂತೆ, ಶ್ರೀ ರಾಮಾನುಜಾಚಾರ್ಯರು, ಭಗವದಾಜ್ಞಾರೂಪ ನಾಗಿ, ಪರಮಪದದಿಂದ ಭೂಲೋಕದಲ್ಲಿ ಅವತರಿಸಿ, 'ಶ್ರೀ ಭಾಷ್ಯಾ'ದಿ ಗ್ರಂಥಗಳನ್ನು ರಚಿಸಿ, ತತ್ವಹಿತಪುರುಷಾರ್ಥ ಯಾಥಾತ್ಮ್ಯ ಜ್ಞಾನವನ್ನೂ ಪ್ರಕಾಶಪಡಿಸಿ, ಲೋಕೋಪಕಾರ ಮಾಡಿದರು ; ಇಂಥಾ ರಾಮಾನುಜರ ಪಾದಕಮಲಗಳನ್ನಾಶ್ರಯಿಸಿ ನಾವು ಶಾಶ್ವತ ಸುಖವನ್ನು ಪಡೆಯುವುದ ಕ್ಕಾಗಿ ಅವರ ತಿರುನಾಮಗಳನ್ನು ಹೇಳೋಣವೆಂದು ತಿರುವರಂಗತ್ತಮುದ ನಾರ್ರವರು ತಮ್ಮ ಮನಸ್ಸನ್ನು ಸಂಬೋಧಿಸಿ ಹೇಳುತ್ತಾರೆ.

ವಿಶೇಷವಿಷಯ:—ಈ ಅಮುದನಾರ್ ಎಂಬುವರಿಗೆ ಸತ್ಸಂಪ್ರದಾಯವು ತಿಳಿಯದೇ ಬರೀ ಶಾಸ್ತ್ರಪಾಂಡಿತ್ಯವಿತ್ತು. ಇವರನ್ನು ಶ್ರೀ ರಾಮಾನು ಜರು ತಮ್ಮ ಶಿಷ್ಯರಾದ ಕೂರತ್ತಾಳ್ವಾರವರ ಮೂಲಕ ಉಪದೇಶಿಸಿ ಸರಿಪಡಿ ಸಿದರು. ಆವರು ತಮಗೆ ಉಂಟಾದ ದಿವ್ಯಾರ್ಥಜ್ಞಾನವನ್ನು ಲೋಕದವ ರಿಗೆ ತಿಳಿಯಪಡಿಸಲು, 108 ಪದ್ಯಗಳುಳ್ಳ ಇರಾಮಾನುಶನೂತ್ತಂದಾದಿ ಪ್ರಬಂಧವೆಂಬ **ಪ್ರಪನ್ನ ಗಾಯತ್ರೀ** ಯನ್ನು ರಚಿಸಿದರು.

**2.** **ಕಳ್ಳಾರ್ ಪೊಳಿಲ್ ತೆನ್ನರಂಗನ್, ಕಮಲಪ್ಪದಂಗಳ್ ನೆಂಜಿಲ್**
**ಕೊಳ್ಳಾಮನಿಶರ್ಕ್ಕು ನೀಂಗಿ, ಕುರೈಯುಲ್ ಪಿಱಾನಡಿಕ್ಕೀಳ್**
**ವಿಳ್ಳಾದ ವನ್ಬನಿರಾಮಾನುಶನ್ ಮಿಕ್ಕಶೀಲಮಲ್ಲಾಲ್**
**ಉಳ್ಳಾದೆನ್ನೆಂಜು : ಒನ್ನಱಿಯೇನೆನಕ್ಕುತ್ತ ಪೇರಿಯಲ್ವೇ ||**

ಅರ್ಥ:—ಕಳ್, ಆರ್, ಪೊಳಿಲ್-ಮಧುಸಮೃದ್ಧಿಯಾದ ಪುಷ್ಪ ವಿಶೇಷಗಳಿಂದ ವ್ಯಾಪಿಸಿರುವ ಉದ್ಯಾನವನಗಳಿಂದ ಸುತ್ತಿಕೊಂಡಿರುವ, ತೆನ್ಅರಂಗ-ದರ್ಶನೀಯವಾದ ದಕ್ಷಿಣ ದಿಕ್ಕಿನಲ್ಲಿರುವ ಶ್ರೀರಂಗಕ್ಷೇತ್ರವನ್ನೇ

ತಮಗೆ ನಿರೂಪಕನಾಗಿ ಬಿಜಯಿಸಿರುವ ಸರ್ವೇಶ್ವರನಾದ ಶ್ರೀ ರಂಗನಾಥಸ್ವಾಮಿಯ, ಕಮಲಪ್ಪದಂಗಳ್-ತಾವರೆ ಕಮಲದಂತೆ-ಇರುವ ಚರಣಗಳನ್ನು, ನೆಂಜಿಲ್-ತಮ್ಮ ಮನಸ್ಸಿನಲ್ಲಿ (ಹೃದಯದಲ್ಲಿ), ಕೊಳ್ಳಾ-ಎಣಿಸದೇ (ಧ್ಯಾನಿಸದೇ) ಇರುವ, ಮನಿಶರ್ಕ್ಕು-ನಿರ್ಭಾಗ್ಯರಾದ ಮನುಷ್ಯ ವರ್ಗದವರನ್ನು (ಕುದೃಷ್ಟಿಗಳನ್ನು), ನೀಂಗಿ-ತ್ಯಜಿಸಿ (ಜಯಿಸಿ), ಕುರೈಯಲ್ ಪಿರಾನ್-ತಿರುಕುರೈಯಲೂರಿನಲ್ಲಿ ಅವತರಿಸಿ ಅಲ್ಲಿಗೆ ಒಡೆಯರಾದ ತಿರುಮಂಗೈಯಾಳ್ವಾರ್ರವರ, ಅಡಿಕ್ಕೀಳ್-ಪಾದಾರವಿಂದಗಳ ವಿಷಯದಲ್ಲಿ, ಮಿಕ್ಕಾದ ಅನ್ಬನ್-ಎಡಬಿಡದೇ ಭಕ್ತಿಯುಳ್ಳ, ಇರಾಮಾನುಜನ್-ಶ್ರೀ ರಾಮಾನುಜರ-ಮಿಕ್ಕ-ಅತಿಶಯವಾದ, ಶೀಲಮಲ್ಲಾಲ್-ಕಲ್ಯಾಣಗುಣಗಳಲ್ಲದ-ಬೇರೊಂದನ್ನೂ, ಎನ್ನೆಂಜು-ನನ್ನ ಮನಸ್ಸು, ಉಳ್ಳಾದು-ಧ್ಯಾನಿಸುವುದಿಲ್ಲ; ಎನಕ್ಕು-ನನಗೆ, ಉತ್ತ — ಸಂಭವಿಸಿದ (ಈ ಪುರುಷಾರ್ಥಕ್ಕೆ), ನೇರ್ ಇಯಲ್ಬು - ಮಹತ್ತಾದ - ಉಪಾಯವು (ಕಾರಣವು), ಒನ್ರುಂ ಅರಿಯೇನ್ - ಒಂದನ್ನೂ ನಾನು ತಿಳಿದವನಲ್ಲ.

ತಾ :— ತುಂಬಿತುಳುಕಾಡುತ್ತಿರುವ ಜೇನಿನ ರಸವನ್ನೇ ಧಾರೆಯಾಗಿ ಸುರಿಯುತ್ತಿರುವ ಪುಷ್ಪವಿಶೇಷಗಳಿಂದ ವ್ಯಾಪ್ತವಾಗಿರತಕ್ಕ ಉದ್ಯಾನ ವನಗಳಿಂದ ಸುತ್ತಲೂ ಕೂಡಿರುವ ರಮ್ಯವಾದ ಶ್ರೀ ರಂಗಕ್ಷೇತ್ರವನ್ನು ನಿರೂಪಕವಾಗಿ ಮಾಡಿಕೊಂಡು ಬಿಜಯಿಸಿರುವ ಶ್ರೀ ರಂಗನಾಥಸ್ವಾಮಿಯ ಪಾದಾರವಿಂದಗಳಲ್ಲಿ ಭಕ್ತಿಯಿಲ್ಲದ ಗರ್ವನಿರ್ಭಾಗ್ಯರಾದ ಜನಗಳ ಸಮೂಹದಲ್ಲಿ ನಿಂತರೂ, ಅವರುಗಳನ್ನು ತ್ಯಜಿಸಿ, ಬಾಹ್ಯ ಕುದೃಷ್ಟಿಗಳನ್ನು ಜಯಿಸಿದ ಮತ್ತು ತಿರುಕ್ಕುರೈಯಲೂರಿನಲ್ಲಿ ಅವತರಿಸಿ ಪ್ರಬಂಧಗಳನ್ನು ರಚಿಸಿಯೂ, ಶ್ರೀ ರಂಗನಾಥನ ದಿವ್ಯಪಾದಾರವಿಂದಗಳಲ್ಲಿ ನಿಶ್ಚಲಭಕ್ತರಾಗಿ, ಸದರಿ ಕ್ಷೇತ್ರವನ್ನುದ್ಧರಿಸಿ ಲೋಕೋಪಕಾರಕರಾದ - ತಿರುಮಂಗೈಯಾಳ್ವಾರ್ರವರ, ಪಾದಾರವಿಂದಗಳಲ್ಲಿ ಅತ್ಯಂತ ಪ್ರೀತಿಯುಕ್ತರಾದ-ಶ್ರೀ ರಾಮಾನುಜರ ಕಲ್ಯಾಣಗುಣಗಳನ್ನು ಬಿಟ್ಟು ಬೇರೊಂದನ್ನೂ ನನ್ನ ಮನಸ್ಸು ಧ್ಯಾನಿಸುವುದಿಲ್ಲ. ಇಂಥಾ ಸಿದ್ಧಿಸಿದ ಮಹತ್ತಾದ ಪುರುಷಾರ್ಥ ಉಪಾಯ ವಿಶೇಷವು ಯಾತರಿಂದ ಲಭಿಸಿತೋ ನಾನು ಬೇರೆ ಕಾಣೆನು - ಎಂದು ಆಶ್ಚರ್ಯಪಡುತ್ತಾರೆ.

3. ಪೇರಿಯಲ್ ನೆಂಜೇಯಡಿಪಣಿನ್ದೇನುನ್ನೈ, ಪ್ಪೇಯ್ಪ್ಪಿರವಿ
ಪ್ಪೂರಿಯರೋಡುಳ್ಳ ಸುಟ್ರಮ್ ಪುಲರ್ತ್ತಿಪ್ಪೊರುವರುಮ್ ಶೀರ್
ಆರಿಯನ್ ಶೆಮ್ಮೈಯಿರಾಮಾನುಶಮುನಿಕ್ಕನ್ಬು ಶೆಯ್ಯುಮ್
ಶೀರಿಯಪೇರುಡೈಯಾರ್, ಅಡಿಕ್ಕೀೞೆನ್ನೈಚ್ಚೇರ್ತ್ತದರ್ಕೇ ||

ಅರ್ಥ: — ಪೇರಿಯಲ್-ಸತ್ತ್ವಾಧಿಕವಾದ ಸ್ವಭಾವವುಳ್ಳ, ನೆಂಜೇ-ಮನಸ್ಸೇ! ಪೇಯ್ಪ್ಪಿರವಿ-ಅಸುರ ಸ್ವಭಾವವನ್ನುಳ್ಳ ಜನ್ಮವನ್ನು ಪಡೆದ, ಪೂರಿಯರೋಡು ಉಳ್ಳ ಸುಟ್ರಮ್ - ನೀಚರಾದ ಮೂರ್ಖಜನಗಳೊಡನೆ- ಸಂಬಂಧವನ್ನು, ಪುಲರ್ತ್ತಿ-ಹೋಗಲಾಡಿಸಿಕೊಂಡು, ಪೊರುವು ಅರುಮ್ ಶೀರ್-ಉಪಮಾನರಹಿತವಾದ ಕಲ್ಯಾಣಗುಣಗಳುಳ್ಳ, ಆರಿಯನ್-ಸಕಲ ಶಾಸ್ತ್ರ ಪ್ರವೀಣರಾಗಿ, ಶೆಮ್ಮೈ-ಕರಣತ್ರಯ ಸಾರೂಪ್ಯವನ್ನು ಹೊಂದಿರುವ, ಇರಾಮಾನುಶಮುನಿಕ್ಕು- "ಎಂಪೆರುಮಾನಾರ್" ಎಂಬುವ ಶ್ರೀ ರಾಮಾನುಜಮುನಿಗಳ ವಿಷಯದಲ್ಲಿ, ಅನ್ಬು ಶೆಯ್ಯುಮ್-ಪ್ರೀತಿಮಾಡತಕ್ಕಂಥ, ಶೀರಿಯಪೇರ್ ಉಡೈಯಾರ್-ಶ್ಲಾಘ್ಯವಾದ ಪುರುಷಾರ್ಥವನ್ನು ಹೊಂದಿರುವ ಮಹಾನುಭಾವರುಗಳ, ಅಡಿಕ್ಕೀೞ್ - ಪಾದಗಳ ಕೆಳಗೆ, ಎನ್ನೈಚ್ಚೇರ್ತ್ತದರ್ಕೇ - ನನ್ನನ್ನು ಸೇರಿಸಿದ ಮಹೋಪಕಾರಕ್ಕೆ, ಉನ್ನೈ ಅಡಿಪಣಿನ್ದೇನ್-ನಿನ್ನ ಚರಣಗಳನ್ನು ನಮಸ್ಕರಿಸುವೆನು ಎನ್ನುತ್ತಾರೆ.

ತಾ:— ಎಲೈ ಮನಸ್ಸೇ! ಅಸುರವರ್ಗದಲ್ಲಿ ಜನಿಸಿ ನೀಚಸ್ವಭಾವರಾದ ಮೂರ್ಖಜನಗಳೊಡನೆ ಸಂಬಂಧವನ್ನು ಸಂಪೂರ್ಣವಾಗಿ ಹೋಗಲಾಡಿಸಿಕೊಂಡು ಉಪಮಾನ ರಹಿತವಾದ ಅನಂತ ಕಲ್ಯಾಣಗುಣ ಶಾಲಿಗಳಾಗಿ, ಸಕಲಶಾಸ್ತ್ರ ಪ್ರವೀಣರಾಗಿ, ಕರಣತ್ರಯ ಸಾರೂಪ್ಯವನ್ನು ಹೊಂದಿರುವ ಶ್ರೀ ರಾಮಾನುಜಮುನಿವರ್ಯರ ವಿಷಯದಲ್ಲಿ, 'ಪ್ರೀತಿ' ಎಂಬ 'ಭಕ್ತಿ' ಯುಕ್ತರಾದ, ಶ್ಲಾಘ್ಯವಾದ ಪುರುಷಾರ್ಥಗಳನ್ನು ಪಡೆದಿರುವ ಮಹಾನುಭಾವರುಗಳ ಪಾದಗಳ ಕೆಳಗೆ ಇರಿಸಲು (ಅಂದರೆ ಅಂಥ ಭಾಗವತರ ದಾಸ್ಯವನ್ನು ಹೊಂದುವಂತೆ ಮಾಡಿದ ಮಹೋಪಕಾರಕ್ಕೆ) ನಾನೇನು ನಿನಗೆ ಪ್ರತ್ಯುಪಕಾರ ಮಾಡಬಲ್ಲೆನು? ನಿನ್ನ ಪಾದಗಳನ್ನು ಆಶ್ರಯಿಸಿ ನಮಸ್ಕರಿಸುವೆನು ಎಂದು ಅಮುದನಾರು ತಮ್ಮ ಮನಸ್ಸಿಗೆ ಹೇಳುತ್ತಾರೆ.

4. ಎನ್ನೈಪ್ಪುವಿಯಿಲೊರು ಪ್ಪೊರುಳಾಕ್ಕಿ, ಮರುಳ್ ಶುರನ್ದ
ಮುನ್ನೈಪ್ಪೞ್ವಿನೈ ವೇರರುತ್ತು, ಊೞಿಮುತಲ್ವನೈಯೇ
ಪನ್ನಪ್ಪಣಿತ್ತ ಇರಾಮಾನುಶನ್ ಪರನ್ ಪಾದಮುಮೆನ್
ಶೆನ್ನಿತ್ತರಿಕ್ಕವೈತ್ತಾನ್, ಎನಕ್ಕೇದುಮ್ ಶಿತೈವಿಲ್ಲೈಯೇ ||

ಅರ್ಥ :—ಎನ್ನೈ - ಒಂದು ವಸ್ತುವಲ್ಲದವನಾಗಿದ್ದ ನನ್ನನ್ನು - ಪುವಿಯಿಲ್ - ಈ ಅನ್ಧಕಾರಮಯವಾದ ಭೂಲೋಕದಲ್ಲಿ, ಒರು ಪ್ಪೊರುಳಾಕ್ಕಿ- ಒಂದು ಗಣ್ಯವಸ್ತುವನ್ನಾಗಿ ಮಾಡಿ, ಮರುಳ್ ಶುರನ್ದ - ಅವಿದ್ಯಾ ಕರ್ಮ ವಾಸನಾ ರುಚಿ ಪ್ರಕೃತಿಸಂಬಂಧಾತ್ಮಕವಾದ, ಮುನ್ನೈಪ್ಪೞ್ವಿನೈ - ಅನಾದಿ ಪ್ರವಾಹ ರೂಪವಾದ ಕರ್ಮಗಳನ್ನು, ವೇರ್ ಅರುತ್ತು - ಬುಡಸಹಿತ (ಸಮೂಲವಾಗಿ) ಛೇದಿಸಿ (ನಾಶಪಡಿಸಿ) ಊೞಿಮುತಲ್ವನೈಯೇ—ಆದಿಮೂರ್ತಿಯಾದ ಸಕಲ ವಸ್ತುಗಳಿಗೂ ಕಾರಣನಾದ ಸರ್ವೇಶ್ವರನನ್ನೇ, ಪನ್ನಪ್ಪಣಿತ್ತ - ಸರ್ವರೂ ವಿವೇಕದಿಂದ ಅನುಭವಿಸುವಂತೆ ಶ್ರೀ ಭಾಷ್ಯಗೀತಾಭಾಷ್ಯಾದಿಗಳ ಮೂಲಕ ಉಪದೇಶಿಸಿದ, ಇರಾಮಾನುಶನ್—ಸರ್ವೋತ್ಕೃಷ್ಟರಾದ ಎಂಬೆರುಮಾನಾರ್ ರವರು ಪರನ್—ಸರ್ವೇಶ್ವರನ, ಪಾದಮುಮ್- ಪಾದಗಳನ್ನು, ಎನ್ ಶೆನ್ನಿ—ನನ್ನ ಶಿರಸ್ಸಿನಲ್ಲಿ, ತರಿಕ್ಕವೈತ್ತಾನ್-ಧರಿಸುವ ಹಾಗೆ ಮಾಡಿದರು ಎನಕ್ಕು ಏದುಂ ಶಿತೈವು ಇಲ್ಲೈ—ನನಗೆ ಯಾವ ವಿಧವಾದ ಹಾನಿಯೂ ಇಲ್ಲ.

ಭಾವ:—ನನ್ನನ್ನು ಭೂಲೋಕದಲ್ಲಿ ಒಂದು ಗಣ್ಯ ವಸ್ತುವನ್ನಾಗಿ ಮಾಡಿ ಅಜ್ಞಾನದಿಂದುಂಟಾದ ಅನಾದಿಯಾಗಿ ಬರುತ್ತಿರುವ ಪ್ರಾಚೀನ ಕರ್ಮಗಳ ಫಲಗಳನ್ನು ಸಮೂಲವಾಗಿ ಛೇದಿಸಿ ಆದಿಮೂರ್ತಿಯಾದ ಸರ್ವೇಶ್ವರನಲ್ಲಿ ಅನುಭವಿಸುವಂತೆ ವಿವೇಚನಾಪರರಾಗಿ ಪ್ರಸಾದಿಸಿದ ಸರ್ವೋತ್ಕೃಷ್ಟರಾದ ಮತ್ತು ಪರತತ್ವ ಪ್ರತಿಪತ್ತಿ ಮಾಡಿದವರಾದ ಶ್ರೀರಾಮಾನುಜರು ತಮ್ಮ ಅಥವಾ ಭಗವಂತನ ಶ್ಲಾಘ್ಯವಾದ ಪಾದಾರವಿಂದಗಳನ್ನು ನಾನು ಶಿರಸಾ ವಹಿಸುವಂತೆ ತಾವಾಗಿಯೇ ಅನುಗ್ರಹಿಸಿರುವಾಗ ನನಗೆ ಯಾವವಿಧವಾದ ಕೊರತೆಯೂ ಇಲ್ಲ. ಎನ್ನುತ್ತಾರೆ.

5. ಎನಕ್ಕುತ್ತ ಶೆಲ್ವಮಿರಾಮಾನುಶನೆನ್ರು, ಇಶೈಯಗಿಲ್ಲಾ
ಮನಕ್ಕುತ್ತಮಾನ್ದರ್ ಪಳಿಕ್ಕಿಲ್ ಪುಗಳ್, ಅವನ್ ಮನ್ನಿಯಶೀರ್
ತನಕ್ಕುತ್ತವನ್ಬರ್ ಅವನ್ ತಿರುನಾಮಂಗಳ್ ಶಾತ್ತುಮೆನ್ನಾ
ಪಿನಕ್ಕುತ್ತಮ್ ಕಾಣಗಿಲ್ಲಾರ್, ಪತ್ತಿಯೇಯ್ನ್ದ
ಇಯಲ್ವಿದೆನ್ರೇ || ೫ ||

ಅರ್ಥ:— ಎನಕ್ಕು = ನನಗೆ. ಉತ್ತ = ಉಚಿತವಾದ. ಶೆಲ್ವಮ್ = ಸಂಪತ್ತು. ಇರಾಮಾನುಶನ್ = ಎಂಬೆರುಮಾನಾರ್ರವರು. ಎನ್ರು = ಎಂದು, ಇಶೈಯಗಿಲ್ಲಾ = ಸಮ್ಮತಿಸದ. ಮನಕ್ಕುತ್ತಮ್ = ಮನಸ್ಸಿನ ದೋಷವಿರುವ, ಮಾನ್ದರ್ = ಮನುಷ್ಯರು. ಪಳಿಕ್ಕಿಲ್ = (ನನ್ನ ಪ್ರಬಂಧವನ್ನು) ದೂಷಿಸಿದರೆ, ಪುಗಳ್ = (ಅದು ನನಗೆ) ಕೀರ್ತಿಯಾಗಿಯೇ ಇರುವುದು. ಅವನ್ = ಆ ಎಂಬೆರುಮಾನಾರ್ರವರನ್ನು. ಮನ್ನಿಯ = ಸೇರಿರುವ, ಶೀರ್ ತನಕ್ಕು = ಸ್ವಾಭಾವಿಕವಾದ ಗುಣಗಳಿಗೆ, ಉತ್ತ ಅನ್ಬರ್ = ಪ್ರೇಮವನ್ನು ಹೊಂದಿರುವ ಮಹಾತ್ಮರು. ಇದು — ಈ ಪ್ರಬಂಧವು ಪತ್ತಿ = ಭಕ್ತಿಯಿಂದ, ಏಯ್ನ್ದ = ಪ್ರೇರಿತವಾದ. ಇಯಲ್ವು = ಪ್ರವೃತ್ತಿ ಇಂಗಿತಗಳು (ಪ್ರಯತ್ನದ ಫಲ) ಎನ್ರು = ಎಂದು ಭಾವಿಸಿ ಅವನ್ = ಎಂಬೆರುಮಾನಾರ್ರವರ. ತಿರುನಾಮಂಗಳ್ = ಶ್ರೇಷ್ಠವಾದ ಹೆಸರುಗಳನ್ನು. ಶಾತ್ತುಮ್ = ಹೇಳುವ. ಎನ್ = ನನ್ನ. ಪಾವಿನಮ್ = ಪದ್ಯಗಳಲ್ಲಿಯು. ಕುತ್ತಮ್ = ದೋಷವನ್ನು ಕಾಣಗಿಲ್ಲಾರ್ = ನೋಡಲಾರರು.

ತಾ:— "ನನಗೆ ಸ್ವರೂಪಾನುರೂಪವಾದ ಸಂಪತ್ತು ಶ್ರೀ ರಾಮಾನುಜರೇ" ಎಂಬ ವಿಷಯವನ್ನು ಸಮ್ಮತಿಸದ ದುಷ್ಟಸ್ವಗಳು, ಮಂದಮತಿಗಳು, ಇವರಲ್ಲಿ ಯಾವನಾದರೂ ಒಂದು ದೋಷವನ್ನು ಆರೋಪಿಸಿ ದೂಷಿಸಿದರೆ ಅದೇ ನನಗೆ ಭೂಷಣಸ್ತುತಿ ಎಂದು ಹೇಳುತ್ತಾರೆ. ಆದರೆ ಈ ಪ್ರಬಂಧದ ರಸವನ್ನು ಅರಿತವರೂ, ಆ ರಾಮಾನುಜಾಚಾರ್ಯರಲ್ಲಿ ಅವರ ಸ್ವಾಭಾವಿಕ ಗುಣಗಳಿಗೆ ಅನುರೂಪವಾದ ಪ್ರೇಮವುಳ್ಳ ಮಹಾತ್ಮರೂ, ಈ ಪ್ರಬಂಧವು ಭಕ್ತಿಯುಕ್ತವಾದ ಪ್ರವೃತ್ತಿ ಎಂದು ಭಾವಿಸಿ ಅವರ ದಿವ್ಯನಾಮಗಳನ್ನು ಸ್ತೋತ್ರಿಸುವ ನನ್ನ ಪಾಶುರ(ಪದ್ಯ)ಗಳಲ್ಲಿ ದೋಷವನ್ನು ಕಾಣಲಾರರು.

6. ಇಯಲುಮ್ ಪೊರುಳುಮಿಶೈಯತ್ತೊಡುತ್ತು,
ಈನ್ ಕವಿಗಳನ್ಬಾಲ್
ಮಯಲ್ ಕೊಂಡುವಾೞ್ತ್ತುಮಿರಾಮಾನುಶನೈ,
ಮದಿಯಿನ್ಮೈಯಾಲ್
ಪಯಿಲುಙ್ಕವಿಗಳಿಲ್ ಪತ್ತಿಯಿಲ್ಲಾದವೆನ್ ಪಾವಿನೆಞ್ಜಾಲ್
ಮುಯಲ್ಕಿನ್ರನನ್, ಅವನ್ತನ್ ಪೆರುಙ್ಕೀರ್ತ್ತಿಮೊೞಿನ್ದಿಡವೇ

ಇಯಲುಮ್ = ಶಬ್ದವೂ, ಪೊರುಳುಮ್ = ಅರ್ಥವೂ, ಇಶೈಯ = ಒಂದಕ್ಕೊಂದು ಬಿಡದೆ ಸೇರಿವೆಯೋ ಎಂಬಂತೆ. ತೊಡುತ್ತು = ಸಂದರ್ಭಕ್ಕೆ ಸರಿಯಾಗಿ ಸೇರಿಸಿ, ಈನ್ = ವಿಲಕ್ಷಣವಾದ, ಕವಿಗಳ್ = ಕವಿಗಳು, ಅನ್ಬಾಲ್ = ಪ್ರೇಮಪ್ರಕರ್ಷದಿಂದ ಮಯಲ್ ಕೊಣ್ಡು = ವ್ಯಾಮೋಹಗೊಂಡು, ವಾೞ್ತ್ತುಮ್ = ಮಂಗಳಾಶಾಸನಮಾಡುವ, ಇರಾಮಾನುಶನೈ = ಶ್ರೀ ರಾಮಾನುಜರನ್ನು, ಪಯಿಲುಮ್ = ಸ್ತೋತ್ರಮಾಡತಕ್ಕ, ಕವಿಗಳಿಲ್ = ಕವಿಗಳ ವಿಷಯದಲ್ಲಿ, ಪತ್ತಿ ಇಲ್ಲಾದ = ಭಕ್ತಿಯಿಲ್ಲದ, ಎನ್ = ನನ್ನ, ಪಾವಿನೆಞ್ಜಾಲ್ = ಪಾಪಿಷ್ಠ ಮನಸ್ಸಿನಿಂದ, ಅವನ್ತನ್ = ಪ್ರಸಿದ್ಧಪುರುಷರಾದ ಅಂಥಾವರ, ಪೆರುಙ್ಕೀರ್ತ್ತಿ = ದಿವ್ಯವಾದ ಕೀರ್ತಿಯನ್ನು. ಮೊೞಿನ್ದಿಡ = ವರ್ಣಿಸುವದಕ್ಕೆ, ಮದಿಯಿನ್ಮೈಯಾಲ್ = ಅಜ್ಞಾನದಿಂದ. ಮುಯಲ್ಕಿನ್ರನನ್ = ಪ್ರಯತ್ನಿಸುತ್ತಿರುವೆನು—.

ತಾ:—ಶಬ್ದವೂ, ಅರ್ಥವೂ, ರಾಗವೂ ಸಮಂಜಸವಾಗಿ ಸೇರುವಂತೆ ವಿಲಕ್ಷಣವಾದ ಕವಿತ್ವಮಾಡಬಲ್ಲವರು, ಪ್ರೇಮಾತಿಶಯದಿಂದ ವ್ಯಾಮೋಹಗೊಂಡು ಶ್ರೀ ರಾಮಾನುಜರನ್ನು ಸ್ತುತಿಸುತ್ತಿರುವಲ್ಲಿ ಅಂಥಾ ಮಹಾನುಭಾವರ ವಿಷಯದಲ್ಲಿ ಭಕ್ತಿಯಿಲ್ಲದ ಪಾಪಿಷ್ಠನಾದ ನಾನು ಅಜ್ಞಾನದಿಂದ-ಅವರ ಹಿರಿಯ ಕೀರ್ತಿಯನ್ನು ವರ್ಣಿಸಲು-ಪ್ರಯತ್ನಿಸುತ್ತಿರುವೆನು. ಇದು ಸಾಹಸದ ಕಾರ್ಯವೆಂದು ತಮ್ಮನ್ನು ನಿಂದಿಸಿಕೊಳ್ಳುತ್ತಾರೆ.

7. ಮೊೞಿಯೈಕ್ಕಡಕ್ಕುಮ್ ಪೆರುಮ್ ಪುಗೞಾನ್
ವಞ್ಜಮುಕ್ಕುರುಮ್ಬಾಮ್
ಕುೞಿಯೈಕ್ಕಡಕ್ಕುಮ್ ನಮ್ ಕೂರತ್ತಾೞ್ವಾನ್ ಶರಣ್
ಕೂಡಿಯಪಿನ್,

ಪೞಿಯೈಕ್ಕಡತ್ತುಮಿರಾಮಾನುಶನ್ ಪುಗೞ್ಪಾಡಿಯಲ್ಲಾ
ವೞಿಯೈಕ್ಕಡತ್ತಲ್, ಎನಕ್ಕಿನಿಯಾದುಮ್ ವರುತ್ತಮನ್ರೇ ||

ಅರ್ಥ :—ಮೊೞಿಯೈ = ವಾಕ್ಕನ್ನು, ಕಡಕ್ಕುಮ್ = ಮೀರಿದ (ಅಂದರೆ ಮಾತುಗಳಿಂದ ವರ್ಣಿಸಲಸಾಧ್ಯವಾದ) ಪೆರುಮ್ ಪುಗೞಾನ್ = ಘನವಾದ ಕೀರ್ತಿಯುಳ್ಳ, ವಞ್ಜಮ್ = ವಂಚನೆಯಿಂದ ಕೂಡಿದ, ಮುಕ್ಕುರುಮ್ಬು ಆಮ್ = ಮೂರು ದುರ್ಮಾರ್ಗಗಳಾದ, ಅಹಂಕಾರತ್ರಯಗಳೆಂಬ, ಕುೞಿಯೈ = ಹಳ್ಳವನ್ನು, ಕಡಕ್ಕುಮ್ = (ತತ್ವ, ಹಿತ, ಪುರುಷಾರ್ಥ ಯಥಾತ್ಮ್ಯಜ್ಞಾನದಿಂದ) ದಾಟಿಸತಕ್ಕ ನಮ್ = ನಮಗೆಲ್ಲಾ ಸಾಧಾರಣ, ಕೂರತ್ತಾೞ್ವಾನ್ = ಕೂರತ್ತಾೞ್ವಾನ್ ಎಂಬ ಶ್ರೀ ವತ್ಸಾಂಕಮಿಶ್ರರನ್ನು, ಶರಣ್ ಕೂಡಿಯಪಿನ್ = ಪಾದಗಳನ್ನಾಶ್ರಯಿಸಿದ ತರುವಾಯ, ಪೞಿಯೈ = ಅಪವಾದಗಳಿಂದ ಕೂಡಿದ ಪಾಪಗಳನ್ನು, ಕಡತ್ತುಮ್ = ದಾಟಿಸಬಲ್ಲ (ಹೋಗಲಾಡಿಸಬಲ್ಲ) ಇರಾಮಾನುಶನ್ = ಶ್ರೀ ರಾಮಾನುಜರ, ಪುಗೞ್ = ಕೀರ್ತಿಯನ್ನು, ಪಾಡಿ = ಹಾಡಿ, ಕೊಂಡಾಡಿ, ಅಲ್ಲಾವೞಿಯೈ = ಸ್ವರೂಪಾನುರೂಪವಲ್ಲದ ಕೆಟ್ಟ ಮಾರ್ಗವನ್ನು, ಕಡತ್ತಲ್ = ದಾಟುವುದು (ಹೋಗಲಾಡಿಸುವುದು) ಎನಕ್ಕು = ನನಗೆ, ಇನಿಯಾದುಮ್ = ಇನ್ನು ಮೇಲೆ ಯಾವ ವಿಷಯವೂ ಕೂಡ, ವರುತ್ತಮನ್ರೇ = ಅಸಾಧ್ಯವಾದುದಲ್ಲ.

ತಾ :—ಮಾತುಗಳಿಂದ ವರ್ಣಿಸಲಸಾಧ್ಯವಾದ ಘನಕೀರ್ತಿಯುಳ್ಳವರಾಗಿಯೂ, ಚೇತನರನ್ನು ವಂಚಿಸಿ ದುರ್ಮಾರ್ಗಗಳೆಂಬ ಹಳ್ಳಕ್ಕೆ ಎಳೆಯುವ, ಕುಲಮದ, ವಿದ್ಯಾಮದ, ವೃತ್ತಮದಗಳೆಂಬ, ಅಹಂಕಾರ ಮದಗಳನ್ನು ತಮ್ಮ ತತ್ವೋಪದೇಶಗಳಿಂದ ದಾಟಿಸಬಲ್ಲ ಮತ್ತು ನಮ್ಮನ್ನು (ಚೇತನರನ್ನು) ಉದ್ಧರಿಸಲೋಸುಗವೇ ಇಲ್ಲಿ ಅವತರಿಸಿದ "ಕೂರಮ್" ಎಂಬ ದಿವ್ಯದೇಶಕ್ಕೆ ನಿರ್ವಾಹಕರಾದ, ಕೂರತ್ತಾೞ್ವಾನ್ ಎಂಬುವರ ಪಾದಗಳನ್ನು ಆಶ್ರಯಿಸಿದ ತರುವಾಯ, ಅಪವಾದಗಳಿಂದ ಕೂಡಿದ ಪಾಪಗಳನ್ನು ಸಂಪೂರ್ಣವಾಗಿ ಹೋಗಲಾಡಿಸಬಲ್ಲ ಶ್ರೀ ರಾಮಾನುಜ ಗುಣಗಾನಮಾಡಿ ಸ್ವರೂಪವಿರುದ್ಧವಾದ ಕೆಟ್ಟ ಮಾರ್ಗವನ್ನು ಹೋಗಲಾಡಿಸಿಕೊಂಡ ನನಗೆ ಇನ್ನು ಮೇಲೆ ಯಾವ ವಿಷಯವೂ ಅಸಾಧ್ಯವಲ್ಲ—ಅಂದರೆ ಸುಲಭಸಾಧ್ಯವೆಂದು ಹೇಳುತ್ತಾರೆ.

8. ವರುತ್ತುಮ್ ಪುರವಿರುಳ್ ಮಾತ್ತ, ಎಮ್ ಪೊಯ್‌ಗೈ ಪಿರಾನ್
ಮರೈಯಿನ್
ಕುರುತ್ತಿನ್ ಪೊರುಳೈಯುಮ್ ಶೆನ್ದಮಿಳ್‌ತನ್ನೈಯುಮ್
ಕೂಟ್ಟಿ, ಒನ್ರ
ತಿರಿತ್ತನ್ರೆರಿತ್ತ ತಿರುವಿಳಕ್ಕೈತ್ ತನ್ ತಿರುವುಳ್ಳತ್ತೇ
ಇರುತ್ತುಮ್ ಪರಮನ್, ಇರಾಮಾನುಶನೆಮ್ಮಿರೈಯವನೇ ||

ಅರ್ಥ :—ವರುತ್ತುಮ್ = ಬಾಧಿಸುವ, ಪುರವಿರುಳ್ = ಬಾಹ್ಯವಿಷಯ ಪ್ರಾವಣ್ಯಕ್ಕೆ ಕಾರಣವಾದ ಅಜ್ಞಾನಾಂಧಕಾರವನ್ನು, ಮಾತ್ತ = ಹೋಗಲಾಡಿಸಲು, ಎಮ್ = ನಮ್ಮ (ಪ್ರಪನ್ನ ಗೋಷ್ಠಿಗೆ (ಸ್ವಾಮಿಯಾದ) ಪೊಯ್‌ಗೈ ಪಿರಾನ್ = ಕಾಂಚೀನಗರದಲ್ಲಿ 'ಪೊಯ್‌ಗೈ' ಎಂದು ಹೆಸರುಳ್ಳ ಪುಷ್ಕರಿಣೀ ಸರೋವರದಲ್ಲಿ ಅವತರಿಸಿದ - ಉದಾರರಾದ ಪೊಯ್‌ಗೈ ಆಳ್ವಾರ್‌ರವರ, ಮರೈಯಿನ್ = ವೇದಾಂತದ, ಕುರುತ್ತಿನ್ ಪೊರುಳೈಯುಮ್ = ತಾತ್ಪರ್ಯಾರ್ಥಗಳನ್ನು, ಶೆನ್-ತಮಿಳ್‌ತನ್ನೈಯುಮ್ = ಶ್ಲಾಘ್ಯವಾದ ಮತ್ತು ಸುಂದರವಾದ ದ್ರಾವಿಡ ಭಾಷೆಯನ್ನೂ, ಕೂಟ್ಟಿ = ಸೇರಿಸಿ - ಒನ್ರತ್ತಿರಿತ್ತು = ಒಂದರೊಂದು ಹೊಂದಿಕೊಂಡಿರುವಂತೆ ಅಲಂಕರಿಸಿ - ಅನ್ರು = ಹಿಂದೆ (ಈ ಮೊದಲಾಳ್ವಾರುಗಳು ಮೂವರೂ ತಿರುಕ್ಕೋವಲೂರಿನಲ್ಲಿ ಒಂದು ದಿನ ರಾತ್ರಿ ಒಂದು ದಿಣ್ಣೆ ಮೇಲೆ ಕೂಡಿದಾಗ - ಒಬ್ಬರಿಗೊಬ್ಬರು ತಿಳಿಯಲಾರದೆ ನಿಂತಿರುವಾಗ ಮಧ್ಯೆ) ಎರಿತ್ತ ತಿರುವಿಳಕ್ಕೈ = "ವೈಯಂತಹಳಿಯಾ" ಎಂದು ಮೊದಲಾಗುವ, ತಮ್ಮೆದುರಿನಲ್ಲಿ ನಿಂತ ಆ ಭಗವಂತನ ಸ್ತೋತ್ರರೂಪವಾದ ಪ್ರಬಂಧವೆಂಬ ದೀಪವನ್ನು - ತನ್ ತಿರುವುಳ್ಳತ್ತೇ = ತಮ್ಮ ಮನಸ್ಸಿನಲ್ಲಿ ಭದ್ರವಾಗಿಟ್ಟುಕೊಂಡಿರುವ - ಪರಮನ್ = ನಿರತಿಶಯ ಪ್ರಭಾವವುಳ್ಳ - ಇರಾಮಾನುಶನ್ = ಆ ಶ್ರೀ ರಾಮಾನುಜರು - ಎಮ್ ಇರೈಯವನೇ = ನಮ್ಮ ಸ್ವಾಮಿಗಳು (ನಾಥರು).

ತಾ :—ಚೇತನರನ್ನು ನಿರಂತರ ಬಾಧಿಸುವ ಬಾಹ್ಯ ವಿಷಯಗಳಲ್ಲೇ ಆಸಕ್ತರಾಗಿ ತೊಳಲುವ, ನಮ್ಮ ಅಜ್ಞಾನಾಂಧಕಾರವನ್ನು ಸಮೂಲವಾಗಿ ನಾಶಪಡಿಸಿ ಹೇಯೋಪಾದೇಯಗಳನ್ನು ತೋಟ್ಟಿಮೊದಲು ಕರುಣಿಸಿಕೊಟ್ಟ-ಅ, ಪೊಯ್‌ಗೈಯಾಳ್ವಾರ್‌ರವರು, ವೇದಾಂತಾರ್ಥಗಳನ್ನೂ ದ್ರಾ

ಸುಲಭವಾಗಿ ತಿಳಿಯುವಂತೆ - ಅಂದದಿಂದ ತಮಿಳು ಭಾಷೆಯಲ್ಲಿ ಪ್ರಬಂಧ ರೂಪವಾಗಿ "ಮೊದಲ್ ತಿರುವಂದಾದಿ" ಎಂದು ನೂರು ಪಾಶುರ (ಪದ್ಯ) ಗಳನ್ನು ರಚಿಸಿ ಪ್ರದೀಕರಿಸಿದ ಜ್ಞಾನ ಸಾರದ ಬೆಳಕನ್ನು ತಮ್ಮ ಹೃದಯದಲ್ಲಿ ಯಾವಾಗಲೂ ಮರೆಯದ ಹಾಗೆ ನಿಲ್ಲಿಸಿರುವ - ಎಂಬೆರುಮಾನಾರ್ ಎಂದು ಹೆಸರು ಪಡೆದ ಶ್ರೀ ರಾಮಾನುಜಾಚಾರ್ಯರೇ ನಮ್ಮೆಲ್ಲರಿಗೂ ಜ್ಞಾನಾಭಿವರ್ಧಕರಾದ ಪರಮ ಗುರುಗಳು - ಎಂದು ಹೇಳುತ್ತಾರೆ.

9. ಇರೈವನೈಕ್ಕಾಣುಮಿದಯತ್ತಿರುಳ್ ಕೆಡ, ಞಾನಮೆನ್ನುಮ್

ನಿರೈವಿಳಕ್ಕೇತ್ತಿಯ ಪೂದತ್ತಿರುವಡಿತಾಳ್‌ಗಳ್, ನೆಂಜ

ತ್ತುರೈಯ ವೈತ್ತಾಳುಮಿರಾಮಾನುಶನ್ ಪುಗಳೋದುಮ್
ನಲ್ಲೋರ್

ಮರೈಯಿನೈಕ್ಕಾತ್ತು, ಇನ್ದ ಮಣ್ಣಗತ್ತೇ ಮನ್ನವೈಪ್ಪವರೇ ॥

ಅರ್ಥ: — ಇರೈವನೈ = ಸರ್ವೇಶ್ವರನನ್ನು, ಕಾಣುಮ್ = ಸಾಕ್ಷಾತ್ಕರಿಸುವುದಕ್ಕೆ ಸಾಧನವಾದ - ಇದಯತ್ತು = ಹೃದಯದ - ಇರುಳ್ = ಅಜ್ಞಾನಾಂಧಕಾರವು, ಕೆಡ = ನಾಶವಾಗುವ ಹಾಗೆ (ಅನ್ಬೇತಕಳಿಯಾ'') ಎಂದು ಆರಂಭವಾಗುವ - ಞಾನಮೆನ್ನುಮ್ = ಜ್ಞಾನವೆಂಬುವ - ನಿರೈವಿಳಕ್ಕು = ಪರಿಪೂರ್ಣವಾದ ನಂದಾದೀಪವನ್ನು, ಏತ್ತಿಯ = ಹತ್ತಿಸಿದ - ಪೂದತ್ತಿರುವಡಿ = ಪೂದತ್ತಾಳ್ವಾರ್ ಸ್ವಾಮಿಯವರ - ತಾಳ್‌ಗಳ್ = ಪಾದಗಳನ್ನು - ನೆಂಜತ್ತು = ಹೃದಯದಲ್ಲಿ, ಉರೈಯವೈತ್ತು = ನಿರಂತರ ವಾಸಿಸುವಂತೆ ಇಟ್ಟು — ಆಳುಮ್ = ಅನುಭವಿಸುತ್ತಿರುವ, ಇರಾಮಾನುಶನ್ = ಎಂಬೆರುಮಾನಾರ್‌ರವರ - ಪುಗಳ್ = ಕಲ್ಯಾಣಗುಣಗಳನ್ನು. ಓದುಮ್ = ಸದಾ ಸ್ತೋತ್ರಮಾಡುತ್ತಿರುವ, ನಲ್ಲೋರ್ — ಸತ್ಪುರುಷರು. ಮರೈಯಿನೈ — ವೇದರಾಶಿಯನ್ನು - ಕಾತ್ತು = ರಕ್ಷಿಸಿ, ಅದು ಇನ್ದಮಣ್ಣಗತ್ತೆ = ಈ ಭೂಮಿಯಲ್ಲಿ - ಮನ್ನವೈಪ್ಪವರೇ = ಸುಪ್ರತಿಷ್ಠಿತವಾಗಿರುವಂತೆ ಮಾಡಲು ಸಮರ್ಥರು.

ತಾ: — ಸರ್ವೇಶ್ವರನನ್ನು ಸಾಕ್ಷಾತ್ಕರಿಸುವುದಕ್ಕಾಗಿ ಅವತರಿಸಿ ಹೃದಯದ ಅನ್ಧಕಾರವು ಸಮೂಲವಾಗಿ ನಾಶವಾಗುವಂತೆ ಜ್ಞಾನವೆಂಬ ಪರಿಪೂರ್ಣ ದೀಪವನ್ನು, 'ಇರಣ್ಡಾವದ್ ತಿರುವನ್ದಾದಿ' ಎಂಬ ನೂರು ಪದ್ಯಗಳುಳ್ಳ ತಮ್ಮ ದ್ರಾವಿಡ ಪ್ರಬಂಧದ ಮೂಲಕ ಪ್ರಕಾಶಪಡಿಸಿದ–"ಪೂತತ್ತಾಳ್ವಾರ್" ಎಂಬ ಮಹಾನುಭಾವರ - ಸಿರಿಯಡಿಗಳನ್ನು ತಮ್ಮ ಹೃದಯದಲ್ಲಿ ನಿರಂತರವಾಗಿ ನೆಲಸುವಂತೆ ಇಟ್ಟು ಅನುಭವಿಸುತ್ತಿರುವ ಶ್ರೀ ರಾಮಾನುಜಾಚಾರ್ಯರ ಕಲ್ಯಾಣ ಗುಣಗಳನ್ನು ಕೀರ್ತಿಯನ್ನೂ ಸ್ತೋತ್ರ ಮಾಡುತ್ತಿರುವ ಸತ್ಪುರುಷರೇ ವೇದಗಳನ್ನೆಲ್ಲಾ ರಕ್ಷಿಸಿ ಅವು ಈ ಭೂಮಿಯಲ್ಲಿ ಸುಪ್ರತಿಷ್ಠಿತವಾಗಿರುವಂತೆ ಮಾಡುವ 'ವೇದಮಾರ್ಗಪ್ರತಿಷ್ಠಾಪಕರು' ಎಂದು ಹೇಳುತ್ತಾರೆ

**10.** ಮನ್ನಿಯಪೇರಿರುಳ್ ಮಾಣ್ಡಪಿನ್, ಕೋವಲುಳ್
ಮಾಮಲರಾಳ್
ತನ್ನೊಡು ಮಾಯನೈಕ್ಕಣ್ಡಮೈಕಾಟ್ಟುಮ್ ತಮಿೞ್ತ್ತಲೈವರ್
ಪೊನ್ನಡಿಪ್ಪೋತ್ತುಮಿರಾಮಾನುಶರ್ಕನ್ಬುಪೂಣ್ಡವರ್ ತಾಳ್
ಶೆನ್ನಿಯಿಲ್ ಶೂಡುಮ್ ತಿರುವುಡೈಯಾರ್, ಎನ್ನುಮ್
ಶೀರಿಯರೇ ||

ಅರ್ಥ:— ಮನ್ನಿಯ = ಆತ್ಮನನ್ನು ಆವರಿಸಿರುವ, ಪೇರಿರುಳ್ = ಮಹಾ ಅಜ್ಞಾನವೆಂಬ ಅನ್ಧಕಾರವು. ಮಾಣ್ಡಪಿನ್ = ನಶಿಸಿದ ನಂತರ. ಕೋವಲುಳ್ = ತಿರುಕ್ಕೋವಲೂರಿನಲ್ಲಿ. ಮಾಮಲರಾಳ್ ತನ್ನೊಡುಮ್ = ಕಮಲ ವಾಸಿನಿಯಾದ (ರುಕ್ಮಿಣಿ) ಲಕ್ಷ್ಮಿಯೊಡನೆ, ಆಯನೈ = ಆಶ್ಚರ್ಯ ಗುಣ ಚೇಷ್ಟಿತನಾದ ಸರ್ವೇಶ್ವರನನ್ನು (ಶ್ರೀ ಕೃಷ್ಣನನ್ನು) - ಕಂಡಮೈ = ಕಣ್ಡದ್ದನ್ನು, ಕಾಟ್ಟುಮ್ = ಪ್ರಕಾಶಪಡಿಸಿರುವ - ತಮಿೞ್ ತಲೈವರ್ = ದ್ರಾವಿಡ ಭಾಷಾ ವಿಶಾರದರಾದ ಮತ್ತು ಮೊದಲಿಗರಾದ ಪೇಯಾಳ್ವಾರ್‌ರವರ, ಪೊನ್ನಡಿ = ಸ್ಪೃಹಣೀಯವಾದ ಪಾದಗಳನ್ನು - ಪೋತ್ತುಮ್ = ಸ್ತುತಿಸುವ, ಇರಾಮಾನುಶರ್ಕು = ಶ್ರೀ ರಾಮಾನುಜರ ವಿಷಯದಲ್ಲಿ ಉಂಟಾದ - ಅನ್ಬು = ಪ್ರೀತಿಯನ್ನೇ - ಪೂಣ್ಡವರ್ ತಾಳ್ = ಆಭರಣವಾಗಿ ಧರಿಸಿದವರ ಪಾದಗಳನ್ನೂ - ಶೆನ್ನಿಯಿಲ್ ಶೂಡುಮ್ = ತಲೆಯಲ್ಲಿ ಧರಿಸತಕ್ಕ,

ತಿರುವುಡೈಯಾರ್ = ಭಾಗ್ಯವಂತರೇ - ಎನ್ರುಮ್ = ಯಾವಾಗಲೂ ಕೂಡ. ಶೀರಿಯರೇ = ಶ್ರೀಮಂತರೆನ್ನಿಸುವವರು - ಮತ್ತು ಶ್ಲಾಘ್ಯರು.

ತಾ: — ಪೊಯ್ಗೈಯಾಳ್ವಾರೂ, ಭೂದತ್ತಾಳ್ವಾರೂ, ಮುದಲ್ ತಿರುವನ್ದಾದಿ, ಇರಣ್ಡಾಮ್ ತಿರುವನ್ದಾದಿ ಎಂಬ ಎರಡು ನೂರು ಪದ್ಯಗಳನ್ನು ರಚಿಸಿ ಆ ಮೂಲಕ ಚೇತನರ ಆತ್ಮವನ್ನು ಆವರಿಸಿಕೊಂಡಿರುವ ಅಜ್ಞಾನವೆಂಬ ಗಾಢಾಂಧಕಾರವು ನಿರ್ಮೂಲವಾಗಿ ನಾಶವಾದ ಬಳಿಕ - ತಿರುಕ್ಕೋವಲೂರಿನಲ್ಲಿ, ಪೇಯಾಳ್ವಾರರು ಲಕ್ಷ್ಮೀದೇವಿ (ರುಕ್ಮಿಣಿ) ಯೊಡನೆ ಸರ್ವೇಶ್ವರನನ್ನು (ಶ್ರೀ ಕೃಷ್ಣನನ್ನು) ಸಾಕ್ಷಾತ್ಕರಿಸಿದ್ದನ್ನು - ದ್ರಾವಿಡ ಭಾಷೆಯಲ್ಲಿ "ತಿರುಕ್ಕಣ್ಡೇನ್ - ಪೊನ್ಮೇನಿಕಣ್ಡೇನ್ - ಎಂದು ಪ್ರಾರಂಭವಾಗುವ-ಮೂರನೇ ತಿರುವನ್ದಾದಿ ಎಂಬ ನೂರು ಪಾಶುರ (ಪದ್ಯ) ಗಳನ್ನು ರಚಿಸಿ-ಸ್ತೋತ್ರಮಾಡಿ ಪ್ರಕಾಶಪಡಿಸಿದರು. ಅವರ ಭೋಗ್ಯವಾದ- ಸುಂದರವಾದ ಪಾದಗಳನ್ನು ಸದಾ ಚಿಂತಿಸಿ ಸ್ತೋತ್ರ ಮಾಡುತ್ತಿರುವ - ರಾಮಾನುಜರಲ್ಲಿ ನಿರಂತರವಾದ ಭಕ್ತಿಯನ್ನು ತಮ್ಮ ಶಿರೋಭೂಷಣವಾಗಿ ಧರಿಸುವವರೇ ಮಹಾಭಾಗ್ಯಶಾಲಿಗಳು. ನಿಜವಾದ ಶ್ರೀಮಂತರು - ಎಂದು ಅಮುದ ನಾರ್ರವರು ಹೇಳುತ್ತಾರೆ.

**11.** ಶೀರಿಯನಾನ್ಮಱೈಚ್ಚೆಮ್ಪೊರುಳ್, ಶೆನ್ದಮಿಳಾಲ್ ಅಳಿತ್ತ
ಪಾರಿಯಲುಮ್ ಪುಗಳ್ಪ್ಪಾಣ್ ಪೆರುಮಾಳ್,
ಶರಣಾಮ್ ಪದುಮ
ತ್ತಾರಿಯಲ್ ಶೆನ್ನಿಯಿರಾಮಾನುಶನ್ತನ್ನೈಚ್ಚಾರ್ನ್ದವರ್ ತಮ್
ಕಾರಿಯವಣ್ಮೈ, ಎನ್ನಾಲ್ ಶೊಲ್ಲೊಣಾದಿಕ್ಕಡಲಿಡತ್ತೇ ||

ಅರ್ಥ:— ಶೀರಿಯ = ಸಜ್ಜನರಿಗೆ ಸಂಪತ್ತಾಗಿರುವ - ನಾನ್ಮಱೈ = ನಾಲ್ಕು ವೇದಗಳ - ಶೆಮ್ಪೊರುಳ್ = ಶ್ಲಾಘ್ಯವಾಗಿ, ಸಾರತಮವಾದ- ಸ್ವಾರಸ್ಯವಾದ ಅರ್ಥವಿಶೇಷಗಳಲ್ಲಿ (ತಿರುಮಂತ್ರಕ್ಕೆ ಮೂಲಪ್ರಕೃತಿಯಾದ "ಓಂ" ಎಂಬ ಪ್ರಣವದ ಅವಯವವಾದ - ಅ, ಉ, ಮ) ಎಂಬ ಅಕ್ಷರಗಳ - ಅರ್ಥವಿಶೇಷಗಳನ್ನು ಶೆನ್ದಮಿಳಾಲ್ = ಶ್ಲಾಘ್ಯವಾದ ದ್ರಾವಿಡ ಭಾಷೆಯಲ್ಲಿ. ಅಳಿತ್ತ — ಅನುಗ್ರಹಿಸಿದ ಅಮಲನಾದಿಪಿರಾನ್ - ಉಪನ

ಭಾಷ್ಯಕೃತ್ತನ್ನಾಯರ್, ಮೈತ್ತಿನಾಯರ್ ವಡವೇಂಗಡಮಾಮಲೈ) ಎಂದು ಮೂರು ಪಾಶುರಗಳ ಅಡಿಯಲ್ಲಿಯೇ - ವಿವರಿಸಲ್ಪಟ್ಟ ಪ್ರಬಂಧದ ಸಾರವನ್ನು ಅನುಗ್ರಹಿಸಿ ರಕ್ಷಿಸಿದ. ಪಾರಿಯುಲುಮ್ = ಅಖಂಡ ಭೂಮಂಡಲದಲ್ಲೆಲ್ಲಾ - ಪರಕ್ಕುಂ = ವ್ಯಾಪಿಸಿರುವ ಕೀರ್ತಿಯುಳ್ಳ - ಪಾಣ್ ಪೆರುಮಾಳ್ = ತಿರುಪ್ಪಾಣಾಳ್ವಾರ್, ಚರಣಮ್ + ಶೆನ್ನಿ = ಅಲಂಕರಿಸಲ್ಪಟ್ಟ ಶಿರಸ್ಸುಳ್ಳವರಾದ - ಇರಾಮಾನುಶನ್ತನ್ನೈ - ಎಂಬೆರುಮಾನಾರ್‌ರನ್ನು - ಶಾರ್‌ನ್ದವರ್ ತಮ್ - ಆಶ್ರಯಿಸಿದವರ, ಕಾರಿಯವಣ್ಣಮ್ = ಕರ್ತವ್ಯಾಚರಣೆ ಎಂಬ ಸಿದ್ಧವಾದ ಅನುಷ್ಠಾನ ಪ್ರಭಾವವನ್ನು - ಇಕ್ಕಡಲಿಡತ್ತು = ನಾಲ್ಕು ಸಮುದ್ರಗಳಿಂದ ಸುತ್ತುವರಿಯಲ್ಪಟ್ಟಿರುವ ಈ ಭೂಲೋಕದಲ್ಲಿ - ಎನ್ನಾಲ್ = ನನ್ನಿಂದ - ಶೊಲ್ಲೊಣಾದು = ವರ್ಣಿಸಲು ಅಸಾಧ್ಯವಾದುದು.

ತಾ: — ನಾಲ್ಕು ವೇದಗಳ ಸಾರವಾದ ಪ್ರಣವ - ಮತ್ತು ಅಷ್ಟಾಕ್ಷರೀ ಮಂತ್ರಗಳ ವ್ಯಾಖ್ಯಾನವಾದ ಅರ್ಥವಿಶೇಷಗಳನ್ನು - ಸುಂದರವಾದ ದ್ರಾವಿಡ ಭಾಷೆಯಲ್ಲಿ "ಅಮಲನಾದಿಪಿರಾ" ಎಂಬ ಪ್ರಬಂಧವನ್ನು ರಚಿಸಿ, ಶ್ರೀ ರಂಗನಾಥಸ್ವಾಮಿಗೆ ಭೋಗ್ಯವಾಗುವಂತೆ ಇಂಪಾಗಿ ಹಾಡಿದವರಾದ, ತಿರುಪ್ಪಾಣಾಳ್ವಾರ ಚರಣಾರವಿಂದಗಳನ್ನು ಪುಷ್ಪದಂತೆ ತಮ್ಮ ಶಿರಸ್ಸಿನಲ್ಲಿ ಧರಿಸಿಕೊಂಡಿರುವ - ನಮ್ಮ ಎಂಬೆರುಮಾನಾರ್‌ರನ್ನು - ಆಶ್ರಯಿಸಿದಂಥಾ - ಕೂರತ್ತಾಳ್ವಾರ್ ಮೊದಲಾದವರು ಆಚಾರ್ಯ ಕೈಂಕರ್ಯವನ್ನೂ ಭಗವತ್ಕೈಂಕರ್ಯವನ್ನೂ ಮಾಡಬೇಕೆಂದು ಆಚರಿಸಿದ ವೈಲಕ್ಷಣ್ಯ ಅಂದರೆ ಅನುಷ್ಠಾನ ಕ್ರಮವನ್ನು, ನಾಲ್ಕು ಸಮುದ್ರಗಳಿಂದ ವ್ಯಾಪ್ತವಾಗಿರುವ ಈ ಭೂಲೋಕದಲ್ಲಿ ನನ್ನಿಂದ ವರ್ಣಿಸಲು ಸಾಧ್ಯವಿಲ್ಲ.

ಇಲ್ಲಿ ಕೂರತ್ತಾಳ್ವಾರವರು ಬೋಧಾಯನ ವೃತ್ತಿಯನ್ನು ಒಂದೇ ಸಲಕ್ಕೆ ಗ್ರಹಿಸಿದುದೂ, ಕ್ರಿಮಿಕಂಠ ಚೋಳನ ಸಭೆಯಲ್ಲಿ ಕುದೃಷ್ಟಿಗಳನ್ನು ವಾದದಲ್ಲಿ ಜಯಿಸಿದುದೂ, "ಮುದಲಿಯಾಂಡಾನ್" ಎಂಬುವರು ಮಾಯಾವಾದಿಗಳು ಸ್ನಾನ ಮಾಡುವ ಘಟ್ಟದಲ್ಲಿ ತಮ್ಮ ಪಾದಪ್ರಕ್ಷಾಳನಮಾಡಿ- ಅದರಿಂದ ಅವರುಗಳು ಅಲ್ಲಿಸ್ನಾನ ಮಾಡಿದ್ದರ ಫಲವಾಗಿ ಜ್ಞಾನಿಗಳಾಗಿ, ಅವರನ್ನು ಶ್ರೀ ವೈಷ್ಣವರನ್ನಾಗಿ ಮಾಡಿದುದೂ, "ಪಿಳ್ಳಾನ್" ಎಂಬ

ವರು ತಿರುವಾಯ್ಮೊೞಿಯಾಯಿರಕ್ಕೆ ಆರುಸಾವಿರ ಗ್ರಂಥವ್ಯಾಖ್ಯಾನ ಬರೆದುದೂ, "ಅನಂತಾಳ್ವಾರ್" ಎಂಬುವರು, ತಿರುಪತಿ ಶ್ರೀನಿವಾಸದೇವರ ಕೈಂಕರ್ಯದಲ್ಲಿ ನಿರತರಾದುದೂ, "ತಿರುವೇಂಗಡ ಮುಡೈಯಾರ್" ಅವರಿಗೆ ಸಹಾಯಕರಾದುದೂ "ಕೊಳ್ಳೈಯುಮ್ಮಾಳ್" ಎಂಬುವಳು - ಶ್ರೀ ರಾಮಾನುಜರ ಗೋಷ್ಠಿಗೆ ತದೀಯಾರಾಧನೆ ನಡೆಸಿದುದೂ ಕೈಂಕರ್ಯಗಳೆಂಬ ವಿಶೇಷಾನುಷ್ಠಾನಗಳು. ಇವು ಗುರು ಪರಂಪರಾ ಪ್ರಭಾವದ ಗ್ರಂಥದಲ್ಲಿ ವಿವರಿಸಲ್ಪಟ್ಟಿರುವುದನ್ನು ಗಮನಿಸತಕ್ಕದ್ದಾಗಿದೆ.

**12.** ಇಡಂಕೊಣ್ಡ ಕೀರ್ತಿ ಮೞಿಶೈಕ್ಕಿರೈವನ್, ಇಣೈಯಡಿಪ್ಪೋದು
ಅಡಂಗುಮಿದಯತ್ತಿರಾಮಾನುಶನ್, ಅಮ್‌ಪೊರ್ಪಾದಮೆನ್ರುಮ್
ಕಡಂಕೊಣ್ಡಿರೈಂಜುಮ್ ತಿರುಮುನಿವರ್‌ಕ್ಕನ್ರಿಕ್ಕಾದಲ್ ಶೆಯ್ಯಾ
ತ್ತಿಡಂಕೊಣ್ಡ ಜ್ಞಾನಿಯರ್‌ಕ್ಕೇ, ಅಡಿಯೇನನ್ಬು ಶೆಯ್‌ವದುವೇ॥

ಅರ್ಥ:— ಇಡಂಕೊಣ್ಡ = ಭೂಲೋಕದಲ್ಲೆಲ್ಲಾ ವ್ಯಾಪಿಸಿರುವ ಕೀರ್ತಿ = ಯಶಸ್ಸುಳ್ಳ - ಮೞಿಶೈಕ್ಕು = ತಿರುಮೞಿಶೈ ಎಂಬ ದಿವ್ಯ ದೇಶಕ್ಕೆ, ಇರೈವನ್ = ಸ್ವಾಮಿಯಾದ ತಿರುಮೞಿಶೈಯಾಳ್ವಾರ್‌ರವರ, ಇಣೈಯಡಿ, ಪ್ಪೋದು = ಭೋಗ್ಯವಾಗಿ ಪರಸ್ಪರ ಸದೃಶವಾಗಿ ಸೇರಿಕೊಂಡಿರುವ ಪಾದ ಪದ್ಮಗಳಲ್ಲಿ, ಅಡಂಗುಮ್ ಇದಯತ್ತು = ಅಣುವಾದ ಮನಸ್ಸಿನಲ್ಲಿ ಮಹತ್ತಾದ ಪಾದಗಳನ್ನು ಸೇರಿಸಿಕೊಳ್ಳುವ ಹಾಗೆ ಹೃದಯ ಪ್ರವೇಶವುಳ್ಳ, ಇರಾಮಾನುಶನ್ = ಶ್ರೀ ರಾಮಾನುಜರ, ಅಮ್ = ಅಂದವಾದ, ಪೊನ್ = ಸ್ಪೃಹಣೀಯವಾದ, ಪಾದಮ್ - ಪಾದಗಳನ್ನು - ಎನ್ರುಮ್ = ಸರ್ವಕಾಲದಲ್ಲಿಯೂ, ಕಡಂಕೊಣ್ಡು = ಪ್ರಾಪ್ಯವೆಂದು ಸ್ವೀಕರಿಸಿ, ಇರೈಂಜುಮ್ = ಆಶ್ರಯಿಸತಕ್ಕ. ತಿರು = ಸಂಪತ್ತುಳ್ಳವರಾಗಿ, ಮುನಿವರ್ಕ್ಕು ಅನ್ರಿ = ಅದನ್ನೆ ಮನನ ಮಾಡತಕ್ಕವರಲ್ಲಿ ಹೊರತು ಇತರರಲ್ಲಿ - ಕಾದಲ್ ಶೆಯ್ಯಾ = ಪ್ರೀತಿಮಾಡದ - ತಿಡಮ್ ಕೊಣ್ಡ = ದೃಢಾಧ್ಯವಸಾಯ ಮಾಡತಕ್ಕ, ಜ್ಞಾನಿಯರ್ಕ್ಕೇ = ಜ್ಞಾನದಲ್ಲಿ ಮೇಲೆನಿಸಿದವರಿಗೆ . ಅಡಿಯೇನ್ = ದಾಸನಾದ ನಾನು - ಅನ್ಬುಶೆಯ್‌ವದುವೇ = ಸದಾ ಪ್ರೀತಿಯಿಂದಲೂ ಸ್ನೇಹದಿಂದಲೂ ಕೂಡಿರುವೆನು.

ತಾ:— ಭೂಲೋಕದಲ್ಲಿ ಘೋಷಿಸುತ್ತಿರುವ ಕೀರ್ತಿವಂತರಾದ, "ತಿರು

ಮೞಿಶೈ" ಎಂಬ ದಿವ್ಯ ದೇಶಕ್ಕೆ ಸ್ವಾಮಿಯಾದ 'ತಿರುಮೞಿಶೈಪ್ಪಿರಾನ್' ಎಂಬ ಭಕ್ತಿ ಸಾರಯೋಗಿಗಳ ಪಾದಪದ್ಮಗಳನ್ನು ಅಡಗಿ ಮುಚ್ಚಿಟ್ಟು ಕೊಳ್ಳುವ ಹೃದಯವುಳ್ಳ ಎಂಬೆರುಮಾನಾರ್‌ರವರ ವಿಲಕ್ಷಣವೂ ಸ್ಪೃಹಣೀಯವೂ ಆದ ಶ್ರೀ ಪಾದಗಳನ್ನು ಸರ್ವಕಾಲದಲ್ಲೂ ಸೇವ್ಯವೆಂದು ಸ್ವೀಕರಿಸಿ ಆಶ್ರಯಿಸುವ ಭಾಗ್ಯವೇ ನಿರವಧಿಕವಾದ ಸಂಪತ್ತೆಂದು ಸದಾ ಧ್ಯಾನಿಸುತ್ತಿರುವ ಜ್ಞಾನಾಧಿಕರುಗಳನ್ನು ಬಿಟ್ಟು ಮತ್ತಾರನ್ನೂ ದಾಸಭೂತನಾದ ನಾನು ಪ್ರೀತಿಸಿ ಆಶ್ರಯಿಸುವುದಿಲ್ಲ.

**13.** ಶೆಯ್ಯುಮ್ ಪಶುನ್ದುಳವತ್ತೊೞಿಲ್ ಮಾಲೈಯುಮ್,
ಶೆನ್ದಮಿೞಿಲ್
ಪೆಯ್ಯುಮ್ ಮಱೈತ್ತಮಿೞ್ ಮಾಲೈಯುಮ್, ಪೇರಾದಶೀರರಙ್ಗ
ತ್ತೈಯನ್ ಕೞಱ್ಕಣಿಯುಮ್ ಪರನ್ ತಾಳನ್ರಿಯಾದರಿಯಾ
ಮೆಯ್ಯನ್, ಇರಾಮಾನುಶನ್ ಶರಣೇಗತಿವೇಱೆನಕ್ಕೇ ||

ಅರ್ಥ:— ಶೆಯ್ಯುಮ್ = ತನ್ನ ಸ್ವಹಸ್ತದಿಂದ ನಿರ್ಮಿಸಿದ - ಪಶುಮ್ = ಹಸುರಾದ ಹೊಸದಾಗಿ ಕುಯ್ದು - ತುಳವಮ್ = ತುಳಸೀ ದಳಗಳಿಂದ, ತೊೞಿಲ್ = ಕಟ್ಟಲ್ಪಟ್ಟ, ಮಾಲೈಯುಮ್ = ಹಾರವನ್ನೂ ಶೆನ್ದಮಿೞಿಲ್ = ಸುಂದರವಾದ ದ್ರಾವಿಡ ಭಾಷೆಯಲ್ಲಿ. ಪೆಯ್ಯುಮ್ = ನಿರ್ಮಿಸಿದ, ಮಱೈತ್ತಮಿೞ್ ಮಾಲೈಯುಮ್ = ವೇದಘೋಷಾದಿಯಲ್ಲಿರುವ ದ್ರಾವಿಡ ದಿವ್ಯ ಪ್ರಬಂಧವಾದ "ತಿರುಮಾಲೈ" ಯನ್ನೂ - ಪೇರಾದ ಶೀರ್ = ಸ್ಥಿರವಾದ ಕಲ್ಯಾಣ ಗುಣಗಳಿಂದ ಪರಿಪೂರ್ಣನಾಗಿರುವ, ಅರಂಗತ್ತೈಯನ್ = ಶ್ರೀರಂಗವೆಂಬ ಕ್ಷೇತ್ರದಲ್ಲಿ ಶಯನಿಸಿದ ಸರ್ವೇಶ್ವರನ-ಕೞಱ್ಕು = ಪಾದಾರವಿಂದಗಳಿಗೆ - ಅಣಿಯುಮ್ = ಸಮರ್ಪಿಸಿದ - ಪರನ್ = ಸರ್ವೋತ್ತಮರಾದ ತೊಂಡರಡಿಪ್ಪೊಡಿಯಾೞ್ವಾರ್‌ರವರ - ತಾಳನ್ರಿ = ಶ್ರೀ ಪಾದಗಳನ್ನು ಬಿಟ್ಟು - ಆದರಿಯಾ = ಬೇರೊಂದನ್ನೂ ಆದರಿಸದ - ಮೆಯ್ಯನ್ = ಸತ್ಯಶೀಲರಾದ, ಇರಾಮಾನುಶನ್ = ಎಂಬೆರುಮಾನಾರ್‌ರವರ - ಶರಣೇ = ಶ್ರೀ ಪಾದಂಗಳ ಆಶ್ರಯವೇ-ಎನಕ್ಕು = ನನಗೆ-ವೇಱುಗತಿ = ವಿಲಕ್ಷಣವಾದ ಪ್ರಾಪ್ಯವು. (ಅಂದರೆ ಅವರೇ ಗತಿಯಲ್ಲದೆ ಇನ್ಯಾರೂ ಬೇರೆ ಇಲ್ಲ).

ತಾ:—ಸಕಲ ಕಲ್ಯಾಣಗುಣ ಸಾಗರರಾದ ಶ್ರೀ ರಂಗನಾಥ ದೇವರಿಗೆ-ಆಹ್ಲಾದ್ಯನಾದ ತುಳಸೀ ಪುಷ್ಪ ಮಾಲೆಗಳನ್ನೂ "ತಿರುಮಾಲೈ" ಎಂಬ ತಮಿಳು ಪ್ರಬಂಧಗಳನ್ನೂ ರಚಿಸಿ ಸಮರ್ಪಿಸಿದ ಭಕ್ತಾಂಘ್ರಿರೇಣು ಮುನಿಗಳ ಪಾದಗಳನ್ನು ಆದರಿಸುವ ಆ ಶ್ರೀ ರಾಮಾನುಜರ ದಿವ್ಯ ಶ್ರೀ ಪಾದಾಬ್ಜಗಳೇ ನನಗೆ ವಿಲಕ್ಷಣವಾದ ಗತಿ. (ಉಪಾಯ ಮತ್ತು ಉಪೇಯವು). ಎಂದು ಹೇಳುತ್ತಾರೆ

14\. ಗತಿಕ್ಕುಪ್ಪದರಿವೆಮ್ ಕಾನಮುಮ್ ಕಲ್ಲುಮ್ ಕಡಲುಮೆಲ್ಲಾಮ್,
ಕೊದಿಕ್ಕತ್ತವಮ್ ಶೆಯ್ಯುಮ್ ಕೊಳ್ಗೈಯತ್ತೇನ್, ಕೊಲ್ಲಿ
ಕಾವಲನ್ ಶೊಲ್
ಪದಿಕ್ಕುಮ್ ಕಲೈಕ್ಕವಿಪಾಡುಮ್ ಪೆರಿಯವರ್ ಪಾದಂಗಳೇ
ತುದಿಕ್ಕುಮ್ ಪರಮನ್, ಇರಾಮಾನುಶನೆನ್ನೈ ಚ್ಚೋರ್ವಿಲನೇ ॥

ಅರ್ಥ:—ಕೊಲ್ಲಿಕಾವಲನ್ = ಕೊಲ್ಲಿ ನಗರವೆಂಬ ತಿರುವಂಜಿಕ್ಕಳ ಕಳ್ಳಿಕೋಟ್ಟೈ (Calicut) ಗೆ ರಕ್ಷಕರಾದ ಶ್ರೀ ಕುಲಶೇಖರಪ್ಪೆರುಮಾಳನ, ಶೊಲ್ = ಶಾಸ್ತ್ರ ವಚನಗಳನ್ನು - ಪದಿಕ್ಕುಮ್ = ವಿಷಯವಾಗಿ ಆಯಾಯ ಸ್ಥಾನಗಳಲ್ಲಿ ಸೇರಿಸಿ ಪ್ರಸಾದಿಸುವ-ಕವಿ = ದಿವ್ಯ ಪ್ರಬಂಧವನ್ನು - ಪಾಡುಮ್ = ಗಾನಮಾಡುತ್ತಿರುವ - ಪೆರಿಯವರ್ = ಶ್ರೇಷ್ಠರಾದವರ, ಪಾದಂಗಳೇ = ಶ್ರೀ ಪಾದಗಳನ್ನೇ-ತುದಿಕ್ಕುಮ್ = ಸ್ತೋತ್ರಮಾಡುತ್ತಿರುವ, ಪರಮನ್ = ಭಾಗವತೋತ್ತಮರಾದ, ಇರಾಮಾನುಶನ್ = ಎಂಬೆರುಮಾನಾರ್ ಇವರು, ಎನ್ನೈ = ನನ್ನನ್ನು, ಚ್ಚೋರ್ವಿಲನ್ = ಕೈ ಬಿಡುವುದಿಲ್ಲ: ಗದಿಕ್ಕು = ಸದ್ಗತಿಗೆ, ಪದರಿ = ಆತುರಪಟ್ಟು - ವೆಮ್ ಕಾನಮುಮ್ = ಉಷ್ಣದಿಂದ ತಾಪಕರವಾದ ಅರಣ್ಯಗಳಲ್ಲಿಯೂ, ಕಲ್ಲುಮ್ = ಪರ್ವತಾಗ್ರಗಳಲ್ಲಿ ವಾಸಿಸುತ್ತಲೂ, ಕಡಲುಮ್ = ಶೀತಳವಾದ ತೀರ್ಥಗಳಲ್ಲಿ ಅವಗಾಹಿಸಿಯೂ, ಎಲ್ಲಾಮ್ = ಎಲ್ಲಾ ಅವಯವಗಳೂ, ಕೊದಿಕ್ಕ = ಪರಿತಪಿಸಿ ಕ್ಲೇಶಿಸುವಂತೆ, ತವಮ್ ಶೆಯ್ಯುಮ್ = ತಪಸ್ಸುಗಳನ್ನು ಮಾಡುವ, ಕೊಳ್ಗೈ ಅತ್ತೇನ್ = ಸ್ವಭಾವವನ್ನು ಹೋಗಲಾಡಿಸಿ ಕೊಂಡೆನು.

ತಾ: — "ಕೊಲ್ಲಿನಗರ" ಅಥವಾ "ತಿರುವಂಜಿಕ್ಕಳ" ಎಂಬ

ಕ್ಷೇತ್ರಕ್ಕೆ ರಕ್ಷಕರಾದ "ಶ್ರೀ ಕುಲಶೇಖರಾೞ್ವಾರ್ಗಳು" ಶಾಸ್ತ್ರಗಳ ಸಾರಭೂತವಾದ ಉಕ್ತಿಗಳಿಂದ ತುಂಬುವಂತೆ ರಚಿಸಿರುವ "ಪೆರುಮಾಳ್ ತಿರುಮೊೞಿ" ಎಂಬ ದಿವ್ಯ ಪ್ರಬಂಧವನ್ನು ಹಾಡುವ-ಮಹಾತ್ಮರಾದ ನಾಥಮುನಿ, ಆಳವಂದಾರ್, ಮತ್ತು ಅವರ ಶಿಷ್ಯರ ಶ್ರೀ ಪಾದಗಳನ್ನೇ ಆಶ್ರಯಿಸಿ ಸ್ತೋತ್ರಮಾಡುವ ಪರಮ ಭಾಗವತರಾದ ಎಂಬೆರುಮಾನಾರವರು ನನ್ನನ್ನು ಕೈಬಿಡರು. ಆದುದರಿಂದ ಸದ್ಗತಿಯನ್ನು ಪಡೆಯಬೇಕೆಂದು ಆಶಿಸಿ ಅದಕ್ಕಾಗಿ ತ್ವರೆಪಟ್ಟು ಅತಿ ಕ್ರೂರವಾದ ಘೋರಾರಣ್ಯಗಳಲ್ಲೂ, ಪರ್ವತಾಗ್ರಗಳಲ್ಲೂ ನೆಲಸಿಯೂ ಮತ್ತು ಶೀತಳ ತೀರ್ಥಗಳಲ್ಲಿ ಸ್ನಾನಮಾಡಿಯೂ ಪಂಚಾಗ್ನಿ ಮಧ್ಯದಲ್ಲಿ ನಿಂತೂ ಎಲ್ಲಾ ಅವಯವಗಳೂ ಪರಿತಪಿಸಿ ಕ್ಲೇಶಿಸುವಂತೆ ತಪಸ್ಸುಮಾಡುವ ಸ್ವಭಾವವನ್ನೂ ಅದರಮೂಲಕ ಲೋಕಕ್ಕೆ ಕ್ಷೋಭೆಯನ್ನುಂಟುಮಾಡುವುದನ್ನೂ ಬಿಟ್ಟುಬಿಟ್ಟೆನು.

15. ಶೋರಾದಕಾದಲ್ ಪೆರುಮ್ ಶುೞಿಪ್ಪಾಲ್, ತೊಲ್ಲೈ
ಮಾಲೈಒನ್ರುಮ್
ಪಾರಾದವನೈಪ್ಪಲ್ಲಾಣ್ಡೆನ್ರು ಕಾಪ್ಪಿಡುಮ್, ಪಾನ್ಮೈಯನ್ತಾಳ್
ಪೇರಾದವುಳ್ಳತ್ತಿರಾಮಾನುಶನ್ತನ್ ಪಿರಙ್ಗಿಯಶೀರ್
ಶಾರಾ ಮನಿಶರೈಚ್ಚೇರೇನ್, ಎನಕ್ಕೆನ್ನತಾೞ್ವಿನಿಯೇ ||

ಅರ್ಥ:—ಶೋರಾದ = ಅವಿಚ್ಛಿನ್ನವಾದ (ಎಣ್ಣೆಯ ಧಾರೆಯಂತೆ ಸ್ವಲ್ಪವೂ ಭಂಗವಾಗದ) ಕಾದಲ್ = ಭಕ್ತಿಪ್ರವಾಹದ. ಪೆರುಂಶುೞಿಪ್ಪಾಲ್ = ದೊಡ್ಡ ಸುಳಿಯಲ್ಲಿ ಸಿಕ್ಕಿಕೊಂಡು, ತೊಲ್ಲೈಮಾಲೈ = ನಿತ್ಯವಾದ ಸರ್ವೇಶ್ವರನ ಸ್ವಭಾವವನ್ನು, ಒನ್ರುಮ್ = ಸ್ವಲ್ಪವಾದರೂ, ಪಾರಾದು = ನಿರೂಪಿಸದಂತೆ-ಅಂದರೆ ಅನಿತ್ಯರಾಗಿ ರಕ್ಷ್ಯಭೂತ ರಾಗಿರುವರಿಗೆಲ್ಲಾ ಆಯುರಾರೋಗ್ಯೈಶ್ವರ್ಯಗಳಿಗಾಗಿ ಮಂಗಳಾಶಾಸನಮಾಡುವವರಂತೆ - ಪಲ್ಲಾಣ್ಡೆನ್ರು = "ನೀನು ಬಹುಕಾಲ, ಚೆನ್ನಾಗಿ ಯಾವ ಕೊರತೆಯೂ ಇಲ್ಲದಂತೆ ಇರಬೇಕು" ಎಂದು, ಅವನೈಕ್ಕಾಪ್ಪಿಡುಮ್ = ಅವನಿಗೆ ಮಂಗಳಶಾಸನಮಾಡುವಂಥಾ, ಪಾನ್ಮೈಯನ್ = ಸ್ವಭಾವವುಳ್ಳ ಪೆರಿಯಾೞ್ವಾರ್ರವರ, ತಾಳ್ = ಶ್ರೀ ಪಾದಗಳನ್ನು, ಪೇರಾದಉಳ್ಳತ್ತು = ಬಿಟ್ಟು ಹೋಗದಂಥಾ ಹೃದಯವುಳ್ಳ,

ಅಂದರೆ ಅವಿಚ್ಛಿನ್ನವಾದ ಭಕ್ತಿಯುಳ್ಳ, ಇರಾಮಾನುಶರ್ಕ್ಕೇ = ಶ್ರೀ ರಾಮಾನುಜರ - ಪಿರಂಗಿಯಶೀರ್ = ನಿತ್ಯಾಭಿವೃದ್ಧಿಯಾದ ಕಲ್ಯಾಣಗುಣಗಳನ್ನು, ಶಾರಾಮನಿಶರ್ಕ್ಕೈ = ಆಶ್ರಯಿಸದೇ ಇರುವ ಮನುಷ್ಯರನ್ನು - ಶೇರೇನ್ = ನಾನು ಸೇರುವುದಿಲ್ಲ (ಅವರ ಸಹವಾಸ ಮಾಡುವುದಿಲ್ಲ). ಎನಕ್ಕು = ನನಗೆ, ಇನಿ = ಇನ್ನುಮೇಲೆ, ಎನ್ನ = ಯಾವ. ತಾಳ್ವು = ಕೊರತೆಯುಂಟು, ಅಂದರೆ ಏನೂ ಕೊರತೆ ಇಲ್ಲವೆಂದರ್ಥ.

ತಾ: — ಸರ್ವಭೂತ ಸುಹೃತ್ತಾಗಿಯೂ ಸರ್ವರಕ್ಷಕನಾಗಿಯೂ ಇರುವ ಸರ್ವೇಶ್ವರನನ್ನು ಸಾಕ್ಷಾತ್ಕರಿಸಿ ಅವನ ರಕ್ಷಕತ್ವಾದಿಗಳಲ್ಲಿ ಕಣ್ ಇಡದೆ ಪ್ರೇಮವು ತಲೆ ಎತ್ತಿ "ಅವನಿಗೆ ಇನ್ನೇನು ಕೆಡಕು ಬರುವುದೋ" ಎಂಬ ಮನಸ್ಸಿನ ಶಂಕೆಯಿಂದ "ತಿರುಪ್ಪಲ್ಲಾಂಡು" ಎಂಬ ಪ್ರಬಂಧದಿಂದ ಮಂಗಳಾಶಾಸನ ಪದ್ಯಮಾಲೆಯನ್ನು ರಚಿಸಿ ಅವನಿಗೆ ರಕ್ಷೆಯನ್ನು ಕೋರಿದ ಪೆರಿಯಾಳ್ವಾರ್ರವರ ಶ್ರೀ ಪಾದಗಳಲ್ಲಿ ಆಶ್ರಯಹೊಂದಿದ ಶ್ರೇಷ್ಠ ಹೃದಯರಾದ ಎಂಬೆರುಮಾನಾರ್ರವರ ಕಲ್ಯಾಣ ಗುಣಗಳನ್ನು ತಮಗೆ ಆಶ್ರಯವಾಗಿ ಹೊಂದದೇ ಇರುವ ಮನುಷ್ಯರನ್ನು ನಾನು ಸೇರುವುದಿಲ್ಲ. ಹೀಗಿರುವಲ್ಲಿ ನನಗೆ ಇನ್ನಾವ ಕೊರತೆಯುಂಟು? ಅಂದರೆ ಏನೂ ಕೊರತೆ ಇಲ್ಲವೆನ್ನುತ್ತಾರೆ.

**16.** ತಾಳ್ವೊನ್ರಿಲ್ಲಾ ಮರೈ ತಾಳ್ನ್ದು, ತಲಮುಳ್ಳುದುಮ್ ಕಲಿಯೇ
ಆಳ್ಕಿನ್ರ ನಾಳ್ ವನ್ದಳಿತ್ತವನ್ ಕಾಣ್ಮಿನ್, ಅರಂಗರ್ ಮೌಳಿ
ಶೂಳ್ಕಿನ್ರ ಮಾಲೈಯೈಚ್ಚೂಡಿಕ್ಕೊಡುತ್ತವಳ್ ತೊಲ್ಲರುಳಾಲ್
ವಾಳ್ಕಿನ್ರ ವಳ್ಳಲ್, ಇರಾಮಾನುಶನೆನ್ನುಮ್ ಮಾಮುನಿಯೇ ||

ಅರ್ಥ:— ಅರಂಗರ್ = ಶ್ರೀ ರಂಗನಾಥರ - ಮೌಳಿ = ಕಿರೀಟಕ್ಕೆ, ಶೂಳ್ಕಿನ್ರ = ಮುಡಿಸತಕ್ಕ - ಮಾಲೈ = ಪುಷ್ಪದ ಹಾರವನ್ನು, ಶೂಡಿಕ್ಕೊಡುತ್ತವಳ್ = ಮೊದಲು ತಾನು ಧರಿಸಿಕೊಂಡು ನಂತರ ಸ್ವಾಮಿಗಾಗಿ ಕೊಟ್ಟ - ಆಂಡಾಳ್ ಎಂಬ ಭಕ್ತಳ - ತೊಲ್ ಅರುಳಾಲ್ = ಸ್ವಾಭಾವಿಕವಾದ ಕೃಪೆಯಿಂದ ವಾಳ್ಕಿನ್ರ = ವೃದ್ಧಿಹೊಂದುತ್ತಿರುವ, ವಳ್ಳಲ್ = ಪ್ರತ್ಯುಪಕಾರವನ್ನು ಎದುರು ನೋಡದ ಪರಮ ಔದಾರ್ಯ ಸ್ವಭಾವವುಳ್ಳವರು, ಎನ್ರುಮ್ = ಸರ್ವಕಾಲದಲ್ಲಿಯೂ ಮಾಮುನಿ = ಚೇತನೋಜ್ಜೀವನ

ವನ್ನೆ ಮನಸ್ಸಿನಲ್ಲಿ ಮನನ ಮಾಡುತ್ತಿರುವ - ಇರಾಮಾನುಶನ್ = ಎಂಬೆರು ಮಾನಾರ್ರವರು, ತಾಳ್ವೊನ್ರಿಲ್ಲಾ = ತನ್ನ ಪ್ರಾಮಾಣ್ಯಕ್ಕೆ ಕಿಂಚಿತ್ತೂ ದೋಷವೂ ಕೊರತೆಯೂ ಇಲ್ಲದೆ - ಮರೈತಾಳ್ನ್ದು = ವೇದಗಳು, ಕುದೃಷ್ಟಿ ಗಳಿಂದಲೂ ಕಲಿದೋಷದಿಂದಲೂ ಹೀನ ಸ್ಥಿತಿಗೆ ಬಂದು - ತಲಮುಳು ದುಮ್ = ಭೂಲೋಕವು ಸಂಪೂರ್ಣವಾಗಿ - ಕಲಿಯೇ ಆಳ್ಕಿನ್ರನಾಳ್ = ಕಲಿಯುಗದ ದೋಷದಿಂದ ಅಂಧಕಾರಮಯವಾಗಿ ವ್ಯಾಪಿಸಲ್ಪಟ್ಟಿರುವ ಕಾಲದಲ್ಲಿ, ವನ್ದು = ಪರಮಪದದಿಂದ ಭಗವದಾಜ್ಞಾಪರಿಣಯಾಗಿ ಅವತರಿಸಿ ಬಂದು, ಅಳಿತ್ತವನ್‌ಕಾಣ್ಮಿನ್ = ಆ ವೇದಗಳು ಹೀನಸ್ಥಿತಿಗೆ ಬರದಂತೆ ಉದ್ಧರಿಸಿ ರಕ್ಷಿಸಿದರು - ಎಂಬುದನ್ನು ತಿಳಿಯಿರಿ ಅಂಥಾ ರಾಮಾನುಜರನ್ನು ಆಶ್ರಯಿಸಿ ಉಜ್ಜೀವಿಸಿರಿ ಚೇತನರುಗಳಿರಾ !

ತಾ. — ಶ್ರೀ ವಿಲ್ಲಿಪುತ್ತೂರಿನಲ್ಲಿ "ವಡಪೆರುಂಕೋಯಿಲ್ ಉಡೈ ಯಾರ್" ಎಂದು ಹೆಸರುಗೊಂಡಿರುವ ಸ್ವಾಮಿಯು ಉತ್ತಮ ರಾಗಕ್ಕೆ ಅಲಂಕರಿಸುವುದಕ್ಕೆ ಯೋಗ್ಯವಾದ ಪುಷ್ಪಮಾಲೆಯನ್ನು ಪ್ರತಿದಿನವೂ ತಾನು ಒಪ್ಪುವಂತೆ ಅಲಂಕರಿಸಿಕೊಂಡು ನಂತರ ಸ್ವಾಮಿಗೆ ಅದನ್ನೇ ಸಮರ್ಪಿಸು ತ್ತಿದ್ದ ಪೆರಿಯಾಳ್ವಾರ್ರವರ ಮಗಳಾದ "ಆಂಡಾಳ್" ಎಂಬ ಭಕ್ತೆಯು ಸ್ವಾಭಾವಿಕ ಕೃಪೆಯಿಂದ ಪ್ರವೃದ್ಧಮಾನರಾದ ಮತ್ತು ಪರಮೋದಾರರಾದ- ಎಲ್ಲಾ ಚೇತನರಿಗೂ ಪರಮಪದ ಲಭಿಸುವಂತೆ ಪ್ರಸಕ್ತಿಮಾಡಿದ ರಾಮಾನು ಜಾಚಾರ್ಯರು - ವೇದಗಳೆಲ್ಲಾ ಕುದೃಷ್ಟಿಗಳಿಂದಲೂ ಕಲಿದೋಷದಿಂದಲೂ ಹೀನಸ್ಥಿತಿಗೆ ಬಂದಿದ್ದ ಕಾಲದಲ್ಲಿ - ಕಲಿಪುರುಷನು ಭೂಮಂಡಲವನ್ನೆಲ್ಲಾ ಸಂಪೂರ್ಣವಾಗಿ ವ್ಯಾಪಿಸಿ ಸಾಮ್ರಾಜ್ಯ ಮಾಡಿಕೊಂಡಿದ್ದ ಕಾಲದಲ್ಲಿ - ಭಗವತ್ಕೃಪೆಯಿಂದ - ಪರಮಪದದಿಂದ ಶ್ರೀ ಪೆರಂಬೂದೂರಿಗೆ ಬಂದು ಅವ ತರಿಸಿ, ಹೀನಸ್ಥಿತಿಯಲ್ಲಿದ್ದ ವೇದಗಳನ್ನೂ - ಚೇತನರನ್ನೂ - ಉದ್ಧಾರ ಮಾಡಿ - ಉಜ್ಜೀವಿಸುವಂತೆ ಮಾಡಿದರು - ಅಂಥಾ ರಾಮಾನುಜರನ್ನು ಆಶ್ರಯಿಸಿ ಉಜ್ಜೀವನ ಪಡೆಯಿರಿ ಚೇತನರುಗಳಿರಾ ! ಎನ್ನುತ್ತಾರೆ.

**17·** ಮುನಿಯಾರ್ ತುಯರಂಗಳ್ ಮುನ್ದಿಲುಮ್,
ಇನ್ಬಂಗಳ್ ಮೊಯ್ತ್ತಿಡಿನುಮ್

ಕನಿಯಾರ್ ಮನಮ್ ಕಣ್ಣಮಂಗೈ ನಿನ್ರಾನೈ ಕ್ಕಲೈಪರವುಮ್
ತನಿಯಾನೈಯ್ತ್ತಣ್ತಮಿಳ್ಶೆಯ್ದ ನೀಲನ್ತನಕ್ಕುಲಗಿಲ್
ಇನಿಯಾನೈ, ಎಂಗಳಿರಾಮಾನುಶನೈ ವನ್ದೆಯ್ದಿನರೇ ||

ಅರ್ಥ:— ಕಲೈಪರವುಮ್ = ಸಕಲ ಶಾಸ್ತ್ರಗಳಿಂದಲೂ ಕೊಂಡಾಡಲ್ಪಡುವವನಾದ, ತನಿಯಾನೈಯ್ = ಅದ್ವಿತೀಯನಾದ, ಮತ್ತ ಗಜದಂತೆ ಗಂಭೀರವಾದ ಸ್ವಭಾವವುಳ್ಳ, ಕಣ್ಣಮಂಗೈನಿನ್ರಾನೈ = ತಿರುಕ್ಕಣ್ಣಮಂಗೈ ಎಂಬ ದಿವ್ಯ ದೇಶದಲ್ಲಿ ಬಿಜಯಮಾಡಿಸಿರುವ "ಭಕ್ತರಾವಿ" ಎಂಬ ನಾಮಾಂಕಿತನಾದ ಸರ್ವೇಶ್ವರನ ವಿಷಯವಾಗಿ ತಣ್ತಮಿಳ್ಶೆಯ್ದ = ಅಂದವಾಗಿಯೂ ಶಾಂತವಾದ ತಮಿಳು ಭಾಷೆಯಲ್ಲಿ ಸ್ತುತಿಸಿ ಹಾಡಿದ- ನೀಲನ್ತನಕ್ಕು = ತಿರುಮಂಗೈಯಾಳ್ವಾರ್ರಿಗೆ, ಮತ್ತು, ಉಲಗಿಲ್ ಇನಿಯಾನ್ನೈ = ಈ ಭೂಲೋಕದಲ್ಲಿ ಸಮಸ್ತ ಭಾಗವತರಿಗೂ ಪ್ರಿಯತಮನಾದ ಎಂಗಳ್ ಇರಾಮಾನುಶನ್ನೈ = ಎಲ್ಲರನ್ನೂ ಉಜ್ಜೀವಿಸಲು ಬಂದು ಅವತರಿಸಿದ ಶ್ರೀ ರಾಮಾನುಜರನ್ನು - ವನ್ದು ಎಯ್ದಿನರ್ = ಆಶ್ರಯಿಸಿದ ಭಾಗ್ಯವಂತರ - ತುಯರಂಗಳ್ = ದುಃಖಗಳು, ಮುನ್ನಿಲುವರ್ = ಮೇಲೆ ಮೇಲೆ ಬಿದ್ದು ಪೀಡಿಸಿದರೂ ಕೂಡ, ಮುನಿಯಾರ್ = ಇವುಗಳು ಬಂದವಲ್ಲಾ ಎಂದು ವ್ಯಾಕುಲಪಡುವುದಿಲ್ಲ. ಇನ್ಬಂಗಳ್ = ಸುಖಗಳು, ಮೊಯ್ತ್ತಿಡಿನುಮ್ = ಸುಖಗಳು ಸೇರಿ ಬಂದರೂ, ಮನಮ್ ಕನಿಯಾರ್ = ಮನಸ್ಸಿನಲ್ಲಿ ಹಿಗ್ಗುವುದಿಲ್ಲ.

ತಾ:— ಶಾಸ್ತ್ರಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವ- "ತಿರುಕ್ಕಣ್ಣಮಂಗೈ" ಎಂಬ ದಿವ್ಯದೇಶದಲ್ಲಿ ಬಿಜಯ ಮಾಡಿರುವ — "ಭಕ್ತರಾವಿ" ಭಕ್ತವತ್ಸಲನೆಂದು ಅದ್ವಿತೀಯನಾದ ಸರ್ವೇಶ್ವರನ ವಿಷಯವಾಗಿ "ಪೆರಿಯತಿರುಮೊಳಿ" ಎಂಬ ದಿವ್ಯ ಪ್ರಬಂಧವನ್ನು ರಚಿಸಿ ಕೊಂಡಾಡಿರುವ, ತಿರುಮಂಗೈಯಾಳ್ವಾರ್ರವರಿಗೆ ಪ್ರಿಯತಮರಾದ ಎಲ್ಲರನ್ನೂ ಉದ್ಧರಿಸಲು ಅವತರಿಸಿದ ಯತಿರಾಜ ರಾಮಾನುಜರನ್ನು ಆಶ್ರಯಿಸಿದ ಪುಣ್ಯವಂತರು, ಎಷ್ಟೇ ದುಃಖಗಳು ಮೇಲೆ ಮೇಲೆ ಬಿದ್ದು ಪೀಡಿಸಿದರೂ, "ಇದು ಬಂತಲ್ಲಾ" ಎಂದು ವ್ಯಾಕುಲ

ಪಡುವುದೂ ಇಲ್ಲ - ಮತ್ತು ಅತಿ ಸುಖಗಳು ಬಂದು ಸೇರಿದರೂ, ಅತಿ ಹರ್ಷಚಿತ್ತರಾಗಿ ಸಂತೋಷಿಸಿ ಹಿಗ್ಗುವುದೂ ಇಲ್ಲ - ಎಂದು ಹೇಳುತ್ತಾರೆ.

**18.** ಎಯ್ದಱ್ಕರಿಯಮಱೈಗಳೈ, ಆಯಿರಮಿನ್ತಮಿೞಾಲ್
ಶೆಯ್ದಱ್ಕುಲಗಿಲ್ವರುಮ್ಶಡಗೋಪನೈ, ಚ್ಚಿನ್ದೈಯುಳ್ಳೇ
ಪೆಯ್ದಱ್ಕಿಶೈಯುಮ್ ಪೆರಿಯವರ್ಶೀರೈಉಯಿರ್
ಗಳೆಲ್ಲಾಮ್
ಉಯ್ದಱ್ಕುದವುಮ್, ಇರಾಮಾನುಶನೆಮ್ಮುಱುತುಣೈಯೇ ||

ಅರ್ಥ:—ಎಯ್ದಱ್ಕು = ಮಂದಮತಿಗಳಿಗೆ ಲಭಿಸಲು, ಅರಿಯ = ಅಶಕ್ಯವಾಗಿರುವ, ಮಱೈಗಳೈ = ವೇದಗಳನ್ನು, ಆಯಿರಮಿನ್ತಮಿೞಾಲ್ = ರಸವತ್ತಾದ, (ಸಾರವನುವಾದ) ಅರ್ಥವುಳ್ಳ ಒಂದು ಸಾವಿರ ದ್ರಾವಿಡ ಭಾಷಾ ಪದ್ಯಗಳಿಂದ ತುಂಬಿರುವ ಪ್ರಬಂಧ ರೂಪವಲ್ಲಿ - ಶೆಯ್ದಱ್ಕು = ರಚಿಸಲು, ಉಲಗಿಲ್ = ಈ ಭೂಲೋಕದಲ್ಲಿ, ವರುಮ್ = ಬಂದು ಅವತರಿಸಿದ, ಶಡಗೋಪನೈ = ನಮ್ಮಾಳ್ವಾರ್ರವರನ್ನು, ಶಿನ್ದೈಯುಳ್ಳೇಪೆಯ್ದಱ್ಕು = ಹೃದಯದಲ್ಲಿ ತಮಗೆ ಆರಾಧ್ಯ ದೇವತೆಯಾಗಿ ಇರಿಸುವುದಕ್ಕೆ, ಇಶೈಯುಮ್ = ಸಮ್ಮತಿಸಿದ, ಪೆರಿಯವರ್ ಶೀರೈ = ಮಹಾನುಭಾವರಾಗಿ ಸರ್ವಾಧಿಕರಾದ ಮಧುರಕವಿಯಾಳ್ವಾರ್ರವರ ಕಲ್ಯಾಣಗುಣಗಳನ್ನು - ಉಯಿರ್ ಗಳೆಲ್ಲಾಮ್ = ಸಕಲ ಚೇತನಾ ಚೇತನಗಳೆಲ್ಲಾ - ಉಯ್ದಱ್ಕು = ಉಜ್ಜೀವನ ಹೊಂದುವಂತೆ, ಉದವುಮ್ = ಉಪಕಾರವಾಗಿ ಉಪದೇಶಿಸಿದ, ಇರಾಮಾನುಶನ್ = ಎಂಬೆರುಮಾನಾರ್ರವರು, ಎಮ್, ಉಱು ತುಣೈಯೇ = ನಮಗೆ ದೃಢವಾದ ಸಹಾಯಭೂತರಾಗಿದ್ದಾರೆ - ಎನ್ನುತ್ತಾರೆ.

ತಾ:—ಸಂಸ್ಕೃತಭಾಷಾ ರೂಪವಾದ ವೇದಾರ್ಥಗಳನ್ನು - ಮಂದಮತಿಗಳಾದ ಅಜ್ಞಾನಿಗಳಿಗೆ ಸುಲಭವಾಗಿ ತಿಳಿಯುವಂತೆ, "ತಿರುವಾಯ್ ಮೊೞಿ" ಎಂಬ ಮಧುರವಾದ ಗಾನರೂಪವಾದ ಸಾವಿರ ಪದ್ಯಗಳಿರುವ ಪ್ರಬಂಧವನ್ನು ದ್ರಾವಿಡ ಭಾಷಾಮುಖೇನ ಪ್ರತಿಪಾದಿಸಲು ಈ ಭೂಲೋಕದಲ್ಲಿ ಅವತರಿಸಿಬಂದ ನಮ್ಮಾಳ್ವಾರ್ರವರನ್ನು ಸದಾ ಹೃದಯದಲ್ಲಿ ಧರಿಸಿದ, ಸರ್ವಾಧಿಕರಾದ 'ಮಧುರಕವಿ' ಯಾಳ್ವಾರ್ರೇ ಮೊದಲಾದ ಹಿರಿಯರ

ಕಲ್ಯಾಣಗುಣಗಳನ್ನು ಸಕಲರೂ ಅರಿತು ಉಜ್ಜೀವಿಸುವಂತೆ ಉಪದೇಶಿಸಿ ಕೃಪೆಮಾಡಿದ ಎಂಬೆರುಮಾನಾರ್‌ರವರು ನಮಗೆ ದೃಢವಾದ ಸಹಾಯಭೂತರು ಎನ್ನುತ್ತಾರೆ.

**19.** ಉರುಪೆರುಮ್, ಶೆಲ್ವಮುಮ್, ತನ್ದೈಯುಮ್ ತಾಯುಮ್,
ಉಯರ್ ಗುರುವುಮ್,
ವೆರಿತರುಪೂಮಗಳ್ ನಾದನುಮ್, ಮಾರನ್ ವಿಳಂಗಿಯಶೀರ್
ನೆರಿತರುಮ್ ಶೆನ್ದಮಿೞ್ ಆರಣಮೇಯೆನ್ರಿನ್ನೀಣಿಲತ್ತೋರ್
ಅರಿತರನಿನ್ರ, ಇರಾಮಾನುಶನೆನಕ್ಕಾರಮುದೇ ॥

ಅರ್ಥ:— ಉರುಪೆರುಮ್ = ಉಚಿತವಾದ ಸ್ವರೂಪಾನುರೂಪವಾದ ನಿರವಧಿಕವಾದ-ಶೆಲ್ವಮುಮ್ = ಸಂಪತ್ತು, ತನ್ದೈಯುಮ್ = ತಂದೆಯಂತೆ ಹಿತಪರವಾಗಿಯೂ, ತಾಯುಮ್ = ಹೆತ್ತ ತಾಯಿಯಂತೆ ರಕ್ಷಕವಾಗಿಯೂ, ಉಯರ್ ಗುರುವುಮ್ = ಶ್ರೇಷ್ಠನಾದ ಸದಾಚಾರ್ಯನೂ, (ಅಂದರೆ ಅಜ್ಞಾತ ಜ್ಞಾಪಕವಾಡಿ ಚೇತನರ ಅಜ್ಞಾನಾಂಧಕಾರವನ್ನು ನಿವೃತ್ತಿಮಾಡುವ ಆಚಾರ್ಯನೂ) ವೆರಿತರುಪೂಮಗಳ್ ನಾದನುಮ್ = ಪರಿಮಳ ಪೂರ್ಣವಾದ ಕಮಲದಲ್ಲಿ ಹುಟ್ಟಿದ, ಲಕ್ಷ್ಮೀಗೆ-ನಾಥನಾದ ಶ್ರಿಯಃಪತಿಯೂ - ಮಾರನ್ = ಕಾರಿಯರ ಪುತ್ರರಾದ ನಮ್ಮಾಳ್ವಾರ್‌ರವರು, ವಿಳಂಗಿಯ = ಪ್ರಕಾಶಪಡಿಸಿದ - ಶೀರ್ ನೆರಿತರುಮ್ = ಭಗವತ್ ಸ್ವರೂಪ ಗುಣ ವಿಭೂತಿಗಳನ್ನು ಕ್ರಮವಾಗಿ ತಿಳಿಸುವ, ಶೆನ್ ತಮಿೞ್ = ಸುಂದರವಾದ ದ್ರಾವಿಡಭಾಷಾ ರೂಪವಾದ-ಆರಣಮೇಯೆನ್ರು = ವೇದ ಪ್ರತಿಪಾದಿತವಾದ ತಿರುವಾಯ್ಮೊಳಿಯೇ ಎಂದು-ಇನ್ನೀಣಿಲತ್ತೋರ್ = ವಿಶಾಲವಾದ ಈ ಭೂಮಿಯಲ್ಲಿರುವ ಚೇತನರು-ಅರಿತರನಿನ್ರ = ತಿಳಿದುಕೊಳ್ಳುವಂತೆ ಮಾಡಿದ, ಇರಾಮಾನುಶನ್ = ಎಂಬೆರುಮಾನಾರ್‌ರವರು, ಎನಕ್ಕು = ನನಗೆ-ಆರ್ ಅಮುದೇ = ಪರಮ ಭೋಗ್ಯವಾದ ಅಮೃತವು.

ಭಾವ:— ಐಹಿಕಾಮುಷ್ಮಿಕ ಐಶ್ವರ್ಯವೂ, ತಂದೆಯಂತೆ ಹಿತಪರವಾಗಿಯೂ ತಾಯಿಯಂತೆ ರಕ್ಷಕವಾಗಿಯೂ, ಪರಿಮಳ ಭರಿತವಾದ ಕಮಲ

ದಲ್ಲಿ ಹುಟ್ಟಿದ ಲಕ್ಷ್ಮೀದೇವಿಗೆ ನಾಥನಾದ ಶ್ರಿಯಃಪತಿಯೂ, ಇವುಗಳೆಲ್ಲಾ- ಭಗವಂತನ ಕೃಪೆಯಿಂದ ನಮ್ಮಾಳ್ವಾರವರು ಪ್ರಕಾಶಪಡಿಸಿದ, ಸಕಲಾರ್ಥಗಳನ್ನು ಬೋಧಿಸತಕ್ಕದ್ದು ದ್ರಾವಿಡ ಭಾಷಾ ಪದ್ಯಮಾಲೆಯಾದ "ತಿರುವಾಯ್ಮೊೞಿ" ಎಂಬ ದ್ರಾವಿಡ ವೇದವೇ - ಎಂಬುದನ್ನು ಸಕಲ ಜೀವರಿಗೂ ಶ್ರೀ ರಾಮಾನುಜಾಚಾರ್ಯರು ಬೋಧಿಸಿ ಉಜ್ಜೀವಿಸಿದರು. ಅಂಥಾ ಶ್ರೀ ರಾಮಾನುಜರೇ ನನಗೆ ಪರಮ ಭೋಗ್ಯವಾದ ಅಮೃತಪ್ರಾಯರು ಎಂದು, ಶ್ರೀ ರಾಮಾನುಜರನ್ನೂ ಅವರ ದಿವ್ಯ ಪ್ರಬಂಧವಾದ ಸಾಮವೇದ ಪ್ರತಿಪಾದಿತವಾದ "ತಿರುವಾಯ್ಮೊೞಿ" ಯನ್ನೂ ಕೊಂಡಾಡುತ್ತಾರೆ.

20. ಆರಪ್ಪೊೞಿಲ್ ತೆನ್ ಕುರುಗೈಪ್ಪಿರಾನ್ ಅಮುದತ್ತಿರುವಾಯ್
ಈರತ್ತಮಿೞಿನಿಶೈಯುಣರ್‌ನ್ದೋರ್‌ಕಳ್ಕ್ಕು, ಇನಿಯವರ್ ತಮ್
ಶೀರೈಪ್ಪಯಿನ್ರುಯ್ಯುಮ್ ಶೀಲಮ್ ಕೊಳ್ ನಾದಮುನಿಯೈ
ನೆಂಜಾಲ್
ವಾರಿಪ್ಪರುಗುಮ್ ಇರಾಮಾನುಶನ್ ಎನ್ರನ್ ಮಾನಿಧಿಯೇ ||

ಅರ್ಥ:—ಆರಪ್ಪೊೞಿಲ್ = ವಿಶೇಷ ಗಂಧದ ಮರಗಳಿಂದ ಕೂಡಿದ ತೋಪುಗಳುಳ್ಳ, ತೆನ್ ಕುರುಗೈ = ಸುಂದರವಾದ ಕುರುಕಾಪುರಿಗೆ, ಪಿರಾನ್ = ಸ್ವಾಮಿಯಾದ ನಮ್ಮಾಳ್ವಾರ್....ಅಮುದತ್ತಿರುವಾಯ್ = ಅಮೃತದಂತೆ ಭೋಗ್ಯವಾದ, ಬಾಯಿಂದ ಅವತರಿಸಿದ, ಈರತ್ ತಮಿೞಿನ್ = ಸುಮೃದು ಮಧುರವಾದ ದ್ರಾವಿಡ ಭಾಷೆಯುಳ್ಳಿರುವ ತಿರುವಾಯ್ಮೊೞಿಯ, ಇಶೈ = ಗಾನವನ್ನು, ಉಣರ್‌ನ್ದೋರ್‌ಕಳ್ಕ್ಕು = ಅಭ್ಯಸಿಸಿ ಆವೃತ್ತಿಮಾಡಿ ಜ್ಞಾನಿಗಳಾದ ಮಧುರಕವಿ, ತಿರುಮಂಗೈಯಾಳ್ವಾರುಗಳಿಗೆ - ಇನಿಯವರ್ ತಮ್ = ಅತ್ಯಂತ ಪ್ರಿಯತಮರಾದ ಪರಾಂಕುಶ ನಂಬಿಗಳ - ಶೀರೈಪ್ಪಯಿನ್ರು = ಗುಣಗಳನ್ನು ಅನುಸಂಧಾನಮಾಡಿ, ಉಯ್ಯುಮ್ ಶೀಲಮ್ ಕೊಳ್ = ಉಜ್ಜೀವನವೇ ಸ್ವಭಾವವಾಗಿವುಳ್ಳ - ನಾಥಮುನಿಯೈ = ನಾ ಥ ಮು ನಿ ಗ ಳ ನ್ನು - ನೆಂಜಾಲ್ ವಾರಿಪ್ಪರುಗುಮ್ = (ವಿಗ್ರಹ ಗುಣಗಳೊಡನೆ) ಹೃದಯದಲ್ಲಿ ಧರಿಸಿ ಅನುಭವಿಸುತ್ತಿರುವ - ಇರಾಮಾನುಶನ್ = ಎಂಬೆರುಮಾನಾರು-

ಎನ್ತನ್ = ನನ್ನ, ಮಾನಿಧಿಯೇ = ಎಂದಿಗೂ ನಾಶರಹಿತವಾದ ಅಪ್ರಾಕೃತ ನಿಧಿಯು ಎನ್ನುತ್ತಾರೆ.

ತಾ: — ಚಂದನ ವೃಕ್ಷಗಳ ಸಮೂಹಗಳಿಂದ ಕೂಡಿದ ತೋಪುಗಳುಳ್ಳ ಕುರುಕಾಪುರಿಯಲ್ಲಿ ಅವತರಿಸಿದ ನಮ್ಮಾಳ್ವಾರ್‌ರವರ ಅಮೃತಮಯ ದಿವ್ಯ ಸೂಕ್ತಿ ರೂಪವಾದ "ತಿರುವಾಯ್ಮೊೞಿ" ಯನ್ನು ಅರ್ಥಸಹಿತ ಅಭ್ಯಸಿಸಿ ಆವೃತ್ತಿಮಾಡಿ ಜ್ಞಾನಾಧಿಕರಾದ - ಮಧುರಕವಿ, ಮತ್ತು ತಿರುಮಂಗೈ ಯಾಳ್ವಾರ್‌ರವರುಗಳ ವಿಷಯದಲ್ಲಿ ಅತಿ ಪ್ರವಣರಾದ ಪರಾಂಕುಶನಂಬಿಗಳ ಕಲ್ಯಾಣಗುಣಗಳಲ್ಲಿ ಮಗ್ನರಾಗಿ ಉಜ್ಜೀವಿಸಿದ ಶ್ರೀಮನ್ನಾಥಮುನಿಗಳನ್ನು ವಿಗ್ರಹ ಗುಣಗಳೊಡನೆ ಹೃದಯದಲ್ಲಿ ದೃಢವಾಗಿ ಧರಿಸಿ ಅನುಭವಿಸುತ್ತಿರುವ ಎಂಬೆರುಮಾನಾರ್‌ರವರು ನನಗೆ ವಿಲಕ್ಷಣವಾದ ಅಪ್ರಾಕೃತ ಮಹಾನಿಧಿಯು, ಎಂದು ಅಮುದನಾರ್‌ರು ಹೇಳಿ ತೃಪ್ತರಾಗುತ್ತಾರೆ.

**21.** ನಿಧಿಯೈಪ್ಪೊೞಿಯುಮ್ ಮುಗಿಲೆನ್ನು ನೀಶರ್ ತಮ್
ವಾಶಲ್ ಪತ್ತಿ
ತುದಿಕತ್ತು ಉಲಗಿಲ್ ತುವಳ್‌ಕಿನ್ರಿಲೇನ್, ಇನಿತ್ತೂಯ್ ನೆರಿಶೇರ್
ಎತಿಗಟ್ಕಿರೈವನ್ ಯಮುನೈತ್ತುರೈವನಿಣೈಯಡಿಯಾಮ್
ಗತಿಪೆತ್ತುಡೈಯ ಇರಾಮಾನುಶನೆನ್ನೈಕ್ಕಾತ್ತನನೇ ||

ಅರ್ಥ: — ತೂಯ್ = ಪರಿಶುದ್ಧವಾದ, ಆಚಾರ್ಯಾಭಿಮಾನವೆನ್ನತಕ್ಕ, ನೆರಿ = ಉಪಾಯವನ್ನು - ಶೇರ್ = ಹೊಂದಿದ - ಎತಿಗಳುಕ್ಕು = ಯತಿವರ್ಯರಾದ, ಪೆರಿಯನಂಬಿಯೇ ಮೊದಲಾದ ಎಲ್ಲ ಯತಿವರ್ಯರುಗಳಿಗೆ- ಇರೈವನ್ = ಸ್ವಾಮಿಯಾದ, ಯಮುನೈತ್ತುರೈವನ್ = ಆಳವಂದಾರ್‌ರವರ, ಇಣೈಯಡಿಯಾಮ್ = ಪಾವನತ್ವ, ಭೋಗ್ಯತ್ವಗಳಿಂದ ಪರಸ್ಪರ ಸದೃಶವಾಗಿರುವ ಶ್ರೀಪಾದಗಳೆಂಬ - ಗತಿಪೆತ್ತುಡೈಯ = ಉಪಾಯವನ್ನು ಹೊಂದಿದ - ಇರಾಮಾನುಶನ್ = ಎಂಬೆರುಮಾನಾರ್‌ರು, ಎನ್ನೈಕ್ಕಾತ್ತನನೇ = ನನ್ನನ್ನು ರಕ್ಷಿಸಿದರಲ್ಲವೇ. ಇನಿ = ಇನ್ನು ಮೇಲೆ - ನೀಚರ್ ತಮ್ = ಅಹಂಕಾರ ದೂಷಿತರಾದ ನೀಚಜನಗಳ - ವಾಶಲ್ = ನರಕಪ್ರಾಯವಾದ ಬಾಗಿಲುಗಳನ್ನು, ಪತ್ತಿ = ಆಶ್ರಯಿಸಿ - ಅವರನ್ನು, ನಿಧಿಯೈಪ್ಪೊೞಿಯುಂ ಮುಗಿಲೆನ್ರು = ಮೋಕ್ಷವು

ಅಪೇಕ್ಷೆಯಾಗಿ ಮಳೆ ಸುರಿಸುವಂತೆ - ಈ ಮನುಜರು - ನಿಧಿಯನ್ನೂ ಉದಾರವಾಗಿ ದಾನ ಮಾಡುತ್ತಾರೆಂದೂ, ಆ ಮೇಘಕ್ಕೆ ಸಮಾನರೆಂದೂ, ತುದಿ ಕತ್ತು — ಬಾಯಿಗೆ ಬಂದ ಹಾಗೆಲ್ಲಾ ಸ್ತೋತ್ರಮಾಡಿ, ಉಲಗಿಲ್ — ಈ ಲೋಕದಲ್ಲಿ, ತಾಮಳ್ ಪಿನ್ನಿಲೇನ್ — ನಾನು ಹೀಗೆ ನನ್ನ ರಕ್ಷಣೆಗಾಗಿ ಕ್ಲೇಶಪಟ್ಟು - ಶಿಥಿಲವಾಗುವುದಿಲ್ಲ.

ತಾ:— ಶ್ರೀ ಯಾಮುನೇಯರು! (ಆಳವಂದಾರ್) ಚರಣ ಸರ್ವನಿಷ್ಠರಿಗೆಲ್ಲಾ ಸ್ವಾಮಿಯಾಗಿ - ಇವರ ಪಾದಗಳನ್ನೇ ಪ್ರಾಪ್ಯವೂ ಪ್ರಾಪಕವೂ-ಉಪಾಯೋಪೇಯವನ್ನು ಲಭಿಸತಕ್ಕ ಅಪ್ರಾಕೃತ ಧನವೆಂದು ನಂಬಿ ಇತರ ವಿಷಯಗಳಲ್ಲಿ ಪ್ರಾವಣ್ಯವನ್ನು ತ್ಯಜಿಸಿದ್ದ - ಶ್ರೀ ರಾಮಾನುಜಾಚಾರ್ಯರು, ನನ್ನನ್ನೂ ಅನುಕೂಲನನ್ನಾಗಿ ಮಾಡಿದರು - ಇನ್ನುಮೇಲೆ - ನಾನು - ನೀಚಜನಗಳ ಬಾಗಿಲು ಬಳಿ ಹೋಗಿ ಅವರನ್ನು ಮೇಘವು ಮಳೆಯನ್ನು ವರ್ಷಿಸುವಹಾಗೆ ಧನದಾನ ಮಾಡತಕ್ಕ ಉದಾರಿಗಳು ಎಂಬುದಾಗಿ ಅನೇಕ ವಿಧವಾಗಿ ಸ್ತೋತ್ರಮಾಡಿ ಕ್ಲೇಶಪಟ್ಟು ಕೃಶನಾಗುವುದಿಲ್ಲವೆನ್ನುತ್ತಾರೆ.

22. ಕಾರ್ತ್ತಿಗೈಯಾನುಮ್ ಕರಿಮುಗತ್ತಾನುಮ್ ಕನಲುಮ್
ಮುಕ್ಕಣ್
ಮೂರ್ತ್ತಿಯುಮ್ ಮೋಡಿಯುಮ್ ವೆಪ್ಪುಮ್ ಮುದುಗಿಟ್ಟು,
ಮೂವುಲಗುಮ್
ಪೂತ್ತವನೇಯೆನ್ರು ಪೋತ್ತಿಡ ವಾಣನ್ ಪಿಳೈಪೊರುತ್ತ
ತೀರ್ತ್ತನೈಯೇತ್ತುಮ್ ಇರಾಮಾನುಶನೆನ್ರನ್ ಸೇಮವೈಪ್ಪೇ ||

ಅರ್ಥ:— ಕಾರ್ತ್ತಿಗೈಯಾನುಮ್ = ಕೃತ್ತಿಕಾನಕ್ಷತ್ರದಲ್ಲಿ ಜನಿಸಿದ ಕುಮಾರಸ್ವಾಮಿ - ವಾ : ಸುಬ್ರಹ್ಮಣ್ಯನೂ, ಕರಿಮುಗತ್ತಾನುಮ್ — ಗಜಾನನನೆಂದು ಕರೆಯಲ್ಪಡುವ ರುದ್ರಗಣಪತಿಯೂ, ಕನಲುಮ್ = ಅಗ್ನಿಯೂ, ಮುಕ್ಕಣ್ ಮೂರ್ತ್ತಿಯುಮ್ — ಕಾಲಾಗ್ನಿಯು ಹಾಗೆ ಪ್ರಜ್ವಲಿಸುವ ಮೂರು ಕಣ್ಣುಗಳುಳ್ಳ ವಿರೂಪಾಕ್ಷನೂ (ಮಹೇಶ್ವರನೂ) ಮೋಡಿಯುಮ್ = ಕಾಲಭೈರವೀ ಎಂದು ಕರೆಯಲ್ಪಡುವ ದುರ್ಗಾದೇವಿಯೂ, ವೆಪ್ಪುಮ್ = ಯುದ್ಧದ ಸಲಕರಣೆಯಾಗಿ ಎದುರುಬಂದ ವೈರಿಗೆ ಸಂತಾಪಕರನಾದ ಜ್ವರಾದಿ

ದೇವತೆಯೂ, ಮುದಂಗಿಟ್ಟ್ವ = ವಿಮುಖನಾಗಿ - ಬೆನ್ನು ತೋರಿಸಿಕೊಂಡು ಓಡಿಹೋಗಿ, ಮೂವುಲಗುವರ್ = ಮೂರು ಲೋಕಗಳನ್ನೂ - ಪೊತ್ತವನೇ ಎನ್ರು = ನಾಭಿಕಮಲದಲ್ಲಿ ಚತುರ್ಮುಖನೇ ಆದಿಯಾಗಿ ಸಕಲ ಜಗತ್ತನ್ನು ಸೃಷ್ಟಿಗೆ ಕಾರಣವಾದ ತಾಮರೈಪೂವನ್ನು ವಿಕಸಿತಮಾಡಿದ - ಜಗತ್ಕಾರಣ ಭೂತನೇ ಎಂದು, ಪೋತ್ತಿಡ = ಸ್ತೋತ್ರಮಾಡಲು, ವಾಣನ್ಪಿೞೈ - ಪೊರುತ್ತ = ಆಗ - ಬಾಣಾಸುರನ - ಅಪರಾಧವನ್ನು ಕ್ಷಮಿಸಿ ಮನ್ನಿಸಿದ, ತೀರ್ತ್ತನೈ = ಪರಮಪಾವನನಾದ ಸರ್ವೇಶ್ವರನನ್ನು (ಕೃಷ್ಣನನ್ನು) ಏತ್ತುಮ್ = ಸ್ತುತಿಸುವ, ಇರಾಮಾನುಶರ್ = ಎಂಬೆರುಮಾನಾರು - ಎನ್ತನ್ ಶೇಮ ವೈಪ್ಪೇ = ನನ್ನ ಉಜ್ಜೀವನಕ್ಕೆ ಹೇತುವಾದ, ಕ್ಷೇಮಕರವಾದ-ಆಪದ್ಧನವು ಅಂದರೆ ಆಪದ್ಬಾಂಧವರು.

ತಾ:—ಪ್ರಹ್ಲಾದನ ಪೌತ್ರನೂ ಮಹಾಬಲಿಯ ಪುತ್ರನೂ ಆದ ಬಾಣಾಸುರನ ರಕ್ಷಣೆಗಾಗಿ ಅವನ ಬಾಗಿಲಲ್ಲಿ ರುದ್ರನು ತನ್ನ ಕುಟುಂಬ ಪರಿವಾರನಾಗಿ ಕಾವಲಿದ್ದನು. (ಕಾರಣ ? ಬಾಣನ ಮಗಳು ಉಷೆಯೆಂಬುವಳು ಬಹಳ ಸುಂದರಿಯಾಗಿದ್ದಳು. ಇವಳು ಯೌವನಾವಸ್ಥೆಗೆ ಬಂದಾಗ ತನಗೆ ಅನುರೂಪನಾದ ಸುಂದರ ಯುವಕನನ್ನು ಮದುವೆಯಾಗಬೇಕೆಂಬ ಆಕಾಂಕ್ಷೆಯಿಂದ - ಲೋಕದಲ್ಲಿ ಸುಂದರ ಯುವಕ ರಾಜಪುತ್ರರ ಚಿತ್ರವನ್ನು ಬರೆದು ತರಬೇಕೆಂದು ತನ್ನ ಹತ್ತಿರವಿದ್ದ ಮಾಯಾವಿಯಾದ ಒಬ್ಬ ದಾಸಿಗೆ ನೇಮಿಸಿ ಕಳುಹಿಸಿದಳು. ಅದರಂತೆ ಅವಳಿಂದ ಚಿತ್ರಪಠಗಳನ್ನು ತರಿಸಿ ನೋಡಿ-ಅದರಲ್ಲಿ ದ್ವಾರಕಾವಾಸಿ ಶ್ರೀ ಕೃಷ್ಣನ ಮೊಮ್ಮಗ ಪ್ರದ್ಯುಮ್ನನ ಮಗ "ಅನಿರುದ್ಧನ" ಚಿತ್ರವು ಚೆನ್ನಾಗಿ ಸುಂದರವಾಗಿರುವುದನ್ನು ನೋಡಿ ಅವನಲ್ಲಿ ಮೋಹಗೊಂಡು ಅವನನ್ನು ತನ್ನ ಅಂಥಃಪುರಕ್ಕೆ ತಂದು ಪೋಷಿಸಬೇಕೆಂದು ನೇಮಿಸಿದಳು. ಆ ದಾಸಿಯು ಅದೇ ರೀತಿ ಅನಿರುದ್ಧನನ್ನು ತನ್ನ ಮಾಯಾಜಾಲದಿಂದ ತಂದು ಪೋಷಿಸಿದಳು - ಅನಿರುದ್ಧನೊಡನೆ ಗಾಂಧರ್ವ ವಿವಾಹ ಮಾಡಿಕೊಂಡು ಸುಖಿಸುತ್ತಿರುವ ವೃತ್ತಾಂತವನ್ನು ಬಾಣನು ಕಂಡು ಅನಿರುದ್ಧನನ್ನು ಸೆರೆಯಲ್ಲಿಡಿಸಿದನು. ಶ್ರೀ ಕೃಷ್ಣನು ಇದನ್ನು ತಿಳಿದೊಡನೆಯೇ ಸೇನಾಸಮೇತನಾಗಿ ಬಾಣನಮೇಲೆ ಯುದ್ಧಕ್ಕೆ ಬಂದನು. ಆಗ್ಗೆ - ಬಾಣನ ಬಾಗಿಲಲ್ಲಿ ಕಾವಲಿದ್ದ ರುದ್ರನು - ಬಾಣನಿಗಾಗಿ ಕೃಷ್ಣನನ್ನು

ಎದುರಿಸಿ ಯುದ್ಧ ಮಾಡಿದನು. ಕೃಷ್ಣನು ಬಾಣನ ತೋಳುಗಳನ್ನು ಕತ್ತರಿಸಿದನು - ರುದ್ರನೂ ಬಾಣನೂ ಸೋತು ಪಲಾಯನ ಮಾಡಿದರು - ನಂತರ ರುದ್ರನು ಕೃಷ್ಣನ ಪರತ್ವವನ್ನೂ ಮಹಿಮೆಯನ್ನೂ ತಿಳಿದು - ಇವನೇ ಸರ್ವೇಶ್ವರನೆಂಬ ತತ್ವಜ್ಞಾನವನ್ನು ಪಡೆದು - ತನ್ನ ಮರೆಹೊಕ್ಕ ಬಾಣನನ್ನು ಬಿಟ್ಟುಕೊಡಬೇಕು, ರಕ್ಷಿಸಬೇಕೆಂದು, ಕೃಷ್ಣನನ್ನು ಬಹಳವಾಗಿ ಕೊಂಡಾಡಿ ಸ್ತೋತ್ರಮಾಡಿದನು. ಆಗ್ಗೆ ಕೃಷ್ಣನನ್ನು "ಕೃಷ್ಣ ಕೃಷ್ಣ ಮಹಾಬಾಹೋ ಜಾನೇತ್ವಾಂ ಪುರುಷೋತ್ತಮಂ" ಎಂದು ರುದ್ರನು ಸ್ತೋತ್ರಮಾಡಲು-ಈ ರುದ್ರನಿಗಾಗಿ ಬಾಣನನ್ನು ಕ್ಷಮಿಸಿದನು.) ಅಂಥಾ ಶ್ರೀ ಕೃಷ್ಣ ಭಗವಂತನನ್ನು ಸದಾ ಸ್ತುತಿಸುತ್ತಿರುವ - ಎಂಬೆರುಮಾನಾರ್‌ರವರು ನನಗೆ ಮಹಾ ನಿಕ್ಷೇಪದಂತಿರುವರು ಎನ್ನುತ್ತಾರೆ.

23. ವೈಪ್ಪಾಯವಾನ್ ಪೊರುಳೆನ್ರು ನಲ್ಲನ್ಬರ್ ಮನತ್ತಗತ್ತೇ
ಎಪ್ಪೋದುಮ್ ವೈಕ್ಕುಮಿರಾಮಾನುಶನೈ, ಇರುನಿಲತ್ತಿಲ್
ಒಪ್ಪಾರಿಲಾದವುರುವಿನೈಯೇನ್ ವಂಜನೆಂಜಿಲ್ ವೈತ್ತು
ಮುಪ್ಪೋದುಮ್ ವಾೞ್ತ್ತುವನ್, ಎನ್ನಾಮಿದುವವನ್
ಮೊಯ್ಪುಗೞ್ಕ್ಕೇ ||

ಅರ್ಥ:—ವೈಪ್ಪಾಯ = ಹೂತಿಟ್ಟ (ಆಪತ್ ರಕ್ಷಣೆಗಾಗಿ ಇಡಲ್ಪಟ್ಟ ನಿಕ್ಷೇಪವೆಂಬ) – ವಾನ್‌ಪೊರುಳ್ ಎನ್ರು = ಉಜ್ಜೀವನ ಹೇತುವಾದ ನಿತ್ಯವಾದ ಪರಮಧನವೆಂದು - ನಲ್ ಅನ್ಬರ್ = ಅನನ್ಯ ಪ್ರಯೋಜನರಾದ ಸದ್ಭಕ್ತರು, ಮನತ್ತು ಅಗತ್ತೇ = ತಮ್ಮ ಮನಸ್ಸಿನೊಳಗೆ (ಹೃದಯದಲ್ಲಿ), ಎಪ್ಪೋದುಮ್ = ಯಾವಾಗಲೂ - ವೈಕ್ಕುಮ್ = ಇರಿಸತಕ್ಕ - ಇರಾಮಾನುಶನೈ = ಶ್ರೀ ರಾಮಾನುಜರನ್ನು - ಇರುನಿಲತ್ತಿಲ್ = ವಿಶಾಲವಾದ - ಭೂಲೋಕದಲ್ಲಿ - ಒಪ್ಪಾರಿಲಾದ = ಸಮಾನರಾದವರು ಇಲ್ಲದಿರುವಂತಹ . ಉರುವಿನೈಯೇನ್ = ಕ್ರೂರಪಾಪಿಷ್ಠನಾದ ನಾನು, ವಂಜಮ್ ನೆಂಜಿಲ್ ವೈತ್ತು = ಕಪಟ ವೇಷವನ್ನು ಮನಸ್ಸಿನಲ್ಲಿಟ್ಟುಕೊಂಡು, ಮುಪ್ಪೋದುಮ್ = ಹಗಲು ಸಂಜೆ ರಾತ್ರಿಗಳೆಂಬ ಮೂರು ಹೊತ್ತಿನಲ್ಲೂ, ವಾೞ್ತ್ತುವನ್ = ಸ್ತುತಿಸುತ್ತಿರುವೆನು, ಇದು = ಇದು - ಅವನ್ = ಅವರ-ಮೊಯ್ ಪುಗೞ್ಕ್ಕು =

ಶ್ಲಾಘ್ಯವಾದ, ಅಸಂಖ್ಯಾತವಾದ ಸತ್ಕೀರ್ತಿಗೆ - ಎನ್ನಾವಮ್ — ಏನು ಕಳಂಕ ವುಂಟಾಗುವುದೋ ? ಎಂದು ಪರಿತಪಿಸುತ್ತಾರೆ.

ತಾ:—ಜ್ಞಾನಾಧಿಕರಾದ ಪೂರ್ವಾಚಾರ್ಯರುಗಳೆಲ್ಲರೂ - " ವೈತ್ತಮಾ ನಿಧಿ " ಎನ್ನುವಹಾಗೆ ತಮಗೆ ಆಪದ್ರಕ್ಷಕವಾದ, ಅಕ್ಷಯವಾದ ಪರಮ ಧನವೆಂದು ಶ್ರೀ ರಾಮಾನುಜರನ್ನು ತಮ್ಮ ಹೃದಯದಲ್ಲಿ ಸದಾ ಇಟ್ಟು ಕೊಂಡು ಸ್ತುತಿಸುತ್ತಿರುವಲ್ಲಿ ಅತಿ ಪಾಪಿಷ್ಠನಾದ ನಾನು - ಕಪಟವಾದ ಮನಸ್ಸಿನಿಂದಾ ಅವರನ್ನೂ ಅವರ ಕಲ್ಯಾಣಗುಣಗಳನ್ನೂ ವಿವರಿಸಿ ಸ್ತೋತ್ರ ಮಾಡಲು ತೊಡಗಿದೆನು. ಇದರಿಂದ ಅವರ ಮಹಾ ಪ್ರಭಾವವುಳ್ಳ ಸತ್ಕೀರ್ತಿಗೆ ಯಾವ ಕುಂದಕವುಂಟಾಗುವುದೋ ಕಾಣೆನಲ್ಲಾ ! ಎಂದು ತಮ್ಮ ಸಾಹಸ ಕೃತ್ಯಕ್ಕೆ - ಪರಿತಪಿಸುತ್ತಾರೆ

24. ಮೊಯ್ತ್ತವೆನ್ದೀವಿನೈಯಾಲ್ ಪಲ್ಲುಡಲ್ ತೋರುಂಮೂತ್ತು,
ಅದನಾಲ್
ಎಯ್ತ್ತೊೞಿನ್ದೇನ್ ಮುನ್ನಾಳ್‌ಗಳೆಲ್ಲಾಮ್,
ಇನ್ರುಕಣ್ಡುಯರ್ನ್ದೇನ್
ಪೊಯ್ತ್ತವಮ್‌ಪೋಱ್ಱುಮ್ ಪುಲೈಚ್ಚಮಯಂಗಳ್
ನಿಲತ್ತವಿಯ
ಕೈತ್ತಮೆಯ್ ಜ್ಞಾನತ್ತುಇರಾಮಾನುಶನೆನ್ನುಮ್
ಕಾರ್ ತನ್ನೈಯೇ ||

ಅರ್ಥ:—ಮುನ್ನಾಳ್ ಗಳೆಲ್ಲಾಮ್ — ಹಿಂದಿನ ಕಾಲದಿಂದಲೂ - ಮೊಯ್ತ್ತ — ಸಂಬಂಧಿಸಿರುವ - ವೆನ್ದೀವಿನೈಯಾಲ್ — ನನ್ನಿಂದ ಮಾಡಲ್ಪಟ್ಟ ಕ್ರೂರವಾದ ಪಾಪಗಳಿಂದ, ಪಲ್ ಉಡಲ್ ತೋರುಂ ಮೂತ್ತು — ದೇವ ತಿರ್ಯಕ್ ಮನುಷ್ಯಾದಿ ಸ್ಥಾವರರೂಪವಾದ ನಾನಾವಿಧ ಶರೀರಗಳಲ್ಲಿ ಜನಿಸಿ ಜರೆಯನ್ನು ಅನುಭವಿಸಿ, ಅದನಾಲ್ — ಅದರಿಂದ, ಎಯ್ತ್ತು ಒೞಿನ್ದೇನ್ — ಶರೀರ ಶಿಥಿಲನಾಗಿ ನಾಶಹೊಂದಿದೆನು - ಇನ್ರು — ಈಗ - ಪೊಯ್ ತವಮ್ — ಶಾಸ್ತ್ರ ವಿಹಿತವಲ್ಲದ ನಿಷಿದ್ಧ ಸಂಕಲ್ಪಿತ ತಪಸ್ಸನ್ನು ಪೋಱ್ಱುಮ್ — ಮಾಡುವ, ಪುಲೈಚ್ಚಮಯಂಗಳ್ — ವೇದಬಾಹ್ಯವಾದ - ನೀಚ ಮತಗಳನ್ನು, ನಿಲತ್ತು

ಅವಿದ್ಯಾ—ಭೂಲೋಕದಲ್ಲಿ ಭಸ್ಮೀಭೂತವಾಗುವ ಹಾಗೆ - ಕೈತ್ತ = ಖಂಡಿಸಿ ನಿರಸನ ಮಾಡಿದ (ಮತ್ತು ಶ್ರೀ ಭಾಷ್ಯ - ಗೀತಾಭಾಷ್ಯಾದಿ ವೇದಾರ್ಥ ಸಂಗ್ರಹಾದಿಗಳನ್ನು ಅನುಗ್ರಹಿಸಿದ) - ಮೆಯ್‌ಜ್ಞಾನತ್ತು - ಪುರುಷಾರ್ಥ ತತ್ತ್ವವಿಷಯಕ ಜ್ಞಾನಯುಕ್ತರಾದ - ಇರಾಮಾನುಶನ್ ಎನ್ನುಮ್ = ಶ್ರೀ ರಾಮಾನುಜರು ಎಂಬುವ - ಕಾರ್ ತನ್ನೈಯುಮ್ = ಜಲಸ್ಥಳ ವಿಭಾಗ ಭೇದವಿಲ್ಲದೆ ವರ್ಷಿಸುವ ಕಾಳಮೇಘದಂಥಾ - ಪರಮೋದಾರರನ್ನು - ಇನ್ರು ಕಂಡು ಉಯರ್ನ್ದೇನೇ = ಈಗ - ಸಂದರ್ಶಿಸಿ ಉತ್ಕೃಷ್ಟನಾದೆನು.

ಭಾ:—ಜೇನುತುಂಬಿದ ಪಾತ್ರೆಯನ್ನು ನೊಣಗಳು ಹೇಗೆ ಎಡೆಬಿಡದೆ ಮುತ್ತಿಕೊಳ್ಳುವವೋ, ಹಾಗೆ - ಹಿಂದಿನಕಾಲದಲ್ಲೆಲ್ಲಾ ಮಾಡಿದ ಕರ್ಮ ಫಲವಾಗಿ ಆತ್ಮವನ್ನು ಎಡೆಬಿಡದೆ ಸುತ್ತಿಕೊಂಡು ಪೀಡಿಸುತ್ತಿರುವ - ಪಾಪಗಳ ಫಲವಾಗಿ ದೇವತಿರ್ಯಕ್ ಮನುಷ್ಯಸ್ಥಾವರಾದಿ ಜನ್ಮಗಳಲ್ಲಿ ಹುಟ್ಟಿ ನಾನಾವಿಧ ಕಷ್ಟ ಪರಂಪರೆಗಳಿಂದ ಶಿಥಿಲನಾಗಿ ಅಜ್ಞಾನದಿಂದ ನಾಶ ಹೊಂದಿದೆನು. ಶಾಸ್ತ್ರಗಳಲ್ಲಿ ವಿಹಿತವಲ್ಲದ ತಪಸ್ಸುಗಳನ್ನು ಮಾಡಿ ಪರದಂಡನೆಯನ್ನು ಮಾಡುವ ಬಾಹ್ಯಮತಗಳೆಲ್ಲಾ-(ಚಾರ್ವಾಕ-ಬೌದ್ಧಾದಿಮತಗಳೆಲ್ಲಾ) ಭಸ್ಮೀಭೂತವಾಗಿ ನಾಶವಾಗುವಂತೆ - ಖಂಡಿಸಿ 'ಶ್ರೀ ಭಾಷ್ಯ' - 'ಗೀತಾಭಾಷ್ಯ'ದಿ ಗ್ರಂಥಗಳನ್ನು ರಚಿಸಿ - ಉಪಕರಿಸಿದ ತತ್ತ್ವಜ್ಞಾನ ನಿಧಿಯಾದ- ಎಂಬೆರುಮಾನಾರ್‌ರವರು ಈಗ ನನಗೆ - ಬತ್ತಿಹೋದ ಪೈರಿಗೆ ನೀರನ್ನು ವರ್ಷಿಸಿದ ಮೇಘದಂತಾದರು, ಅವರನ್ನು ನಾನು ಈಗ ಸಂದರ್ಶಿಸಿ ಸೇವಿಸಿ ಉತ್ಕೃಷ್ಟನಾದೆನು. (ಆದ್ದರಿಂದ ಅವರ ಸ್ತೋತ್ರವನ್ನು ಮಾಡುತ್ತೇನೆ, ಎನ್ನುತ್ತಾರೆ.

25. ಕಾರೇಯ್ ಕರುಣೈಯಿರಾಮಾನುಶ, ಇಕ್ಕಡಲಿಡತ್ತಿಲ್
ಆರೇಯರಿಬವರ್ ನಿನ್ನರುಳಿನ್ ತನ್ಮೈ, ಅಲ್ಲಲುಕ್ಕು
ನೇರೇಯುಱೈವಿಡಮ್ ನಾನ್, ವನ್ದು ನೀಯೆನ್ನೈ
ಯುಯ್ತ್ತಪಿನ್
ಶೀರೇಯುಯಿರ್ಕ್ಕುಯಿರಾಯ್, ಅಡಿಯೇರ್ಕ್ಕಿನ್ರು
ತಿತ್ತಿಕ್ಕುಮೇ ||

ಅರ್ಥ:—ಕಾರ್ ಏಯ್ = ಮಳೆಗಾಲದ ಮೇಘದಂತೆ - ಕರುಣೈ = ಕೃಪೆಯುಳ್ಳ - ಇರಾಮಾನುಶ = ಎಂಬೆರುಮಾನಾರ್‌ರವರೇ! ಇಕ್ಕಡಲ್ ಇಡತ್ತಿಲ್ = ಈ ಸಮುದ್ರಗಳಿಂದ ಆವೃತವಾದ ಭೂಲೋಕದಲ್ಲಿ - ನಿನ್ ಅರುಳಿನ್‌ತನ್ಮೈ = ನಿಮ್ಮ ದಯಾ ಸ್ವಭಾವವನ್ನು, ಆರೇ ಅರಿಬವರ್ = ತಿಳಿಯಬಲ್ಲವರು ಯಾರು ಇದ್ದಾರೆ, ಅಥವಾ ಕೇಳಿದವರು ಯಾರು ಇದ್ದಾರೆ. ನಾನ್ = ನಾನು - ಅಲ್ಲಲುಕ್ಕು = ಗರ್ಭಜನ್ಮಾದಿ ಪಾಪಗಳೆಂಬ ದುಃಖಗಳಿಗೆ, ನೇರೇ = ಸಾಕ್ಷಾತ್ತಾಗಿ, ಉರೈವಿಡಮ್ = ಆವಾಸಸ್ಥಾನವಾದೆನು, ನೀ ವನ್ದು = ನೀವು ಬಂದು-ಎನ್ನೈ ಉಯ್‌ತ್ತಪಿನ್ = ನನ್ನನ್ನು ಉಜ್ಜೀವಿಸಿದ ನಂತರ, ಉನ್ ಶೀರೇ = ನಿಮ್ಮ ಕಲ್ಯಾಣಗುಣಗಳೇ, ಉಯಿರ್‌ಕ್ಕು = ನನ್ನ ಆತ್ಮಕ್ಕೆ, ಉಯಿರಾಯ್ = ಧಾರಕವಾಗಿ - ಇನ್ರು = ಈಗ, ಅಡಿಯೇರ್ಕ್ಕು = ದಾಸಭೂತನಾದ ನನಗೆ, ತಿತ್ತಿಕ್ಕುಮೇ = ಬಹು ಮಧುರವಾಗಿವೆ. (ಭೋಗ್ಯವಾಗಿ, ಆನಂದವಾಗಿರುವುವು).

ತಾ:— ಮೇಘದಂತೆ - ಸರ್ವರಿಗೂ ಏಕರೂಪವಾಗಿ ಉಪಕರಿಸುವ ಕೃಪೆಯುಳ್ಳ ರಾಮಾನುಜರೇ! "ಚತುಸ್ಸಮುದ್ರ ಪರಿವೇಷ್ಟಿತವಾದ ಈ ಭೂಮಂಡಲದಲ್ಲಿ, ನಿಮ್ಮ ಕೃಪಾಪೂರಿತವಾದ ಸ್ವಭಾವ ಗುಣಗಳನ್ನು ಯಾರುತಾನೇ ಅರಿಯಬಲ್ಲರು. ನಾನಂತೂ ಗರ್ಭ ಜನ್ಮಾದ್ಯವಸ್ಥಾದಿ ದುಃಖಗಳಿಗೆಲ್ಲಾ ಸಾಕ್ಷಾತ್ತಾಗಿ ಆಶ್ರಯವಾದ ಮಹಾಪಾಪಿ ಯಾಗಿದ್ದೇನೆ. ಇಂಥಾ ನನ್ನ ಮೇಲೆ ಕೃಪೆಮಾಡಿ ತಾವೇ ನನ್ನನ್ನು ದಾಸನನ್ನಾಗಿ ಅನುಗ್ರಹಿಸಿ ಸ್ವೀಕರಿಸಿದ ಮೇಲೆ, ನಿಮ್ಮ ಕಲ್ಯಾಣ ಗುಣಗಳೇ ನನ್ನ ಪ್ರಾಣಕ್ಕೆ ಧಾರಕಗಳಾಗಿ ಆನಂದ ರಸವನ್ನು ಈ ಲೀಲಾವಿಭೂತಿಯಲ್ಲಿಯೇ ಉಂಟು ಮಾಡಿರುವುವು" ಎಂಬುದಾಗಿ - ರಾಮಾನುಜರನ್ನು ಸಂಬೋಧಿಸಿ ಅವರ ಮುಂದೆ ವಿಜ್ಞಾಪಿಸುತ್ತಾರೆ.

**26.** ತಿಕ್ಕುತ್ತಕೀರ್ತ್ತಿಯಿರಾಮಾನುಶನ್ನೈ, ಎನ್‌ಶೆಯ್‌ವಿನೈಯಾಮ್
ಮೆಯ್‌ಕ್ಕುತ್ತಮ್ ನೀಕ್ಕಿ ವಿಳಂಗಿಯಮೇಗತ್ತೈ, ಮೇವುಮ್
ನಲ್ಲೋರ್

ಎಕ್ಕುತ್ತನಾಳರೇದುಪಿರಪ್ಪೇದಿಯಲ್ ವಾಗನಿನ್ರೋರ್
ಅಕ್ಕುತ್ತಮುಪ್ಪಿರಪ್ಪು ಅಪ್ಪಿಯಲ್ವೇ ನಮ್ಮೈ ಯಾಳ್
ಕೊಳ್ವುಮೇ ||

ಅರ್ಥ:—ಎಣ್ಣಿಲ್ ಪಿನ್ಬೈಯರಾವರ್ = ನನ್ನಿಂದ ಮಾಡಲ್ಪಟ್ಟ ಪಾಪ ರಾಶಿಗಳೆಂಬ, ಮೆಯ್‌ವಕ್ಕುತ್ತನ್ = ಸ್ಥಿರವಾದ, ಶಾಶ್ವತವಾದ ದೋಷ ಗಳನ್ನು, ನೀಕ್ಕಿ = ಸಮೂಲವಾಗಿ ಹೋಗಲಾಡಿಸಿ, ವಿಳಂಗಿಯ = ಅದರಿಂದ ಉಜ್ವಲ ಪ್ರಕಾಶಿತವಾದ, ಮೇಘತ್ತೈ — ಮೇಘದಂತೆ ಪರಮೋದಾರರಾದ- ತಿಕ್ಕುಉತ್ತ = ದಿಕ್ಕುಗಳಲ್ಲೆಲ್ಲಾ ವ್ಯಾಪಿಸಿರುವ - ಕೀರ್ತಿ = ಯಶಸ್ಸುಳ್ಳ- ಇರಾಮಾನುಶನ್ನೈ = ಎಂಬೆರುಮಾನಾರ್ರವರನ್ನು, ಮೇವುಮ್ = ಆಶ್ರಯಿ ಸುವ - ನಲ್ಲೋರ್ = ಮಹಾತ್ಮರುಗಳು - ಎಕ್ಕುತ್ತನಾಳರ್ = (ಆಶ್ರಯಕ್ಕೆ ಪೂರ್ವ) ಯಾವ ವಿಧವಾದ ಅಜ್ಞಾನದೋಷದಿಂದ ಕೂಡಿದವರಾಗಿದ್ದಾಗ್ಯೂ, ಏದುಪಿರಪ್ಪು = ಯಾವದೊಂದು ನಿಕೃಷ್ಟ ಜಾತಿಯಲ್ಲಿ ಜನಿಸಿದವರಾಗಿ ದ್ದಾಗ್ಯೂ - ಏದಿಯಲ್ವಾಗ = ಯಾವ ನಿಷಿದ್ಧಾನುಷ್ಠಾನವೆನಿಸುವ ಜೀವನೋಪಾಯ ವೃತ್ತಿವುಳ್ಳವರಾಗಿ - ನಿನ್ರೋರ್ = ಇರುತ್ತಾರೋ - ಅಕ್ಕುತ್ತಮ್ = ಅವರ ಆ ದೋಷವೇ - ಅಪ್ಪಿರಪ್ಪು = ಆ ಜನ್ಮವೇ - ಅಪ್ಪಿ ಯಲ್ವೇ = ಆ ಸ್ವಭಾವವೇ - ನಮ್ಮೈ = ನಮ್ಮನ್ನು, ಆಳ್‌ಕೊಳ್ವುಮೇ = ದಾಸಭೂತರನ್ನಾಗಿ ಮಾಡಿಕೊಳ್ಳುವುದು.

ತಾ:-ಅತ್ಯಂತ ಪಾಪಿಷ್ಠನಾದ ನನ್ನ ಸ್ಥಿರವಾದ ದೋಷಗಳನ್ನು ಸಮೂಲವಾಗಿ ಹೋಗಲಾಡಿಸಿ ಮೇಘಮೋಪಾದಿಯಲ್ಲಿ ಎಲ್ಲಾ ದಿಕ್ಕು ಗಳನ್ನೂ ವ್ಯಾಪಿಸಿ ಪ್ರಕಾಶಿಸುತ್ತಾ ಯಶಸ್ವಿಯಾದ ಪರಮೋದಾರರಾದ- ಎಂಬೆರುಮಾನಾರ್ರವರನ್ನು ಆದರದಿಂದ ಆಶ್ರಯಿಸುವ ಮಹಾತ್ಮರು, ಯಾವ ಹೀನ ಜಾತಿಯವರಾದರೂ, ಯಾವ ನಿಷಿದ್ಧ ಅನುಷ್ಠಾನ ಪರರಾದರೂ, ಅಜ್ಞಾನಸಂಕೋಚ, ಹೀನಜನ್ಮ - ನಿಷಿದ್ಧವೃತ್ತಿಗಳೇ; ಅವರನ್ನು ಕೈ ಬಿಡಲು ಕಾರಣವಾಗದೆ, ಅವರನ್ನು ಆಶ್ರಯಿಸಿ ಉಜ್ಜೀವಿಸಲು ಸಾಧನ ವಾಗುತ್ತವೆ: ಆ ಮಹಾನುಭಾವರೇ ನಮ್ಮನ್ನು ಉದ್ಧರಿಸಿ ದಾಸಭೂತ ರನ್ನಾಗಿ ಅಂಗೀಕರಿಸಿ, ಆಶ್ರಯವನ್ನು ಕೊಟ್ಟು ಕಾಪಾಡುವವರು.

(ಇದರಿಂದ ಎಂದಿಗೂ ಕೂಡ ರಾಮಾನುಜ ಸಾದಾತ್ರಿಕರಲ್ಲಿ ಯಾವ ವಿಧವಾದ ದೋಷಗಳನ್ನೂ ಎಣಿಸದೆ ಅವರನ್ನು ಶ್ರದ್ಧಾ ಭಕ್ತಿಗಳಿಂದ ಆಶ್ರಯಿಸಬೇಕೆಂದು ತಾತ್ಪರ್ಯವು).

27. ಕೊಳ್ಳಕ್ಕುರೈವತ್ತಿಲಂಗಿ, ಕೊೞುನ್ದುವಿಟ್ಟೋಂಗಿಯ ಉನ್
ವಳ್ಳಲ್ ತನತ್ತಿನಾಲ್ ವಲ್ವಿನೈಯೇನ್ ಮನಮ್ ನೀ
ಪುಗುನ್ದಾಯ್
ವೆಳ್ಳೈಚ್ಚುಡರ್ ವಿಡುಮುನ್ ಪೆರುಮೇನ್ಮೈಕ್ಕಿೞುಕ್ಕಿದೆನ್ರು
ತಳ್ಳುತ್ತಿರಂಗುಮ್, ಇರಾಮಾನುಶಾವೆನ್ ತನಿನೆಂಜಮೇ ||

ಅರ್ಥ:—ಇರಾಮಾನುಶ = ಶ್ರೀ ರಾಮಾನುಜರೆ! ಕೊಳ್ಳ = ಬೇಡಿದವರು ಬೇಡಿದ್ದನ್ನೆಲ್ಲಾ ನಿಮ್ಮಿಂದ ಪಡೆದರೂ, ಕುರೈವಱತ್ತು = ಯಾವುದೊಂದು ಕೊರತೆಯೂ ಇಲ್ಲದೆ - ಇಲಂಗಿ = ಮೊದಲು ಇದ್ದುದಕ್ಕಿಂತಲೂ ಹೆಚ್ಚಾಗಿ ಪ್ರಕಾಶಿಸಿ, ಕೊೞುನ್ದುವಿಟ್ಟು ಓಂಗಿಯ = ಚಿಗುರಿ ವೃದ್ಧಿ ಹೊಂದುತ್ತಿರುವ - ಉನ್ ವಳ್ಳಲ್ ತನತ್ತಿನಾಲ್ = ನಿಮ್ಮ ಔದಾರ್ಯ ಸ್ವಭಾವದಿಂದ, ವಲ್ ವಿನೈಯೇನ್ = ಮಹಾಘೋರಪಾಪಗಳನ್ನು ಮಾಡಿದ ನನ್ನ, ಮನಮ್ = ಪಾಪಿಷ್ಠನಾದ ನನ್ನ ಮನಸ್ಸಿನಲ್ಲಿ - ನೀ = ನೀವು. ಪುಗುನ್ದಾಯ್ = ಪ್ರವೇಶ ಮಾಡಿದಿರಿ, ಇದು = ಇದು- ವೆಳ್ಳೈ = ಪರಿಶುದ್ಧವಾದ, ಶುಡರ್ ವಿಡುಮ್ = ಧವಳ ತೇಜಸ್ಸನ್ನು ಅತ್ತಿತರಿಗೆ ಕೊಟ್ಟು ಪ್ರಕಾಶಮಾಡುವ - ಉನ್ = ನಿಮ್ಮ, ಪೆರು = ಮಹತ್ತಾದ, ಮೇನ್ಮೈಕ್ಕು = ಅಕೃತಿಮ ವೈಭವಕ್ಕೆ - ಇೞುಕ್ಕಿದೆನ್ರು = ಕಳಂಕ ಪ್ರಾಯವೆಂದು, ಎನ್ ತನಿನೆಂಜಮೇ = ನನ್ನ ನಿಸ್ಸಹಾಯಕನಾದ ಮನಸ್ಸು, ತನ್ನಷ್ಟಕ್ಕೆ ತಾನೇ, ತಳ್ಳುತ್ತು, ಇರಂಗುಮ್ = ಶಿಥಿಲವಾಗಿ ದುಃಖಿಸುತ್ತಿರುವುದು.

ತಾ:—ಸರ್ವೇಶ್ವರನು "ವೇಣ್ಡಿತ್ತೆಲ್ಲಾತರುಮ್" ಬೇಡಿದ್ದನ್ನೆಲ್ಲಾ ಕೊಡುವವನು. ಎಂದು ನಮ್ಮಾಳ್ವಾರವರು ಹಾಡಿರುವರು. ಅವನಂಥ ದಯಾಶಾಲಿಯಾದ ಉದಾರರಾದ ರಾಮಾನುಜರೇ! - ಮಹಾ ಪ್ರಭಾವ ಶಾಲಿಗಳೇ! ಅತ್ಯುಜ್ವಲವಾಗಿ ಚಿಗುರಿ ವೃದ್ಧಿ ಹೊಂದುತ್ತಿರುವ ನಿಮ್ಮ ಔದಾರ್ಯ ಗುಣದಿಂದ - ಮಹಾ ಪ್ರಬಲಪಾಪ ಮಾಡಿದವನಾದ ನನ್ನ

ಮನಸ್ಸಿನಲ್ಲಿ ಪ್ರವೇಶಿಸಿದಿರಿ. ಅಂದರೆ ನನ್ನ ಪಾಪ ಮನಸ್ಸಿಗೆ ಪ್ರಾವಣ್ಯ
ವಿಷಯೀಕರರಾದಿರಿ. ಈರೀತಿ ಪರಾಭಿಭವನ ಸಾಮರ್ಥ್ಯವುಳ್ಳ ತಮ್ಮ
ದಿವ್ಯ ತೇಜಸ್ಸನ್ನು ಆಶ್ರಿತರಿಗೆಕೊಟ್ಟು ಕೃಪೆಮಾಡುವ ಮಹತ್ತಾದ ಅಪ್ರತಿಮ
ವೈಭವಕ್ಕೆ ಏನು ದೋಷವುಂಟಾಗುವುದೋ ಎಂದು ನನ್ನ ಮನಸ್ಸು
ಶಿಥಿಲತೆಯಿಂದ ದುಃಖಿಸುತ್ತಿದೆ.” ಎಂದು ಪರಿತಾಪ ಪಡುತ್ತಾರೆ
ಅಮುದನಾರ್‌ರವರು.

**28.** **ನೆಂಜಿಲ್ ಕರೈಕೊಣ್ಡ ಕಂಜನೈ ಕಾಯ್ನ್ದ ನಿಮಲನ್, ನಂಗಳ್**
**ಪಂಜಿತ್ತಿರುವಡಿ ಪಿನ್ನೈ ತನ್ ಕಾದಲನ್, ಪಾದಮ್ ನಣ್ಣಾ**
**ವಂಜರ್ ಕ್ಕರಿಯ ಇರಾಮಾನುಶನ್ ಪುಗಳನ್ರಿಯೆನ್ವಾಯ್**
**ಕೊಂಜಿಪ್ಪರವಗಿಲ್ಲಾದು, ಎನ್ನವಾಙ್ಗಿನ್ನು ಕೂಡಿಯದೇ ||**

ಅರ್ಥ:—ನೆಂಜಿಲ್ — ಮನಸ್ಸಿನಲ್ಲಿ. ಕರೈಕೊಣ್ಡ = ಕೋಪವನ್ನುಳ್ಳ,
ಕಂಜನೈ = ಕಂಸನನ್ನು, ಕಾಯ್ನ್ದ = ಸಂಹರಿಸಿದ - ನಿಮಲನ್ = ಕಲ್ಮಷರ
ಹಿತನಾದ - ಪಂಜಿತ್ತಿರುವಡಿ = ಹತ್ತಿಯ ಹಾಗೆ ಮೃದುವಾದ ಪಾದಗಳುಳ್ಳ
ವಳಾದ, ನಂಗಳ್ ಪಿನ್ನೈ ತನ್ = ನಮ್ಮ ನಪ್ಪಿನ್ನೈಪ್ಪಿರಾಟ್ಟಿ ಅಥವಾ ನೀಳಾ
ದೇವಿಯ, ಕಾದಲನ್ = ಪ್ರಿಯತಮನಾದ ಶ್ರೀ ಕೃಷ್ಣನ, ಪಾತಮ್ = ಚರಣ
ಗಳನ್ನು, ನಣ್ಣಾ = ಆಶ್ರಯಿಸದ (ಧ್ಯಾನಿಸದ), ವಂಜರ್ಕ್ಕು = ವಂಚಕರುಗಳಿಗೆ.
ಅರಿಯ = ದುರ್ಲಭನಾದ, ಇರಾಮಾನುಶನ್ = ಶ್ರೀ ರಾಮಾನುಜಮುನಿಯ,
ಪುಗಳನ್ರಿ = ಕಲ್ಯಾಣಗುಣಗಳನ್ನು ಬಿಟ್ಟು, ಮತ್ತಾವುದನ್ನೂ, ಎನ್ವಾಯ್ =
ನನ್ನ ನಾಲಿಗೆಯು, ಕೊಂಜಿಪ್ಪರವಗಿಲ್ಲಾತು = ಅನ್ಯ ವಿಷಯಗಳನ್ನು ಮಕ್ಕ
ಳಂತೆ ತೊದಲು ಮಾತುಗಳಿಂದ ಸಂಕೋಚಪಟ್ಟು ಸ್ತೋತ್ರಮಾಡುವುದಿಲ್ಲ.
ಎನ್ನವಾಙ್ಗು ಇನ್ನು ಕೂಡಿಯದೇ = ಈಗ ಈ ಸಮೃದ್ಧಿಯು ಸೇರಿದ್ದು
ಎಂತಹ ಪುರುಷಾರ್ಥದ ಬಾಳ್ವಿಕೆಯು - ಎಂದು ಆಶ್ಚರ್ಯ ಚಕಿತ
ರಾಗುತ್ತಾರೆ.

ತಾ:—“ದೇವಕಿ ದೇವಿಯ ಎಂಟನೇ ಗರ್ಭದಲ್ಲಿ ಜನಿಸುವ ಪುರುಷ
ಶಿಶುವು ನಿನ್ನನ್ನು ಕೊಲ್ಲುವುದು” ಎಂಬ ಅಶರೀರ ವಾಣಿಯನ್ನು

ಕೇಳಿದ ದಿನದಿಂದ ಅತಿ ಕ್ರೋಧವನ್ನು ತಾಳಿದ್ದ ಕಂಸನನ್ನು ಸಂಹರಿಸಿದ ಮತ್ತು ಅತಿಕೋಮಲವಾದ ಶ್ರೀ ಪಾದಗಳನ್ನುಳ್ಳ 'ನಪ್ಪಿನ್ನೈಪ್ಪಿರಾಟ್ಟಿ' ಎಂಬ ನೀಳಾದೇವಿಗೆ ಅತ್ಯಂತ ಪ್ರಿಯವಲ್ಲಭನಾದ ಶ್ರೀ ಕೃಷ್ಣಪರಮಾತ್ಮನ ಚರಣಾರವಿಂದಗಳನ್ನು ಧ್ಯಾನಿಸಿ, ಆಶ್ರಯಿಸದ ಆತ್ಮಾಪಹಾರಿಗಳಿಗೆ ಅಗೋಚರರಾದ ಶ್ರೀ ರಾಮಾನುಜರ ಕಲ್ಯಾಣ ಗುಣಗಳನ್ನು ಬಿಟ್ಟು, ಬೇರೊಂದು ವಿಷಯವನ್ನೂ ನನ್ನ ನಾಲಿಗೆಯು ವಾಕ್ಕಿನಿಂದ ಸ್ತುತಿಸುವುದಿಲ್ಲ. ಆದುದರಿಂದ ಈಗ ನನಗೆ ಉಂಟಾದ ಅಲಭ್ಯಾಲಾಭವು, ಎಂತಹ ಪುರುಷಾರ್ಥ ಸಮೃದ್ಧಿಯು," ಎಂದು ಆಶ್ಚರ್ಯ ಚಕಿತರಾಗುತ್ತಾರೆ. ಅಮುದನಾರ್ರವರು.

**29.** ಕೂಟ್ಟುಮ್ ವಿದಿಯೆನ್ನ ಕೂಡುಂಗೊಲೋ; ತೆನ್ ಕುರುಗೈ
ಪ್ಪಿರಾನ್
ಪಾಟ್ಟೆನ್ನುಮ್ ವೇದಪ್ಪಶುನ್ದಮಿಳ್ ತನ್ನೈ, ತನ್ ಪತ್ತಿಯೆನ್ನುಮ್
ವೀಟ್ಟಿನ್ಕಣ್ ವೈತ್ತ ಇರಾಮಾನುಶನ್ ಪುಗಳ್
ಮೆಯ್ಯುಣರ್ನ್ದೋರ್
ಈಟ್ಟಂಗಳ್ ತನ್ನೈ, ಎನ್ನಾಟ್ಟಂಗಳ್ ಕಣ್ಡಿನ್ಬಮೆಯ್ದಿಡವೇ ||

ಅರ್ಥ:— ತೆನ್ = ಸುಂದರವಾದ, ಕುರುಕೈಪ್ಪಿರಾನ್ = ಕುರುಕಾಪುರಿಗೆ ಸ್ವಾಮಿಯಾದ ನಮ್ಮಾಳ್ವಾರ್ರವರ, ಪಾಟ್ಟೆನ್ನುಮ್ = ಪದ್ಯಗಳೆಂಬ, ವೇದಮ್ = ಪ್ರಸಿದ್ಧವಾದ ಸಾಮವೇದ ರೂಪವಾದ, ಪಶುಮ್ ತಮಿಳ್ ತನ್ನೈ = ಸುಂದರವಾದ ದ್ರಾವಿಡಭಾಷಾ ಪ್ರಬಂಧವಾದ "ತಿರುವಾಯ್ಮೊಳಿ" ಯನ್ನು, ತನ್ ಪತ್ತಿಯೆನ್ನುಮ್ = ತಮ್ಮ ಭಕ್ತಿಯೆಂಬ, ವೀಟ್ಟಿನ್ ಕಣ್ ವೈತ್ತ = ಮಹಾ ಸೌಧದಲ್ಲಿ ಇರಿಸಿದ, ಇರಾಮಾನುಶನ್ = ಶ್ರೀ ರಾಮಾನುಜರ, ಪುಗಳ್ = ಸುಗುಣ ಪೂರ್ಣವಾದ ಕೀರ್ತಿಯನ್ನು, ಮೆಯ್ ಉಣರ್ನ್ದೋರ್ = ನಿಜ ಸ್ವರೂಪದಿಂದ ಯಥಾವತ್ತಾಗಿ ತಿಳಿದವರ, ಕೂಟ್ಟಂಗಳ್ ತನ್ನೈ = ಗೋಷ್ಠಿ ಸಮೂಹಗಳನ್ನು (ಭಾಗವತರ), ಎನ್ ನಾಟ್ಟಂಗಳ್ ಕಣ್ಡು = ನನ್ನ ಕಣ್ಣುಗಳು ಪ್ರತ್ಯಕ್ಷವಾಗಿ ಕಂಡು, ಇನ್ಬಮ್ ಎಯ್ದಿಡ = ಆನಂದವನ್ನು ಹೊಂದುವಂತೆ, ಕೂಟ್ಟುಂವಿದಿ = ಅವರೊಡನೆ ಕೂಡಿಸುವ

ಭಾಗ್ಯವು (ಆಚಾರ್ಯ ಕಟಾಕ್ಷವು), ಎನಕ್ಕು ಕೂಡುಂಗೊಲೋ = ಯಾವಾಗ ಸಂಭವಿಸುವುದೋ ?

ತಾ:—ಸುಂದರವಾದ ಕುರುಕಾಪುರಿಯಲ್ಲಿ ಅವತರಿಸಿದ ನಮ್ಮಾಳ್ವಾರವರು ತತ್ವಹಿತ ಪುರುಷಾರ್ಥಗಳ ಸಾರವನ್ನು ಸರ್ವರಿಗೂ ತಿಳಿಯುವಂತೆ ಸಾಮವೇದ ಪ್ರತಿಪಾದಿತವೆಂದು ಪ್ರಸಿದ್ಧವಾಗಿರುವ, "ತಿರುವಾಯ್ಮೊಳಿ" ಎಂಬ ಪ್ರಬಂಧವನ್ನು ಅಂದವಾದ ದ್ರಾವಿಡ ಭಾಷೆಯಲ್ಲಿ ಹಾಡಿ ಉಪಕರಿಸಿದರು. ಇಂಥಾ ದಿವ್ಯ ಪ್ರಬಂಧವನ್ನು ತಮ್ಮ ಭಕ್ತಿ ಎಂಬ ಸೌಧದಲ್ಲಿ ಪ್ರತಿಷ್ಠಿಸಿ ಸ್ಥಿರವಾಗಿಟ್ಟುಕೊಂಡು ಅನುಸಂಧಾನಪರರಾಗಿರುವ ಶ್ರೀ ರಾಮಾನುಜರ ಕೀರ್ತಿಯನ್ನೂ ಕಲ್ಯಾಣಗುಣಗಳನ್ನೂ ಚೆನ್ನಾಗಿ ಸತ್ಯವಾಗಿ ಹೃದಯದಲ್ಲಿ ಧರಿಸಿಕೊಂಡಿರುವ ಜ್ಞಾನಾಧಿಕರ ಅಂದರೆ ಭಾಗವತರ ತಂಡವನ್ನು (ಗೋಷ್ಠಿ ಸಮೂಹವನ್ನು) ನನ್ನ ಕಣ್ಣುಗಳು ಪ್ರತ್ಯಕ್ಷವಾಗಿ ಕಂಡು ಆನಂದಿಸುವಂತೆ ಅವರೊಡನೆ ಸೇರುವ ಭಾಗ್ಯವು ಎಂದಿಗೆ ಲಭಿಸುವುದೋ" ಎಂದು ಪ್ರಾರ್ಥಿಸಿ - ಭಾಗವತ ಪ್ರೀತಿಯನ್ನು ತೋರಿಸುತ್ತಾರೆ.

**30.** ಇನ್ಬಮ್ ತರುಪೆರುವೀಡುವನ್ದೆಯ್ದಿಲೆನ್, ಎಣ್ಣಿಱನ್ದ
ತುನ್ಬಮ್ ತರುನಿರಯಮ್ ಪಲಶೂೞಿಲೆನ್, ತೊಲ್ಲುಲಗಿಲ್
ಮನ್ಪಲ್ಲುಯಿರ್ಕಳ್ಕ್ಕಿಱೈಯವನ್ಮಾಯನೆನಮೊೞಿನ್ದ
ಅನ್ಬನನಕನ್ ಇರಾಮಾನುಶನೆನ್ನೈಯಾಣ್ಡನನೇ ||

ಅರ್ಥ:—ತೊಲ್ = ಅನಾದಿಯಾದ. ಉಲಕಿಲ್ = ಈ ಭೂಲೋಕದಲ್ಲಿ, ಮನ್ = ನಿತ್ಯವಾಗಿ ನೆಲಸಿರುವ, ಪಲ್ = ಅನೇಕವಾದ, ಉಯಿರ್ಗಳುಕ್ಕು = ಆತ್ಮಗಳಿಗೆ, ಇಱೈಯವನ್ = ಸ್ವಾಮಿಯಾದ. ಮಾಯನ್ = ಆಶ್ಚರ್ಯ ಗುಣಚೇಷ್ಟಿತನಾದ ಸರ್ವೇಶ್ವರ ಇವ್ವಾನೆಂದು ಹೇಳಲ್ಪಟ್ಟ (ಭಗವಂತನೇ), ಎನಮೊೞಿನ್ದ = ಆ ಪರಮಾತ್ಮನೇ ಶೇಷಿಯೆಂದು ಬೋಧಿಸಿದ, ಅನ್ಬನ್ ಅನಕನ್ = ಸ್ನೇಹಪರರೂ, ದೋಷರಹಿತರೂ ಆದ-(ಖ್ಯಾತಿ ಲಾಭ ಪೂಜಾದಿಗಳನ್ನು ಅಪೇಕ್ಷಿಸದೆ ಪ್ರೀತಿ ಪ್ರೇರಿತರಾಗಿ ಶ್ರೀ ಭಾಷ್ಯಾದಿ ಗ್ರಂಥಗಳಲ್ಲಿ ಉಪದೇಶಿಸಿರುವ), ಇರಾಮಾನುಶರ್ = ಶ್ರೀರಾಮಾನುಜರು, ಎನ್ನೈ =

ನನ್ನನ್ನು, ಅಣ್ಣನನೇ — ದಾಸನನ್ನಾಗಿ ಸ್ವೀಕರಿಸಿದರು. ಇನ್ಬವನ್ ತರುವನ್ — ಅನನ್ತ ಸುಖವನ್ನು ಕೊಡತಕ್ಕ, ಪೆರುವೀಡು — ಮಹತ್ತಾದ ಮೋಕ್ಷವು, ವನ್ದು ಎಯ್ದಿಲೆನ್ — ಇಲ್ಲಿಗೆ ಬಂದು ಸೇರಿದರೇನು? ಎಣ್ ಇಲನ್ದ — ಲೆಖ್ಖವಿಲ್ಲದಷ್ಟು, ತುನ್ಬವನ್ ತರು — ದುಃಖಗಳನ್ನು ಕೊಡತಕ್ಕ - ಪಲ ನಿರಯಂ — ಹಲ ವಿಧವಾದ ನರಕವು, ಶೂೞ್ಹಿಲೆನ್ — ಬಂದು ವ್ಯಾಪಿಸಿ ಸುತ್ತಿಕೊಂಡರೇನು? ಅಂದರೆ ಅವುಗಳನ್ನು ನಾನು ಗಮನಿಸುವುದಿಲ್ಲ. ಅವೆಲ್ಲವೂ ಶ್ರೀ ಮದ್ರಾಮಾನುಜರ ಕರುಣಾ ಕಟಾಕ್ಷವೊಂದಿದ್ದರೆ ನನಗೆ ಏನನ್ನೂ ಮಾಡಲಾರವು ಎಂದು ತಮಗೆ ರಾಮಾನುಜರಲ್ಲಿರುವ ದೃಢವಾದ ಭಕ್ತಿಯನ್ನು ನಿರೂಪಿಸುತ್ತಾರೆ.

ತಾ:—"ಅವಿದ್ಯಾ ಕರ್ಮವಾಸನಾರುಚಿ ಪ್ರಕೃತಿ ಸಂಬಂಧವಾದ ಅನಾದಿಯಾದ ಸಂಸಾರಸಾಗರದಲ್ಲಿ ತೊಳಲುತ್ತಿರುವ ಅಸಂಖ್ಯರಾದ ಜೀವರಾಶಿಗಳಿಗೆಲ್ಲಾ ಸ್ವಾಮಿಯಾದ ಆ ಶ್ರೀಮನ್ನಾರಾಯಣನೇ "ಶೇಷಿ" ಎಂದು - ಶ್ರೀ ಭಾಷ್ಯಾದಿ ಗ್ರಂಥಗಳಲ್ಲಿ ಉಪದೇಶಿಸಿರುವ ಪರಮ ಭಕ್ತರೂ ಪೂಜ್ಯರೂ ಆದ - ರಾಮಾನುಜಾಚಾರ್ಯರು, ತಾವಾಗಿಯೇ ಕೂರತ್ತಾಳ್ವಾರವರ ಮುಖಾಂತರ ಬೋಧಿಸಿ ನನ್ನನ್ನು ದಾಸನನ್ನಾಗಿ ಸ್ವೀಕರಿಸಿ ಆಳುತ್ತಿರುವರು. ಇನ್ನು ಮೇಲೆ ಮಹತ್ತಾದ ಸುಖಮಯವಾದ ಮೋಕ್ಷವು ಮೇಲೆ ಬಿದ್ದು ಬಂದರೇನು? ಲೆಖ್ಖವಿಲ್ಲದಷ್ಟು ದುಃಖ ಪರಂಪರೆಗಳು ಬಂದು ಹಲವು ವಿಧ ನರಕಗಳು ಪ್ರಾಪ್ತವಾದರೇನು? ಇವೆರಡನ್ನೂ ಸಮವೆಂದೇ ಭಾವಿಸುವೆನು" ಎಂದು ತಮಗೆ ರಾಮಾನುಜರಲ್ಲಿರುವ ದೃಢ ನಿಶ್ಚಲ ಭಕ್ತಿಯನ್ನು ತೋರಪಡಿಸುತ್ತಾರೆ.

**31.** ಆಣ್ಡುಗಳ್ ನಾಳ್ ತಿಂಗಳಾಯ್, ನಿಕೞ್ ಕಾಲಮೆಲ್ಲಾಮ್
ಮನಮೇ ಈಣ್ಡು
ಪಲ್ ಯೋನಿಗಳ್ ತೋರುೞಲ್ವೋಮ್, ಇನ್ನೊರೆಣ್ಣಿನ್ರಿಯೇ
ಕಾಣ್ದಕು ತೋಳಣ್ಣಲ್ ತೆನ್ನತ್ತಿಯೂರರ್ ಕೞಲಿಣೈಕ್ಕೀೞ್
ಪೂಣ್ಡವನ್ಬಾಳನ್ ಇರಾಮಾನುಶನೈಪ್ಪೊರುನ್ದಿನಮೇ ||

ಅರ್ಥ:—ಮನಮೇ— = ಹೇ ಮನಸ್ಸೇ ! ನಾಳಾಯ್ = ದಿನಗಳಾಗಿಯೂ, ತಿಂಗಳಾಯ್ = ತಿಂಗಳುಗಳಾಗಿಯೂ, ಆಣ್ಡುಗಳಾಯ್ = ಸಂವತ್ಸರಗಳಾಗಿಯೂ, ನಿಗೞ್ಕಾಲಮೆಲ್ಲಾಮ್ = ವರ್ತಮಾನ ಕಾಲವೂ ಸೇರಿ ಎಲ್ಲಾ ಕಾಲಗಳಲ್ಲಿಯೂ, ಊಣ್ರು = ಸೇರಿ: ಪಲ್ ಯೋನಿಕಳ್ ತೋರುಂ = ಅನೇಕವಾದ ನಾನಾ ಜಾತಿಗಳಲ್ಲಿ ಪದೇ ಪದೇ ಹುಟ್ಟಿ ಉೞಲ್ವೋಮ್ = ತಿರುಗುತ್ತಿದ್ದ ನಾವು. ಇನ್ರು = ಈಗ, ಓರ್ - ಎಣ್ ಇನ್ರಿಯೇ = ಒಂದು ವಿಧವಾದ ಚಿಂತೆಯೂ ಇಲ್ಲದೆ ಇದ್ದರೂ, ಕಾಣ್ ತಕು = ನೋಡಲರ್ಹವಾದ ಸುಂದರವಾದ, ತೋಳ್ = ಭುಜಗಳುಳ್ಳ, ಅಣ್ಣಲ್ = ಸ್ವಾಮಿಯಾದ (ರಕ್ಷಕನಾದ), ತೆನ್ = ದಕ್ಷಿಣ ದಿಕ್ಕಿಗೆ ತಿಲಕದಂತಿರುವ. ಅತ್ತಿಯೂರರ್ = ಕಾಂಚೀಪುರವೆಂಬ ಹಸ್ತಿ ಗಿರಿಯಲ್ಲಿ ವಿಜಯಿಸಿರುವ, ಆಶ್ರಿತರ ಇಷ್ಟಾರ್ಥಗಳನ್ನು ಕೊಡತಕ್ಕ ವರದರಾಜ ಸ್ವಾಮಿಯ, ಇಣೈ = ಪರಸ್ಪರ ಸದೃಶವಾದ, ಕೞಲ್ ಕೀೞ್ = ಶ್ರೀ ಪಾದಗಳ ವಿಷಯದಲ್ಲಿರುವ, ಪೂಣ್ಡ = ಅನ್ಬಾಳನ್ = ಭಕ್ತಿಯಿಂದ ಅಲಂಕೃತರಾಗಿರುವ, ಇರಾಮಾನುಶನೈ = ಶ್ರೀ ರಾಮಾನುಜರನ್ನು, ಪೊರುನ್ದಿನಮ್ = ಆಶ್ರಯಿಸಿ ನೆಲೆಯಾಗಿ ನಿಂತೆವು.

ತಾ:—ಲೋಕದಲ್ಲಿ ಒಬ್ಬನಿಗೆ ಅಕಸ್ಮಾತ್ ಒಂದು ನಿಧಿ ಲಭಿಸಿದರೆ ಅದರಿಂದುಂಟಾದ ಸಂತೋಷವನ್ನು ಮುಚ್ಚಿಡಲಾರದೆ ತನ್ನ ಅಂತರಂಗ ಸ್ನೇಹಿತನಿಗೆ ಹೇಳಿಕೊಳ್ಳುವಹಾಗೆ, ಅಮುದನಾರು ತಮ್ಮ ಬಂಧ, ಮೋಕ್ಷ, ಗಳೆರಡಕ್ಕೂ ಕಾರಣವಾದ ಮನಸ್ಸನ್ನು ಸಂಬೋಧಿಸಿ ತಮ್ಮ ಹರ್ಷವನ್ನು ಹೇಳುತ್ತಾರೆ.

ಎಲೈ ಮನಸ್ಸೇ ; "ಬನ್ಧ ಮೋಕ್ಷಗಳಿಗೆ ಕಾರಣವಾದ ಮನಸ್ಸೆ ! ಕಲಾ ಮುಹೂರ್ತಾದಿ ಕಾಲಗಳಾದ - ಸಂವತ್ಸರ, ತಿಂಗಳು, ದಿನ, ರಾತ್ರಿ, ಹಗಲು, ಕಳೈ. ಈ ರೀತಿ ಬೆಳಗುತ್ತಿರುವ ಎಲ್ಲಾ ಕಾಲಗಳಲ್ಲಿಯೂ ಸೇರಿ ದೇವತಿರ್ಯಕ್ ಮನುಷ್ಯಾದಿ ನಾನಾ ದೇಹಗಳನ್ನು ಪ್ರವೇಶಿಸಿ ಜನ್ಮಗಳನ್ನೆತ್ತಿ ತಿರುಗುತ್ತಿದ್ದ ನಾವು, ಈಗ ಒಂದು ಸಾಧನವೂ ಇಲ್ಲದೆ, ಸುಂದರವಾದ ತೋಳುಗಳಿಂದ ಕಂಗೊಳಿಸುತ್ತಿರುವ ಆಶ್ರಿತರ ಇಷ್ಟಾರ್ಥಗಳನ್ನು ನೆರವೇರಿಸುತ್ತಿರುವ

ಕಾಂಚೀ ಪುರದಲ್ಲಿ ಬಿಜಯಮಾಡಿರುವ (ಪೇರರುಳಾಳರ್) ಎಂಬ ನಾಮಧೇಯದ ಶ್ರೀವರದರಾಜ ಸ್ವಾಮಿಯ ಪಾದಗಳನ್ನು ಭಕ್ತಿಯಿಂದ ಧ್ಯಾನಿಸುತ್ತಿರುವ ಎಂಬೆರುಮಾನಾರ್‌ರನ್ನು ಆಶ್ರಯಿಸಿ ಸ್ಥಿರವಾಗಿ, ನೆಲೆಯಾಗಿ ನಿಂತಿರು ಕಂಡೆಯಾ? ಎಂದು ಹೇಳಿ ಹೃಷ್ಟರಾಗುತ್ತಾರೆ.

32. ಪೊರುನ್ದಿಯ ತೇಶುಮ್ ಪೊಱೈಯುಮ್ ತಿಱಲುಮ್
ಪುಗಳುಮ್, ನಲ್ಲ
ತಿರುನ್ದಿಯ ಞಾನಮುಮ್ ಶೆಲ್ವಮುಮ್ ಶೇರುಮ್,
ಶೆಱುಕಲಿಯಾಲ್
ವರುನ್ದಿಯ ಞಾಲತ್ತೈ ವಣ್ಮೈಯಿನಾಲ್ ವನ್ದೆಡುತ್ತಳಿತ್ತ
ಅರುನ್ದವನ್ ಎಂಗಳಿರಾಮಾನುಶನೈ ಅಡೈಬವರ್ಕ್ಕೇ ॥

ಅರ್ಥ:— ಶೆಱು — ಬಾಧಿಸುತ್ತಿರುವ, ಕಲಿಯಾಲ್ — ದುಷ್ಟವಾದ ಕಲಿ ಕಾಲದಿಂದ, ವರುನ್ದಿಯ ಞಾಲತ್ತೈ — ಕ್ಲೇಶಪಡುತ್ತಿರುವ ಭೂಲೋಕದ, ಜೀವರ ಉದ್ಧರಣಕ್ಕಾಗಿ, ವಣ್ಮೈಯಿನಾಲ್ ವನ್ದು — ತಮ್ಮ ಔದಾರ್ಯದಿಂದ ಬಂದು ಅವತರಿಸಿ, ಎಡುತ್ತು ಅಳಿತ್ತ — ಉದ್ಧರಿಸಿ ರಕ್ಷಿಸಿದ, ಅರುನ್ ತವನ್ — ದುರ್ಲಭವಾದ "ಪ್ರಪತ್ತಿ" ಎಂಬ ತಪೋನಿಷ್ಠರಾದ (ಪ್ರಪನ್ನರಾದ) ಎಂಗಳ್ ಇರಾಮಾನುಶನೈ — ನಮ್ಮ ಎಂಬೆರುಮಾನಾರ್‌ರವರನ್ನು ಅಡೈಬವರ್ಕ್ಕು — ಆಶ್ರಯಿಸುವವರಿಗೆ-ಪೊರುನ್ದಿಯ — ಸ್ವರೂಪಕ್ಕೆ ತಕ್ಕದಾಗಿರುವ, ತೇಶುಮ್ — ತೇಜಸ್ಸು, ಪೊಱೈಯುಮ್ — ತಾಳ್ಮೆಯೂ (ಕ್ಷಮೆಯೂ), ತಿಱಲುಮ್ — ಬಲವೂ ಅಂದರೆ ಜಿತೇಂದ್ರಿಯತ್ವರೂಪವಾದ ಮನೋದಾರ್ಢ್ಯವೂ - ಪುಗಳುಮ್ — ಕೀರ್ತಿಯೂ ನಲ್ಲ — ವಿಲಕ್ಷಣವಾದ, ತಿರುನ್ದಿಯ — ಸಂಶಯವನ್ನು ಕಳೆದ, ಞಾನಮುಮ್ — ತತ್ವಹಿತಪುರುಷಾರ್ಥ ಯಾಥಾತ್ಮ್ಯ ಜ್ಞಾನವೂ, ಶೆಲ್ವಮುಮ್ — ವೇದಾಂತ ಜ್ಞಾನಗರ್ಭವಾದ ಶ್ರೀಯೂ(ಸಂಪತ್ತೂ), ಶೇರುಮ್ — ತನ್ನಷ್ಟಕ್ಕೆ ತಾನೇ ಬಂದು ಸೇರುವುವು

ತಾ:— ಬಾಧಕವಾದ, ಹಿಂಸಕವಾದ, ಕಲಿಕಾಲದ ಪ್ರಾಬಲ್ಯದಿಂದ ಭೂಲೋಕದ ಜೀವನರು-ಕ್ಲೇಶಪಡುತ್ತಿರುವುದನ್ನು ಕಂಡು, ಶ್ರೀರಾಮಾನುಜರು ತಮ್ಮ ಪರಮಕಾರುಣಿಕತ್ವಲಕ್ಷಣ ಸ್ವಭಾವಮೂಲವಾದ ಔದಾರ್ಯದಿಂದ

ಪರಮಪದದಿಂದ ಬಂದು ಈ ಭೂಲೋಕದಲ್ಲಿ ಅವತರಿಸಿ ಚೇತನರಿಗೆ ತಮ್ಮ ಔದಾರ್ಯದಿಂದ ಎಲ್ಲರಿಗೂ ತಕ್ಕ ಜ್ಞಾನವನ್ನು ಉಪದೇಶಿಸಿದರು. ಇವರು ಚೇತನರನ್ನು ಉದ್ಧಾರಮಾಡುವ ನೆಪದಿಂದ, ತಮ್ಮನ್ನೇ ಉದ್ಧರಿಸುವುದಕ್ಕಾಗಿ ಅವತಾರ ಮಾಡಿ ಬಂದರೆಂದು ಅಮುದನಾರು ಹೃಷ್ಟರಾಗಿ, ಇಂಥಾ ಪ್ರಪತ್ತಿ ನಿಷ್ಠರಾದ ಎಂಬೆರುಮಾನಾರನ್ನು ಆಶ್ರಯಿಸಿದವರಿಗೆ, ಅವರ ಸ್ವರೂಪಕ್ಕೆ ತಕ್ಕಹಾಗೆ ಸಾಮರ್ಥ್ಯವೂ, ಕ್ಷಮಾಗುಣವೂ, ಸಕಲ ವಿಧ ಭಗವತ್ಕೈಂಕರ್ಯ ಮಾಡಲು ಮನೋಬಲವೂ, ತತ್ತ್ವಹಿತ ಪುರುಷಾರ್ಥ ತದ್ಯಾಥಾತ್ಮ್ಯ ಜ್ಞಾನವೂ ವೇದಾಂತ ಸಾರಗರ್ಭವಾದ ಶ್ರೀಯೂ ಅಂದರೆ ಸಂಪತ್ತು ತಾನಾಗಿಯೇ ಬಂದು ಸೇರುವುವು ಎಂದು ಹೇಳುತ್ತಾರೆ.

33. ಅಡೈಯಾರ್ ಕಮಲತ್ತು ಅಲರ್ ಮಗೞ್ ಕೇಳ್ವನ್,
ಕೈಯಾೞಿಯೆನ್ನುಮ್
ಪಡೈಯೋಡು ನಾನ್ದಗಮುಮ್ ಪಡರ್ ತಣ್ಡುಮ್,
ಒಣ್ ಶಾರ್ಙ್ಗವಿಲ್ಲುಮ್
ಪುಡೈಯಾರ್ ಪುರಿಶಂಗಮುಮಿನ್ದ ಪೂತಲಮ್ ಕಾಪ್ಪದರ್ಕೇ
ಇಡೈಯೇ, ಇರಾಮಾನುಶಮುನಿಯಾಯಿನ ಇನ್ನಿಲತ್ತೇ ||

ಅರ್ಥ:— ಅಡೈಆರ್ = ದಳಗಳಿಂದ (ಎಲೆಗಳಿಂದ) ಒತ್ತಾಗಿ ತುಂಬಿರುವ, ಕಮಲತ್ತು ಅಲರ್ ಮಗಳ್ = ತಾವರೆ ಹೂವಿನಲ್ಲಿ ಅವತರಿಸಿದ ಶ್ರೀ ದೇವಿಯ, ಕೇಳ್ವನ್ = ವಲ್ಲಭನಾದ ಶ್ರೀಮನ್ನಾರಾಯಣನ, ಕೈ = ಕೈಯಲ್ಲಿರುವ, ಆೞಿಯೆನ್ನುಮ್ ಪಡೈಯೋಡು = ಸುದರ್ಶನವೆಂಬ ಮನಸ್ತತ್ತ್ವಾಭಿಮಾನಿ ದೇವತೆಯಾದ ಚಕ್ರಾಯುಧವೂ - ನಾನ್ದಕಮುಮ್ = ಜ್ಞಾನಾಭಿಮಾನಿ ದೇವತೆಯಾದ ನಂದಕವೆಂಬ ಕತ್ತಿಯೂ, ಪಡರ್ ತಣ್ಡುಮ್ = ರಣಕ್ಷೇತ್ರದಲ್ಲಿ ಬೆಳಗುವ ಬುದ್ಧ್ಯಭಿಮಾನಿ ದೇವತೆಯಾದ ಕೌಮೋದಕೀ ಎಂಬ ವಿಪುಲವಾದ ಗದೆಯೂ, ಒಣ್ ಶಾರ್ಙ್ಗವಿಲ್ಲುಮ್ = ಸುಂದರವಾದ, ಇಂದ್ರಿಯಗಳಿಗೆಲ್ಲಾ ಕಾರಣವಾದ, ಸಾತ್ವಿಕಾಹಂಕಾರಾಭಿಮಾನಿಯಾದ ಶಾರ್ಙ್ಗವೆಂಬ ಬಿಲ್ಲೂ, ಪುಡೈಆರ್ ಪುರಿಶಂಗಮುಮ್ = ವಿಸ್ತಾರವಾದ ಬಲಮುರಿ (ದಕ್ಷಿಣಾವರ್ತ) ವೆಂಬ ಭೂತ ಕಾರಣವಾಗಿ ತಾಮಸಾಹಂಕಾ

ರಾಭಿಮಾನಿಯಾದ ಪಾಂಚಜನ್ಯವೆಂಬ ಶಂಖವೂ, ಇನ್ನು ಪೂತಲಮ್ — ಈ ಭೂಲೋಕದವರನ್ನು ಕಾಪ್ಪದರ್ಕ್ಕು = ರಕ್ಷಿಸುವುದಕ್ಕೋಸ್ಕರ, ಇಡೈಯೇ = ಮಧ್ಯೆ ಬಂದು, ಇನ್ನಿಲತ್ತೇ = ಈ ಲೋಕದಲ್ಲಿ, ಇರಾಮಾನುಶ ಮುನಿಯಾಯಿನ — ಶ್ರೀ ರಾಮಾನುಜರಾಗಿ ಅವತಾರ ಮಾಡಿದವು.

ತಾ:— ಪರಿಮಳಿತವಾದ - ಕೆಂಪಾದ ಎಳೆ ದಳಗಳಿಂದ ಬೆಳೆದಿರುವ ತಾವರೆ ಕಮಲದಲ್ಲಿ ಹುಟ್ಟಿದ ಶ್ರೀ ದೇವಿಗೆ ವಲ್ಲಭನಾದ ಶ್ರೀಮನ್ನಾರಾಯಣನ ಕೈಯಲ್ಲಿರುವ ಮನಸ್ತತ್ತ್ವಾಭಿಮಾನಿಯಾದ ಚಕ್ರಾಯುಧವೂ, ಜ್ಞಾನವಿದ್ಯಾಭಿಮಾನಿ ದೇವತೆಯಾದ ನಂದಕವೆಂಬ ಕತ್ತಿಯೂ, ರಣಕ್ಷೇತ್ರದಲ್ಲಿ ಬೆಳಗಿದ ಬುದ್ಧ್ಯಭಿಮಾನಿ ದೇವತೆಯಾದ ಕೌಮೋದಕಿ ಎಂಬ ವಿಶಾಲವಾದ ಗದೆಯೂ, ಸುಂದರವಾದ, ಇಂದ್ರಿಯಗಳಿಗೆಲ್ಲಾ ಕಾರಣವಾದ, ಸಾತ್ವಿಕಾಹಂಕಾರಾಭಿಮಾನಿಯಾದ ಶಾರ್ಙ್ಗವೆಂಬ ಧನುಸ್ಸೂ, ವಿಸ್ತಾರವಾಗಿಯೂ, ಸುಂದರವಾಗಿಯೂ, ಇರುವ - ಬಲಮುರಿ (ದಕ್ಷಿಣಾವರ್ತ) ವೆಂಬ, ಭೂತ ಕಾರಣವಾಗಿ ತಾಮಸಾಹಂಕಾರಾಭಿಮಾನಿಯಾದ ಪಾಂಚಜನ್ಯವೆಂಬ ಶಂಖವೂ, ಕಲಿಪುರುಷ ಪ್ರಭಾವಕ್ಕೊಳಗಾದ ಈ ಭೂಲೋಕದ ಜನರನ್ನು ಕಾಪಾಡುವುದಕ್ಕಾಗಿ ಶ್ರೀ ರಾಮಾನುಜರಾಗಿ ಅವತಾರ ಮಾಡಿರುವುವು - ಎನ್ನುತ್ತಾರೆ.

**34.** ನಿಲತ್ತೈಚ್ಚೆಱುತ್ತುಣ್ಣುಮ್ ನೀಶಕ್ಕಲಿಯೈ, ನಿನೈಪ್ಪರಿಯ
ಬಲತ್ತೈಚ್ಚೆಱುತ್ತುಮ್ ಪಿಱಂಗಿಯದಿಲ್ಲೈ, ಎನ್ ಪೆಯ್‌ವಿನೈ ತೆನ್
ಪುಲತ್ತಿಲ್ ಪೊಱಿತ್ತ ಅಪ್ಪುತ್ತಗಚ್ಚುಮ್ಮೈ ಪೊಱುಕ್ಕಿಯ ಪಿನ್
ನಲತ್ತೈಪ್ಪೊಱುತ್ತದು, ಇರಾಮಾನುಶನ್ ತನ್ ನಯಪ್ಪುಗೞೇ ||

ಅರ್ಥ:— ಇರಾಮಾನುಶನ್ ತನ್ = ಎಂಬೆರುಮಾನಾರ್‌ರವರ, ನಯಮ್ = ಸ್ಪೃಹಣೀಯವಾದ, ಪುಗೞ್ = ಸದ್ಗುಣಗಳು, ನಿಲತ್ತೈ = ಭೂಲೋಕದ ಚೇತನರೆಲ್ಲರನ್ನೂ, ಶೆಱುತ್ತು = ದುಃಖಾಕುಲರಾಗುವಂತೆ ಮಾಡಿ, ಉಣ್ಣುಮ್ = ತನ್ನ ವಶ ಮಾಡಿಕೊಂಡು ಹಿಂಸಿಸುತ್ತಿರುವ, ನೀಶಕ್ಕಲಿಯೈ = ನೀಚನಾದ ಕಲಿಪುರುಷನ, ನಿನೈಪ್ಪರಿಯ = ಯೋಚಿಸಲು ಸಾಧ್ಯವಾದ,

ಬಲತ್ತೈ = ಬಲವನ್ನು, ಶೆರುತ್ತುಮ್ = ನಾಶಪಡಿಸಿಯೂ, ಪಿರಂಗಿಯದಿಲ್ಲೈ = ಪ್ರಕಾಶಕ್ಕೆ ಬರಲಿಲ್ಲ. ಆದರೆ, ಎನ್ ಪೆಯ್ ವಿನೈ = ನನ್ನಿಂದ ಮಾಡಲ್ಪಟ್ಟ ಪಾಪಕೃತ್ಯಗಳು, ತೆನ್ಪುಲತ್ತಿಲ್ = ದಕ್ಷಿಣದಿಕ್ಕಿನಲ್ಲಿರುವ ಯಮಲೋಕದಲ್ಲಿ, ಪೊರಿತ್ತ = ಚಿತ್ರಗುಪ್ತನಿಂದ ಬರೆಯಲ್ಪಟ್ಟ, ಅಪ್ಪುತ್ತಗಚ್ಚುಮೈ = ಆ ಪುಸ್ತಕಗಳ ಭಾರವನ್ನೂ (ಭಂಡಾರವನ್ನು), ಪೋಕ್ಕಿಯಪಿನ್ = ಆ ಪಾಪಗಳೆಲ್ಲವೂ ಪುನಃ ಪ್ರಕಾಶಕ್ಕೆ ಬರದಂತೆ ಸುಟ್ಟು ಭಸ್ಮಮಾಡಿದ ನಂತರ, ನಲತ್ತೈಪ್ಪೊರುತ್ತದು = ಶ್ರೀ ರಾಮಾನುಜರ ಗುಣಗಳೂ ಪ್ರಕಾಶಕ್ಕೆ ಬಂದವು.

ತಾ :— ಈ ಭೂಲೋಕದಲ್ಲಿರುವ ಚೇತನರೆಲ್ಲರನ್ನೂ ವಿಪರೀತ ದುಃಖಕ್ಕೊಳಪಡಿಸಿ ಹಿಂಸಿಸುತ್ತಿರುವ ನೀಚನಾದ ಕಲಿಪುರುಷನ ಅಚಿಂತ್ಯವಾದ ಬಲವನ್ನು ಕುಂಠಿತಗೊಳಿಸಿ ನಾಶಪಡಿಸಿದಾಗ್ಯೂ ಎಂಬೆರುಮಾನಾರ್ರವರ ಅಪರಿಮೇಯವಾದ ಕಲ್ಯಾಣಗುಣಗಳು ಅಷ್ಟು ಪ್ರಕಾಶಕ್ಕೆ ಬರಲಿಲ್ಲ. ಆದರೆ ಅವು, ಪುನಃ ಯಾವಾಗ ಪ್ರಕಾಶಿಸುವುದು ಎಂದರೆ, "ನಾನು ಮಾಡಿದ ಪಾಪಕೃತ್ಯಗಳನ್ನು ಬರೆದಿಟ್ಟಿರುವ ಯಮಪುರಿಯಲ್ಲಿರುವ ಪುಸ್ತಕ ರಾಶಿಯನ್ನು ಪುನಃ ಪ್ರಕಾಶಕ್ಕೆ ಬರದಂತೆ ನಿಶ್ಶೇಷವಾಗಿ ದಹಿಸಿದನಂತರ ಆ ಮಹನೀಯರ ಪ್ರಭಾವ ಗುಣಗಳು ಪ್ರಕಾಶಿಸಿದವು." (ಅಂದರೆ ಇವರ ತತ್ತ್ವಹಿತವು ಪುರುಷಾರ್ಥ ಜ್ಞಾನೋಪದೇಶಗಳಿಂದ ಪಾಪಗಳು ಪರಿಹಾರವಾದದ್ದರಿಂದ ಇವರ ಗುಣಪ್ರಭಾವವು ಚೆನ್ನಾಗಿ ಪ್ರಕಾಶಿಸಿತು.) ಎನ್ನುತ್ತಾರೆ.

35. ನಯವೇನೊರುದೆಯ್ವಮ್ ನಾನಿಲತ್ತೇ ಶಿಲಮಾನಿಡತ್ತೈ
ಪ್ಪುಯಲೇಯೆನಕ್ಕವಿ ಪೋಟ್ರಿಶೆಯ್ಯೇನ್, ಪೊನ್ನರಂಗಮೆನ್ನಿಲ್
ಮಯಲೇ ಪೆರುಗುಮಿರಾಮಾನುಶನ್ ಮನ್ನು
ಮಾಮಲರ್ತ್ತಾಳ್
ಅಯರೇನ್, ಅರುವಿನೈ ಎನ್ನೈ ಎವ್ವಾರಿನ್ರಡರ್ಪ್ಪದುವೇ ||

ಅರ್ಥ :— ಒರುದೆಯ್ವಮ್ = ಬೇರೆ ಒಂದು ದೇವರನ್ನು (ರಾಮಾನುಜರನ್ನು ಬಿಟ್ಟು), ನಯವೇನ್ = ಆಸೆಪಡುವುದಿಲ್ಲ, ನಾನಿಲತ್ತೇ = ನಾಲ್ಕು ಕಡೆಯೂ ಸಮುದ್ರಗಳಿಂದ ಸುತ್ತಲ್ಪಟ್ಟಿರುವ ಈ ವಿಶಾಲವಾದ ಭೂಲೋಕ

ದಲ್ಲಿ, ಶಿಲಮಾನಿಡತ್ತೈ = ಕ್ಷುದ್ರರಾದ ಮನುಜರನ್ನು - ಪುಯಲೇಯೆನ = ಮೇಘಗಳೇ! ಎಂಬುದಾಗಿ (ಅಂದರೆ ಜಲತಭಾಗ ಭೇದವಿಲ್ಲದೆ ಫಲನಿರಪೇಕ್ಷ ವಾಗಿ ಉದಾರವಾಗಿ ವರ್ಷಿಸುವ ಮೇಘದಂತೆ) ಉದಾರರಾಗುವರೇ ಎಂದು- ಕವಿಪ್ಪೋತ್ತಿಶೆಯ್ಯೇನ್ = ಗೀತೆಗಳಿಂದ ಹಾಡಿ ಸ್ತುತಿಸುವುದಿಲ್ಲ, ಪೊನ್ನರಂಗಂ ಎನ್ನಿಲ್ — ಸುಂದರವಾದ, "ಶ್ರೀರಂಗ" ಎಂದು ಹೇಳಿದ ಮಾತ್ರಕ್ಕೆ, ಮಯಲೇ = ಭಕ್ತಿ ಪ್ರವಾಹವು - ಪೆರುಗುಮ್ = ಉಕ್ಕಿಬರುವ, ಇರಾಮಾ ನುಜನ್ = ಎಂಬೆರುಮಾನಾರ್ರವರ, ಮನ್ನು = ಒಂದಕ್ಕೊಂದು ಹೊಂದಿ ಕೊಂಡು ನಿತ್ಯವಾಗಿರುವ, ಮಾ = ಪರಮ ಪೂಜ್ಯವಾದ, ಮಲರ್ = ಪುಷ್ಪ ದೋಟಾದಿಯಲ್ಲಿರುವ, ತಾಳ್ = ಶ್ರೀಪಾದಗಳನ್ನು, ಅಯರೇನ್ = ಮರೆಯು ವುದಿಲ್ಲ, ಅರುವಿನೈ = ಕ್ರೂರವಾದ ಪಾಪಗಳು, ಇನ್ನು = ಹೀಗಿರುವಲ್ಲಿ, ಎನ್ನೈ = ನನ್ನನ್ನು - ಎವ್ವಾರು = ಯಾವ ವಿಧದಲ್ಲಿ - ಅಡರ್ಪ್ಪದು = ಬಾಧಿಸಬಲ್ಲುದು.

ತಾ :—ನಾನು ಈ ವಿಶಾಲವಾದ ಭೂಲೋಕದಲ್ಲಿರುವ ಮನುಷ್ಯರನ್ನು ಮೇಘದಂತೆ ಉದಾರಿಗಳೆಂದು ಸ್ತೋತ್ರಮಾಡಿ ಭಜಿಸುವುದಿಲ್ಲ. ಸುಂದರ ವಾದ ಶ್ರೀರಂಗ ಕ್ಷೇತ್ರದ ನಾಮೋಚ್ಚಾರಣೆಯಿಂದಲೇ ಭಕ್ತಿಪರವಶರಾಗಿ ಮೋಹಂಗತರಾಗುವ ಎಂಬೆರುಮಾನಾರ್ರವರ ಪರಸ್ಪರ ಸದೃಶವಾಗಿ ಕಮಲ ವನ್ನು ಹೋಲುವ ಪಾದಗಳ ಆಶ್ರಯವನ್ನು ಮರೆಯುವುದಿಲ್ಲ. ಹೀಗಿರುವಲ್ಲಿ ಕ್ರೂರವಾದ ಪಾಪಗಳು ನನ್ನನ್ನು ಯಾವ ವಿಧದಲ್ಲಿ ಬಾಧಿಸಬಲ್ಲವು. ಅಂದರೆ ಎಂಬೆರುಮಾನಾರ್ರ ಪಾದಗಳನ್ನು ನಾನು ಆಶ್ರಯಿಸಿ ಪಾಪದೋಷಗಳನ್ನು ನಿವಾರಿಸಿಕೊಂಡ ಮೇಲೆ ದೇವತಾಂತರಗಳನ್ನು ಆಶ್ರಯಿಸಿ ಸ್ತೋತ್ರಮಾಡದೇ- ಇವರನ್ನೇ ನಂಬಿ ಆಶ್ರಯಿಸಿದ ನಂತರ ಅವುಗಳು ಯಾವ ವಿಧದಲ್ಲಿಯೂ ನನ್ನನ್ನು ಬಾಧಿಸಲಾರವು ಎಂದು ಹೇಳುತ್ತಾರೆ.

**36.** ಅಡಲ್ ಕೊಣ್ಡ ನೇಮಿಯನಾರುಯಿರ್ ನಾದನ್,
ಅನ್ರಾರಣಚ್ಚೊಲ್
ಕಡಲ್ ಕೊಣ್ಡ ವೊಣ್ಪೊರುಳ್ ಕಣ್ಡಳಿಪ್ಪ, ಪಿನ್ನುಮ್
ಕಾಶಿನಿಯೋರ್

ಇಡರಿಙ್ ಕಣ್ ವೀೞ್ನ್ದಿಡತ್ತಾನು ಮವ್ವೊಣ್ ಪೊರುಳ್
ಕೊಂಡವರ್ ಪಿನ್
ಪಡರುಮ್ ಕುಣನ್ ಎಮ್ಮಿರಾಮಾನುಶನ್ ತನ್ ಪಡಿಯಿದುವೇ ||

ಅರ್ಥ:—ಅಡಲ್ ಕೊಣ್ಡ = ಶಕ್ತಿಯುಳ್ಳ, ನೇಮಿಯನ್ = ಸುದರ್ಶನ ಚಕ್ರವನ್ನು ಕೈಯಲ್ಲಿ ಹಿಡಿದಿರುವ ಆರ್ ಉಯಿರ್ = ಸಕಲ ಆತ್ಮಗಳಿಗೂ, ನಾಥನ್ = ಸ್ವಾಮಿಯಾದ ಭಗವಂತನು, ಅನ್ರು = ಅಂದು ಅಂದರೆ, ಭಾರತದ ಸಮರ ಮಧ್ಯದಲ್ಲಿ ಅರ್ಜುನನು ಶೋಕಾವಿಷ್ಟನಾಗಿ ಯುದ್ಧ ಮಾಡುವುದಿಲ್ಲವೆಂದು ಶಸ್ತ್ರಾಸ್ತ್ರಗಳನ್ನು ಬಿಸುಟು ದೀನನಾಗಿ ಕುಳಿತಾಗ - ಆರಣಚ್ಚೊಲ್ ಕಡಲ್ ಕೊಣ್ಡ = ವೇದಾಂತ ವಾಕ್ಯಗಳೆಂಬ ಸಾಗರದಲ್ಲಿ ಅಡಗಿರುವ, ಒಣ್ ಪೊರುಳ್ = ವಿಲಕ್ಷಣವಾದ ತತ್ವಾರ್ಥಗಳನ್ನೊಳಗೊಂಡು ಗೀತಾಶಾಸ್ತ್ರ ರೂಪದಿಂದ - ಕಣ್ಡು ಅಳಿಪ್ಪ — ಕೃಪೆಮಾಡಿ ಉಪದೇಶಿಸಿ ರಕ್ಷಿಸಿದ ನಂತರವೂ, ಪಿನ್ನುಮ್ ಕಾಶಿನಿಯೋರ್ = ಈ ಕಲಿಯುಗದಲ್ಲಿಯೂ, ಚೇತನರು, ಇಡರಿನ್ ಕಣ್ = ಈ ಸಂಸಾರವೆಂಬ ದುಃಖಸಾಗರದಲ್ಲಿ, ವೀೞ್ನ್ದಿಡ — ಬಿದ್ದು ಹೊರಳಾಡುತ್ತಿರುವವರನ್ನು ಕಂಡು - ತಾನುಮ್ = ಎಂಬೆರುಮಾನಾರ್ರವರೂ, ಅವ್ವೊಣ್ ಪೊರುಳ್ ಕೊಂಡು = ಆ ಶ್ಲಾಘ್ಯವಾದ ಗೀತಾಶಾಸ್ತ್ರಕ್ಕೆ ವ್ಯಾಖ್ಯಾನವನ್ನು ಮಾಡಿಯೂ, ಗೋಷ್ಠೀಪೂರ್ಣರಿಂದ ಗ್ರಹಿಸಿ ವಿಲಕ್ಷಣವಾದ ಚರಮ ಶ್ಲೋಕಾರ್ಥವನ್ನು ಕೊಂಡು, ಅವರ್ ಪಿನ್ ಪಡರುಮ್ ಗುಣನ್ = ಬಹಳ ಆತ್ರ್ರವಾದಿಯಿಂದ ಈ ಭೂಲೋಕದ ಜನರನ್ನೆಲ್ಲಾ ಹಿಂಬಾಲಿಸಿ ಆ ಮಹಾ ರಹಸ್ಯವಾದ ಚರಮಶ್ಲೋಕಾರ್ಥವನ್ನು ಎಲ್ಲರಿಗೂ ಭೂರಿ ದಾನಮಾಡಿದ ಪರಮಕೃಪಾಳುಗಳೂ ಉದಾರಿಗಳೂ ಆದ - ಎಮ್ ಇರಾಮಾನುಶನ್ = ಇಂಥಾ ಕಲ್ಯಾಣಗುಣ ಪರಿಪೂರ್ಣರಾಗಿ ತಮ್ಮ ದಿವ್ಯ ಮಂಗಳ ವಿಗ್ರಹವನ್ನು ಅನುಭವಿಸಲು ಕೃಪೆಮಾಡಿದ ಶ್ರೀರಾಮಾನುಜರ, ಪಡಿ ಇದುವೇ — ಸ್ವಭಾವವು ಇದೇ!

ತಾ:– ಆಶ್ರಿತ ವಿರೋಧಿಗಳಾದ ಪ್ರತಿಪಕ್ಷದವರಿಗೆಲ್ಲಾ ಭಯಂಕರ ಸ್ವರೂಪವಾದ ಸುದರ್ಶನ ಚಕ್ರವನ್ನು ಸದಾ ಕೈಯಲ್ಲಿ ಧರಿಸಿರುವ ಸರ್ವೇಶ್ವರನಾದ ಶ್ರೀಕೃಷ್ಣನು-ಕೌರವ ಪಾಂಡವರ ಭಾರತ ಯುದ್ಧದಲ್ಲಿ ಉಭಯ ಸೇನಾ

ಮಧ್ಯದಲ್ಲಿ ಅರ್ಜುನನು-ಶೋಕಮೋಹಾವಿಷ್ಟನಾಗಿ ಬಂಧುಗಳನ್ನು ಕೊಲ್ಲಲು ಹಿಂತೆಗೆದು ವಿಮುಖನಾಗಿ ಶಸ್ತ್ರಾಸ್ತ್ರಗಳನ್ನು ತ್ಯಜಿಸಿದಾಗ, ಸಮುದ್ರ ತಳ ಭಾಗದಲ್ಲಿ ಅಗೋಚರವಾಗಿ ಅಡಗಿರುವ ಮಹಾರತ್ನಗಳನ್ನು ತಂದುಕೊಟ್ಟು ಉಪಕರಿಸುವರಂತೆ, ವೇದಾಂತ ಸಮುದ್ರದಲ್ಲಿ ಗುಪ್ತವಾಗಿರುವ ಶ್ಲಾಘ್ಯವಾದ ರಹಸ್ಯಾರ್ಥಗಳನ್ನು 'ಶ್ರೀ ಗೀತಾಶಾಸ್ತ್ರ' ಮುಖೇನ ಉಪದೇಶಿಸಿದುದು, ಈ ಕಲಿಪ್ರಾಬಲ್ಯದಿಂದ ಈ ಭೂಲೋಕದ ಜನಗಳು ಸಂಸಾರ ಸಾಗರದಲ್ಲಿ ಮುಳುಗಿ ಒದ್ದಾಡುತ್ತಾ ದುಃಖಪಡುತ್ತಿರುವುದನ್ನು ಕಂಡು ಮರುಗಿ, ಸದರಿ ವೇದಾಂತ ಸಾರಾರ್ಥ ಸಂಗ್ರಹವಾದ ಶ್ರೀಗೀತಾರ್ಥವನ್ನು "ಗೀತಾಭಾಷ್ಯ"ದ ಮೂಲಕ, ಆಸೇತು ಹಿಮಾಚಲ ಪರ್ಯಂತವಾಗಿ ಚೇತನರನ್ನು ಹಿಂಬಾಲಿಸಿ ಸಂಚರಿಸಿ ಅವರಿಗೆ ಉಪದೇಶಿಸಿದರು. ನಮ್ಮ ಸ್ವಾಮಿ ರಾಮಾನುಜರ ಸ್ವಭಾವ ವಿಶೇಷವೇ ಇದು-ಎಂದು ಕೊಂಡಾಡುತ್ತಾರೆ.

37. ಪಡಿಕೊಣ್ಡ ಕೀರ್ತ್ತಿ ಇರಾಮಾಯಣಮೆನ್ನುಮ್ ಪತ್ತಿವೆಳ್ಳಮ್
ಕುಡಿಕೊಣ್ಡ ಕೋಯಿಲಿರಾಮಾನುಶನ್ ಗುಣಮ್
ಕೂರುಮ್, ಅನ್ಬರ್
ಕಡಿಕೊಣ್ಡ ಮಾಮಲರ್ತ್ತಾಳ್ ಕಲನ್ದುಳ್ಳಮ್ ಕನಿಯುಮ್
ನಲ್ಲೋರ್
ಅಡಿಕಣ್ಡು ಕೊಣ್ಡುಗನ್ದು, ಎನ್ನೈಯುಮಾಳವರ್ಕ್ಕಾಕ್ಕಿನರೇ ||

ಅರ್ಥ :— ಪಡಿಕೊಣ್ಡ ಕೀರ್ತಿ = ಭೂಲೋಕವನ್ನೆಲ್ಲಾ ವ್ಯಾಪಿಸಿರುವ ಯಶಸ್ಸುಳ್ಳ, ಇರಾಮಾಯಣಮೆನ್ನುಮ್ = ಶ್ರೀಮದ್ರಾಮಾಯಣವೆಂಬ - ಪತ್ತಿವೆಳ್ಳಮ್ = ಭಕ್ತಿಸಾಗರವು, ಕುಡಿಕೊಣ್ಡ = ನಿತ್ಯ ವಾಸಮಾಡುತ್ತಿರುವ, ಕೋಯಿಲ್ = ವಾಸಸ್ಥಾನವಾದ, ಇರಾಮಾನುಶನ್ = ಶ್ರೀರಾಮಾನುಜರ, ಗುಣಮ್ — ಗುಣವನ್ನು - ಕೂರುಮ್ = ಹೊಗಳುವ, ಅನ್ಬರ್ = ಭಕ್ತರ - ಕಡಿಕೊಂಡ = ಪರಿಮಳಯುಕ್ತವಾದ, ಮಾಮಲರ್ = ಮಹಿಮೆಯುಳ್ಳ, ಹೂವಿನಂತಿರುವ, ತಾಳ್ = ಪಾದಗಳಲ್ಲಿ - ಉಳ್ಳಮ್ ಕಲನ್ದು = ಮನಸ್ಸನ್ನು ಕೂಡಿಸಿ, ಕನಿಯುಮ್ ನಲ್ಲೋರ್ = ಪಕ್ವ ಫಲದಂತೆ ತತ್ವಜ್ಞಾನಪರಿಪೂರ್ಣರಾದ ಕೂರೇಶರಂತಹ ಸಜ್ಜನರು (ಶ್ರೀ ವೈಷ್ಣವರು), ಅಡಿ

ಕ್ಕಂಡುಕೊಂಡು = ಈ ಆತ್ಮವನ್ನು ಭಗವಂತನಿಗೆ ಶೇಷವೆಂದು, ಕಣ್ಡು ಕೊಂಡು ಇದೇ ಕಾರಣವಾಗಿ - ಉಗನ್ದು = ಸಂತೋಷಿಸಿ-ಸ್ವೀಕರಿಸಿ-ಎನ್ನೈ ಯುವರ್ = ನನ್ನನ್ನು ತಮ್ಮಂತೆ, ಅವರ್ ಕ್ಕು = ಎಂಬೆರುಮಾನಾರ್ರಿಗೇ - ಆಳಾಕ್ಕಿನರೇ = ದಾಸಭೂತನನ್ನಾಗಿ ಮಾಡಿದರು, ಅಂದರೆ ಶೇಷಭೂತನನ್ನಾಗಿ ಮಾಡಿದರು.

ತಾ :— ಈ ರೀತಿ ಆಶ್ರಯಣ ಸೌಕರ್ಯಾಪಾದಕಗಳಾದ ಕೃಪಾದಿಗುಣ ಗಳನ್ನು ನೀವು ತಿಳಿದ ನಂತರ ಅಲ್ಲವೇ 'ರಾಮಾನುಜರನ್ನು' ಆಶ್ರಯಿಸಿದ್ದು ನಿಮಗೆ ಈ ತಿಳಿವು. ಆ ವಿಧವಾದ ಪರಿಶ್ರಮ ಉಂಟಾದುದು ಹೇಗೆ? ಎಂದು ಕೆಲವರು ಕೇಳಲು ಉತ್ತರವಾಗಿ-'ನಾನು ಅದನ್ನು ಮೊದಲು ತಿಳಿದು ಆಶ್ರ ಯಿಸಿದವನಲ್ಲ - ಭೂಲೋಕದಲ್ಲಿ ಪ್ರಖ್ಯಾತಿಯಾಗಿ ಕೀರ್ತಿ ಪಡೆದಿರುವ "ರಾಮಾಯಣ" ವೆಂಬ ಭಕ್ತಿಸಾಗರವು-ಶ್ರೀರಾಮಾನುಜರ ಹೃದಯವನ್ನು ವಾಸಸ್ಥಾನವಾಗಿ ಮಾಡಿಕೊಂಡಿರುವದರಿಂದ ಅಂಥಾ ರಾಮಾನುಜರ ಕಲ್ಯಾಣಗುಣಗಳನ್ನು ಅರಿತು ಅನುಭವಿಸುವ ಪ್ರಿಯತಮರಾದ ಸಾಧು ಜನ ಗಳ ಪಾದಗಳಲ್ಲಿ ಅವಗಾಹಿಸಿ-ಅವುಗಳ ಸೌಲಭ್ಯಾದಿಗುಣಗಳನ್ನು ಅನುಭವಿ ಸುವರ ಸಜ್ಜರಾದ ಕೂರತ್ತಾಳ್ವಾರವರು, ಈ ಆತ್ಮ ಭಗವಂತನಿಗೆ ಶೇಷ ನಾದದ್ದು, ಎಂದು ತಮ್ಮ ಪರಸಮೃದ್ಧೈಕ ಪ್ರಯೋಜನವಾದ ಕೃಪಾ ಕಟಾಕ್ಷದಿಂದ ನನ್ನನ್ನು ನೋಡಿ ಅಂಗೀಕರಿಸಿ-ಶ್ರೀರಾಮಾನುಜರಿಗೆ ನನ್ನನ್ನು ದಾಸನನ್ನಾಗಿ ಮಾಡಿದರು. ಆದ್ದರಿಂದ ಅದನ್ನು ನಾನುತಿಳಿದೆನು ಎನ್ನುತ್ತಾರೆ.

**38.** ಆಕ್ಕಿಯಡಿಮೈನಿಲೈಪ್ಪಿತ್ತನೈ ಎನ್ನೈ ಯಿನ್ನವನೇ
ಪ್ಪೋಕ್ಕಿಪ್ಪುರತ್ತಿಟ್ಟದೆನ್ ಪ್ಪೊರುಳಾಮುನ್ನು, ಪುಣ್ಣಿಯರ್ ತಮ್
ವಾಕ್ಕಿಲ್ ಪಿರಿಯಾವಿರಾಮಾನುಶಾ ನಿನ್ನರುಳಿನ್ ವಣ್ಣಮ್,
ನೋಕ್ಕಿಲ್ ತೆರಿವರಿದಾಲ್, ಉರೈಯಾಯಿನ್ದನುಟ್ ಪ್ಪೊರುಳೇ ||

ಅರ್ಥ :— ಪುಣ್ಣಿಯರ್ ತಮ್ = ಭಗವನ್ನಿರ್ಹೇತುಕ ಕೃಪೆಗೆ ಪಾತ್ರ ರಾದ - ವಾಕ್ಕಿಲ್ ಪಿರಿಯಾ = ಮಾತಿನಲ್ಲಿ ಅಂದರೆ ಬಾಯಲ್ಲಿ ಎಡೆಬಿಡದೆ ವರ್ತಿಸುತ್ತಿರುವ - ಇರಾಮಾನುಶಾ = ಎಂಬೆರುಮಾನಾರ್ರವರೇ - ಎನ್ನೈ = ನನ್ನನ್ನು - ಇನ್ರು = ಈ ದಿವಸ - ಆಕ್ಕಿ = ದಾಸನನ್ನಾಗಿ ಮಾಡಿ (ಶೇಷತ್ವ

ದ್ದಲ್ಲಿ ಅನ್ವಯಿಸುವಂತೆ ಮಾಡಿ), ಅಡಿಮೈ ನಿಲ್ಪಿತ್ತನೈ = ಆ ಶೇಷತ್ವ ವಿಶೇಷಕಾಷ್ಠಾರೂಪವಾದ ಭಾಗವತ ಶೇಷತ್ವದಲ್ಲಿ ನೆಲೆಸುವಂತೆ ಮಾಡಿದಿರಿ. ಹೀಗಿರುವಾಗ, ಮುನ್ನೈ = ಪೂರ್ವಕಾಲದಲ್ಲಿ - ಅವಮೋಕ್ಕಿ = ನನ್ನ ಜನ್ಮಾದಿ ಜೀವಿತಕಾಲವು ವ್ಯರ್ಥವಾಗಿ ಕಳೆದುಹೋಗುವಂತೆ ನನ್ನನ್ನು ಬಿಟ್ಟು ಬಿಟ್ಟು-ಪುರತ್ತಿಟ್ಟದು = ಹೊರವ್ಯಾಪಾರಗಳಲ್ಲಿಯೇ ಪ್ರವಣನಾಗಿರುವಂತೆ ದೂರ ಇರಿಸಿದುದು, ಎಪ್ಪೊರುಳಾಲ್ = ಯಾವ ಉದ್ದೇಶದಿಂದ - ಕಾರಣವೇನು ಎಂದು ಕೇಳುತ್ತಾರೆ - ನಿನ್ನರುಳಿನ್ ವಣ್ಣಮ್ = ನಿಮ್ಮ ದಯೆಯ ಸ್ವಭಾವ ವನ್ನು - ನೋಕ್ಕಿಲ್ = ಕಂಡುಕೊಳ್ಳಬೇಕೆಂದರೆ - ತೆರಿವರಿದು = ತಿಳಿಯಲಶಕ್ಯವಾದುದು - ಅಲ್ = ಆಶ್ಚರ್ಯವು, ಇನ್ನುಮ್ ಪೊರುಳ್ = ಉಭಯ ವಿಭೂತಿ ವೃತ್ತಾಂತವನ್ನು ಸಾಕ್ಷಾತ್ಕರಿಸಿದವರಾದ ನೀವು-ಈ ಸೂಕ್ಷ್ಮಾರ್ಥ ವನ್ನು - ಉರೈಯಾಯ್ = ತಿಳಿಸಬೇಕು-ಎಂದು ಪ್ರಾರ್ಥಿಸುತ್ತಾರೆ.

ತಾ:— ಈ ವಿಧವಾಗಿ ಕೂರತ್ತಾಳ್ವಾರ್‍ರವರ ಮೂಲಕ ನನ್ನನ್ನು ಜ್ಞಾನಮಾರ್ಗಕ್ಕೆ ತಿರುಗಿಸಿ ಶೇಷತ್ವಕ್ಕೆ ಅಂಗೀಕರಿಸಿ, ಅದರ ಯಾಥಾತ್ಮ್ಯ ಸೀಮಾ ಭೂಮಿಯಾದ, ಚರಮ ಪರ್ವದಲ್ಲಿ, ಅತ್ಯಭಿನಿವಿಷ್ಟನಾಗುವಂತೆ ಮಾಡಿ, ಕರುಣಿಸಿದ ನೀವು "ಇದಕ್ಕೆ ಹಿಂದಿನ ಕಾಲದಲ್ಲೆಲ್ಲಾ ಆ ರಸವನ್ನು ದಾಸನಾದ ನಾನು ಅನುಭವಿಸುವಂತೆ ಮಾಡದೆ ವ್ಯರ್ಥವಾದ ವಿಷಯಾಂತರ ಗಳಲ್ಲಿ ಪ್ರವಣನಾಗಿಟ್ಟುದಕ್ಕೆ ಮೂಲಕಾರಣವೇನು ? ಈ ಜ್ಞಾನ ಭಕ್ತಿ ಮಾರ್ಗಗಳನ್ನು ಅರಿತು ಮಹಿತ ಭಾಗ್ಯವಂತರುಗಳ ಬಾಯಲ್ಲಿ ಎಡೆಬಿಡದೆ ಸರ್ವದಾ ಸ್ತುತಿಸಲ್ಪಡುವ ಸ್ವಾಮಿ ಎಂಬೆರುಮಾನಾರ್‍ರವರೇ ! ತಮ್ಮ ಕೃಪಾ ಕಟಾಕ್ಷದ ಒಳಗುಟ್ಟನ್ನು ಎಂಥಾ ಚತುರತೆಯುಳ್ಳವರಿಗೂ ತಿಳಿಯಲಶಕ್ಯ ವಾದುದಾಗಿದೆ. ತಾವೇ ಈ ಸೂಕ್ಷ್ಮಾರ್ಥವನ್ನು ತಿಳಿಸಬೇಕು." ಎಂದು ನೇರ ವಾಗಿ ನಿಂತು ಪ್ರಾರ್ಥಿಸುತ್ತಾರೆ.

**39.** ಪೊರುಳುಮ್ ಪುದಲ್ವರುಮ್ ಭೂಮಿಯುಮ್
ಪೂಙ್ಕುಳಲಾರುಮೆನ್ರು
ಮರುಳ್ ಕೊಣ್ಡಿಳೈಕ್ಕುಮ್ ನಮಕ್ಕುನ್ನೆಞ್ಜೇ,
ಮತ್ತುಳ್ಳಾರ್ ತರಮೋ

ಇರುಳ್ ಕೊಣ್ಡ ವೆನ್ದುಯರ್ ಮಾತ್ರಿತ್ತನ್ನೀಱಿಲ್ ಪೆರುಮ್
ಪುಕೞೇ|
ತೆರುಳುಮ್ ತೆರುಳ್ ತನ್ದು, ಇರಾಮಾನುಶನ್ ಶೆಯ್ಯುಮ್
ಶೇಮಙ್ಗಳೇ ||

ಅರ್ಥ :— ನೆಂಜೇ = ಎಲೈ ಮನಸ್ಸೇ, ಪೊರುಳುಮ್ = ಧನವೂ, ಪುದಲ್ವರುಮ್ = ಪುತ್ರರು, ಭೂಮಿಯುಮ್ = ಭೂಮಿಯೂ, ಪೂಙ್ ಕುೞಲಾರುಮ್ = ಸುಂದರವಾದ ಮತ್ತು ಹೂವಿನ ಸುವಾಸನೆಯಿಂದ ತುಂಬಿದ ಮೃದುವಾದ ಕೂದಲನ್ನುಳ್ಳ ಸ್ತ್ರೀಯರು - ಎನ್ರೇ = ಎಂದು ಮರುಳ್ ಕೊಣ್ಡು = ಮೋಹಗೊಂಡು, ಇಳೈಕ್ಕುಮ್ = ಹಂಬಲಿಸುವ, ನಮಕ್ಕು = ನಮಗೆ. ಇರುಳ್ ಕೊಣ್ಡ = ಅಜ್ಞಾನದಿಂದ ಕೂಡಿದ, ವೆಮ್ = ತೀಕ್ಷ್ಣವಾದ, ತುಯರ್ = ದುಃಖಗಳನ್ನು, ಮಾತ್ರಿ = ಹೋಗಲಾಡಿಸಿ, ತನ್ = ತನ್ನ, ಈಱಿಲ್ = ಅನಂತವಾದ, ಪೆರುಮ್ ಪುಗೞ್ = ಮಹತ್ತರವಾದ ಕಲ್ಯಾಣಗುಣಗಳನ್ನು, ತೆರುಳುಮ್ = ತಿಳಿದುಕೊಳ್ಳುವಹಾಗೆ, ತೆರುಳ್ ತನ್ದು = ತಿಳುವಳಿಕೆಯನ್ನು ಕೊಡುವವನಾಗಿ, ಇರಾಮಾನುಶನ್ ಶೆಯ್ಯುಮ್ = ಸ್ವಾಮಿ ರಾಮಾನುಜರು ಮಾಡುತ್ತಿರುವ, ಶೇಮಙ್ಗಳ್ = ರಕ್ಷಣಾ ವ್ಯಾಪಾರಗಳನ್ನು, ಮತ್ತುಳ್ಳಾರ್ ತರಮೋ = ಮತ್ತೆ ಯಾರಿಂದಲಾದರೂ ಮಾಡುವುದಕ್ಕೆ ಸಾಧ್ಯವೇ ?

ತಾ :— "[illegible] !" ಎಂದು, ಆ ಸೂಕ್ಷ್ಮಾರ್ಥವನ್ನು ತಿಳಿಯಪಡಿಸಬೇಕೆಂದು ಅಮುದನಾರ್ರವರು ಎದುರಿಗೇ ನಿಂತು ಕೇಳಿದರೂ ಸ್ವಾಮಿ ಎಂಬೆರುಮಾನಾರ್ರವರು ಒಂದು ಪ್ರತ್ಯುತ್ತರವೂ ಕೊಡದೆ ಇದ್ದುದರಿಂದ ಅದನ್ನು ಬಿಟ್ಟು, ಅವರು ಮಾಡಿದ ಉಪಕಾರ ಕೃತ್ಯಗಳನ್ನು ನೆನೆದು ಅವುಗಳನ್ನು ತಮ್ಮ ಸುತ್ತಮುತ್ತಲಿರುವ ಭಾಗವತರೊಂದಿಗೆ ಹೇಳಬೇಕೆಂದು ಇಚ್ಛಿಸಿದಾಗ, ಭಾಗವತರುಗಳೂ, ಅಮುದನಾರಿಂದ, ಸಂತೋಷಿಸಲ್ಪಟ್ಟ ಎಂಬೆರುಮಾನಾರ್ರ ಕಲ್ಯಾಣಗುಣಗಳ ವೈಭವಗಳನ್ನು ಪ್ರಸಂಗಿಸಿದ್ದುದರಿಂದ, ಅವರುಗಳೂ ಆ ಗುಣಗಳಲ್ಲಿ ಮುಳುಗಿ ಇವರ ಮಾತನ್ನು ಕೇಳದೇ ಪರವಶರಾಗಲು, ತಮ್ಮ ಅಂತರಂಗ ಮನಸ್ಸನ್ನು ಸಂಬೋಧಿಸಿ-

ಪುತ್ರ, ಧನ-ದಾರ, ಗೃಹ, ಕ್ಷೇತ್ರಾದಿಪ್ರಾಪ್ಯ ಪ್ರತಿಕೂಲಗಳಾದವುಗಳ ವಿಷಯದಲ್ಲಿ ಮುಳುಗಿ ಹೀನರಾದ ನಮಗೆ, ಅಜ್ಞಾನದಿಂದುಂಟಾದ ದುಃಖಪರಂಪರೆಗಳನ್ನು ಹೋಗಲಾಡಿಸಿ, ನಿತ್ಯವಾಗಿಯೂ, ನಿರವಧಿಕವಾಗಿಯೂ ಇರುವ ಎಂಬೆರುಮಾನಾರ್ರ ಕಲ್ಯಾಣಗುಣಗಳೆಲ್ಲಾ ತಿಳಿಯುವಂತೆ ತಿಳಿವಳಿಕೆಯನ್ನು ಕೊಟ್ಟು ಕೃಪೆಮಾಡಿದರು. ಇಂಥಾ ಸ್ವಾಮಿ ರಾಮಾನುಜರು ಮಾಡಿದ ರಕ್ಷಣಕಾರ್ಯಗಳನ್ನು, ಯಾರಿಂದಲೂ ತಿಳಿಯಲಶಕ್ಯವಾದುದು" ಎಂದು ಹೇಳುತ್ತಾರೆ (ಚರಮ ಪರ್ವನಾದ ಎಂಬೆರುಮಾನಾರ್ ಪಕ್ಕದಲ್ಲಿ ಕೃತಜ್ಞರಾಗಿ ಹೇಳುತ್ತಾರೆ.)

## 40. ಶೇಮನಲ್ ವೀಡುಮ್ ಪೊರುಳುಮ್ ದರುಮಮುಮ್ ಶೀರಿಯನಲ್

ಕಾಮ ಮುಮೆನ್ರಿವೈನಾನ್ಗೆನ್ಬರ್, ನಾನ್ಗಿನುಮ್ ಕಣ್ಣನುಕ್ಕೇ
ಆಮದುಕಾಮಮರಮ್ ಪೊರುಳ್ ವೀಡಿದರ್ಕೆನ್ರುರೈತ್ತಾನ್
ವಾಮನನ್ ಶೀಲನ್ ಇರಾಮಾನುಶನಿನ್ದ ಮಣ್ಮಿಶೈಯೇ ||

ಅರ್ಥ : — ಶೇಮಮ್ — ಕ್ಷೇಮರೂಪವಾಗಿರುವ, ನಲ್ ವೀಡುಮ್ = ವಿಲಕ್ಷಣವಾದ ಮೋಕ್ಷವೂ, ಪೊರುಳುಮ್ = ದ್ರವ್ಯವೂ, ದರುಮಮುಮ್ = ಧರ್ಮವೂ, ಶೀರಿಯ = ಶ್ಲಾಘ್ಯವಾದ, ನಲ್ ಕಾಮಮುಮ್ = ವಿಲಕ್ಷಣವಾದ ಕಾಮವೂ, ಎನ್ರು ಇವೈನಾನ್ಗು = ಎಂಬ ಈ ನಾಲ್ಕು ಪುರುಷಾರ್ಥಗಳು - ಎನ್ಬರ್ = ಎನ್ನುವರು, ನಾನ್ಗಿನುಮ್ = ಆ ನಾಲ್ಕುಗಳಲ್ಲಿ - ಕಾಮಮ್ = ಕಾಮವೊಂದೇ - ಕಣ್ಣನುಕ್ಕೇ ಆಮದು = ಆ ಶ್ರೀ ಕೃಷ್ಣನ ವಿಷಯವಾದುದೇ ಆಗಿರುವ ಪುರುಷಾರ್ಥವು - ಅರಮ್ = ಧರ್ಮವು, ಪೊರುಳ್ = ಸಂಪತ್ತು, ವೀಡು = ಮೋಕ್ಷವು - ಎಂಬುವ ಮೂರೂ, ಇದರ್ಕು ಎನ್ರು = ಈ ಕಾಮವೆಂಬ ಭಗವತ್ಸಂಶ್ಲೇಷರೂಪ ಪುರುಷಾರ್ಥಕ್ಕೆ "ಶೇಷ" ವೆಂದು, ವಾಮನನ್ ಶೀಲನ್ = ಅಪ್ರಾರ್ಥಿತವಾಗಿ ಎಲ್ಲರ ತಲೆಯಮೇಲೂ ತನ್ನ ಶ್ರೀ ಪಾದಗಳನ್ನಿಟ್ಟ ವಾಮನನಂತೆ ಸುಶೀಲವುಳ್ಳ, ಇರಾಮಾನುಶನ್ = ಎಂಬೆರುಮಾನಾರ್‌ವರು, ಇನ್ದ ಮಣ್ ಮಿಶೈ = ಈ ಭೂಲೋಕದಲ್ಲೆಲ್ಲಾ - ಉರೈತ್ತಾನ್ = ಉಪದೇಶಿಸಿ ಅನುಗ್ರಹಿಸಿದರು.

ತಾ :—ಅಪ್ರಾರ್ಥಿತನಾಗಿಯೇ-ಶ್ರೀಯಃಪತಿಯಾದ ನಾರಾಯಣನು ವಾಮನಾವತಾರವನ್ನೆತ್ತಿ ಸರ್ವರ ಶಿರಸ್ಸುಗಳ ಮೇಲೆ, ತನ್ನ ಶ್ರೀಪಾದವನ್ನು ಇಟ್ಟು ಉಪಕರಿಸಿದಹಾಗೆ. "ಈ ಶ್ರೀ ರಾಮಾನುಜರೂ ಕೂಡ, 'ಅಧಿಕಾರಿ, ಅನಧಿಕಾರಿ,' ಎಂಬ ಗುಣದೋಷವನ್ನೆಣಿಸದೆ ಎಲ್ಲ ಜನರಿಗೂ ಭಗವತ್ಸಂಶ್ಲೇಷಪೂರಿತವಾದ ಭಕ್ತಿಯುಂಟಾಗುವ ಹಾಗೆ ಸ್ವರೂಪಾನುರೂಪವಾದ ಅರ್ಥಗಳನ್ನುಪದೇಶಿಸಿ ಉಪಕರಿಸಿದರು" ಎಂದು ವಿದ್ಧರಾಗುತ್ತಾರೆ. ಮಹಾಕ್ಷೇಮಕರವೂ ಅತ್ಯಂತ ವಿಲಕ್ಷಣವೂ ಆದ, ಮೋಕ್ಷವೂ, ಸಂಪತ್ತೂ, ಧರ್ಮವೂ, ಶ್ಲಾಘ್ಯವಾದ, ವಿಲಕ್ಷಣರೂಪವಾದ ಭಗವತ್ಸಂಶ್ಲೇಷವೆಂಬ ಕಾಮವೂ, ಈ ನಾಲ್ಕು ಪುರುಷಾರ್ಥಗಳೆನ್ನಿಸಿಕೊಂಡರೂ ಕೂಡ, ಇವುಗಳಲ್ಲಿ ಮುಖ್ಯವಾದುದು, 'ಭಗವತ್ಸಂಶ್ಲೇಷವೆಂಬ ಶ್ರೀಕೃಷ್ಣಪರಮಾತ್ಮನಲ್ಲಿ ಭಕ್ತಿವಿಶೇಷವೇ' ಆ ಕಾಮವೆಂಬ ಪುರುಷಾರ್ಥವು. ಉಳಿದ ಧರ್ಮ, ಸಂಪತ್ತು, ಮೋಕ್ಷವೆಂಬ ಮೂರೂ ಆ ಕಾಮಕ್ಕೆ ಅಂಗಸಾಧನವೆಂದು ಶ್ರೀರಾಮಾನುಜರು ಉಪದೇಶಿಸಿ "ಭಕ್ತಿ" ಪುರುಷಾರ್ಥವನ್ನು ಕೊಂಡಾಡಿದರು. ಈ ವಿಶೇಷಾರ್ಥಗಳನ್ನು ಶ್ರೀಭಾಷ್ಯಾದಿ ಗ್ರಂಥಗಳ ಮುಖೇನ ಪ್ರಕಾಶಪಡಿಸಿರುತ್ತಾರಾಗಿ, ಆ ಶ್ರೀಹರಿ ವಾಮನನ ಸ್ವಭಾವವೇ ಇವರಿಗೂ ಸಲ್ಲುತ್ತದೆಂದು ಕೊಂಡಾಡುತ್ತಾರೆ.

**41.** ಮಣ್ಮಿಶೈಯೋನಿಗಳ್ ತೋರುಮ್ ಪಿರನ್ದು, ಎಂಗಳ್ ಮಾದವನೇ
ಕಣ್ಣುರನಿರ್ಕಿಲುಮ್ ಕಾಣಗಿಲ್ಲಾ ಉಲಗೋರ್ ಗಳೆಲ್ಲಾಮ್
ಅಣ್ಣಲಿರಾಮಾನುಶನ್ ವನ್ದು ತೋನ್ರಿಯವಪ್ಪೊಳುದೇ
ನಣ್ಣರು ಜ್ಞಾನಮ್ ತಲೈಕೊಣ್ಡು ನಾರಣರ್ಕಾಯಿನರೇ ||

ಅರ್ಥ :—ಎಂಗಳ್ = ನಮ್ಮ, ಮಾದವನೇ = ಶ್ರೀಯಃಪತಿಯಾದ ನಾರಾಯಣನೇ - ಮಣ್ಮಿಶೈ = ಈ ಭೂಲೋಕದಲ್ಲಿ, ಯೋನಿಗಳ್ ತೋರುಮ್ = ದೇವತಿರ್ಯಕ್ ಮನುಷ್ಯಾದಿ ನಾನಾ ಜಾತಿಗಳಲ್ಲಿ - ಪಿರನ್ದು = ಹುಟ್ಟಿ, ಕಣ್ಣುರನಿರ್ಕಿಲುಮ್ = ನೇತ್ರಗಳಿಗೆ ಗೋಚರವಾಗುವಂತೆ ನಿಂತರೂ, ಕಾಣಗಿಲ್ಲಾ = (ಇವನೇ ನಮ್ಮೆಲ್ಲರಿಗೂ ಶೇಷಿ) ಎಂದು, ನೋಡಲಾರದರಾದ (ತಿಳಿಯಲಾರದವರಾದ), ಉಲಗೋರ್ ಗಳೆಲ್ಲಾಮ್ = ಲೋಕದಲ್ಲಿರುವ ಸರ್ವರೂ, ಅಣ್ಣಲ್ ಇರಾಮಾನುಶನ್ = ಸ್ವಾಮಿ ಎಂಬೆರುಮಾನಾರ್ರವರು,

ವನ್ದು ತೋನ್ರಿಯಪ್ಪೊೞುದೇ = ಬಂದು ಅವತರಿಸಿದ ಹೊತ್ತಿನಲ್ಲೇ, ನಣ್ ಅರುವ ಞ್ಞಾನಮ್ = ಸ್ವಪ್ರಯತ್ನದಿಂದ ಹೊಂದಲಶಕ್ಯವಾದ ಜ್ಞಾನವು, ತಲೈಕ್ಕೊಣ್ಡು = ತಲೆದೋರಿ (ಅತಿಶಯವಾಗಿ ಬೆಳೆದು), ನಾರಣರ್ಕು = ಶ್ರೀಮನ್ನಾರಾಯಣನಿಗೆ, ಆಯಿನರೇ = ಶೇಷಭೂತರಾದರು.

ತಾ :— ಭೂಲೋಕದಲ್ಲಿರುವ, ಪ್ರಕೃತಿಪರವಶರಾದ ಚೇತನರುಗಳನ್ನು ರಕ್ಷಿಸುವುದಕ್ಕಾಗಿ, ಸರ್ವೇಶ್ವರನು, ಮನುಷ್ಯ-ತಿರ್ಯಕ್ ಮೊದಲಾದ ಜಾತಿಗಳನ್ನು ಪರಿಗ್ರಹಿಸಿ, ಎಲ್ಲರಿಗೂ ಸುಲಭವಾಗಿ ಕಣ್ಣಿಗೆ ಕಾಣುವಂತೆ ಅವತರಿಸಿ ಬಂದು ನಿಂತಿದ್ದರೂ (ರಾಮಕೃಷ್ಣಾದ್ಯವತಾರಗಳನ್ನು ಹೊಂದಿ) ಈ ಸರ್ವೇಶ್ವರನು ಸಾಧು (ಆಶ್ರಿತ) ರಕ್ಷಣಾರ್ಥವಾಗಿ ಅವತರಿಸಿದವನು ಎಂದು ತಿಳಿದುಕೊಳ್ಳಲಾರದೆ ಹೋದರು. ಅಂತಹ ಚೇತನರೇ! ನಮ್ಮಗಳಿಗೆ ಸ್ವಾಮಿಯಾದ ಎಂಬೆರುಮಾನಾರ್ರವರು ಅವತರಿಸಿದ ನಂತರ ಅವರ ಉಪದೇಶದಿಂದ-"ಶ್ರಿಯಃಪತಿಯಾದ ಶ್ರೀಮನ್ನಾರಾಯಣನೇ ನಮ್ಮಗಳಿಗೆ ಸರ್ವಪ್ರಕಾರದಲ್ಲೂ "ಶೇಷಿ" ನಾವು ಅವನಿಗೆ ಶೇಷಭೂತರು," ಎಂದು ತಿಳಿದುಕೊಂಡು ಜ್ಞಾನಿಗಳಾಗಿ ಅವನಿಗೆ ಆಳಾಗಿಬಿಟ್ಟರು. ಎಂದರೆ ತಿರುಮಂತ್ರ, ದ್ವಯಗಳಲ್ಲಿ ಹೇಳುವ ಅರ್ಥದಲ್ಲಿ ನಿಷ್ಠರಾದರು.

**42.** ಆಯಿೞೈಯಾರ್ ಕೊಂಗೈ ತಂಗುಮಕ್ಕಾದಲಳಱ್ಱೞುನ್ದಿ
ಮಾಯುಮೆನ್ನಾವಿಯೈ ವನ್ದೆಡುತ್ತಾನಿನ್ಱು, ಮಾಮಲರಾಳ್
ನಾಯಗನೆಲ್ಲಾವುಯಿರ್ಗಳ್ಕುಮ್ ನಾದನರಂಗನೆನ್ನುಮ್
ತೂಯವನ್ ತೀದಿಲಿರಾಮಾನುಶನ್ ತೊಲ್ಲರುಳ್ ಶುರನ್ದೇ ||

ಅರ್ಥ :—ಮಾಮಲರಾಳ್ = ಶ್ಲಾಘ್ಯವಾದ ಕಮಲದ ಕುಸುಮದಲ್ಲಿ ಅವತರಿಸಿದ ಲಕ್ಷ್ಮೀದೇವಿಗೆ, ನಾಯಗನ್ = ಒಡೆಯನಾದ, ಅರಂಗನ್ = ಶ್ರೀರಂಗನಾಥನು, ಎಲ್ಲಾ ಉಯಿರ್ ಗಳ್ಕುಮ್ = ಸಕಲ ಜೀವಾತ್ಮಗಳಿಗೂ, ನಾಥನ್ — ಸ್ವಾಮಿಯು, ಎನ್ನುಮ್ = ಎಂದುಪದೇಶಿಸಿದ, ತೂಯವನ್ = ಪರಿಶುದ್ಧರು, ತೀದು = ದೋಷಗಳು, ಇಲ್ = ಇಲ್ಲದವರೂ ಆದ, ತೊಲ್ ಅರುಳ್ = ತಮ್ಮ ಸ್ವಭಾವಿಕವಾದ ಕೃಪಾಗುಣವನ್ನು, ಶುರನ್ದು = ಹಸು ಹಾಲುಕರೆಯುವಂತೆ ಕರೆದು ಕೊಟ್ಟರಲ್ಲವೇ, ಮತ್ತು ಆಯ್ = ಸರ್ವಸ್ವಾಭರ

ಸಾಧಿಗಳಿಂದ ದೇಹ ದೋಷಗಳೊಂದೂ ಹೊರಗೆ ಕಾಣಿಸದ ಹಾಗೆ ಮರೆಮಾಚಿ ಚೇತನವರ್ಗವನ್ನೇ ಮರುಳು ಮಾಡತಕ್ಕವರಾದ್ದರಿಂದ ತಮಗೆ ಅನುರೂಪರಾದವರಿಗೆ ಮಾತ್ರ) ಒಲಿಯುವಂಥಾ, ಆಯ್ಯಿಳೈಯಾರ್ = ಆಭರಣ ಭೂಷಿತರಾಗಿ ಉಳ್ಳಯುವತಿಯರ, ಕೊಂಗೈ = ಸ್ತನದ್ವಯಗಳಲ್ಲಿ, ತಂಗುಮ್ = ಆಸಕ್ತನಾಗಿರುವ, ಅಕ್ಕಾದಲ್ = ಆ ಪ್ರೇಮದ - ಅಳತ್ತು = ಕೆಸರಿನಲ್ಲಿ ಅಳುನ್ದಿ = ಮುಳುಗಿ, ಮಾಯುಮ್ = ಹಾಳಾಗುತ್ತಿರುವ ಎನ್ ಆವಿಯೈ = ನನ್ನ ಜೀವಾತ್ಮನನ್ನು - ಇನ್ರು = ಇಂದು, ವನ್ದು = ತಾವಾಗಿಯೇ ಬಂದು, ಎಡುತ್ತನನ್ = ಉದ್ಧರಿಸಿದರು

ತಾ :— ರಮಣೀಯವಾದ ಆಭರಣಗಳಿಂದ ಅಲಂಕೃತರಾದ ತರುಣೀಮಣಿಗಳ ಸ್ತನಗಳಲ್ಲಿ ಬದ್ಧವಾದ ಪ್ರೀತಿಯಿಂದ ಮಗ್ನನಾಗಿ ಮೋಹವೆಂಬ ಅಜ್ಞಾನದಿಂದ ನಾಶಹೊಂದುತ್ತಿರುವ ನನ್ನ ಆತ್ಮನನ್ನು "ಶ್ರೀಯಃಪತಿಯಾಗಿ ಸರ್ವೇಶ್ವರನಾದ ಶ್ರೀ ರಂಗನಾಥನೇ ಸರ್ವಕಾಲಗಳಲ್ಲೂ ನಮ್ಮನ್ನು ರಕ್ಷಿಸುವ "ಶೇಷಿ" ಎಂದು ಉಪದೇಶಿಸಿದ ಜ್ಞಾನ ವೈಶದ್ಯ ಉಳ್ಳವರಾದ-ಆ ಶ್ರೀರಾಮಾನುಜರು, ಈಗ-ಆ ಲೌಕಿಕ ಜನರ ವಿಷಯದಲ್ಲಿ ತೋರಿಸಿದ ತಮ್ಮ ಕೃಪಾಗುಣವನ್ನು, ನನ್ನೊಬ್ಬನಲ್ಲಿಯೇ ಪ್ರವಾಹದಂತೆ ಹರಿಸಿ - ವಿಷಯಾಂತರಗಳಲ್ಲಿ ಪ್ರವರ್ತಿಸದಂತೆ, ನನ್ನನ್ನು ಉದ್ಧರಿಸಿದರು ಕಂಡಿರಾ ! ಎಂದು ಕೊಂಡಾಡುತ್ತಾರೆ.

43. ಶುರಕ್ಕುಮ್ ತಿರುವುಮುಣರ್ವುಮ್, ಶೊಲಪ್ಪುಗಿಲ್
ವಾಯಮುದಮ್
ಪರಕ್ಕುಮಿರುವಿನೈ ಪತ್ತರವೋಡುಮ್, ಪಡಿಯಿಲುಳ್ಳೀರ್
ಉರೈಕ್ಕಿನ್ರನನುಮಕ್ಕ್ಯಾನರಮ್ ಶೀರುಮುರುಕಲಿಯೈ
ತ್ತುರಕ್ಕುಮ್ ಪೆರುಮೈ ಇರಾಮಾನುಶನೆನ್ರು ಶೊಲ್ಲುಮಿನೇ ||

ಅರ್ಥ :— ಪಡಿಯಿಲುಳ್ಳೀರ್ = ಭೂಲೋಕದಲ್ಲಿರುವ ಜನಗಳೇ, ಯಾನ್ = ನಾನು, ಉಮಕ್ಕು = ನಿಮ್ಮಗಳಿಗೆ, ಉರೈಕ್ಕಿನ್ರನನ್ = ಉಪದೇಶಿಸುವೆನು, (ಅದರ ಮೇಲೆ) ಶೀರುಮ್ = ಕೋಪಗೊಂಡ ಉರು ಕಲಿಯೈ = ಸ್ಥಿರವಾಗಿ ಪ್ರಬಲವಾಗಿರುವ, ಕಲಿಯೆಂಬ ಕಾಲವನ್ನು

ತುರತ್ತುಮ್ = ದೂರವಾಗಿ ಹೋಗುವಂತೆ ಮಾಡುವ, ಪೆರುಮೈ = ಪ್ರಭಾವವುಳ್ಳ, ಇರಾಮಾನುಶನೆನ್ರು = ರಾಮಾನುಜ ಎಂದು, ಶೊಲ್ಲುಮಿನ್ = ಹೇಳಿರಿ, ಅದರಿಂದ, ತಿರುವುಮ್ = ಭಕ್ತಿಯಿಂದ ಮಾಡುವ ಸರ್ವವಿಧವಾದ ಕೈಂಕರ್ಯರೂಪವಾದ ಸಂಪತ್ತೂ, ಉಣರ್ವುಮ್ = ಅತ್ಯಂತ ಪಾರತಂತ್ರ್ಯ ಸ್ವರೂಪ ಜ್ಞಾನವೂ, ಶುರಕ್ಕುಮ್ = ಮೇಲಾಗಿ ವರ್ಧಿಸುವುವು-(ಅದನ್ನು), ಶೊಲಪ್ಪುಗಿಲ್ = ಹೇಳಲುದ್ಯುಕ್ತರಾದ ಕೂಡಲೇ, ವಾಯ್ = ಬಾಯಿಯಲ್ಲಿ, ಅಮುತಮ್ = ಸ್ವರೂಪೋಜ್ಜೀವನವಾದ ಅಮೃತವು, ಪರಕ್ಕುಮ್ = ಚಿಲುಮೆಯ ನೀರಿನಂತೆ ಉಕ್ಕುತ್ತ ವ್ಯಾಪಿಸುವುದು, ಇರುವಿನೈ = (ಅನುಭವದಿಂದಲೂ, ಪ್ರಾಯಶ್ಚಿತ್ತದಿಂದಲೂ ನಿವರಿಸಲಸಾಧ್ಯವಾದ) ಮಹಾ ಪಾಪಗಳು, ಪತ್ತರ = ಸವಾಸನವಾಗಿ (ಸಂಪೂರ್ಣವಾಗಿ ಅದರ ಗಂಧ ಸ್ವಲ್ಪವೂ ಇಲ್ಲದಂತೆ) ಬಿಟ್ಟು, ಓಡುಮ್ = ಓಡಿಯೇ ಹೋಗುವುವು.

ತಾ : - ಸ್ವಾಮಿ ಶ್ರೀ ರಾಮಾನುಜರು, ಇವರಲ್ಲಿದ್ದ ಯಾವ ದೋಷವನ್ನೂ ನೋಡದೆ ಇವರನ್ನು ತಮ್ಮವರನ್ನಾಗಿ ವಿಷಯೀಕರಿಸಿದ ಮೇಲೆ, ಅವರ ನಿರ್ಹೇತುಕ ಔದಾರ್ಯ, ಸೌಶೀಲ್ಯ, ವಾತ್ಸಲ್ಯಾದಿಗುಣಗಳಲ್ಲಿ ಮಗ್ನರಾಗಿ ತಮ್ಮಂತೆ ಜಗತ್ತಿನ ಸಂಸಾರಿಗಳೂ ಉಜ್ಜೀವಿಸಲಿ ಎಂಬ ಪರಸಮೃದ್ಧಿಯಿಂದ ಅವರುಗಳನ್ನು ಕುರಿತು ಸಂಬೋಧಿಸಿ ಹೀಗೆ ಉಪದೇಶಿಸುತ್ತಾರೆ. "ಈ ಸಂಸಾರದ ದುಃಖಾರ್ಣವದಲ್ಲಿ ಮಗ್ನರಾದ ನಿಮ್ಮಗಳಿಗೆ, ಆಚೆಯ ದಡವನ್ನು ಕಂಡ ನಾನು (ಸಂಸಾರ ನಿವೃತ್ತಿಯಿಂದ ಉಂಟಾಗತಕ್ಕ-ಪುರುಷಾರ್ಥವನ್ನು) ಹೇಳುವೆನು ಕೇಳಿರಿ. ಆ ಧರ್ಮದ್ವೇಷಿಯಾದ ಸರ್ವಪಾಪಗಳಿಗೂ ಮೂಲವಾದ "ಆ ಕಲಿ" ಎಂಬ ದುರ್ಜನವನ್ನು ಓಡಿಸುವ "ರಾಮಾನುಜ" ಎಂಬ ಚತುರಾಕ್ಷರೀ ಮಂತ್ರವನ್ನು ಪಠಿಸಿ. ಎಂದರೆ, ರಾಮಾನುಜ ಎಂದರೆ ಕಲಿಯಿಂದುಂಟಾಗುವ ದುರ್ಗತಿ, ದುಶ್ಚೇಷ್ಟೆಗಳು ದುಃಖಜಾಲಗಳೆಲ್ಲಾ ಸಂಪೂರ್ಣವಾಗಿ ನಾಶವಾಗುವುವು.

**44.** ಶೊಲ್ಲಾರ್ ತಮಿೞೊರುಮೂನ್ರುಮ್ ಶುರುತಿಕಳ್
ನಾನ್ಗುಮ್ ಎಲ್ಲೈ
ಯಿಲ್ಲಾವರನೆರಿಯಾವುಮ್ ತೆರಿನ್ದವನ್, ಎಣ್ಣರುಮ್ ಶೀರ್

ನಲ್ಲಾರ್ ಪರವ್ರು ಇರಾಮಾನುಶರ್ ತಿರುನಾಮಮ್ ನಮ್ಬಿ
ಕ್ಕಲ್ಲಾರಗಲಿಡತ್ತೋರ್, ಎದುಪೇರೆನ್ರು ಕಾಮಿಪ್ಪರೇ ॥

ಅರ್ಥ :—ಅಗಲಿಡತ್ತೋರ್ = ವಿಶಾಲವಾದ ಈ ಭೂಲೋಕದಲ್ಲಿರುವ ಚೇತನರು, ಪೇರೆದುಎನ್ರು = ಪುರುಷಾರ್ಥವು ಯಾವುದು ಎಂದು, ಕಾಮಿಪ್ಪರ್ = ತಿಳಿಯಲು ಇಚ್ಛಿಸುವರು, ಶೊಲ್ಲ್ ಅರ್ = ತತ್ವಾರ್ಥ ನಿರ್ಣಯ ಪರವಾದ ಶಬ್ದಗಳಿಂದ ತುಂಬಿರುವ, ಒರು = ಅದ್ವಿತೀಯವಾದ, ಮೂನ್ರು ತಮಿೞ್ಗನ್ = (ಇಯಲ್, ಇಶೈ, ನಾಟಕಮ್ ಎಂದು) ಮೂರು ಸಾವಿರ ತಮಿಳು ಪ್ರಬಂಧಗಳನ್ನೂ - ನಾನ್ಗು ಶುರುತಿಕಳುಮ್ = ನಾಲ್ಕು ವೇದಗಳನ್ನೂ, ಎಲ್ಲೈಯಿಲ್ಲಾ = ಕೊನೆ ಮೊದಲಿಲ್ಲದ ಅಸಂಖ್ಯಾತವಾದ, ಅರನೆರಿ = ಧರ್ಮಮಾರ್ಗಗಳನ್ನೂ (ಅವಧಿಯಿಲ್ಲದ), ಯಾವುಮ್ ತೆರಿನ್ದವನ್ = ಇವುಗಳನ್ನೆಲ್ಲಾ ಚೆನ್ನಾಗಿ ಪರಿಶೀಲಿಸಿದವರಾಗಿ, ಎಣ್ ಅರುಮ್ ಶೀರ್ = ಅನನ್ತ ಕಲ್ಯಾಣಗುಣಗಳಿಂದ ಕೂಡಿರುವ, ನಲ್ಲಾರ್ = ಸತ್ಪುರುಷರು, ಪರವುಮ್ = ಸ್ತೋತ್ರಮಾಡುವ, ಇರಾಮಾನುಶನ್ = ಶ್ರೀ ರಾಮಾನುಜರ, ತಿರುನಾಮಮ್ = ದಿವ್ಯನಾಮಧೇಯವನ್ನು - ನಮ್ಬಿ = ವಿಶ್ವಾಸದಿಂದ, ಕಲ್ಲಾರ್ = ಕಲಿತುಕೊಳ್ಳದೇ ಹೋದರಲ್ಲಾ! ಅವರ ದೌರ್ಭಾಗ್ಯವನ್ನು ನಾನು ಏನೆಂದು ಹೇಳಲಿ ಎಂದು ಮರುಕಗೊಳ್ಳುವರು.

ತಾ :—ಈ ಭೂಲೋಕದ ಚೇತನರುಗಳಿಗೆ, ಹಿಂದಿನ ಪದ್ಯದಲ್ಲಿ ನಿರೂಪಿಸಿರುವಂತೆ "ರಾಮಾನುಜ" ಎಂಬ ಚತುರಕ್ಷರೀ ಮಂತ್ರವನ್ನು ಉಪದೇಶಿಸಿದಾಗ್ಯೂ ಅದರಲ್ಲಿ ನಿಷ್ಠರಾಗದೆ, "ಪುರುಷಾರ್ಥವು ಯಾವುದು" ಎಂದು ಸಂದೇಹಪಟ್ಟುಕೊಂಡು ವ್ಯರ್ಥಕಾಲಕಳೆಯುತ್ತಿರುತ್ತಾರೆ ಮತ್ತು- "ಶಠಕೋಪವಾಙ್ಮಯಮ್" ಎಂದು ಹೇಳಲ್ಪಡುವ, ತಿರುವಾಯ್ಮೊಳಿ ಒಂದೂ ಮತ್ತು ಇದಕ್ಕೆ ಮೂರು ಪ್ರಕಾರವಾಗಿ, ಅಂಗಾಂಗಗಳಾಗಿರುವ, ತಿರುವಿರುತ್ತಮ್, ತಿರುವಾಶಿರಿಯಮ್, ಪೆರಿಯ ತಿರುವನ್ದಾದಿ ಎಂಬ ಮೂರು ವೇದಸಾರವಾದ ಇಯಲ್-ಇಶೈ-ನಾಟಕ, ವೆಂಬ ತ್ರಿವಿಧ ರಚನಾಸಂದರ್ಭಪೂರಿತವಾಗಿ ವಿಲಕ್ಷಣವಾಗಿರುವ ದ್ರಾವಿಡ ಪ್ರಬಂಧಗಳನ್ನೂ-ಋಗ್ಯಾದಿವೇದ ಚತುಷ್ಟಯವನ್ನೂ ಅಪರಿಮಿತವಾದ ಧರ್ಮಶಾಸ್ತ್ರಗಳನ್ನೂ ಪರಿಶೀಲನಮಾಡಿದವ

ರಾಗಿಯೂ, ಭಗವದವತಾರ ಪುರುಷರಾಗಿಯೂ, ವೇದಮಾರ್ಗ ಪ್ರತಿಷ್ಠಾಪನಾಚಾರ್ಯೋಭಯವೇದಾಂತಾಚಾರ್ಯರಾಗಿಯೂ, ಗಣಿಸಲಶಕ್ಯವಾದ ಕಲ್ಯಾಣಗುಣ ಪೂರ್ಣರಾಗಿರುವ, ಮತ್ತು ಆಳ್ವಾನ್, ಪಿಳ್ಳಾನ್, ಎಂಬಾರ್ ಮೊದಲಾದವರಿಂದ ಸದಾ ಸ್ತೋತ್ರಮಾಡಲ್ಪಟ್ಟವರಾದ - ರಾಮಾನುಜರ, ನಾಮಧೇಯವನ್ನು ವಿಶ್ವಾಸದಿಂದ ಒಂದುಸಲವಾದರೂ ಬಾಯಿಂದ ಹೇಳುವದಿಲ್ಲವಲ್ಲಾ - ಈ ಚೇತನರು ಎಂಥಾ ದೌರ್ಭಾಗ್ಯರು ಎಂದು ಈ ರಂಗನಾಯಕರು ಮರುಗುವರು.

**45.** ಪೇಱೊನ್ಱುಮತ್ತಿಲ್ಲೈ ನಿನ್ ಶರಣನ್ಱಿ, ಅಪ್ಪೇಱಳಿತ್ತ
ಱ್ಕಾಱೊನ್ಱುಮಿಲ್ಲೈ ಮತ್ತಚ್ಚರಣನ್ಱಿ, ಎನ್ಱಿಪ್ಪೊರುಳೈ
ತ್ತೇಱುಮವರ್ಕ್ಕುಮ್ ಎನಕ್ಕುಮ್ ಉನೈತ್ತನ್ದ ಶೆಮ್ಮೈ ಶೊಲ್ಲಾಲ್
ಕೂಱುಮ್ ಪರಮನ್ಱು, ಇರಾಮಾನುಶ ಮೆಯ್ಮ್ಮೈ
ಕೂಱಿಡಿಲೇ ||

ಅರ್ಥ :– ಇರಾಮಾನುಶಾ = ಸ್ವಾಮಿ ಎಂಪೆರುಮಾನಾರ್ರೇ! ನಿನ್ ಶರಣ್ ಅನ್ಱಿ = ನಿಮ್ಮ ಪಾದಗಳಲ್ಲದೆ, ಮತ್ತು ಪೇಱು = ಬೇರೆ ಪುರುಷಾರ್ಥವು, ಒನ್ಱುಮ್ ಇಲ್ಲೈ = ಯಾವದೊಂದೂ ಇಲ್ಲವು - ಅಪ್ಪೇಱು = ಆ ಪುರುಷಾರ್ಥವನ್ನು - ಅಳಿತ್ತಱ್ಕು = ಕೊಡುವುದಕ್ಕೆ, ಅಚ್ಚರಣ್ ಅನ್ಱಿ = ಆ ಶ್ರೀಪಾದಗಳಲ್ಲದೆ - ಮತ್ತು ಆಱು = ಬೇರೆ ಉಪಾಯವು - ಒನ್ಱುಮ್ ಇಲ್ಲೈ = ಒಂದೂ ಇಲ್ಲವು - ಎನ್ಱು ಇಪ್ಪೊರುಳೈ = ಎಂಬ ಈ ವಿಷಯಾರ್ಥವ ತತ್ವವನ್ನು, ತೇಱುಮವರ್ಕ್ಕುಮ್ = ವಿಶ್ವಾಸದಿಂದ ತಿಳಿದುಕೊಳ್ಳುವವರಿಗೆ - ಎನಕ್ಕುಮ್ = ನನಗೂ, ಉನ್ನೈ = ನಿಮ್ಮನ್ನು - ತನ್ದ ಶೆಮ್ಮೈ = ಉಪಕರಿಸಿ ಅನುಗ್ರಹಿಸಿದ ನಿಮ್ಮ ಆರ್ಜವ ಗುಣವನ್ನು - ಮೆಯ್ಮ್ಮೈ, ಕೂಱಿಡಿಲ್ = ವರ್ಣಿಸಲು (ಹೇಳಲು), ಪರಮನ್ಱು = ಎಂದಿಗೂ ಆಗುವುದಿಲ್ಲ (ಅಸಾಧ್ಯವು).

ತಾ :– "ಅಜ್ಞಾನಾದ ಚೇತನರ ಸ್ಥಿತಿಗತಿಗಳನ್ನು ನೋಡಿ ಸಂಕಟಪಟ್ಟು - ಅಂಥಾ ಅಜ್ಞರಲ್ಲಿ ಒಬ್ಬನಾದ ನನ್ನನ್ನು ನಿರ್ಹೇತುಕವಾಗಿ ವಿಷಯೀಕರಿಸಿ ತಮ್ಮ ದಿವ್ಯಪಾದಗಳೇ "ಉಪಾಯವೂ ಮತ್ತು ಉಪೇಯವೂ" ಎಂದು ನಂಬುವಂತೆ ಮಾಡಿದ ಉಪಕಾರ ಕೃತ್ಯವು ವಾಚಾನಗೋಚರವಾದುದು."

ಎಂಬುದಾಗಿ ಆ ಶ್ರೀ ರಾಮಾನುಜರ ವಿಷಯದಲ್ಲಿ ಅತ್ಯಂತ ಪಾರತಂತ್ರ್ಯವನ್ನು ತೋರ್ಪಡಿಸುತ್ತಾರೆ.

46. ಕೂರುಮ್ ಶಮಯಂಗಳಾರುಮ್ ಕುಲೈಯ ಕುವಲಯತ್ತೇ
ಮಾರನ್ ಪಣಿತ್ತ ಮರೈಯುಣರ್ನ್ದೋನೈ, ಮದಿಯಿಲಿಯೇನ್
ತೇರುಮ್ಪಡಿಯೆನ್ ಮನಮ್ ಪುಗುನ್ದಾನೈತ್ತಿಶೈಯನೈತ್ತುಮ್
ಏರುಮ್ ಗುಣನೈ, ಇರಾಮಾನುಶನೈ ಯಿರೈಞ್ಜಿನಮೇ ||

ಅರ್ಥ:—ಕೂರುಮ್ = ಪ್ರಮಾಣವಿಲ್ಲದೆಯೇ ಬಾಯಿಗೆ ಬಂದದನ್ನೇ ಹೇಳುತ್ತಿರುವ, ಶಮಯಂಗಳ್ ಆರುಮ್ = ವೇದಬಾಹ್ಯಗಳಾದ ಆರು ಮತಗಳೂ, ಕುಲೈಯ = ನಶಿಸಿಹೋಗುವಂತೆ, ಕುವಲಯತ್ತೇ = ಭೂಲೋಕದಲ್ಲಿ, ಮಾರನ್ ಪಣಿತ್ತ = ನಮ್ಮಾಳ್ವಾರವರು ಪ್ರಸಾದಿಸಿದ, ಮರೈ = (ದ್ರಾವಿಡ) ವೇದವನ್ನು (ತಿರುವಾಯ್ ಮೊಳಿಯನ್ನು), ಉಣರ್ನ್ದೋನೈ = ಅರ್ಥದೊಡನೆ ತಿಳಿದವರನ್ನು, ಮದಿಯಿಲಿಯೇನ್ = ಪ್ರಾಪ್ಯ(ಪ್ರಾಪಕಗಳೆರಡೂ ತಾವೇ ಎಂಬುದಾಗಿ ವಿಶ್ವಸಿಸುವ ಹಾಗೆ ತಿಳಿಯುವಂತೆ), ಅಜ್ಞಾನನಾದ ಎನ್ ಮನಮ್ = ನನ್ನ ಮನಸ್ಸಿನೊಳಗೆ, ಪುಗುನ್ದಾನೈ = ಪ್ರವೇಶಿಸಿದ, ತಿಶೈ ಅನೈತ್ತುಮ್ = ಸಮಸ್ತ ದಿಕ್ಕುಗಳಲ್ಲೂ, ಏರುಮ್ ಗುಣನೈ = ವ್ಯಾಪಿಸಿರುವ ಗುಣ (ಕೀರ್ತಿ) ವನ್ನುಳ್ಳ, ಇರಾಮಾನುಶನೈ = ನಮ್ಮ ಸ್ವಾಮಿಯಾದ ರಾಮಾನುಜರನ್ನು, ಇರೈಞ್ಜಿನಮ್ ಏ = ಆಶ್ರಯಿಸಿದೆವು-ಅಲ್ಲವೇ.

ತಾ:—ಪ್ರಮಾಣಗಳ ಆಧಾರವಿಲ್ಲದೆ ಕೇವಲ ಯುಕ್ತಿಯನ್ನವಲಂಬಿಸಿ ತೋರಿದಂತೆ ಹೇಳುವ, ಆರು ಬಾಹ್ಯ ಕುದೃಷ್ಟಿಮತಗಳೂ ರೂಢಮೂಲವಾಗಿ ನಶಿಸುವಂತೆ ಈ ಭೂಲೋಕದಲ್ಲಿ ಅವತರಿಸಿ ನಮ್ಮಾಳ್ವಾರ್‌ರವರು ಅನುಗ್ರಹಿಸಿದ "ತಿರುವಾಯ್ಮೊಳಿ" ಎಂಬ ದ್ರಾವಿಡ ವೇದದ ಸಾರಾರ್ಥವನ್ನು ತಿಳಿದು, ಉಪದೇಶಿಸಿ ಪ್ರಚಾರಮಾಡಿ, ದಿಗಂತ ವಿಶ್ರಾಂತ ಕೀರ್ತಿಯನ್ನು ಪಡೆದವರಾಗಿ ಮಂದಮತಿಯಾದ ನನ್ನ ಮನಸ್ಸಿನಲ್ಲಿಯೂ ಹೊಕ್ಕು ನನಗೆ ಜ್ಞಾನೋದಯವನ್ನುಂಟುಮಾಡಿ ಕರುಣಿಸಿದ ನನ್ನ ಸ್ವಾಮಿಯಾದ ಶ್ರೀ ರಾಮಾನುಜಾಚಾರ್ಯರನ್ನು ಸಾಷ್ಟಾಂಗ ಪ್ರಣಾಮಪೂರ್ವಕವಾಗಿ ನಮಸ್ಕರಿಸಿ ಮಂಗಳಾಶಾಸನವನ್ನು ಮಾಡಿ ಆಶ್ರಯಿಸಿದೆನು—ಎಂದು ಕೊಂಡಾಡುತ್ತಾರೆ.

47. ಇಱೈಞ್ಜಪ್ಪಡುಮ್ ಪರನೀಶನರಂಗನೆನ್ರು, ಇವ್ವುಲಗ
ತ್ತಱಮ್ ಶೆಪ್ಪುಮಣ್ಣಲಿರಾಮಾನುಶನ್, ಎನ್ನರುವಿನೈಯಿನ್
ತಿಱಮ್ ಶೆಱ್ಱಿರವುಮ್ ಪಗಲುಮ್ ವಿಡಾದೆನ್ದನ್ ಶಿನ್ದೈಯುಳ್ಳೇ
ನಿಱೈನ್ದೊಪ್ಪಱವಿರುನ್ದಾನ್, ಎನಕ್ಕಾರುಮ್ ನಿಗರಿಲ್ಲೈಯೇ ||

ಅರ್ಥ:—ಇಱೈಞ್ಜಪ್ಪಡುಮ್ = ಸರ್ವ ಸಮಾಶ್ರಯಣೀಯನಾದ ಪರನ್ = ಸರ್ವಾಧಿಕನಾದ, ಈಶನ್ = ಸರ್ವೇಶ್ವರನು, ಅರಂಗನ್ ಎನ್ರು = ಶ್ರೀ ರಂಗನಾಥನು ಎಂದು, ಇವ್ವುಲಗತ್ತು = ಈ ಲೋಕದಲ್ಲಿ, ಅಱಮ್ ಶೆಪ್ಪುಮ್ = ಸಾಕ್ಷಾತ್ತಾಗಿ ಧರ್ಮವನ್ನು ಬೋಧಿಸುವ - ಅಣ್ಣಲ್ = ಸ್ವಾಮಿಯಾದ, ಇರಾಮಾನುಶನ್ = ಶ್ರೀ ರಾಮಾನುಜರು. ಎನ್ = ನನ್ನ, ಅರು = (ಅನುಭವದಿಂದಲೂ ಪ್ರಾಯಶ್ಚಿತ್ತದಿಂದಲೂ ಹೋಗಲಾಡಿಸಲಶಕ್ಯವಾದ) ಕ್ರೂರವಾದ, ವಿನೈಯಿನ್ = ಪಾಪಗಳ, ತಿಱಮ್ = ಸಮೂಹಗಳನ್ನೆಲ್ಲಾ, ಶೆಱ್ಱು = ನಾಶಗೊಳಿಸಿ, ಇರವುಮ್ ಪಗಲುಮ್ = ರಾತ್ರಿ ಹಗಲೂ, ವಿಡಾದು = ಬಿಡದೆ, ಎನ್ ತನ್ ಶಿನ್ದೈಯುಳ್ಳೇ ನಿಱೈನ್ದು = ನನ್ನ ಮನಸ್ಸಿನಲ್ಲಿಯೇ ಅಸಂಕುಚಿತವಾಗಿ ವ್ಯಾಪಿಸಿ, ಒಪ್ಪು ಅಱ = ಈ ವಾತ್ಸಲ್ಯಕ್ಕೆ ಯಾವುದೂ ಸದೃಶವಿಲ್ಲದಂತೆ, ಇರುನ್ದಾನ್ = ಇದ್ದರು. ಆದುದರಿಂದ, ಎನಕ್ಕು = ನನಗೆ, ಯಾರುಮ್ = ಯಾರೂ - ನಿಗರ್ = ಸಮಾನರು ಇಲ್ಲೈಯೇ = ಇಲ್ಲ.

ತಾ :—ಲೋಕದವರೆಲ್ಲರನ್ನೂ ಸಂಬೋಧಿಸಿ, "ಸರ್ವಸಮಾಶ್ರಯಣೀಯನೂ, ಸರ್ವಸ್ಮಾತ್ ಪರನೂ, ಸರ್ವೇಶ್ವರನೂ ಆದ-ಶ್ರೀ ರಂಗನಾಥನನ್ನು ನೀವೆಲ್ಲರೂ ಆಶ್ರಯಿಸಿರಿ; ನಿಮಗೆ ಒಳ್ಳೆಯದಾಗುವುದು. ಎಂದು ಅವರಿಗೆ ಸಿದ್ಧ (ಸಾಕ್ಷಾತ್) ಧರ್ಮವನ್ನು ಉಪದೇಶಿಸಿ ಉಪಕರಿಸಿದ ಸ್ವಾಮಿ ರಾಮಾನುಜರು ನನ್ನ ಸಕಲಪಾಪಗಳನ್ನು ನಾಶಪಡಿಸಿ (ಹೋಗಲಾಡಿಸಿ), ದಿನರಾತ್ರಿಗಳೆಂಬ ವ್ಯತ್ಯಾಸವಿಲ್ಲದೆ ಸದಾ ನನ್ನ ಹೃದಯದಲ್ಲಿ ಸುಪ್ರತಿಷ್ಠಿತರಾಗಿರುತ್ತಾರೆ. ಆದುದರಿಂದ ನನ್ನಂತಹ ಭಾಗ್ಯಶಾಲಿಗಳು ಯಾರೂ ಇಲ್ಲ" ವೆಂದು ಹೇಳಿ ರಾಮಾನುಜರ ಅಸದೃಶವಾತ್ಸಲ್ಯವನ್ನು ಕೊಂಡಾಡುತ್ತಾರೆ.

48. ನಿಗರಿನ್ರಿ ನಿನ್ರವೆನ್ನೀಶತೈಕ್ಕು, ನಿನ್ನರುಳಿನ್ಗಣನ್ರಿ
ಪುಗಲೊನ್ರುಮಿಲ್ಲೈಯರುಟ್ಕುಮಃದೇಪುಗಲ್,
ಪುನ್ಮೈಯಿಲೋರ್

ಪಗರುಮ್ ಪೆರುಮೈಯಿ ರಾಮಾನುಶಾ ಇನಿ ನಾಮ್ ಪಳುದೇ
ಅಗಲುಮ್ ಪೊರುಳೆನ್, ಪಯನಿರುವೋಮುಕ್ಕು
ಮಾನಪಿನ್ನೇ ||

ಅರ್ಥ :—ನಿಗರ್ ಇನ್ರಿ ನಿನ್ರ = ಉಪಮಾನರಹಿತನಾಗಿರುವ-ಎನ್ = ನನ್ನ, ನೀಶತ್ತೈಕ್ಕು — ನನ್ನ ಕೆಟ್ಟ ಸ್ವಭಾವಕ್ಕೆ-ಉನ್ ಅರುಳ್ ಕಣ್ ಅನ್ರಿ = ನಿಮ್ಮ ಕೃಪೆಯುಲ್ಲದೆ, ಒನ್ರುಪುಗಲ್ ಇಲ್ಲೈ = ಬೇರೊಂದು ಆಸರೆಯಿಲ್ಲ. ಅರುಳುಕ್ಕುಮ್ = ನಿಮ್ಮ ಕೃಪಾಗುಣಕ್ಕೂ, ಅಹ್ದೇ ಪುಗಲ್ = ಆ ನನ್ನ ದುಃಸ್ವಭಾವವೇ ಆಶ್ರಯವು, ಪುನ್ಮೈಯಿಲೋರ್ = ದೋಷಸಂಬಂಧವಿಲ್ಲದವರು (ನಿತ್ಯಮುಕ್ತರು), ಪಗರುಮ್ = ಸ್ತುತಿಸತಕ್ಕ, ಪೆರುಮೈ = ಮಹಿಮೆಯುಳ್ಳ, ಇರಾಮಾನುಶಾ = ಎಲೈ ಸ್ವಾಮಿ ಎಂಬೆರುಮಾನಾರ್ರೇ - ಇರುವೋಮುಕ್ಕುಮ್ = ಈ ನಮ್ಮಿಬ್ಬರಿಗೂ, ಪಯನಾನಪಿನ್ನೆ = ಹೀಗೆ ಪ್ರಯೋಜನವಾದಮೇಲೆ, (ನನಗೆ ಸ್ವರೂಪಲಾಭವೂ ನಿಮಗೆ ಗುಣ ಲಾಭವೂ ಕೈಗೂಡಿದಮೇಲೆ), ನಾಮ್ = ನಾವು, ಇನಿ = ಇನ್ನುಮೇಲೆ-ಪಳುದೇ = (ಸುಮ್ಮನೆ) ವ್ಯರ್ಥವಾಗಿ, ಅಗಲುಮ್ ಪೊರುಳ್ ಎನ್ = ಅಗಲಿರುವುದರಿಂದ ಪ್ರಯೋಜನವೇನು ? ಏನೂ ಇಲ್ಲವೆಂದು ಭಾವ.

ತಾ :—ಹಿಂದಿನ ಪದ್ಯದಲ್ಲಿ "ಇಂರಾನುಶನ್ ಇರವುಮ್ ಪಗಲುಮ್ ವಿಡಾದೆನ್ ದನ್ ಶಿನ್ದೈಯುಳ್ಳೇ ನಿರೈನ್ದು ಒಪ್ಪರ ಇರುನ್ದಾನ್, ಎನರುಮ್ ನಿಕ್ಕಾರಿಲ್ಲೈ" ಎಂದು ಹೇಳಿದ ಕೂಡಲೇ ಎಂಬೆರುಮಾನಾರ್ರವರು ಇವರನ್ನು ನೋಡಿ "ನೀವು ನಮ್ಮನ್ನು ಬಿಟ್ಟು ಕಾಲಾಂತರದಲ್ಲಿ ಬೇರೊಂದು ವಿಷಯವನ್ನು ಆದರಿಸಿದರೆ, ನಾವು ನಿಮ್ಮನ್ನು ಬಿಟ್ಟು ಬೇರೊಂದು ವಿಷಯದಲ್ಲಿ ಆಸಕ್ತರಾದರೆ - ನಮ್ಮ ನಿಮ್ಮ ಹರ್ಷವು ನೆಲೆಯಾಗಿ ನಿಲ್ಲದೇ ಹೋಗುವುದು" ಎಂದು ಹೇಳಲು, ಅಮುದನಾರ್ರು ಹೀಗೆ ಬದಲು ಮಾತು ಹೇಳುತ್ತಾರೆ. "ನನ್ನ ನೈಚ್ಯಕ್ಕೆ ನಿಮ್ಮ ಕೃಪೆಯೂ, ಆ ತಮ್ಮ ಕೃಪೆಗೆ ನನ್ನ ನೈಚ್ಯವೂ ಪರಸ್ಪರ ಆಶ್ರಯವನ್ನು ಪಡೆದಮೇಲೆ ಇವುಗಳಿಗೆ ಬೇರೊಂದು ಗತಿಯೇ ಇಲ್ಲ. ಆದುದರಿಂದ ನಾವು ಅಗಲಿರುವಿಕೆಗೆ ಕಾರಣವೂ ಇಲ್ಲ ಮತ್ತು ಅದರಿಂದ ಪ್ರಯೋಜನವೂ ಇಲ್ಲ" ಎಂದು ಹೇಳುತ್ತಾರೆ.

**49.** ಆನದುಶೆಮ್ಮೈಯರನೆರಿ ಪೊಯ್‌ಮ್ಮೈ, ಅರುಶಮಯಮ್
ಪೋನದು ಪೊನ್ರಿಯಿರನ್ದದುವೆಮ್‌ಕಲಿ, ಪೂಂಕಮಲ
ತ್ತೇನದಿಪಾಯ್‌ವಯಲ್ ತೆನ್ನರಂಗ್‌ಕಳಲ್ ಶೆನ್ನಿವೈತ್ತು
ತಾನದಿಲ್ ಮನ್ನುಮ್, ಇರಾಮಾನುಶನಿತ್ತಲತ್ತುದಿತ್ತೇ ||

ಅರ್ಥ:— ಪೂ ಕಮಲ = ಸುಂದರವಾದ ತಾವರೆ ಪುಷ್ಪದಲ್ಲಿರುವ ಕುಸುಮದಲ್ಲಿನ, ತೇನದಿ = ಮಧು ಪ್ರವಾಹವು, ಪಾಯ್ = ಹರಿಯುವ, ವಯಲ್ = ಹೊಲ ಬಯಲುಗಳಿಂದ, ತೆನ್ ಅರಂಗನ್ = ಸುಂದರವಾದ ಈ ಶ್ರೀರಂಗ ಕ್ಷೇತ್ರದಲ್ಲಿ ಶಯನಿಸಿರುವ ಶ್ರೀ ರಂಗನಾಥಸ್ವಾಮಿಯು, ಕಳಲ್ = ದಿವ್ಯ ಪಾದಗಳನ್ನು, ಶೆನ್ನಿ = ಶಿರಸ್ಸಿನಲ್ಲಿ, ವೈತ್ತು = ಇಟ್ಟುಕೊಂಡು, ಅದಿಲ್ ತಾಮ್ ಮನ್ನುಮ್ = ಅದರಲ್ಲೇ ತಾವು ನಿತ್ಯ ಸಂಶ್ಲೇಷಯುಕ್ತರಾಗಿ ಮಗ್ನರಾಗಿರುವ, ಇರಾಮಾನುಶನ್ = ಸ್ವಾಮಿ ರಾಮಾನುಜರು, ಇತ್ತಲತ್ತು ಉದಿತ್ತು = ಈ ಭೂಲೋಕದಲ್ಲಿ ಅವತರಿಸಿದ ನಂತರ, ಶೆಮ್ಮೈ ಅರನ್ ನೆರಿ = ನಿಜವಾದ ಧರ್ಮಮಾರ್ಗವು. ಆನದು = ಮತ್ತೆ ಹಿಂದಿನಂತೆ ಸುಪ್ರತಿಷ್ಠಿತವಾಯಿತು, ಪೊಯ್‌ಮ್ಮೈ = ವೇದ ಸಮ್ಮತವಲ್ಲದ್ದರಿಂದ ಅಸತ್ಯವಾದ, ಅರುಶಮಯಮ್ = ಆರು ಬಾಹ್ಯಮತಗಳೂ, ಪೊನ್ರಿ = ನಾಶವಾಗಿ, ಪೋನದು = ಹೋದವು. ವೆಮ್ = ಅತ್ಯಂತ ಕ್ರೂರವಾದ, ಕಲಿ = ಈ ಕಲಿಯುಗದ, ದುರ್ಮಾರ್ಗಗಳು (ಪಾಪಕೃತ್ಯಗಳು), ಇರನ್ದದು = ಸಂಪೂರ್ಣವಾಗಿ ನಾಶವಾಯಿತು.

ತಾ: — ಎಂಬೆರುಮಾನಾರ್, ಕೃಪಾ ಕಟಾಕ್ಷದಿಂದ ಅಮುದನಾರ್‌ರವರ ಪ್ರಾಪ್ತಿ ಪ್ರತಿ ಬಂಧಕಗಳನ್ನೆಲ್ಲಾ ಹೋಗಲಾಡಿಸಿ ತಮ್ಮ ಹೃದಯದಲ್ಲಿ ನಿರಂತರ ವಾಸಮಾಡುತ್ತಿರುವ ಮಹದುಪಕಾರದಿಂದ ಬಂದ ಪ್ರೀತಿ ಪ್ರಕರ್ಷವು ಯಾವಾಗಲೂ ನೆಲೆಯಾಗಿ ನಿಲ್ಲುವುದೋ ಎಂದು ಸಂದೇಹಪಟ್ಟುಕೊಂಡಿರುವ ಕಾಲಕ್ಕೆ ಅವರನ್ನು ಕುರಿತು ಆ ಪ್ರೀತಿ ಪ್ರಕರ್ಷಕ್ಕೆ ಚಾಂಚಲ್ಯ ಹೇತುವು ಇಲ್ಲ ಎಂದು ಹಿಂದೆ ತಿಳಿಸಿ ಈ ಪದ್ಯದಲ್ಲಿ ಸ್ವಾಮಿ ರಾಮಾನುಜರು ಅವತರಿಸಿದ ಮೇಲೆ ವೇದಮಾರ್ಗವು ಸುಪ್ರತಿಷ್ಠಿತವಾಯಿತು. ಧರ್ಮವು ನಿಜವಾಗಿ ನಿಂತಿತು, ಬಾಹ್ಯ ಕುದೃಷ್ಟಿ ಸಿದ್ಧಾಂತಗಳೆಲ್ಲಾ ನಶಿಸಿಹೋದವು,

ಕಲಿಯ ಬಾಧೆಯೂ ನಾಶವಾಯಿತು" ಎಂದು ಹೇಳಿ ಸಂತೋಷ ಪಟ್ಟು ಕೊಳ್ಳುತ್ತಾರೆ.

**50. ಉದಿಪ್ಪನ ಉತ್ತಮರ್ ಶಿನ್ದೈಯುಳ್, ಒನ್ನಲರ್ ನೆಂಜಮಂಜಿ**
**ಕ್ಕೊದಿತ್ತಿಡಮಾರಿನಡಪ್ಪನ, ಕೊಳ್ಳೈವನ್ ಕುತ್ತಮೆಲ್ಲಾಮ್**
**ಪದಿತ್ತವೆನ್ ಪುನ್ ಕವಿ ಪಾವಿನಮ್ ಪೂಣ್ಡನ ಪಾವುತೊಲ್ ಶೀರ್**
**ಎದಿತ್ತಲೈನಾದನ್ ಇರಾಮಾನುಶನ್ ತನ್ ಇಣೈಯಡಿಯೇ ||**

ಅರ್ಥ:— ಪಾವು = ಹರಡಿಕೊಂಡಿರುವ, ತೊಲ್ = ಅನಾದಿಯಾದ, ಶೀರ್ = ಸದ್ಗುಣಗಳುಳ್ಳ, ಎದಿ = ಎತಿಗಳಿಗೆ, ತಲೈ = ಪ್ರಧಾನರಾದ ಮತ್ತು, ನಾಥನ್ = ಸರ್ವರಿಗೂ ಸ್ವಾಮಿಯಾದ, ಇರಾಮಾನುಶನ್ = ಸ್ವಾಮಿ ಎಂಬೆರುಮಾನಾರ್ರವರ, ಇಣೈ = ಪರಸ್ಪರ ಸದೃಶವಾದ, ಅಡಿ = ಪಾದಗಳು, ಉತ್ತಮರ್ ಶಿನ್ದೈಯುಳ್ = ಸತ್ಪುರುಷರ ಹೃದಯದಲ್ಲಿ, ಉದಿಪ್ಪನ = ಪ್ರಕಾಶಿಸುತ್ತಿರುವುವು. ಒನ್ನಲರ್ ನೆಂಜಮ್ = ಪ್ರತಿಕಕ್ಷಿಗಳ ಹೃದಯಗಳು. ಅಂಜಿ = ಭಯಪಟ್ಟು, ಕೊದಿತ್ತಿಡ = ಪರಿತಪಿಸುವಂತೆ, ಮಾರಿನಡಪ್ಪನ = ವ್ಯತ್ಯಾಸವಾಗಿ ಹೆಜ್ಜೆಯಿಡುತ್ತವೆ. ಕೊಳ್ಳೈ = ಚೆನ್ನಾಗಿ ಬೆಳೆದುಹೋಗಿರುವ, ವನ್ = ಕ್ರೂರವಾದ, ಕುತ್ತಮೆಲ್ಲಾಮ್ = ದೋಷಗಳೆಲ್ಲವೂ, ಪದಿತ್ತ = ಅಡಗಿರುವ - ಎನ್ ಪುನ್ ಕವಿ = ನನ್ನ ಕ್ಷುದ್ರಕವಿತೆಯು, ಪಾವಿನಮ್ = ಪದ್ಯಮಾಲಿಕೆಯನ್ನು - ಪೂಣ್ಡನ = ಧರಿಸುವುವು (ಅವರ ಪಾದಗಳು).

ತಾ:— ಹಿಂದೆ "ಶೀ: ಅರಂಗರ್ ಕೞಲ್ ಶೆನ್ನಿ ವೈತ್ತುತ್ತಾನ್ ಅದಿಲ್ ಮನ್ನುಮವನ್" ಎಂದು ಸ್ವಾಮಿ ರಾಮಾನುಜರಿಗೆ ಶ್ರೀ ರಂಗನಾಥರ ದಿವ್ಯ ಚರಣಗಳಲ್ಲಿರುವ ಪ್ರಾವಣ್ಯವನ್ನು ಅನುಸಂಧಿಸಿ ಈಗ ಆ ಪ್ರಸಂಗದಲ್ಲಿ ತಮಗೆ ಉದ್ದೇಶ್ಯರಾದ ಸ್ವಾಮಿ ಎಂಬೆರುಮಾನಾರ್ರವರ ದಿವ್ಯ ಪಾದಗಳನ್ನು ನೆನೆದು ಅವುಗಳ ಸ್ವರೂಪ ಸ್ವಭಾವಗಳನ್ನು ಕ್ರಮವಾಗಿ ಹಾಡಿ ಪರವಶರಾಗುತ್ತಾರೆ (ಯತಿರಾಜರಾದ ರಾಮಾನುಜಾಚಾರ್ಯರ ಸಿರಿಯಡಿಗಳು, ಪರಮ ಸಾತ್ವಿಕರಾದ ಅಧಿಕಾರಿಗಳ ಸಜ್ಜನರ ಹೃದಯ (ಮನ) ದಲ್ಲಿ, ಪ್ರಕಾಶಿಸುತ್ತವೆ. ಅವರು ಅವನ್ನು ಸದಾ ಧ್ಯಾನಿಸುವರು. ಎಂದು

ತಾತ್ಪರ್ಯ). ವೇದವನ್ನು ಪರಿಗ್ರಹಿಸದೆಯೂ, ವೇದವನ್ನು ಅಂಗೀಕರಿಸಿ ಅಪಾರ್ಥವನ್ನು ಹೇಳಿಯೂ, ಜನರನ್ನು ಮರುಳ್ಗೊಳಿಸುವ ಇತರ ಮತಗಳ ಅನುಯಾಯಿಗಳ ಹೃದಯವು ಹೆದರಿ ನಡುಗುವಂತೆ, ಪರಿತಪಿಸುವಂತೆ, ಶಾರದಾ ಪೀಠದಿಂದ ವೇಂಕಟಾದ್ರಿಗೂ ಅಲ್ಲಿಂದ ಮಧುರೆಗೂ ಇತರ ಸ್ಥಳಗಳಿಗೂ ಸಂಚರಿಸುತ್ತವೆ. ಆದರೂ ದೋಷಗಳಿಂದ ತುಂಬಿರುವ ನನ್ನ ದೋಷಗಳನ್ನು ಎಣಿಸದೆ ನನ್ನ ಅಲ್ಪವಾದ ಕವಿತೆಗಳಿಂದ ಅಲಂಕೃತವಾಗಿವೆ. ಇವುಗಳ ಸ್ವಭಾವವೆಂತಹುದು? ಎಂದು ಆಶ್ಚರ್ಯಚಕಿತರಾಗುತ್ತಾರೆ.

**51.** **ಅಡಿಯೈತ್ತೊಡರ್‌ನ್ದೆೞುಮೈವರ್‌ಗಟ್ಕ್ಕಾ, ಅನ್ರುಪಾರದ**
**ಪ್ಪೋರ್**
**ಮುಡಿಯಪ್ಪರಿನೆಡುನ್‌ದೇರ್ ವಿಡುನ್‌ಕೋನೈ, ಮುೞುದು**
**ಣರ್‌ನ್ದ**
**ಅಡಿಯರ್‌ಕ್ಕಮುದಮಿರಾಮಾನುಶನೆನ್ನೈಯಾಳವನ್ದಿ**
**ಪ್ಪಡಿಯಿಲ್ ಪಿರನ್ದದು, ಮತ್ತಿಲ್ಲೈ ಕಾರಣಮ್ ಪಾರ್‌ತ್ತಿಡಿಲೇ ||**

ಅರ್ಥ:—ಅಡಿಯೈ = ತನ್ನ ಪಾದಗಳನ್ನು - ತೊಡರ್‌ನ್ದು = ಆಶ್ರಯಿಸಿ, ಎೞುಮ್ = ವರ್ಧಿಸುತ್ತಿರುವ (ವೃದ್ಧಿ ಹೊಂದಿದ) ಐವರ್‌ಗಟ್ಕು = ಪಂಚ ಪಾಂಡವರಿಗೋಸ್ಕರ, ಅನ್ರು = ಅಂದು, ಅಂದರೆ ದ್ವಾಪರಯುಗದಲ್ಲಿ, (ಎಲ್ಲ ದುಷ್ಟರೂ ತಮ್ಮ ಮೇಲೆ ದಂಡೆತ್ತಿ ಬಂದ ಕಾಲದಲ್ಲಿ), ಭಾರತಪ್ಪೋರ್ = ಭಾರತ ಮಹಾಯುದ್ಧದಲ್ಲಿ, ಮುಡಿಯ = ಆ ಶತ್ರುಗಳೆಲ್ಲರೂ ನಾಶಹೊಂದುವಂತೆ, ಪರಿ = ಬಿಳಿಯ ಕುದುರೆಗಳನ್ನು ಕಟ್ಟಿದ್ದ, ನೆಡುಂತೇರ್ = ಅದ್ಭುತ ರಥವನ್ನು, ವಿಡುಮ್ ಕೋನೈ = ನಡೆಸಿದ ಸರ್ವೇಶ್ವರನಾದ ಶ್ರೀ ಕೃಷ್ಣನನ್ನು - ಮುೞುದುಂ = ಸಂಪೂರ್ಣವಾಗಿ, ಉಣರ್‌ನ್ದ = ಅರಿತ, ಅಡಿಯರ್‌ಕ್ಕು = ಭಕ್ತಿ ವಿಶ್ವಾಸದಿಂದ ಕೂಡಿದ ದಾಸರಿಗೆ, ಅಮುದಮ್ = ಭೋಗ್ಯ ಭೂತರಾದ, ಇರಾಮಾನುಶನ್ = ಸ್ವಾಮಿ ಎಂಪೆರುಮಾನಾರ್ರವರು, ಇಪ್ಪಡಿಯಿಲ್ = ಈ ಭೂಲೋಕದಲ್ಲಿ, ವನ್ದು ಪಿರನ್ದದು = ಬಂದು ಅವತರಿಸಿದುದು, ಎನ್ನೈ = ನನ್ನನ್ನು - ಆಳ = ಪರಿಪಾಲಿಸುವುದಕ್ಕೆ, ಪಾರ್ತ್ತಿಡಿಲ್ = ವಿಚಾರ ಮಾಡಿ ನೋಡಿದರೆ, ಮತ್ತು, ಕಾರಣಮಿಲ್ಲೈ = ಬೇರೊಂದು ಕಾರಣವೂ ಇಲ್ಲ.

ತಾ:— ಬಾಲ್ಯದಿಂದಲೂ "ಮಾವನ ಮಗನು" ಎಂದು ನೆನೆಯದೆ 'ರಕ್ಷಕ' ನೆಂದೇ ತಿಳಿದುಕೊಂಡಿದ್ದ ಪಂಚ ಪಾಂಡವರಿಗೆ - ಅವರ ಪ್ರತಿಪಕ್ಷ ಶತ್ರುಗಳಾದ ದುರ್ಯೋಧನಾದಿ ಕೌರವರು ಸಂಪೂರ್ಣವಾಗಿ ನಾಶ ಹೊಂದುವಂತೆ ಸಾರಥ್ಯವನ್ನು ಮಾಡಿದ ಶ್ರೀ ಕೃಷ್ಣ ಪರಮಾತ್ಮನ ಸ್ವರೂಪರೂಪ ಗುಣ ವಿಭೂತಿಗಳ ತತ್ವವನ್ನೂ, ಮಹಿಮೆಯನ್ನೂ ಚೆನ್ನಾಗಿ ಬಲ್ಲ ಶ್ರೀ ವೈಷ್ಣವರುಗಳಿಗೆ ಅಮೃತದಂತೆ ಪರಮ ಭೋಗ್ಯರಾದ ಸ್ವಾಮಿ ಶ್ರೀ ರಾಮಾನುಜರು ಈ ಪಾಪ ಪ್ರಚುರವಾದ ಭೂಲೋಕದಲ್ಲಿ ಅವತರಿಸಿದಕ್ಕೆ ಕಾರಣವನ್ನು ಕೂಲಂಕಷವಾಗಿ ಪರಿಶೀಲಿಸಿ ನೋಡಿದರೆ "ನನ್ನನ್ನು ಪರಿಪಾಲಿಸುವುದಕ್ಕೆ ಅವರು ಅವತರಿಸಿದರು" ಎಂದು ನಿಶ್ಚಿತವಾಗುತ್ತದೆ. ಅದುಬಿಟ್ಟು ಬೇರೊಂದು ಕಾರಣವೂ ಇಲ್ಲ; ಎನ್ನುತ್ತಾರೆ.

**52.** ಪಾರ್ತ್ತಾನರುಶಮಯಂಗಳ್ ಪದೈಪ್ಪ, ಇಪ್ಪಾರ್ ಮುೞುದುಮ್
ಪೋರ್ತ್ತಾನ್ ಪುಗೞ್ಕೊಣ್ಡು ಪುನ್ಮೈಯಿನೇನಿಡೈತ್ತಾನ್
ಪುಗುನ್ದು
ತೀರ್ತ್ತಾನಿರುವಿನೈ ತೀರ್ತ್ತರಂಗನ್ ಶೆಯ್ಯ ತಾಳಿಣೈಯೋ
ಡಾರ್ತ್ತಾನ್, ಇವೈಯೆಮ್ಮಿರಾಮಾನುಶನ್
ಶೆಯ್ಯುಮರ್ಪುದಮೇ ||

ಅರ್ಥ:— ಅರುಶಮಯಂಗಳ್ = ವೇದ ಬಾಹ್ಯಗಳಾದ ಆರು ಮತಗಳು, ಪದೈಪ್ಪ = ತಲ್ಲಣಿಸುವಂತೆ ಮಾಡಲು, ಪಾರ್ತ್ತಾನ್ = ನೋಡಿದರು; ಇಪ್ಪಾರ್ ಮುೞುದುಮ್ = ಈ ಭೂಮಿಯಲ್ಲೆಲ್ಲಾ, ಪುಗೞ್ಕೊಣ್ಡು = ತಮ್ಮ ಕೀರ್ತಿಯಿಂದ, ಪೋರ್ತ್ತಾನ್ = ಮುಚ್ಚಿದರು, ಅಂದರೆ ವ್ಯಾಪಿಸಿ ಪ್ರಕಾಶಿಸಿದರು, ಪುನ್ಮೈಯಿನೇನಿಡೈ = ಅಲ್ಪಜ್ಞನಾಗಿ ಕ್ಷುದ್ರನಾದ ನನ್ನಲ್ಲಿ, ತಾನ್ ಪುಗುನ್ದು = ತಾನೇ ಪ್ರವೇಶಿಸಿ, ಇರುವಿನೈ = ಮಹಾ ಪಾಪಗಳನ್ನು, ತೀರ್ತ್ತಾನ್ = ಹೋಗಲಾಡಿಸಿದರು. ತೀರ್ತ್ತು = ಹೀಗೆ ಪಾಪಗಳನ್ನೆಲ್ಲಾ ನಾಶಪಡಿಸಿ, ಅರಂಗನ್ = ಶ್ರೀರಂಗನಾಥನ-ಶೆಯ್ಯ = ಸುಂದರವಾದ, ತಾಳಿಣೈಯೋಡು = ಶ್ರೀಪಾದಗಳೆರಡರೊಂದಿಗೆ, ಆರ್ತ್ತಾನ್ = ನನ್ನನ್ನು ಸೇರಿಸಿದರು. ಇವೈಯೇ = ಇವುಗಳೇ, ಎಮ್ = ನಮ್ಮ-ಇರಾಮಾನುಶನ್ =

ಸ್ವಾಮಿರಾಮಾನುಜರು ಶೆಯ್ಯುಮ್ = ಮಾಡುವಂಥಾ, ಅರ್ಪುದಮ್ = ಅದ್ಭುತ ಕಾರ್ಯಗಳು (ಆಶ್ಚರ್ಯಗಳು).

ತಾ:—" ವೇದಬಾಹ್ಯಗಳಾದ ಬೌದ್ಧ, ಚಾರ್ವಾಕ, ಶಾಕ್ಯ, ಉಲೂಕ್ಯ, ಪಾಶುಪತ, ಗಾಣಾಪತ್ಯಗಳೆಂಬ ಆರು ಮತಗಳೂ ನಿರ್ಮೂಲವಾಗಿ ನಾಶವಾಗುವಂತೆ ಕಟಾಕ್ಷಿಸಿ ತಮ್ಮ ಕೀರ್ತಿಯನ್ನು ಜಗತ್ತಿನ ಎಲ್ಲಾ ದಿಕ್ಕುಗಳಲ್ಲೂ ವ್ಯಾಪಿಸಿ ಹರಡಿ - ಪಂಡಿತ ಪಾಮರಾದಿಗಳೂ ಸಾಧಾರಣವಾಗಿ ತಮ್ಮಕೀರ್ತಿಯನ್ನು ಕೊಂಡಾಡುವಂತೆ ನ್ಯಾಸಿಸಿ, ಕ್ರೂರ ಪಾಪಿಯಾದ ನನ್ನ ಮನಸ್ಸಿನಲ್ಲಿ ಪ್ರವೇಶಿಸಿ ನನ್ನ ಪಾಪಗಳೆಲ್ಲಾ ಸಂಪೂರ್ಣವಾಗಿ ನಾಶವಾಗುವಂತೆ ಮಾಡಿ, ಮತ್ತು ಶ್ರೀ ರಂಗನಾಥನ ದಿವ್ಯ ಪಾದಗಳೊಡನೆ ನನ್ನನ್ನು ಸಂಬಂಧಿಸಿ ಸೇರಿಸಿದರು. ಹೀಗೆ ಒಂದು ಕಾರ್ಯವನ್ನು ಉದ್ದೇಶಿಸಿ ಅನೇಕ ಕಾರ್ಯಗಳನ್ನು ಮಾಡಿದರು. ಹೀಗೆ ನಮ್ಮ ಸ್ವಾಮಿ ರಾಮಾನುಜರು ಮಾಡಿದ ಕಾರ್ಯಗಳು ಮಹಾ ಅದ್ಭುತವಾದವು". ಎಂದು ಅಮುದನಾರ್ರು ಮುಗ್ಧರಾಗುತ್ತಾರೆ.

53. ಅರ್ಪ್ಪುದನ್ ಶೆಮ್ಮೈ ಯಿರಾಮಾನುಶನ್, ಎನ್ನೈಯಾಳವನ್ದ
ಕರ್ಪಗಮ್ ಕತ್ತವರ್ ಕಾಮುರುಶೀಲನ್, ಕರುತ್ತರಿಯ
ಪರ್ಪಲ್ಲುಯಿರ್‌ಗಳುಮ್ ಪಲ್ಲುಲಗಿಯಾವುಮ್ ಪರನದೆನ್ನುಮ್
ನಲ್ಪೊರುಳ್ ತನ್ನೈ ಇನ್ನಾನಿಲತ್ತೇವನ್ದು ನಾಟ್ಟಿನನೇ ||

ಅರ್ಥ :—ಎನ್ನೈ = ನನ್ನನ್ನು, ಆಳವನ್ದ = ಪರಿಪಾಲಿಸುವುದಕ್ಕೆ ಬಂದ, ಕರ್ಪಗಮ್ = ಕಲ್ಪವೃಕ್ಷದಂತೆ ಉದಾರವಾದ, ಕತ್ತವರ್ = ವಿವೇಕಿಗಳು, ಕಾಮುರು = ಆಸೆಪಡುವ, ಶೀಲನ್ = ಸದ್ವೃತ್ತಿಯುಳ್ಳ, ಅರ್ಪುದನ್ = ಅದ್ಭುತವಾದ ಮಹಿಮೆಯುಳ್ಳವರಾದ, ಶೆಮ್ಮೈ = ಋಜುಸ್ವಭಾವವುಳ್ಳಂಥಾ, ಇರಾಮಾನುಶನ್ = ಆ ಸ್ವಾಮಿ ರಾಮಾನುಜರು, ಕರುತ್ತರಿಯ = ಮನಸ್ಸಿನಲ್ಲಿ ಯೋಚಿಸಲು ಸಾಧ್ಯವಿಲ್ಲದ (ಅಸಂಖ್ಯಾತವಾದ), ಪಲ್ ಪಲ್ ಉಯಿರ್‌ಗಳುಮ್ = ಅನೇಕ ಕನಿಷ್ಠ (ತುಚ್ಛ)ವಾದ ಜೀವರಾಶಿಗಳೂ, ಪಲ್ ಉಲಗಿಯಾವುಮ್ = ಅನೇಕವಿಧವಾದ ಲೋಕಗಳೂ, ಪರನದು ಎನ್ನುಮ್

= ಸರ್ವೇಶ್ವರನಾದ ಶ್ರೀಮನ್ನಾರಾಯಣನಿಗೇ ಶೇಷಭೂತವೆಂಬುದಾದ, ನಲ್ ಪೊರುಳ್ ತನ್ನೈ = ವಿಲಕ್ಷಣಾರ್ಥವುಳ್ಳ ಸಮೀಚೀನ ಜ್ಞಾನವನ್ನು - ಇನ್ನಾನಿಲತ್ತೇ = ಈ ಭೂಲೋಕದಲ್ಲಿ, ವನ್ದು = ತಾವೇ ಅವತರಿಸಿಬಂದು, ನಾಟ್ಟಿನನೇ = ಸ್ಥಾಪಿಸಿದರಲ್ಲವೇ !

ತಾ : — ಅತ್ಯನ್ತ ನಿಹೀನನಾದ ನನ್ನನ್ನು ಉಜ್ಜೀವನ ಗೊಳಿಸಲೋಸುಗ, ಅಪೇಕ್ಷಾ ನಿರಪೇಕ್ಷವಾಗಿ "ಕಲ್ಪವೃಕ್ಷವು, ಇದ್ದ ಸ್ಥಳದಲ್ಲಿಯೇ ತನ್ನ ಉದಾರಸ್ವಭಾವದಿಂದ - ಇಷ್ಟಾರ್ಥವನ್ನು ಕೊಡುವಂತೆಯೂ, ನೆರವೇರಿಸುವಂತೆಯೂ, ಶ್ರೀರಾಮಾನುಜರು, ನಿತ್ಯವಿಭೂತಿಯಿಂದ, ಈ ಲೀಲಾವಿಭೂತಿಗೆ ಬಂದು, "ಯೋಚಿಸಲು ಮತ್ತು ಎಣಿಸಲು ಅಸಾಧ್ಯವಾದ—ಚೇತನವರ್ಗಗಳೂ, ಈ ಚೇತನ ವರ್ಗಗಳುಳ್ಳ ಅಸಂಖ್ಯಾತವಾದ ಲೋಕಗಳೂ, (ಅತ್ಮಾ) ಮತ್ತು ಭೋಗ್ಯ, ಭೋಗೋಪಕರಣ, ಭೋಗಸ್ಥಾನ ಭೋಕ್ತೃವರ್ಗಗಳೆಲ್ಲಾ ಶ್ರಿಯಃಪತಿಯಾದ ಶ್ರೀಮನ್ನಾರಾಯಣನಿಗೇ (ಶೇಷ) ದಾಸಭೂತರು" ಎಂಬ ಪರಮಪುರುಷಾರ್ಥ ಜ್ಞಾನವನ್ನೂ-ಎಲ್ಲರೂ ಸರ್ವಕಾಲದಲ್ಲೂ ಅನುಭವಿಸಿಕೊಂಡು ಉಜ್ಜೀವಿಸಲಿ" ಎಂದು ಇಂಥಾ ಜ್ಞಾನವನ್ನು ಉಪದೇಶಿಸಿ ಪ್ರತಿಷ್ಠಿಸಿ ಸ್ಥಾಪಿಸಿದರಲ್ಲವೇ! ಎಂದು ಸಿದ್ಧರಾಗುತ್ತಾರೆ.

**54.** ನಾಟ್ಟಿಯನೀಶಚ್ಚಮಯಂಗಳ್ ಮಾಣ್ಡನ, ನಾರಣನೈ
ಕ್ಕಾಟ್ಟಿಯವೇದಂ ಕಳಿಪ್ಪುತ್ತದು, ತೆಂಕುರುಗೈವಳ್ಳಲ್
ವಾಟ್ಟಮಿಲಾವಣ್ತಮಿೞ್ಮಱೈ ವಾೞ್ನ್ದದು ಮಣ್ಣುಲಗಿಲ್
ಈಟ್ಟಿಯಶೀಲತ್ತು ಇರಾಮಾನುಶನ್ತನ್ನಿಯಲ್ವುಕಣ್ಡೇ ||

ಅರ್ಥ : — ಮಣ್ ಉಲಕಿಲ್ = ಈ ಭೂಲೋಕದಲ್ಲಿ, ಈಟ್ಟಿಯ = ಕೂಡಿಹಾಕಲ್ಪಟ್ಟ-ಅಂದರೆ ಅತಿಶಯವಾದ, ಶೀಲತ್ತು = ಸೌಶೀಲ್ಯ ಸ್ವಭಾವವುಳ್ಳ, ಇರಾಮಾನುಶನ್ = ಶ್ರೀ ರಾಮಾನುಜರವರ, ಇಯಲ್ವು ಕಂಡು = ಸ್ವಭಾವವನ್ನು ಕಂಡು, ನಾಟ್ಟಿಯ = ಸ್ಥಾಪಿತವಾಗಿದ್ದ, ನೀಶ = ನೀಚವಾದ, ಹೀನವಾದ, ಶಮಯಂಗಳ್ = ವೇದಬಾಹಿರವಾದ ಮತ್ರಾತಗಳು ಎಲ್ಲವೂ, ಮಾಣ್ಡನ = ನಾಶವಾದವು, ನಾರಣನೈ = ಶ್ರೀಮನ್ನಾರಾಯಣನನ್ನು, ಕಾಟ್ಟಿಯ = ಇವನೇ "ಸರ್ವಶೇಷಿಯು" ಎಂದು ಪ್ರಕಾಶಪಡಿಸುವ.

ವೇದಮ್ = ವೇದವು, ಕಳಿಪ್ಪುಱ್ಱದು = ಸಂತೋಷದಿಂದಲೂ ಗರ್ವದಿಂದಲೂ ಪ್ರಕಾಶಿಸುತ್ತಿದೆ. ತೆನ್‌ಕುರುಗೈ = ಸುಂದರವಾದ ಕುರುಕಾಪುರಿಯ, ವಳ್ಳಲ್ = ಸ್ವಾಮಿಯಾದ ನಮ್ಮಾಳ್ವಾರ್‌ರವರ, ವಾಟ್ಟಮ್ ಇಲಾ = ದೋಷ ಒಂದೂ ಇಲ್ಲದ, ವಣ್ = ಶ್ರೇಷ್ಠವಾದ, ತಮಿೞ್ಮಱೈ = ದ್ರಾವಿಡ ವೇದವಾದ ತಿರುವಾಯ್ಮೊಳಿ ಪ್ರಬಂಧವು, ವಾೞ್ನ್ದದು = ಉಜ್ವಲನಾಗಿ ಜನಗಳು ಮಂಗಳಾಶಾಸನ ಮಾಡುವಂತೆ-ಅಭಿವೃದ್ಧಿಯನ್ನೂ ಪ್ರಕಾಶವನ್ನೂ ಹೊಂದಿತು.

ತಾ : — ಅಜ್ಞಾನಾಂಧಕಾರಮಯವಾದ ಈ ಭೂಲೋಕದಲ್ಲಿರುವ, ಸರ್ವಚೇತನರನ್ನೂ ಒಳ್ಳೆಯ ಜ್ಞಾನಮಾರ್ಗಕ್ಕೆ ತಿರುಗಿಸಿದ-ಉದಾರರಾದ ಶ್ರೀ ರಾಮಾನುಜರ ಸೌಶೀಲ್ಯಾದಿಗುಣ, ಸ್ವಭಾವಗಳ ವ್ಯಾಪನೆಯಿಂದಲೂ, ತಿರುಮಂತ್ರ, ಚರಮಶ್ಲೋಕಾರ್ಥಗಳ ಪ್ರತಿಪಾದನೆಯಿಂದಲೂ - "ಅಪ್ರಮಾಣಗಳಿಂದಲೂ, ಶಾಸ್ತ್ರವಿಹಿತವಲ್ಲದ ಅಪಾರ್ಥಕಲ್ಪಿತವಾದ - ಬಾಹ್ಯಮತಗಳು" ಬುಡಸಹಿತ ಸಂಪೂರ್ಣವಾಗಿ ನಾಶವಾದವು-ಶ್ರೀಮನ್ನಾರಾಯಣನೇ "ಸರ್ವಶೇಷಿಯು" ಎಂದು ಪ್ರತಿಪಾದಿಸುವ ವೇದವು ಉಜ್ವಲವಾಗಿ, ದೃಢವಾಗಿ, ಜೋರಾಗಿ ಬೆಳಗಿತು. ದಕ್ಷಿಣ ದೇಶದಲ್ಲಿ ಕಂಗೊಳಿಸುವ, ಕುರುಕಾಪುರಿಯಲ್ಲಿ ಅವತರಿಸಿದ ಪರಮೋದಾರರಾದ ನಮ್ಮಾಳ್ವಾರ್‌ರವರ ಸರ್ವೋತ್ಕೃಷ್ಟವಾದ, ಸುಂದರವಾದ ದ್ರಾವಿಡ ವೇದವಾದ ತಿರುವಾಯ್‌ಮೊಳಿ" ಪ್ರಬಂಧವು ಪ್ರಸನ್ನ ಜನರೆಲ್ಲಾ ಮಂಗಳಾಶಾಸನ ಮಾಡುವಂತೆ ಉಜ್ವಲವಾಗಿ ಹರಡಿ ಪ್ರಕಾಶವನ್ನು ಹೊಂದಿತು.

**55.** ಕಣ್ಡವರ್ ಶಿನ್ದೈ ಕವರುಮ್ ಕಡಿಪ್ಪೊೞಿಲ್ ತೆನ್ನರಂಗನ್
ತೊಣ್ಡರ್ ಕುಲಾವುಮ್ ಇರಾಮಾನುಶನೈ, ತೊಗೈಯಿಱನ್ದ
ಪಣ್ತರುವೇದಂಗಳ್ ಪಾರ್ಮೇಲ್ ನಿಲವಿಡಪ್ಪಾರ್ತ್ತರುಳುಮ್
ಕೊಣ್ಡಲೈಮೇವಿತ್ತೊೞುಮ್ ಕುಡಿಯಾಮೆಂಗಳ್
ಕೋಕ್ಕುಡಿಯೇ ||

ಅರ್ಥ : — ತೊಗೈ ಇಱನ್ದ = ಅಸಂಖ್ಯಾತಗಳಾದ, ಪಣ್ ತರು = ಸ್ವರಮಯವಾದ, ವೇದಂಗಳ್ = ಋಗ್ಯಜುಸ್ಸಾಮಾದಿ ವೇದಗಳು, ಪಾರ್‌ಮೇಲ್

— ಈ ಭೂಲೋಕದಲ್ಲಿ, ನಿಲವಿಡ — ಸ್ಥಿರವಾಗುವಂತೆ, ಪಾರ್ತ್ತುಳುವರ್ — ಕಟಾಕ್ಷಿಸಿದ, ಕೊಣ್ಡಲ್ಲೈ — ಭೇದವಿಲ್ಲದೆ ಎಲ್ಲೆಲ್ಲಿಯೂ ವರ್ಷಿಸುವ ಮೇಘದಂತೆ ಉದಾರಶೀಲರಾದ, ಕಣ್ಡವರ್ ಸಿನ್ದೈ — ನೋಡಿದವರ ಮನಸ್ಸನ್ನು, ಕವರುಮ್ — ಆಕರ್ಷಿಸತಕ್ಕ, ಕಡಿ — ಪರಿಮಳಭರಿತವಾದ, ಪೊೞಿಲ್ — ಉದ್ಯಾನ ವನಗಳಿಂದ ಸುತ್ತಲ್ಪಟ್ಟ, ತೆನ್ ಅರಂಗರ್ — ಸುಂದರವಾದ ಶ್ರೀರಂಗದಲ್ಲಿ ಶಯನಿಸಿರುವ ಆ ಶ್ರೀ ರಂಗನಾಥಸ್ವಾಮಿಯವರ, ತೊಣ್ಡರ್ — ಸೇವೆಯಲ್ಲಿ ಆಸಕ್ತರಾದ ಭಕ್ತರನ್ನು (ಆಳ್ವಾರುಗಳನ್ನು), ಕೊಂಡಾಡುವ, ಇರಾಮಾನುಶನ್ನೈ — ಸ್ವಾಮಿ ರಾಮಾನುಜರನ್ನು, ಮೇವಿ — ಆಶ್ರಯಿಸಿ, ತೊೞುಮ್ ಕುಡಿ — ಸೇವೆಮಾಡುವ ವಂಶದವರೇ - ಎಂಗಳ್ ಕೋಕ್ಕುಡಿಯಾರ್ — ನಮ್ಮನ್ನಾಳುವ ಸ್ವಾಮಿತ್ವವನ್ನುಳ್ಳ ಕುಲದವರಾಗಿರುತ್ತಾರೆ.

ತಾ :— ಅನನ್ತವಸ್ತುವಾದ ಗಾನಮಯವಾದ ಚತುರ್ವೇದಗಳು ಈ ಭೂಲೋಕದಲ್ಲಿ ಸ್ಥಿರವಾಗಿರುವಂತೆ ಕಟಾಕ್ಷಿಸಿದ ಶ್ರೀಮದ್ವೇದಮಾರ್ಗ ಪ್ರತಿಷ್ಠಾಪನಾಚಾರ್ಯರಾದ ಮತ್ತು ಮನೋಹರವಾಗಿಯೂ, ಪರಿಮಳಭರಿತವಾದ ಉದ್ಯಾನವನಗಳಿಂದ ಸುತ್ತಲ್ಪಟ್ಟು ಸುಂದರವಾಗಿರುವ ಶ್ರೀರಂಗಕ್ಷೇತ್ರಕ್ಕೆ ನಾಥನಾದ ಶ್ರೀರಂಗನಾಥನನ್ನು ಸ್ತುತಿಸುತ್ತ ಅವನ ನಿತ್ಯ ಕೈಂಕರ್ಯಪರರಾದ "ಪೊಯ್ಗೈಯಾರ್" ಆದಿಯಾಗಿ ಹತ್ತು ಆಳ್ವಾರುಗಳನ್ನು ಕೊಂಡಾಡುವ ಶ್ರೀ ರಾಮಾನುಜರನ್ನು ಆದರದಿಂದ ಪೂಜಿಸುವ ವಂಶದವರೇ ನಮ್ಮುಗಳನ್ನು ಆಳುವ ವಂಶಸ್ಥರು, ಎನ್ನುತ್ತಾರೆ. ಅಂದರೆ-ಶ್ರೀ ರಾಮಾನುಜರ ಗುಣಗಳಿಗೆ ಸೋತು ಅವರ ದಾಸರಾಗಿರುವ ಮಹಾತ್ಮರೇ ನನ್ನ ಕುಲನಾಥರು ಎಂಬ ಭಾವವನ್ನು ತೋರಿಸುತ್ತಾರೆ, ಅಮುದನಾರ್.

**56.** ಕೋಕ್ಕುಲಮನ್ನರೈ ಮೂವೆೞುಕಾಲ್ ಒರುಕೂರ್ ಮೞುವಾಲ್
ಪೋಕ್ಕಿಯ ದೇವನೈ ಪೋಟ್ರುಮ್ ಪುನಿದನ್, ಭುವನಮೆಂಗು
ಮಾಕ್ಕಿಯ ಕೀರ್ತ್ತಿ ಯಿರಾಮಾನುಶನೈ ಯಡೈನ್ದಪಿನ್
ಎನ್‌ವಾಕ್ಕುರೈಯಾದು, ಎನ್‌ಮನಮ್ ನಿನೈಯಾದ
ನಿಮಟ್ರೊನ್ರೈಯೇ ||

ಅರ್ಥ: — ಕೋಕ್ಕುಲಮನ್ನರೈ = ವೀರಕ್ಷತ್ರಿಯ ಕುಲೋತ್ಪನ್ನರಾದ ರಾಜರುಗಳನ್ನು, ಮೂವೆೞುಕಾಲ್ = (ಮೂರು × ಏೞು) ಇಪ್ಪತ್ತೊಂದು ಸಲ, ಒರುಕೂರ್ = ಅದ್ವಿತೀಯವಾದ.ಹರಿತವಾದ, ಮೞುವಾಲ್ = ಗಂಡು ಕೊಡಲಿಯಿಂದ, ಪೋಕ್ಕಿಯ = ನಿರಸನಮಾಡಿದ, ದೇವನೈ — ಪರಶು ರಾಮ ದೇವರನ್ನು, ಪೋತ್ತುಮ್ = ಸ್ತೋತ್ರಮಾಡುತ್ತಲಿರುವ, ಪುನಿದನ್ = ಪರಿಶುದ್ಧ ಸ್ವಭಾವವುಳ್ಳವರಾದ, ಭುವನಮೆಂಗುಮ್ = ಈ ಭೂಲೋಕದಲ್ಲೆಲ್ಲಾ, ಆಕ್ಕಿಯ = ವ್ಯಾಪಿಸಿರುವ, ಕೀರ್ತಿ = ಕೀರ್ತಿ ಅಂದರೆ ಯಶಸ್ಸನ್ನುಳ್ಳ, ಇರಾಮಾನುಶನೈ = ಎಂಬೆರುಮಾನಾರ್ರವರನ್ನು, ಅಡೈನ್ದಪಿನ್ = ಆಶ್ರಯಿಸಿದಮೇಲೆ, ಇನಿ = ಇನ್ನುಮೇಲೆ, ಮಱ್ಱೊನ್ಱೈ = ಮತ್ತೊಂದನ್ನು · ಎನ್ ವಾಕ್ಕು = ನನ್ನ ಬಾಯಿ, ಉರೈಯಾದು = ಉಚ್ಚರಿಸುವುದಿಲ್ಲ, ಎನ್ ಮನಮ್ = ನನ್ನ ಮನಸ್ಸು, ನಿನೈಯಾದು = ಧ್ಯಾನಿಸುವುದಿಲ್ಲ.

ತಾ:—ವೀರ ಕ್ಷತ್ರಿಯ ಕುಲೋತ್ಪನ್ನನಾಗಿ ಬಹು ಗರ್ವಿತನಾಗಿದ್ದ "ಕಾರ್ತವೀರ್ಯಾರ್ಜುನ" ನೆಂಬೊಬ್ಬ ರಾಜನು ಗರ್ವದಿಂದ ಮೆರೆಯುತ್ತಾ ಒಂದಾನೊಂದು ದಿವಸ ಜಮದಗ್ನಿ ಮಹರ್ಷಿಯಾಶ್ರಮಕ್ಕೆ ಬಂದು ತನ್ನ ಮದೋತ್ಕರ್ಷದಿಂದ ಅವರನ್ನು ಹಿಂಸಿಸಿ ಕೊಂದುದರಿಂದ, "ಪರಶುರಾಮ" ದೇವರು ಇದನ್ನು ತಿಳಿದು ಕೋಪಿಷ್ಠರಾಗಿ ತನ್ನ ಗಂಡುಗೊಡಲಿಯಿಂದ ಆ ರಾಜನನ್ನು ಕೊಂದೂ ಸಹ, ಕ್ಷತ್ರಿಯಕುಲ ವೃದ್ಧಿಯಾಗುತ್ತಲೇ ಬಂದುದನ್ನು ತಿಳಿದು ಇಪ್ಪತ್ತೊಂದಾವರ್ತಿ - ಕ್ಷತ್ರಿಯರಾಜರುಗಳ ಕುಲದವರನ್ನು ಸಂಹರಿಸಿದರು. ಇಂಥಾ ಮಹಾಮಹಿಮೆಯುಳ್ಳ ಪರಶುರಾಮ ದೇವರನ್ನು ಕೊಂಡಾಡುವ, ಪರಿಶುದ್ಧಸ್ವಭಾವವುಳ್ಳ ಶ್ರೀ ರಾಮಾನುಜರು-ಪರಶುರಾಮರಂತೆಯೇ-ಬಾಹ್ಯಕುದೃಷ್ಟಿಮತಗಳನ್ನು ನಿರಸನ ಮಾಡಿದರು, ಇವರ ಕೀರ್ತಿಯು ಲೋಕವೆಲ್ಲೆಲ್ಲಾ ವ್ಯಾಪಿಸಿತು—"ಇಂಥಾ ಪರಿಶುದ್ಧರಾದ ಎಂಬೆರುಮಾನಾರ್ರವರನ್ನು ಆಶ್ರಯಿಸಿದ ಮೇಲೆ ಅವರ ಗುಣಗಳನ್ನಲ್ಲದೆ ಮತ್ತೊಂದನ್ನು ನನ್ನ ಬಾಯಿ ಸ್ತುತಿಸಿ ಉಚ್ಚರಿಸುವುದಿಲ್ಲ ಮತ್ತು ನನ್ನ ಮನಸ್ಸು ಸ್ಮರಿಸುವುದೂ ಇಲ್ಲ" ಎನ್ನುತ್ತಾರೆ.

**57.** ಮಱ್ಱೊನ್ಱು ಪೇಱುಮದಿಯಾದು, ಅರಂಗನ್ ಮಲರಡಿಕ್ಕಾ
ಳುಱ್ಱವರೇ ತನಕ್ಕುಱ್ಱವರಾಕ್ಕೊಳ್ಳುಂ ಉತ್ತಮನೈ

ಸತ್ತವರ್‌ಪ್ರೋಕ್ತು ಇರಾಮಾನುಶನೈ ಇನ್ನ್ಯಾಲತ್ತೇ
ಪೆತ್ತನನ್, ಪೆತ್ತಪಿನ್ ಮತ್ತೊರುಯೋನಿಲ ಮೇಯ್ಕ್ಯ್ಯುಳೇ ||

ಅರ್ಥ :—ಮತ್ತು ಉಪಾಯ = ಬೇರೆ ವಿಧವಾದ ಪ್ರಯೋಜನವನ್ನು ನುಡಿಯಾದ — ಹೇಳದೆ, ಅರಂಗರ್ = ಶ್ರೀ ರಂಗನಾಥನ, ಮಲರ್ = ಪುಷ್ಪದಂತಿರುವ, ಅಡಿಕ್ಕು — ಶ್ರೀಪಾದಗಳ ವಿಷಯದಲ್ಲಿ - ಆಳ್ ಉತ್ತವರ್ಕೇ = ದಾಸ್ಯವನ್ನು ಅವಲಂಬಿಸಿದವರನ್ನೇ, ತನಕ್ಕು — ತನಗೆ, ಉತ್ತವರಾಯ್ — ಬಂಧುಗಳಾಗಿ, ಕೊಳ್ಳುಮ್ = ಅಂಗೀಕರಿಸುವ, ಉತ್ತಮನ್ = ಸರ್ವೋತ್ಕೃಷ್ಟರಾದ, ಮತ್ತು ನಲ್ತವರ್ = ವಿಲಕ್ಷಣರಾದ ಮಹಾತಪಸ್ವಿಗಳು, ಪ್ರೋಕ್ತ್ರನ್ = ಸ್ತುತಿಸುವ - ಇರಾಮಾನುಸನೈ = ಸ್ವಾಮಿ ಎಂಬೆರುಮಾನಾರ್‌ವರನ್ನು, ಇನ್ನ್ಯಾಲತ್ತೇ = ಈ ಭೂಲೋಕದಲ್ಲಿ - ಪೆತ್ತನನ್ — ಪಡೆದೆನು - (ಆಶ್ರಯಿಸುವ ಭಾಗ್ಯವು ದೊರೆಯಿತು) ಪೆತ್ತಪಿನ್ = ಈ ಮಹಾಭಾಗ್ಯವು ಲಭಿಸಿದಮೇಲೆ, ಮತ್ತು = ಬೇರೆ - ಉಯಿರೊಡೈಮೈ = ಅಜ್ಞಾನಸಂಬಂಧವನ್ನು, ಅರಿಯೇನ್ — ನಾನು ತಿಳಿಯೆನು.

ತಾ :—"ಚಂಚಲಂಹಿಮನಃ" ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಹೇಳಿರುವಂತೆ, "ಮನಸ್ಸು ಒಂದು ವಿಷಯದಲ್ಲಿ ಸರ್ವಕಾಲವೂ ನಿಲ್ಲುವುದಿಲ್ಲ. ಆದ್ದರಿಂದ ಬೇರೊಂದು ಕಾಲದಲ್ಲಿ ಮನಸ್ಸು ವ್ಯಭಿಚರಿಸಿ ಅಜ್ಞಾನವನ್ನು ಹೊಂದಿದರೆ ಏನು ಮಾಡುವಿರಿ" ಎಂದು ಕೇಳಿದವರಿಗೆ ಹೀಗೆ ಬದಲು ಹೇಳುತ್ತಾರೆ, "ನೀವು ಹೇಳುವುದು ನಿಜವಾದರೂ ನಾನು ಈಗ ಹಿಂದಿನಂತಿಲ್ಲ—ಶ್ರೀರಂಗನಾಥನ ಪರಮ ಭೋಗ್ಯವಾದ ಪಾದಗಳಿಗೆ ಕೈಂಕರ್ಯ ಮಾಡುವುದೇ ಪರಮ ಪುರುಷಾರ್ಥವು." ಎಂದು ಆಶ್ರಯಿಸಿರುವವರೇ ತಮಗೆ ಸರ್ವವಿಧ ಬಂಧುಗಳೆಂದು ಸ್ವೀಕರಿಸಿಕೊಂಡು ಪ್ರಸನ್ನ ಕಟಾಕ್ಷಯುಕ್ತರಾಗಿರುವ, ತಪಸ್ವಿಗಳಲ್ಲಿ ಬಹಳ ಮೇಲಾದ ನ್ಯಾಸ (ಶರಣಾಗತಿ) ಧರ್ಮನಿಷ್ಠರಾದ, ಸತ್ಪುರುಷರು ಸ್ತುತಿಸುವ ರಾಮಾನುಜಾಚಾರ್ಯರನ್ನು ಈ ಲೋಕದಲ್ಲಿ ಆಶ್ರಯಿಸಿದೆನು. ಆದುದರಿಂದ ಅಜ್ಞಾನವು ನನ್ನಲ್ಲಿ ಬಂದು ಸೇರುವುದಕ್ಕೆ ಕಾರಣವೇ ಇಲ್ಲ." ಅಂದರೆ ಎಂಬೆರುಮಾನಾರ್‌ರನ್ನು ಆಶ್ರಯಿಸಿದ ನಂತರ-ವೊದಲು ಅನಾದಿಕಾಲದಿಂದ ನನ್ನನ್ನು ಪೀಡಿಸಿದ ದೇಹಾತ್ಮಭ್ರಮವೂ,

ಸರ್ವಸ್ವಾತಂತ್ರ್ಯ, ಭ್ರಮತಂ, ಅನ್ಯಶೇಷತ್ವ, ಅನುಪಾದೇಯತ್ವಪ್ರಸಂಗವೂ ಎಲ್ಲೋ ಮರೆತುಹೋಗಿ, ಅಜ್ಞಾನವು ಮನಸ್ಸಿಗಾಗಲಿ-ಪ್ರತ್ಯಕ್ಷವಾಗಲಿ ಕಾಣುವುದಿಲ್ಲ. ಎಂದು ದೃಢಪಡುತ್ತಾರೆ.

58. ಪೇತೈಯರ್ ವೇದಪ್ಪೊರುಳಿದೆನ್ರುನ್ನಿ, ಪಿರಮಮ್ ನನ್ರೆ
ನ್ರೋದಿಮತ್ತೆಲ್ಲಾವುಯಿರುಮಃದೆನ್ರು, ಉಯಿರ್‌ಗಳ್ ಮೆಯ್‌ವಿ
ಟ್ಟಾದಿಪ್ಪರನೋಡೊನ್ರಾಮೆನ್ರು ಸೊಲ್ಲುಮವ್ವಲ್ಲಲೆಲ್ಲಾಮ್
ವಾದಿಲ್ ವೆನ್ರಾನ್ ಎಮ್ಮಿರಾಮಾನುಶನ್ ಮೆಯ್ಮ್ಮದಿಕ್ಕಡಲೇ ||

ಅರ್ಥ :— ಪೇತೈಯರ್ = ಅಜ್ಞರು, ವೇದಪ್ಪೊರುಳ್ = ವೇದಾರ್ಥವು, ಇದು ಎನ್ರು = ಇದೇ ಎಂದು, ಉನ್ನಿ = ನಿರೂಪಿಸಿ, ಪಿರಮಮ್ — ಬ್ರಹ್ಮವು ಅನ್ನುವ ಪರಾತ್ಪರವಸ್ತುವು, ನನ್ರು ಎನ್ರು — ಸರ್ವವಿಲಕ್ಷಣವಾದುದು ಎಂದು, ಓದಿ = ಹೇಳಿ, ಮತ್ತು ಎಲ್ಲಾ ಉಯಿರುಮ್ — ಅದಕ್ಕೆ ವ್ಯತಿರಿಕ್ತವಾದ ಮುಕ್ತಜೀವವರ್ಗಗಳು, ಅಃತು ಎನ್ರು — ಆ ಬ್ರಹ್ಮಸ್ವರೂಪವೇನೇ ಎಂದೂ, ಉಯಿರ್‌ಗಳ್ — ಜೀವವಸ್ತುಗಳು, ಮೆಯ್ ವಿಟ್ಟು — ಈ ಉಪಾಧಿ ಶರೀರವನ್ನು ಬಿಟ್ಟು ಬಿಟ್ಟಾಗ, ಆದಿ — ಮೂಲಕಾರಣವಾದ, ಪರನೋಡು — ಸರ್ವಸ್ವಾಮಿ ಪರಮಾತ್ಮನಲ್ಲಿ, ಒನ್ರಾಮ್ ಎನ್ರು ಸೊಲ್ಲುಮ್ = ಏಕೀಭವಿಸುತ್ತವೆ ಎಂದು ಹೇಳುತ್ತಿರುತ್ತಾರೆ. ಅವ್ವಲ್ಲಲ್ ಎಲ್ಲಾಮ್ — ಅಪಾರ್ಥವಾದ ಘೋಷಣೆಗಳನ್ನೆಲ್ಲಾ, ಮೆಯ್ಮ್ಮದಿಕ್ಕಡಲ್ — ತತ್ವಜ್ಞಾನನಿಧಿಯಾದ, ಎಮ್ ಇರಾಮಾನುಶನ್ — ನಮ್ಮ ಸ್ವಾಮಿ ರಾಮಾನುಜಾಚಾರ್ಯರವರು, ವಾದಿಲ್ — ವಾದಗಳಲ್ಲಿ, ವೆನ್ರಾನ್ — ಜಯಿಸಿದರು.

ತಾ :— ಅಜ್ಞರು "ವೇದಾರ್ಥವು ಅಂದರೆ ವೇದಗಳ ತಾತ್ಪರ್ಯವಿದು" ಎಂದು ಹೇಳಿ ನಿರೂಪಿಸಿ ಪ್ರತಿಪಾದಿಸುವ-ಬ್ರಹ್ಮವು" ಸರ್ವ ವಿಲಕ್ಷಣವಾದುದು, ಎಲ್ಲಾ ಜೀವಗಳೂ ಬ್ರಹ್ಮಸ್ವರೂಪವೇ. ಜೀವಗಳು ಉಪಾಧಿ ಶರೀರವನ್ನು ಬಿಟ್ಟ ಮೇಲೆ ಪರಮಾತ್ಮನೊಡನೆ ಒಂದಾಗಿ ಬಿಡುತ್ತವೆ" ಎಂದು ಹೇಳುವ ಅಪಾರ್ಥ ಘೋಷಣೆಗಳನ್ನೆಲ್ಲಾ ತತ್ವಜ್ಞಾನಕ್ಕೆ ಸಾಗರ

ದಂತಿರುವ ನಮ್ಮ ಸ್ವಾಮಿ ಎಂಬೆರುಮಾನಾರ್‌ರವರು, ಆ ಸೂಕ್ತಿಗಳಿಂದ ಬಾಹ್ಯಮತವನ್ನೊಡನೆ ನಾಶಮಾಡಿ ಜಯಿಸಿದರು.

59. ಕಡಲಳವಾಯ ತಿಶೈಯೆಟ್ಟಿನುಳ್ಳುಮ್ ಕಲಿಯಿರುಳೇ
ಮಿಡೈತರು ಕಾಲತ್ತು ಇರಾಮಾನುಶನ್, ಮಿಕ್ಕ ನಾನ್ಮರೈಯಿನ್
ಶುಡರೊಳಿಯಾಲವ್ವಿರುಳೈ ತ್ತುರನ್ದಿಲನೇಲುಯಿರೈ
ಉಡೈಯವನ್ ನಾರಣನೆನ್ರು, ಅರಿವಾರಿಲ್ಲೈಯುತ್ತುಣರ್ನ್ದೇ ||

ಅರ್ಥ: — ಕಡಲ್ ಅಳವಾಯ = ಸಮುದ್ರದವರೆಗೆ ಹಬ್ಬಿರುವ, ಎಟ್ಟು ತಿಶೈಯುಳ್ಳುಮ್ = ಎಂಟು ದಿಕ್ಕುಗಳಲ್ಲೂ, ಕಲಿ ಇರುಳೇ = ಕಲಿಪ್ರಯುಕ್ತವಾದ ಅಜ್ಞಾನಾಂಧಕಾರವೇ, ಮಿಡೈತರು ಕಾಲತ್ತು = ನಿಬಿಡವಾಗಿ ಕವಿದಿರುವ ಕಾಲದಲ್ಲಿ, ಇರಾಮಾನುಶನ್ = ಸ್ವಾಮಿ ರಾಮಾನುಜರು, ಮಿಕ್ಕ = ಪ್ರಬಲವಾಗಿ, ಶ್ರೇಷ್ಠವಾದ, ನಾನ್ ಮರೈಯಿನ್ = ನಾಲ್ಕು ವೇದಗಳ, ಶುಡರೊಳಿಯಾಲ್ = ನಿರವಧಿಕ ತೇಜಸ್ಸಿನಿಂದ, ಅವ್ವಿರುಳೈ = ಆ ಅಂಧಕಾರವನ್ನು, ತುರನ್ದಿಲನೇಲ್ = ಓಡಿಸದೇ ಇದ್ದಿದ್ದರೆ, ಉಯಿರೈ ಉಡೈಯವನ್ = ಎಲ್ಲಾ ಜೀವರಾಶಿಗಳಿಗೂ ಒಡೆಯನಾಗಿರುವವನು, ನಾರಣನ್ ಎನ್ರು = ಆ ಶ್ರೀಮನ್ನಾರಾಯಣನೇ ಎಂದು, ಉತ್ತು = ಹೊಂದಿ, ಉಣರ್ನ್ದು = ನಿರಂತರವಾಗಿ ಅನುಸಂಧಾನಮಾಡಿ, ಅರಿವಾರಿಲ್ಲೈ = ತಿಳಿಯತಕ್ಕವರೇ ಇಲ್ಲ.

ಕಲಿ ಪ್ರಯುಕ್ತವಾದ ಅಜ್ಞಾನಾಂಧಕಾರವು ಸಮುದ್ರ ಪರ್ಯಂತ ಹಬ್ಬಿರುವ ಭೂಮಿಯಲ್ಲಿ ಎಲ್ಲಾ ದಿಕ್ಕುಗಳಲ್ಲೂ ವ್ಯಾಪಿಸಿ ತತ್ತ್ವಯಾಥಾತ್ಮ್ಯ ಜ್ಞಾನಕ್ಕೆ ಪ್ರತಿಬಂಧಕವಾಗಿದ್ದ ಕಾಲದಲ್ಲಿ, ಸ್ವಾಮಿ ಎಂಬೆರುಮಾನಾರ್‌ರವರು, ಅವತರಿಸಿ ಸಕಲ ಶಾಸ್ತ್ರಗಳನ್ನೂ ಉದ್ಧರಿಸಿ ಅವುಗಳ ನಿರವಧಿಕ ತೇಜಸ್ಸಿನಿಂದ ಆ ಕಲಿದೋಷವನ್ನು ನಿವಾರಿಸದೆ ಇದ್ದಿದ್ದರೆ "ಶ್ರೀಮನ್ನಾರಾಯಣನೇ ಎಲ್ಲರಿಗೂ ಒಡೆಯನು ಎಂದೂ, ಸರ್ವಶೇಷಿ ಎಂದೂ ಜಗತ್ತಿನ ಸಮಸ್ತ ಜೀವರಾಶಿಗಳೂ ಆ ಶ್ರೀಮನ್ನಾರಾಯಣನಿಗೇ ಶೇಷಭೂತರಾದವರುಗಳೆಂದೂ," ಜಗತ್ತಿನಲ್ಲಿರುವವರೊಬ್ಬರೂ ತಿಳಿಯುತ್ತಿರಲಿಲ್ಲ.

60. ಉಣರ್ನ್ದಮೆಯ್ ಜ್ಞಾನಿಯರ್ ಯೋಗನ್ದೊಱುಮ್,
ತಿರುವಾಯ್ಮೊೞಿಯಿನ್
ಮಣನ್ದರುಮಿನ್ನಿಶೈಮನ್ನುಮಿಡನ್ದೊಱುಮ್, ಮಾಮಲರಾಳ್
ಪುಣರ್ನ್ದಪೊನ್ಮಾರ್ವನ್ ಪೊರುನ್ದುಮ್ ಪದಿತೊಱುಮ್
ಪುಕ್ಕುನಿಱ್ಕುಮ್
ಗುಣನ್ದಿಗೞ್ಕೊಣ್ಡಲ್, ಇರಾಮಾನುಶನೆಙ್ಕುಲಕ್ಕೊೞುನ್ದೇ ||

ಅರ್ಥ: — ಗುಣಮ್ ತಿಗೞ್ = ಗುಣದಿಂದ ಬೆಳಗುವ, ಕೊಣ್ಡಲ್ = ಮೇಘದಂತೆ ಔದಾರ್ಯ ಶೀಲರಾದ, ಎಙ್ಕುಲಕ್ಕೊೞುನ್ದು = ನಮ್ಮ ವಂಶಕ್ಕೇ ಪ್ರಧಾನಭೂತರಾದ, ಇರಾಮಾನುಶರ್ = ಎಂಬೆರುಮಾನಾರ್ರವರು, ಉಣರ್ನ್ದ = ಭಗವಂತನ ಸ್ವರೂಪರೂಪ ಗುಣವಿಭೂತಿಗಳನ್ನು ಅವನ ಕೃಪೆಯಿಂದ ಪಡೆದು, ಮೆಯ್ ಜ್ಞಾನಿಯರ್ = ಯಥಾರ್ಥ ತತ್ವಜ್ಞಾನಿಗಳಾದ ಆಳ್ವಾರುಗಳ, ಯೋಗನ್ದೊಱುಮ್ = ಪ್ರತಿಯೊಂದು ಕೂಟದಲ್ಲೂ, ತಿರುವಾಯ್ ಮೊೞಿಯಿನ್ = ನಮ್ಮಾಳ್ವಾರವರ ಬಾಯಿಂದ ಹೊರಬಿದ್ದ ತಿರುವಾಯ್ಮೊೞಿ ಎಂಬ ದಿವ್ಯ ಪ್ರಬಂಧದ, ಮಣಮ್ ತರುಮ್ = ಪರಿಮಳವನ್ನು ಬೀರುವ, ಇನ್ ಇಶೈ = ಇಂಪಾದ ಗಾನ ವಿಶೇಷವು, ಮನ್ನುಮ್ = ನಿರಂತರವಾಗಿ ನೆಲೆಸುತ್ತಿರುವ, ಇಡಮ್ ತೊಱುಮ್ = ಎಲ್ಲಾ ಸ್ಥಳಗಳಲ್ಲೂ, ಮಾಮಲರಾಳ್ = ಶ್ಲಾಘ್ಯವಾದ ತಾವರೇ ಹೂವಿನಲ್ಲಿ ಉದ್ಭವಿಸಿದ ಶ್ರೀ ದೇವಿಯು - ಪುಣರ್ನ್ದ = ನಿತ್ಯ ವಾಸಮಾಡುತ್ತಿರುವ - ಪೊನ್ಮಾರ್ವನ್ = ಸುಂದರವಾದ ವಕ್ಷಸ್ಥಲಗಳುಳ್ಳ ಸರ್ವೇಶ್ವರನು, ಪೊರುನ್ದುಮ್ = ನಿತ್ಯವಾಸಮಾಡತಕ್ಕ ಪದಿತೊಱುಮ್ = ಪ್ರತಿಯೊಂದು ದಿವ್ಯ ಕ್ಷೇತ್ರದಲ್ಲೂ, ಪುಕ್ಕು = ಪ್ರವೇಶಿಸಿ, ನಿಱ್ಕುಮ್ — ಪ್ರೀತಿಯಿಂದ - ನಿಲ್ಲುವರಲ್ಲವೇ.

ತಾ: — ಹಿಂದೆಯೆಲ್ಲಾ ಸ್ವಾಮಿ ಎಂಬೆರುಮಾನಾರ್ರವರ ವೇದಮಾರ್ಗ ಪ್ರತಿಷ್ಠಾಪನವನ್ನೂ ಬಾಹ್ಯಮತನಿರಸನ ಸಾಮರ್ಥ್ಯವನ್ನೂ, ವೇದಾರ್ಥ ಪರಿಜ್ಞಾನವನ್ನೂ, ಆ ಜ್ಞಾನವನ್ನು ಲೋಕದವರಿಗೆಲ್ಲಾ ಉಪದೇಶಿಸಿದ ರೀತಿಯನ್ನೂ ಕೊಂಡಾಡಿ-ಆ ಜ್ಞಾನ ಪರಿಪಾಕರೂಪವಾಗಿ ಭಗವದ್ವಿಷಯದಲ್ಲೂ, ಭಗವಂತನಿಗೆ ಛಾಯೆಯಂತೆಯೂ ಪಾದರೇಖೆಯಂತೆಯೂ ಇರುವ ಭಾಗ

ವೆತರ ವಿಷಯದಲ್ಲೂ, ಆ ಇಬ್ಬರ ವೈಭವವನ್ನು ಸಾರುವ, "ತಿರುವಾಯ್ ಮೊೞಿ" ಎಂಬ ಪ್ರಬಂಧದ ವಿಷಯದಲ್ಲೂ ಇವರಿಗೆ ಉಂಟಾಗಿರುವ ನಿರವಧಿಕ ಪ್ರೇಮವನ್ನೂ ಎಲ್ಲರಿಗೂ ತಿಳಿಸಿ ಉಪಕರಿಸುವ ಇವರ ಔದಾರ್ಯವನ್ನೂ ಈ ಪದ್ಯದಲ್ಲಿ ಹೇಳಿರುತ್ತಾರೆ.

61. ಕೊೞುನ್ದು ವಿಟ್ಟೋಡಿಪ್ಪಡರುಮ್ ವೆಮ್ ಕೋಳ್ವಿನೈಯಾಲ್ ನಿರಯ
ತ್ತೞುನ್ದಿಯಿಟ್ಟೇನೈವನ್ದಾಳ್ ಕೊಣ್ಡಪಿನ್ನುಮ್, ಅರುಮುನಿವರ್
ತೊೞುಮ್ ತವತ್ತೋನೆಮ್ಮಿರಾಮಾನುಶನ್ತನ್ ಪುಗೞ್ ಶುಡರ್ಮಿ
ಕ್ಕೆೞುನ್ದದು, ಅತ್ತಾಲ್ ನಲ್ಲದಿಶಯಮ್ ಕಣ್ಡದು ಇರುನಿಲಮೇ ||

ಅರ್ಥ:—ಅರು = ದುರ್ಲಭರಾದ ಮುನಿವರ್ = ಭಗವಧ್ಧ್ಯಾನಪರರು, ತೊೞುಮ್ = ಆಶ್ರಯಿಸುವ, ತವತ್ತೋನ್ = ಶರಣಾಗತಿ ಎಂಬ ತಪಸ್ಸಿನಲ್ಲಿ ನಿಷ್ಠರಾಗಿರುವ, ಎಮ್ ಇರಾಮಾನುಶನ್ ತನ್ = ನಮ್ಮ ಸ್ವಾಮಿ ರಾಮಾನುಜರ, ಪುಗೞ್ = ಕೀರ್ತಿಯೂ, ಗುಣಗಳೂ, ಕೊೞುನ್ದು ವಿಟ್ಟು = ಚಿಗುರಿ, ಓಡಿ = ವೇಗಗತಿಯಿಂದ ಹೋಗಿ, ಪಡರುಮ್ = ಹರಡಿಕೊಳ್ಳುತ್ತಿರುವುವು. ವೆಮ್ = ಕ್ರೂರವಾದ, ಕೋಳ್ = ಗ್ರಹಗಳಿಂದಲೂ, ವಿನೈಯಾಲ್ = ಪಾಪಕರ್ಮಗಳಿಂದಲೂ, ನಿರಯತ್ತು = ನರಕದಲ್ಲಿ, ಅೞುನ್ದಿಯಿಟ್ಟೇನೈ = ಮುಳುಗಿ ಒದ್ದಾಡುತ್ತಿದ್ದ ನನ್ನನ್ನು, ವನ್ದು = ಬಂದು, ಆಳ್ ಕೊಣ್ಡ ಪಿನ್ನುಮ್ = ಆಳಾಗಿ ಸ್ವೀಕರಿಸಿದಮೇಲೇ (ಅನಂತರ), ಶುಡರ್ ಮಿಕ್ಕು = ಅತಿಶಯವಾದ ತೇಜಸ್ಸಿನಿಂದಲೂ ಕೂಡಿ-ಎೞುನ್ದದು = ವೃದ್ಧಿ ಹೊಂದಿದವು. ಅತ್ತಾಲ್ = ಅದರಿಂದ, ಇರುನಿಲಮ್ = ಮಹಾ ಪೃಥಿವಿಯೂಕೂಡ, ನಲ್ಲ = ಒಳ್ಳೇ, ಅತಿಶಯಮ್ = ಆಶ್ಚರ್ಯವನ್ನು - ಕಣ್ಡತು = ನೋಡಿತು.

ತಾ:—"ಗುಣನ್ ತಿಗೞ್ ಕೊಂಡಲ್" ಎಂದು ಕೊಂಡಾಡಿದ ಸ್ವಾಮಿ ರಾಮಾನುಜಾಚಾರ್ಯರ ಕಲ್ಯಾಣಗುಣ ವೈಭವವನ್ನು ಈ ಪದ್ಯದಲ್ಲಿ ಹೇಳುತ್ತಾರೆ "ಅತ್ಯಂತ ಕ್ರೂರಪಾಪಿಯಾಗಿ ಸಂಸಾರ ಸಾಗರದಲ್ಲಿ ಮುಳುಗು

ಕ್ಷಿಪ್ತ ನನ್ನನ್ನು ಉದ್ಧರಿಸಬೇಕೆಂಬುದಾಗಿ ತಮ್ಮ ಪರಮಾನುಗ್ರಹದಿಂದ ಇಲ್ಲಿಗೇ ಬಂದಿದ್ದು ಸ್ವರೂಪವನ್ನು ತೋರಿಸಿಕೊಂಡು ಬಂದು ನನ್ನನ್ನು ತನಗೆ ದಾಸನಾಗುವ ಹಾಗೆ (ಶೇಷ) ಮಾಡಿ, ರಕ್ಷಿಸಿದ ಮೇಲೆ ತಾನೇ ಪರಾಂಕುಶ, ಪರಕಾಲ, ನಾಥಯಾಮುನಾದಿ, ಆಚಾರ್ಯರುಗಳೆಲ್ಲಾ ತಮ್ಮ ಹಸ್ತದಲ್ಲಿ ಇರಿಸಿದ ಪ್ರತಿ ಪತ್ತಿ ಮಾಡುವಹಾಗೆಯಿದ್ದು, "ಶೆರಿಂದ ಪೆರುಮಾಳ್" ಎಂಬ ಶ್ರೀ ರಂಗ ನಾಥ ಸ್ವಾಮಿಯು ಪಾದಾರವಿಂದಗಳಲ್ಲಿ ಸಕಲ ಚೇತನೋಜ್ಜೀವನ ಮಾರ್ಗ ನಾಗಿ ಕರೆದಾಗಲೆಯೂ ನುಡಿದ ತನ್ನಗಳಿಂದ ಪಾವನಾರ್ಥವಾದ ಯಾವದಾತ್ಮ ಕಲ್ಯಾಣ ಗುಣಗಳು ಸಮಸ್ತ ದಿಕ್ಕುಗಳಲ್ಲೂ ವ್ಯಾಪಿಸಿ ಅತ್ಯಂತ ಸ್ವಭಾವ ದಿಂದಲೂ ಪ್ರಖ್ಯಾತಿಯಿಂದಲೂ ಕೂಡಿ ಉಜ್ವಲವಾಗಿರುವವು" ಎನ್ನುತ್ತಾರೆ.

62. ಇರುನ್ದೇನಿರುವಿನೈಪ್ಪಾಶಂಕಳಟ್ರಿನ್ರು ಯಾನಿಱೈಯುಮ್
ವರುನ್ದೇನಿನಿಯೆಮ್ಮಿರಾಮಾನುಶನ್ ಮನ್ನುಮಾಮಲರ್ತ್ತಾಳ್
ಪೊರುನ್ದಾನಿಲೈಯುಡೈಪ್ಪುನ್ಮೈಯಿನೋರ್ಕ್ಕೊನ್ರುಮ್
ನನ್ಮೈಸೆಯ್ಯಾ
ಪ್ಪೆರುನ್ದೇವರೈಪ್ಪರವುಮ್ ಪೆರಿಯೋರ್ ತಮ್ ಕಳಲ್ ಪಿಡಿತ್ತೇ ||

ಅರ್ಥ:—ಎಮ್ ಇರಾಮಾನುಶನ್ = ನಮ್ಮ ಸ್ವಾಮಿಯಾದ ರಾಮಾನುಜರ, ಮನ್ನು = ಆಶ್ರಿತ ರಕ್ಷಣದಲ್ಲಿ ದೀಕ್ಷಿತವಾಗಿ ಪರಸ್ಪರ ಹೊಂದಿಕೊಂಡಿರುವ, ಮಾ = ಪರಮ ಪ್ರಾಪ್ಯವೂ ಪ್ರಾಪ್ಯವೂ ಆದ, ಮಲರ್ = ಪುಷ್ಪದಂತಿರುವ, ತಾಳ್ = ಪಾದಗಳನ್ನು, ಪೊರುನ್ದಾ = ಆಶ್ರಯಿಸದ, ನಿಲೈಯುಡೈ = ಸ್ವಭಾವವುಳ್ಳ - ಪುನ್ಮೈಯಿನೋರ್ಕ್ಕು = ಕ್ಷುದ್ರ ಮನುಷ್ಯರಿಗೆ, ಒನ್ರುಮ್ = ಸ್ವಲ್ಪವಾದರೂ, ನನ್ಮೈಸೆಯ್ಯಾ = ಹಿತವನ್ನು ಮಾಡದೇ ಇರುವ - ಪೆರುನ್ ದೇವರೈ = ದಿವ್ಯಸೂರಿಗಳನ್ನು - ಪರವುಮ್ = ಕೊಂಡಾಡುವ, ಪೆರಿಯೋರ್ ತಮ್ = ಪ್ರಭಾವಶಾಲಿಗಳಾದ ಕೂರತ್ತಾಳ್ವಾರ್ ಮೊದಲಾದ ಹಿರಿಯರ, ಕಳಲ್ = ಶ್ರೀ ಪಾದಗಳನ್ನು, ಪಿಡಿತ್ತು = ಆಶ್ರಯಿಸಿ, ಇನ್ರು = ಇಂದು, ಇರುವಿನೈ = ಪುಣ್ಯ ಪಾಪಗಳೆಂಬ ಎರಡು ಕರ್ಮಗಳ, ಪಾಶಮ್ = ಸಂಕೋಲೆಯನ್ನು - ಕಳಟ್ರು = ನೀಗಿ, ಇರುನ್ದೇನ್ = ಕೃತಕೃತ್ಯನಾಗಿ ಇರುತ್ತೇನೆ. ಯಾನ್ = ನಾನು, ಇನಿ = ಇನ್ನುಮೇಲೆ - ಇಱೈ

ಯುವರ್ — ಸ್ವಲ್ಪವಾದರೂ ವರುನ್ದೇನ್ = ಸಂಸಾರ ತಾಪದಿಂದ ದುಃಖ ಪಡುವುದಿಲ್ಲ.

ಭಾ:—ಹಿಂದೆ, ಸಮಸ್ತ ಕಲ್ಯಾಣಗುಣಾತ್ಮಕರಾದ ಸ್ವಾಮಿ ಎಂಬೆರುಮಾನಾರ್ರವರು ತಮ್ಮನ್ನು ಉದ್ಧರಿಸಬೇಕೆಂದು ಹುಡುಕುತ್ತಾ ಅಲ್ಲಿಲ್ಲಿ ಸುತ್ತುತ್ತಿದ್ದುದನ್ನೂ, ಅವರು ನಿರ್ಹೇತುಕವಾದ ತಮ್ಮನ್ನು ಭಗವದ್ಭಾಗವತ ಕೈಂಕರ್ಯಪರನನ್ನಾಗಿ ಮಾಡಿದಮೇಲೆ ಅವರ ಕಲ್ಯಾಣಗುಣಗಳು ಉಜ್ವಲವಾಗಿ ಬೆಳಗಿದ ಪರಿಯನ್ನೂ ಹೇಳಿ, ಈ ಪದ್ಯದಲ್ಲಿ ಅವರ, (ನಮ್ಮ ಸ್ವಾಮಿ ರಾಮಾನುಜರ), ಚರಣಾರವಿಂದಗಳನ್ನು ಆಶ್ರಯಿಸದ, ಮುಮುಕ್ಷುಗಳಿಗೆ ಹಿತವನ್ನೆಸಗದ, ನಿತ್ಯ ಸೂರಿಗಳನ್ನಾಗಲಿ ಆಳ್ವಾರುಗಳನ್ನಾಗಲಿ, ಸದಾ ಸ್ತೋತ್ರಮಾಡಿಕೊಂಡು ಭಜಿಸುವ ಜ್ಞಾನಾಧಿಕರಾದ ಕೂರತ್ತಾಳ್ವಾರ್ ಮೊದಲಾದ ಮಹಾ ಶ್ರೀಭಾಗವತರುಗಳ ಅಡಿದಾವರೆಗಳನ್ನು ಆಶ್ರಯಿಸಿದ ಮೇಲೆ ಪುಣ್ಯಪಾಪಗಳೆಂಬ ಎರಡುವಿಧವಾದ ಕರ್ಮಗಳ ಬಂಧದಿಂದ ವಿಮುಕ್ತನಾಗಿ ನಾನು ಕೃತಕೃತ್ಯನಾಗಿರುವೆನು. ಇನ್ನುಮೇಲೆ ಸ್ವಲ್ಪವಾದರೂ ದುಃಖ ಪಡುವುದಿಲ್ಲವೆಂದು ತಿಳಿಸುತ್ತಾರೆ.

63. ಪಿಡಿಯೈತ್ತೊಡರುಮ್ ಕಳಿರೆನ್ನ, ಯಾನುನ್ ಪಿರಂಗಿಯಶೀರ್
ಅಡಿಯೈತ್ತೊಡರುಮ್ಪಡಿ ನಲ್‌ಗವೇಣ್ಡುಮ್, ಅರುಶಮಯ
ಚ್ಚೆಡಿಯೈತ್ತೊಡರುಮ್ ಮರುಳ್ ಶೆರಿನ್ದೋರ್ ಶಿದೈನ್ದೋಡವನ್ದಿ
ಪ್ಪಡಿಯೈತ್ತೊಡರುಮ್ ಇರಾಮಾನುಶಾ ಮಿಕ್ಕ ಪಣ್ಡಿತನೇ ||

ಅರ್ಥ: - ಅರುಶಮಯಮ್ = ವೇದಬಾಹಿರಗಳಾದ ಆರುಮತಗಳ, ಶೆಡಿಯೈ = ಪೊದರನ್ನು, ತೊಡರುಮ್ = ಅನುಸರಿಸುತ್ತಿರುವ. ಮರುಳ್ = ಅಜ್ಞಾನವು. ಶೆರಿನ್ದೋರ್ = ನಿಬಿಡವಾಗಿ ಸೇರಿರುವವರು. ಶಿದೈನ್ದು = ಭಗ್ನರಾಗಿ, ಓಡ = ಓಡಿಹೋಗುವಂತೆ ಪರಮ ಪದದಿಂದ, ವನ್ದು = ಭೂಮಿಗೆ ಬಂದು, ಇಪ್ಪಡಿಯೈ = ಈ ಭೂಲೋಕದಲ್ಲಿರುವವರನ್ನು, ತೊಡರುಮ್ = ಅನುಸರಿಸುತ್ತಿರುವ, ಮಿಕ್ಕ ಪಣ್ಡಿತನ್ = ನಿರವಧಿಕವಾದ ಪಾಂಡಿತ್ಯವುಳ್ಳ, ಇರಾಮಾನುಶಾ = ಸ್ವಾಮಿ ರಾಮಾನುಜರೇ! ಪಿಡಿಯೈ = ಹೆಣ್ಣಾನೆಯನ್ನು,

ತೊಡರುಮ್ = ಅನುಸರಿಸಿ ಹೋಗುವ, ಕಳಿರೆನ್ನ = ಗಂಡಾನೆಯಂತೆ, ಯಾನ್ = ನಾನು, ಉನ್ = ನಿಮ್ಮ, ತೇಸ್‌ಪೆರುಂಗಿಯ = ಕಲ್ಯಾಣಗುಣ ಗಳಿಂದ ಪ್ರಕಾಶಿಸುತ್ತಿರುವ, ಅಡಿಯೈ = ಅಡಿತಾವರೆಗಳನ್ನು, ತೊಡರುಮ್ ಪಡಿ = ಆಶ್ರಯಿಸಿ ಸೇವೆ ಮಾಡುವಹಾಗೆ, ನಲ್ಗವೇಣ್ಡುಮ್ — ಅನು ಗ್ರಹಿಸಬೇಕು.

ತಾ: — "ನಮ್ಮ ಸ್ವಾಮಿ ರಾಮಾನುಜರ ಅಡಿದಾವರೆಗಳನ್ನು ಆಶ್ರಯಿ ಸದ ಮನುಷ್ಯರಿಗೆ ಆನುಕೂಲ್ಯವನ್ನು ಮಾಡದ - ಹಿರಿಯರನ್ನು ಅನುಸರಿ ಸುತ್ತಿರುವ ಮಹಾತ್ಮರ ಅಡಿಗಳನ್ನು ಆಶ್ರಯಿಸಿ ಪ್ರಾಪ್ತಿ ಪ್ರತಿಬಂಧಕಗಳಾದ ಪುಣ್ಯ ಪಾಪ ರೂಪವಾದ ಕರ್ಮಪಾಶಗಳಿಂದ ಮುಕ್ತನಾಗಿ ಸಂಸಾರತಾಪವು ಯಾವಾಗಲೂ ತಟ್ಟದಹಾಗೆ ಇದ್ದೆನು." ಎಂದು ಸ್ವಾಮಿ ರಾಮಾನುಜರ ಅಡಿಗಳ ಪರಂಪರಾ ಸಂಬಂಧವನ್ನುಳ್ಳವರ ಪ್ರಭಾವವನ್ನು ಹಿಂದಿನ ಪದ್ಯದಲ್ಲಿ ಕೊಂಡಾಡಿ "ಈಗ ಅಂಥಾ ಅಡಿದಾವರೆಗಳಲ್ಲಿ ತನಗೆ ಉಂಟಾದ ಪ್ರಾವಣ್ಯಾ ತಿಶಯವು ಬದಲಾಗದೆ ಸದಾ ಏಕರೂಪವಾಗಿರಬೇಕೆಂದು ಕೋರಿ ಅವೈದಿಕ ಮತಸ್ಥರೆಲ್ಲಾ ನಿಶ್ಶೇಷವಾಗಿ ಭಗ್ನರಾಗಿ ಚೆದರಿ ಓಡುವಂತೆ ಈ ಭೂಲೋಕ ದಲ್ಲಿ ಬಂದು ಅವತರಿಸಿ, ಅಂಥಾ ಬಾಹ್ಯ ಕುದೃಷ್ಟಿಗಳನ್ನು ಅವರ ಮೇಲೆ ದಂಡೆತ್ತಿ ತರಿಯುವಂತೆ ಜ್ಞಾನಪೌಷ್ಕಲ್ಯವನ್ನು ಹೊಂದಿರುವ ಸ್ವಾಮಿರಾಮಾ ನುಜಾಚಾರ್ಯರೇ! ನಿಮ್ಮ ಅಡಿಗಳಲ್ಲಿ ವಿಶೇಷ ಭಕ್ತಿಯುಂಟಾಗಿರುವಂತೆ ದಾಸ ನಾದ ನನಗೆ ಕೃಪೆಗೈದು ಅನುಗ್ರಹಿಸಬೇಕೆಂದು ಅವರನ್ನು ಸಂಬೋಧಿಸಿ ವಿಜ್ಞಾಪನೆ ಮಾಡುತ್ತಾರೆ.

**64.** ಪಣ್ಡರು ಮಾಱನ್ಪಶುನ್ದಮಿೞ್, ಆನನ್ದಮ್ ಪಾಯ್
ಮದಮಾಯ್
ವಿಣ್ಡಿಡವೆಂಗಳಿರಾಮಾನುಶಮುನಿವೇೞಮ್, ಮೆಯ್ಮ್ಮೈ
ಕೊಣ್ಡನಲ್ವೇದಕ್ಕೊೞುನ್ದಣ್ಡಮೇನ್ದಿಕ್ಕುವಲಯತ್ತೇ
ಮಣ್ಡಿವನ್ದೇನ್ಱದು, ವಾದಿಯರ್ಗಾಳುಂಗಳ್ ವಾೞ್ವಱ್ಱದೇ ॥

ಅರ್ಥ: — ಎಂಗಳ್ — ನಮ್ಮ, ಇರಾಮಾನುಶಮುನಿ ವೇೞಮ್ = "ರಾಮಾನುಜಮುನಿ" ಯೆಂಬ ಮದಗಜವು, ಮಾಱನ್ = ನಮ್ಮಾಳ್ವಾ

ಪ್ರವರ, ಪಣ್‌ತರು = ಗಾನ ಪ್ರಧಾನವಾದ (ಪ್ರಾಚೀನವಾಗಿ ದುರ್ಲಭವಾದ,
ಪಸುನ್ದಮಿಳ್ = ಸುಂದರವಾದ ದ್ರಾವಿಡಭಾಷಾ ರೂಪದಲ್ಲಿರುವ “ತಿರುವಾ
ಯ್ಮೊಳಿ” ಎಂಬ ಪ್ರಬಂಧದ ಗಾನದಿಂದ ಉಂಟಾದ, ಆನನ್ದಮ್ =
ಆನಂದವು-, ಪಾಯ್‌ಮದಮಾಯ್ = ಪ್ರವಹಿಸುತ್ತಿರುವ ಮದ ಜಲದಂತೆ,
ವಿಣ್ಡಿಡ = ವ್ಯಾಪಿಸಲು. ಮೆಯ್‌ಮ್ಮೈಕೊಣ್ಡ = ಸತ್ಯವಾದ, ನಲ್
ವೇದವನ್ = ಸಕಲ ಪ್ರಮಾಣವಾದ ವೇದವೆಂಬ, ಕೊೞುನ್ದಣ್ಡಮ್ =
ಸುಂದರವಾದ ದಂತವನ್ನು - (ಗದೆಯನ್ನು) ಏನ್ದಿ = ಧರಿಸಿಕೊಂಡು, ಕುವ
ಲಯತ್ತೇ = ಈ ಭೂಲೋಕದಲ್ಲಿ, ಮಣ್ಡಿವನ್ದು = ಎಲ್ಲೆಲ್ಲೂ ತಳ್ಳಿಕೊಂಡು,
ಏನ್ರದು = ನಿಮ್ಮನ್ನು ಎದುರಿಸಿ ನಿಂತಿದೆ. ವಾದಿಯರ್‌ಗಾಳ್ = ಎಲೈ
ಒಣ ವಾದವನ್ನಾಡುತ್ತಿರುವವರೇ - ಉಂಗಳ್ = ನಿಮ್ಮ - ವಾೞ್ವು = ಬಾಳು,
ಅತ್ತದೇ = ಅಳಿಯಿತಯ್ಯೋ! (ಪರಾಜಿತರಾದಮೇಲೆ ಇನ್ನು ಏತಕ್ಕೆ ವೃಥಾ
ಶ್ರಮಿಸಿ ನಶಿಸುವಿರಿ) ಎಂದು ಭಾವವು.

ತಾ:— “ಬಾಹ್ಯಮತ ನಿರಸನಕ್ಕಾಗಿ ರಾಮಾನುಜಾಚಾರ್ಯರು ಅವ
ತರಿಸಿ ಬಂದು ಗಾನಪ್ರಧಾನವಾದ “ತಿರುವಾಯ್ಮೊಳಿ” ಎಂಬ, ನಮ್ಮಾಳ್ವಾ
ರ್ಪ್ರವರ, ದಿವ್ಯ ಪ್ರಬಂಧವನ್ನು ಈ ಭೂಲೋಕದಲ್ಲಿ ಎಲ್ಲೆಲ್ಲೂ ವ್ಯಾಪಿಸುವಂತೆ
ಮಾಡಿ, ಮದಗಜದಂತೆ - ನಿಮ್ಮನ್ನು ನಿಗ್ರಹಿಸಲು ಹುಡಿಕಿ
ಕೊಂಡು ಬಂದು ಎದುರಿಸಿದಲ್ಲವೆ - ಎಲೈ ಒಣವಾದಿಗಳೇ! - ನಿಮ್ಮ ವಾದ
ಗಳ ಆಡಂಬರ, ಅಟ್ಟಹಾಸಗಳ (ಹೀನವಾದ) ಬಾಳು ಬೇರುಸಹಿತವಾಗಿ ಹಾಳಾ
ಯಿತಲ್ಲವೇ - ಪರಾಜಿತರಾದ ಮೇಲೆ ಇನ್ನು ನೀವು ಏತಕ್ಕೆ ವೃಥಾ ಶ್ರಮಿಸು
ತ್ತೀರಿ - ವೇದವು ಶಾಶ್ವತವಾಗಿ ನಿಂತಿತು.” ಎಂದು ಹೇಳುತ್ತಾರೆ.

65. ವಾೞ್ವತ್ತದು ತೊಲ್ಲೈವಾದಿಯರ್‌ಕ್ಕು, ಎನ್ರುಮ್ಮರೈ
ಯವರ್‌ತಮ್

ತಾೞ್ವತ್ತದು, ತವಮ್ ತಾರಣಿಪೆತ್ತದು, ತತ್ತುವನೂಲ್,
ಕೂೞತ್ತದು ಕುತ್ತಮೆಲ್ಲಾಮ್ಪದಿತ್ತ ಗುಣತ್ತಿನರ್‌ಕ್ಕನ್
ನಾೞತ್ತದು, ನಮ್ಮಿರಾಮಾನುಶನ್ ತನ್ದ ಜ್ಞಾನತ್ತಿಲೇ ||

ಅರ್ಥ:—ನಮ್ ಇರಾಮಾನುಶನ್ = ನಮ್ಮ ಸ್ವಾಮಿ ರಾಮಾನುಜರು, ತನ್ದ ಜ್ಞಾನತ್ತಿಲೇ = ಉಪದೇಶಿಸಿ ಅನುಗ್ರಹಿಸಿದ ಜ್ಞಾನದಿಂದ - ತೊಲ್ಲೈ ವಾದಿಯರ್ಕ್ಕು = ಅನಾದಿಯಾದ ವೇದಬಾಹ್ಯ ಮತಸ್ಥರಾದ ಕುದೃಷ್ಟಿವಾದಿಗಳಿಗೆ, ವಾಳ್ವತ್ತ್ರದು = ಉಜ್ಜೀವನವು ನಾಶವಾಯಿತು, ಎನ್ರುಂ ಮರೈಯವರ್ ತಮ್ = ಸರ್ವ ಕಾಲದಲ್ಲೂ ಪರಮ ವೈದಿಕರ, ತಾೞ್ವು ಅತ್ತ್ರದು = ಕೊರತೆಯೂ ನಾಶವಾಯಿತು, ತಾರಣಿ = ಈ ಭೂಮಿಯೂ, ತವಮ್ = ಅಪೂರ್ವವಾದ ಭಾಗ್ಯವನ್ನು, ಪೆತ್ತ್ರದು = ಪಡೆಯಿತು. ತತ್ತುವನೂಲ್ ಕೂೞ್ ಅತ್ತ್ರದು = ತತ್ವವನ್ನು ಪ್ರತಿಪಾದಿಸುವ ಶಾಸ್ತ್ರಗಳ, ಸಂಶಯಗಳೆಲ್ಲವೂ ಪರಿಹೃತವಾಯಿತು. ಕುತ್ತ್ರಮೆಲ್ಲಾಂ = ಸಕಲ ದೋಷಗಳೂ, ಪದಿತ್ತ = ತುಂಬಿರುವ, ಗುಣತ್ತಿನರ್ಕ್ಕು = ಸ್ವಭಾವ ಗುಣವುಳ್ಳವರಿಗೆ- ಅನ್ನಾೞ್ = ಆ ದೋಷಗಳೆಲ್ಲವೂ, ಅತ್ತ್ರದು = ನಾಶವಾದವು.

ತಾ:—ಸ್ವಾಮಿ ರಾಮಾನುಜರು ದಿವ್ಯ ದೇಶಯಾತ್ರೆಗೆ ಹೊರಟ ಒಡನೆ, ಪ್ರತಿವಾದಿಗಳ ಬಾಳು ಬೇರುಸಹಿತ ನಾಶ ಹೊಂದಿದ ವಿಚಾರವನ್ನು ಹೇಳಿದ ನಂತರ - ಈ ಪದ್ಯದಲ್ಲಿ. ಅವರ ಸಮೀಚೀನ ಜ್ಞಾನದಿಂದ ಬಾಹ್ಯ ಕುದೃಷ್ಟಿಗಳಿಗೆ ಉಂಟಾದ ನಾಶವನ್ನೂ ಲೋಕದವರಿಗೆಲ್ಲಾ ಉಂಟಾದ ಸಮೃದ್ಧಿಯನ್ನೂ ಹಲವು ಪ್ರಕಾರವಾಗಿ ಹೇಳಿಕೊಂಡು ಸಂತುಷ್ಟರಾಗುತ್ತಾರೆ. ರಾಮಾನುಜಾಚಾರ್ಯರು ಉಪದೇಶಿಸಿದ ಜ್ಞಾನದಿಂದ ಕುದೃಷ್ಟಿಗಳ ಅಪ್ರಾಮಾಣ್ಯ ಕಲ್ಪನಾಶಕ್ತಿ ನಾಶವಾಗಿ ವೇದಮಾರ್ಗಾನುಯಾಯಿಗಳಿಗೆ ಸರಿಯಾದ ಅರ್ಥ ತಿಳಿದು ತತ್ವಶಾಸ್ತ್ರಗಳ ಸಂಶಯನಿವೃತ್ತಿಯಾಗಿ ಭೂಮಿಯಲ್ಲಿ ಭಾಗ್ಯವೂ ಧರ್ಮವೂ ನೆಲೆಗೊಳ್ಳುವಂತಾಯಿತು. ಎನ್ನುತ್ತಾರೆ.

**66.** ಜ್ಞಾನಙ್ ಕನಿನ್ದ ನಲಙ್ ಕೊಣ್ಡು, ನಾಳ್ ಕೋರುಮ್
ನೈಬವರ್ಕ್ಕು
ವಾನಙ್ ಕೊಡುಪ್ಪದು ಮಾದವನ್, ವಲ್ವಿನೈಯೇನ್ ಮನತ್ತಿನಿಲ್
ಈನಙ್ ಕಡಿನ್ದ ಇರಾಮಾನುಶನ್ ತನ್ನೈ ಎಯ್ದಿನರ್ಕ್ಕು
ತ್ತಾನಙ್ ಕೊಡುಪ್ಪದು, ತನ್ ತಗವೆನ್ನುಮ್ ಶರಣ್ ಕೊಡುತ್ತೇ॥

ಅರ್ಥ:—ಮಾದವನ್ = ಶ್ರಿಯಃಪತಿಯಾದ ಸರ್ವೇಶ್ವರನು - ಜ್ಞಾನ

ನಮ್ ಕನಿನ್ದ = ಜ್ಞಾನಪರಿಪಾಕವಾದ -, ನಲಮ್ ಕೊಣ್ಡು = ಪ್ರೀತಿರೂಪವಾದ ಭಕ್ತಿಯಿಂದ, ನಾಳ್ ತೋರುಮ್ = ಪ್ರತಿದಿನವೂ, ನೈಬವರ್ ಕ್ಕು = ದೇಹವು ಶಿಥಿಲವಾಗುತ್ತಿರುವವರಿಗೆ ಮಾತ್ರ, ವಾನಮ್ ಕೊಡುಪ್ಪದು = ಪರಮ ಪದವನ್ನು ಕೊಡುತ್ತಾನೆ. ವಲ್ ವಿನೈಯೇನ್ = ಮಹಾ ಪಾಪಿಯಾದ ನನ್ನ, ಮನತ್ತಿಲ್ = ಮನಸ್ಸಿನಲ್ಲಿದ್ದ, ಈನಮ್ ಕಡಿನ್ದ = ದೋಷವನ್ನು ಹೋಗಲಾಡಿಸಿದ, ಇರಾಮಾನುಶನ್ = ಶ್ರೀರಾಮಾನುಜರು-ತನ್ ತಕವ್ವು ಎನ್ನುಮ್ = ತಮ್ಮ ಕೃಪೆಯೆಂಬ, ಶರಣ್ ಕೊಡುತ್ತು = ಸಾಧನವನ್ನು ಕೊಟ್ಟು, ತನ್ನೈ ಯೆಯ್ದಿನರ್ ಕು = ತನ್ನನ್ನು ಆಶ್ರಯಿಸಿದವರಿಗೆ-ಅತ್ತಾನಮ್ ಕೊಡುಪ್ಪದು= ಆ ಸ್ಥಾನವನ್ನು ಕೊಡುವರು.

ತಾ :—ಸರ್ವೇಶ್ವರನು ಅನ್ನಪಾನಾದಿಗಳನ್ನು ಬಿಟ್ಟು ಅಘೋರ ತಪಸ್ಸು ಮಾಡಿ ತಮ್ಮ ದೇಹಗಳನ್ನು ಶಿಥಿಲ ಮಾಡಿಕೊಂಡ ಕೆಲವರು ಭಕ್ತರುಗಳಿಗೆ ಮಾತ್ರ, ಮೋಕ್ಷ ಸಾಮ್ರಾಜ್ಯವನ್ನು ನೀಡುವನು. ಆದರೆ ಶ್ರೀರಾಮಾನುಜಾಚಾರ್ಯರು "ನೀನೇ ಗತಿ ಎಂದು ತಮ್ಮನ್ನು ಆಶ್ರಯ ಮಾಡುವವರನ್ನೆಲ್ಲಾ ಕಟಾಕ್ಷಿಸಿ ಮೋಕ್ಷ ಮಾರ್ಗವನ್ನು ಅನುಗ್ರಹಿಸುವರು" ಎಂದು ಹೇಳುತ್ತಾರೆ ಅಮುದನಾರು. (ತಮ್ಮನ್ನು ಕುರಿತು ಅಘೋರ ತಪಸ್ಸು ಮಾಡುವವರಿಗೆ ಸಿಗುವ ಮೋಕ್ಷಸಾಮ್ರಾಜ್ಯವು, ತಮ್ಮ ಪರಮಭಕ್ತರಾದ ಶ್ರೀ ರಾಮಾನುಜರನ್ನು ಆಶ್ರಯಿಸುವ ಪಾಮರ ಗೃಹಸ್ಥರು, ಪಾಪಿಗಳು ಮುಂತಾದವರಿಗೂ ಸುಲಭವಾಗಿ ನೀಡುವನು ಶ್ರೀಮನ್ನಾರಾಯಣನು ಎಂಬುದು ಇದರ ಸಾರಾಂಶ).

67. ಶರಣಮಡೈನ್ದ ದರುಮನುಕ್ಕಾ, ಪಣ್ಡು ನೂತ್ತುವರೈ
ಮರಣಮಡೈವಿತ್ತ ಮಾಯವನ್, ತನ್ನೈ ವಣಂಗವೈತ್ತ
ಕರಣಮಿವೈಯುಮಕ್ಕನ್ರೆನ್ರು ರಾಮಾನುಶನುಯಿರ್ಗಳ್
ಕ್ಕರಣಮೈತ್ತಿಲನೇಲ್, ಅರಣಾರ್ ಮತ್ತಿವ್ವಾರುಯಿರ್ ಕ್ಕೇ ||

ಅರ್ಥ :—ಶರಣಮ್ ಅಡೈನ್ದ = ಶರಣಾಗತನಾದ, ದರುಮನುಕ್ಕಾ = ಧರ್ಮಪುತ್ರನಿಗೋಸ್ಕರ, ಪಣ್ಡು = ಹಿಂದೆ (ದ್ವಾಪರಯುಗದಲ್ಲಿ) ನೂತ್ತುವರೈ =

ದುರ್ಯೋಧನಾದಿ ನೂರುಮಂದಿ ಕೌರವರನ್ನು. ಮಾಳಪ್ ಪಡೈತ್ತ = ಮರಣಹೊಂದಿಸಿ ಸಂಹರಿಸಿದ. ಮಾಯವನ್ — ಆಶ್ಚರ್ಯ ಚೇಷ್ಟಿತನಾದ ಸರ್ವೇಶ್ವರನು, ತನ್ನೈ ಪ್ಪಣಿಂಗವೈತ್ತ = ತನ್ನನ್ನು ಆಶ್ರಯಿಸಿಉಜ್ಜೀವಿಸಲೆಂದು, ಚೇತನರಿಗೆ ಕರುಣಿಸಿ ಕೊಟ್ಟಿರುವ - ಕರಣವಾಙ್ಗಿವೈ = ಇಂದ್ರಿಯಂಗಳು ಇವ್ವೈಉಮಕ್ಕು ಅನ್ರು ಎನ್ರು = ನಿಮಗಾಗಿ ಅಲ್ಲ, ನಿಮಗೆ ಸಂಸರಿಸುವುದಕ್ಕಲ್ಲ ವೆಂದು, ಅಂಗು = ಆ ಸಮಯದಲ್ಲಿ - ಇರಾಮಾನುಶನ್ = ಸ್ವಾಮಿ ರಾಮಾನುಜರು, ಉಯಿರ್ಗಳುಕ್ಕು = ಆ ಚೇತನರುಗಳಿಗೆಲ್ಲಾ ಅರಣ್ = ರಕ್ಷೆಯನ್ನು - ಅಮೈತ್ತಿಲನೇಲ್ = ಕಲ್ಪಿಸದೇ ಹೋಗಿದ್ದರೆ. ಇವ್ವಾರುಯಿರ್ಕ್ಕು = ಈ ಆತ್ಮಗಳಿಗೆ - ಮತ್ತು ಅರಣ್ ಆರ್ = ಬೇರೆ ರಕ್ಷಕರು ಯಾರು.

ತಾ: ಹಿಂದಿನ ಎರಡು ಪದ್ಯಗಳಲ್ಲೂ ಸ್ವಾಮಿ ಎಂಬೆರುಮಾನಾರ್‌ರವರ ಜ್ಞಾನ ಪ್ರಧಾನ ವೈಭವವನ್ನೂ—ಮೋಕ್ಷ ಪ್ರಧಾನ ವೈಭವವನ್ನೂ ಪ್ರಕಟಪಡಿಸಿ ಈ ಪದ್ಯದಲ್ಲಿ ಕೇವಲ ಇಂದ್ರಿಯ ಕಿಂಕರರಾಗಿರುವ ಸಂಸಾರಿಗಳನ್ನು ನೋಡಿ "ಅಚಿತ್ಕಲ್ಪರಾಗಿ ಭೋಗ ಮೋಕ್ಷ ಶೂನ್ಯರಾಗಿದ್ದ ನಿಮ್ಮಗಳಿಗೆ ಭಗವಂತನು ಇಂದ್ರಿಯಂಗಳನ್ನು ಕೊಟ್ಟಿರುವುದು ಏಕೆಂದರೆ, ಅವನನ್ನು ಆಶ್ರಯಿಸಿ ಉಜ್ಜೀವಿಸುವುದಕ್ಕೋಸ್ಕರವೇ. ಆದ್ದರಿಂದಾ ಸರ್ವೇಶ್ವರನನ್ನೇ ಆಶ್ರಯಿಸಿ ಉಜ್ಜೀವಿಸಿರಿ" ಎಂದು ಸ್ವಾಮಿ ಎಂಬೆರುಮಾನಾರ್‌ರವರು ಉಪದೇಶಿಸದೇ ಇದ್ದಿದ್ದರೆ, ಈ ಚೇತನರುಗಳಿಗೆ ಬೇರೆ ರಕ್ಷಕರು ಯಾರು ಇರುತ್ತಿದ್ದರು? ಎಂದು ಸಿದ್ಧರಾಗಿ ಅವರ ಮಹೋಪಕಾರವನ್ನು ಕೊಂಡಾಡುತ್ತಾರೆ.

68\. ಆರೆನಕ್ಕಿನ್ರು ನಿಗರ್ ಶೊಲ್ಲಿಲ್, ಮಾಯನನ್ರೈವರ್ ದೆಯ್ವತ್
ತ್ತೇರಿನಿಲ್ ಶೆಪ್ಪಿಯಗೀತೈಯಿನ್ ಶೆಮ್ಮೈ, ಪ್ಪೊರುಳ್ ತೆರಿಯ
ಪ್ಪಾರಿನಿಲ್ ಶೊನ್ನ ಇರಾಮಾನುಶನೈಪ್ಪಣಿಯುಮ್ ನಲ್ಲೋರ್
ಶೀರಿನಿಲ್ ಶೆನ್ರು ಪಣಿಂದದು ಎನ್ನಾವಿಯುಮ್ ಶಿನ್ದೈಯುಮೇ||

ಅರ್ಥ :—ಮಾಯನ್ = ಆಶ್ಚರ್ಯ ಚೇಷ್ಟಿತನಾದ ಕೃಷ್ಣನನ್ನು, ಅನ್ರು = ಅಂದು (ಮಹಾ ಭಾರತ ಯುದ್ಧಕಾಲದಲ್ಲಿ) - ಐವರ್ = ಪಂಚಪಾಂಡವರ-ದೆಯ್ವತ್ತೇರಿನಿಲ್ = ದೇವದೇವನಾದ ಶ್ರೀ ಕೃಷ್ಣನ ಪಾದಸ್ಪರ್ಶದಿಂದ-ಪ್ರಾಶಸ್ತ್ಯವೆನಿಸಿದ, ರಥದಲ್ಲಿ, ಶೆಪ್ಪಿಯ = ಬೋಧಿಸಿದ, ಗೀತೈಯಿನ್ = ಭಗವ

ದ್ಗೀತೆಯ, ಶೆಮ್ಮೈಪ್ಪೊರುಳ್ = ಸಮೀಚೀನವಾದ ತತ್ತ್ವಾರ್ಥಗಳನ್ನು, ಪಾರಿನಿಲ್ = ಭೂಲೋಕದಲ್ಲಿ ಎಲ್ಲರೂ, ತೆರಿಯ = ಸುವ್ಯಕ್ತವಾಗಿ ತಿಳಿದುಕೊಳ್ಳುವಂತೆ, ಶೊನ್ನ = ಹೇಳಿದ, ಇರಾಮಾನುಶನೈ = ಸ್ವಾಮಿ ರಾಮಾನುಜರನ್ನು, ಪಣಿಯುಮ್ = ಆಶ್ರಯಿಸಿರುವ, ನಲ್ಲೋರ್ = ಸಜ್ಜನರ - ಶೀರಿನಿಲ್ = ಕಲ್ಯಾಣಗುಣಗಳಲ್ಲಿ - ಶೆನ್ರು = ಸೇರಿ, ಎನ್ = ನನ್ನ, ಆವಿಯುಮ್ = ಆತ್ಮವೂ - ಶಿನ್ದೈಯುಮ್ = ಮನಸ್ಸೂ - ಪಣಿನ್ದದು = ಪ್ರಾವಣ್ಯವನ್ನು ಹೊಂದಿತು. ಶೊಲ್ಲಿಲ್ = ವಿಚಾರಿಸಿ ನೋಡಿದರೆ - ಎನಕ್ಕು = ನನಗೆ - ಇನ್ರು = ಈವಾಗ, ನಿಗರ್ ಯಾರ್ = ಸಮಾನರು ಯಾರಿದ್ದಾರೆ? (ಅಂದರೆ ಯಾರೂ ಇಲ್ಲ).

ತಾ:—ಇಂದ್ರಿಯ ಪರವಶರಾದ ಚೇತನರಿಗೆ ಅವುಗಳ ಯಥಾವಸ್ಥಿತ ಪ್ರಕಾರವನ್ನು ತಿಳಿಸಿದ ಮಹೋಪಕಾರವನ್ನು ಹಿಂದಿನ ಪಾಶುರದಲ್ಲಿ ವಿವರಿಸಿ ಈ ಪದ್ಯದಲ್ಲಿ, ಮಹಾಭಾರತ ಸಮರದಲ್ಲಿ ಪಾಂಡವರ ಸಮೀಚೀನವಾದ-ರಥದಲ್ಲಿ ಕುಳಿತು, ಅರ್ಜುನನಿಗೆ ಶ್ರೀಕೃಷ್ಣನು ಉಪದೇಶಿಸಿದ ಭಗವದ್ಗೀತೆಯ ನಿಜವಾದ ತತ್ತ್ವಾರ್ಥವನ್ನು ಭೂಲೋಕದವರಿಗೆ ತಿಳಿಯ ಪಡಿಸುವುದಕ್ಕಾಗಿ ಗೀತಾಭಾಷ್ಯವನ್ನು ಬರೆದು, ಪ್ರಸಾದಿಸಿದ ಸ್ವಾಮಿ ರಾಮಾನುಜರನ್ನು ಆಶ್ರಯಿಸಿದ ಮಹಾನುಭಾವರುಗಳ (ಕೂರತ್ತಾಳ್ವಾನ್ ಮೊದಲಾದವರುಗಳ) ಕಲ್ಯಾಣಗುಣಗಳಲ್ಲಿಯೇ ನನ್ನ ಪ್ರಾಣವೂ, ಮನಸ್ಸೂ ಆಸಕ್ತವಾಗಿರುವುದು. ನನ್ನಂತಹ ಭಾಗ್ಯಶಾಲಿಗಳು ಲೋಕದಲ್ಲಿ ಬೇರೆ ಯಾರಿರುವರು? ಎಂದು ತಮಗುಂಟಾದ ಆತಿಶಯವನ್ನು ಹೇಳುತ್ತಾರೆ.

69. ಶಿನ್ದೈಯಿನೋಡು ಕರಣಂಗಳ್ ಯಾವುಮ್ ಶಿದೈನ್ದು,
ಮುನ್ನಾಳ್
ಅನ್ದಮುಱ್ಱಾೞ್ನ್ದದು ಕಣ್ಡು, ಇವೈ ಎನ್ದನಕ್ಕನ್ಱರುಳಾಲ್
ತನ್ದ ಅರಂಗನುಮ್ ತನ್ ಶರಣ್ ತನ್ದಿಲನ್ ತಾನದು ತನ್ದು,
ಎನ್ದೈ ಇರಾಮಾನುಶನ್ ವನ್ದೆಡುತ್ತನನಿನ್ಱೆನ್ನೈಯೇ ||

ಅರ್ಥ:—ಮುನ್ನಾಳ್ = ಸೃಷ್ಟಿಗೆ ಮೊದಲು, ಶಿನ್ದೈಯಿನೋಡು = ಮನಸ್ಸಿನೊಡನೆ, ಕರಣಂಗಳ್ ಯಾವುಮ್ = ಮಿಕ್ಕ ಇಂದ್ರಿಯಗಳೆಲ್ಲವೂ, ಶಿದೈನ್ದು = ಸೂಕ್ಷ್ಮಾವಸ್ಥೆಯನ್ನು ಹೊಂದಿ, ಅನ್ದಮ್ = ನಾಶವನ್ನು,

ಉತ್ತು = ಕೊಂಡು, ಆಳ್ನ್ದದು ಕಣ್ಡು = ಮಗ್ನವಾದದ್ದನ್ನು ಕಂಡು, ಇವೈ = (ಮನಸ್ಸಿನೊಡನೆ) ಅವುಗಳನ್ನು ಸೇರಿದ ಹತ್ತು ಇಂದ್ರಿಯಗಳನ್ನು, ಅನ್ರು = ಆ ಜಗತ್ ಸೃಷ್ಟಿಕಾಲದಲ್ಲಿ, ಎನ್ ತನಕ್ಕು = ನನಗೆ, ಅರುಳಾಲ್ ತನ್ದ = ಕೃಪೆಯಿಂದ ಉಪಕರಿಸಿ ಕೊಟ್ಟ, ಅರಂಗನುಮ್ = ರಂಗನಾಥನೂ, ಶರಣ್ = ತನ್ನ ಚರಣಾರವಿಂದಗಳನ್ನು, ತನ್ದಿಲನ್ = ಕೊಡಲಿಲ್ಲ. ಎನ್ದೈ = ನನಗೆ ತಂದೆಯಂತೆ ಹಿತಪರರಾದ, ಇರಾಮಾನುಶನ್ = (ನನಗೆ ಜ್ಞಾನ ಜನಕರಾದ) ಸ್ವಾಮಿ ರಾಮಾನುಜರು, ಇನ್ರುವನ್ದು = ಈಗ ಬಂದು, ಅದುತನ್ದು = ಆ ಭಗವಂತನ ಪಾದಾರವಿಂದವನ್ನು ಉಪಾಯೋಪೇಯವನ್ನಾಗಿ ಕೊಟ್ಟು, ಎನ್ನೈಯೇ = ಪಾಪಿಷ್ಠನಾದ ನನ್ನನ್ನೇ, ಎಡುತ್ತನನೇ = ಉದ್ಧರಿಸಿದರಲ್ಲವೇ.

ತಾ:—ಸರ್ವ ಚೇತನರುಗಳೂ, ಸಂಸಾರ ಕೂಪದಲ್ಲಿ ಮನಸ್ಸಿನೊಂದಿಗೆ ಸರ್ವ ಇಂದ್ರಿಯಗಳೂ ಸೋತು ಅಚಿತ್ಕಲ್ಪರಾಗಿದ್ದ ದೆಶೆಯನ್ನು ಕಂಡು, ಅಂಥಾ ನನಗೆ ಅಪೇಕ್ಷಾನಿರಪೇಕ್ಷವಾಗಿ ತಮ್ಮ ನಿರ್ಹೇತುಕ ಪರಮ ಕೃಪೆಯಿಂದ ಪ್ರಬಲವಾದ ಇಂದ್ರಿಯಗಳಿಂದಕೂಡಿದ ಕಳೇಬರವನ್ನು ಅನುಗ್ರಹಿಸಿ ನನ್ನನ್ನು ಸೃಷ್ಟಿಸಿದ ಶ್ರೀ ರಂಗನಾಥಸ್ವಾಮಿಯು, ಸಂಸಾರ ಸಂಬಂಧದಿಂದ ನನ್ನನ್ನು ಬಿಡಿಸಿ ತನ್ನ ದಿವ್ಯ ಪಾದಗಳಲ್ಲಿ ಸೇರಿಸಿಕೊಳ್ಳಲಿಲ್ಲ-ಅದರಿಂ ದುರ್ಲಭವಾದ ಭಗವಂತನ ಪಾದಗಳನ್ನು ನಮಗೆ ಪರಮೋಪಕಾರರಾದ ರಾಮಾನುಜಾಚಾರ್ಯರು, ಭಗವಂತನ ಪಾದಾರವಿಂದಗಳೇ ಉಪಾಯ ಮತ್ತು ಉಪೇಯವೆಂದು ಉಪದೇಶಿಸಿ ಮಹಾ ಪಾಪಿಯಾದ ನನ್ನನ್ನು ಸಂಸಾರ ಸಾಗರದಿಂದ ಉದ್ಧರಿಸಿದರೆನ್ನುತ್ತಾರೆ.

**70.** ಎನ್ನೈಯುಮ್ ಪಾರ್ತ್ತೆನ್ನಿಯಲ್ವೈಯುಮ್ ಪಾರ್ತ್ತು,
ಎಣ್ಣಿಲ್ ಪಲ್ ಗುಣತ್ತ
ಉನ್ನೈಯುಮ್ ಪಾರ್ಕ್ಕಿಲರುಳ್ ಶೆಯ್ವದೇ ನಲಮ್,
ಅನ್ರಿಯೆನ್ಪಾಲ್
ಪಿನ್ನೈಯುಮ್ ಪಾರ್ಕ್ಕಿಲ್, ನಲಮುಳದೇಯುನ್ ಪೆರುಂಕರುಣೈ
ತನ್ನೈಯೆನ್ಪಾರ್ಪ್ಪರ್, ಇರಾಮಾನುಶ ಉನ್ನೈ
ಚ್ಚಾರ್ನ್ದವರೇ ||

ಅರ್ಥ:— ಇರಾಮಾನುಶಾ = ಸ್ವಾಮಿ ರಾಮಾನುಜರೇ! ಎನ್ನೈಯುಮ್ ಪಾರ್ತ್ತು = (ವಿಷಯಾಂತರ ಪ್ರವಣನಾದ) ನನ್ನನ್ನೂ ನೋಡಿ, ಎನ್ ಇಯಲ್ವೈಯುಮ್ ಪಾರ್ತ್ತು = ನನ್ನ ಸ್ವಭಾವವನ್ನೂ ನೋಡಿ, ಎಣ್ ಇಲ್ = ಎಣಿಕೆ ಇಲ್ಲದ, ಪಲ್‌ಗುಣತ್ತು = ಅನೇಕ ಕಲ್ಯಾಣಗುಣಗಳುಳ್ಳ, ಉನ್ನೈಯುಮ್ ಪಾರ್ಕ್ಕಿಲ್ = ಸ್ವಾಮಿಯಾದ ನಿಮ್ಮನ್ನೂ ನೋಡಿದರೆ, ಅರುಳ್ ಶೆಯ್‌ವದೇ = ಕೃಪೆಮಾಡುವುದೇ, ನಲಮ್ = ಉಚಿತವು, ಅನ್ರಿ = ಹಾಗಲ್ಲದೆ, ಪಿನ್ನೈಯುಮ್ ಪಾರ್ಕ್ಕಿಲ್ — ಪುನಃ ವಿಮರ್ಶಿಸಿ ನೋಡಿದರೆ, ಎನ್ ಪಾಲ್ = ನನ್ನಲ್ಲಿ, ನಲಮ್ ಉಳದೇ — ಒಂದು ಒಳ್ಳೇ ವ್ಯಾಪಾರವಾದರೂ ಇದೆಯೇ, ಉನ್ನೈಪ್ಪುಗನ್ದವರ್ = ನಿಮ್ಮನ್ನು ಆಶ್ರಯಿಸಿದವರು, ಉನ್ ಪೆರುಮ್ ಕರುಣೈತನ್ನೈ = ನಿಮ್ಮ ನಿರವಧಿಕ ಕೃಪೆಯನ್ನು - ಎನ್ ಕಾಣ್ಬರ್ = ಏನೆಂದು ಕಂಡಿರುವರು.

ತಾ:— ಸ್ವಾಮಿ ಎಂಬೆರುಮಾನಾರ್‌ರವರು ತಮಗೆ ಕೃಪೆಯಿಂದ ಮಾಡಿದ ಉಪಕಾರವನ್ನು ಹಿಂದಿನ ಪಾಶುರದಲ್ಲಿ ಅನುಸಂಧಿಸಿ ತೃಪ್ತರಾಗಿ ಈ ಪದ್ಯದಲ್ಲಿ "ಇದುವರೆಗೆ ಮಾಡಿದ ಅಂಶಗಳಿಗಿಂತ - ಇನ್ನು ಮೇಲೆ ಮಾಡಬೇಕಾದ ಅಂಶವು ವಿಶೇಷ ಪ್ರಾರ್ಥನೀಯವಾದ್ದರಿಂದ ನನ್ನನ್ನೂ ನನ್ನ ದುರ್ವೃತ್ತವನ್ನೂ ನಿಮ್ಮ ಅಪ್ರತಿಮ ಸ್ವಭಾವವನ್ನೂ ವಿಮರ್ಶಿಸಿ ನೋಡಿದರೆ ನನ್ನನ್ನು ವಿಷಯೀಕರಿಸಿ ಕೈಕೊಳ್ಳುವುದೇ ಒಳ್ಳೆಯದು. ಇದನ್ನು ಬಿಟ್ಟು ಮಿತಿಮೀರಿ ಮಾಡಿರುವ ಅಪರಾಧಗಳನ್ನು ಸಂಪೂರ್ಣವಾಗಿ ಲೆಖ್ಖಮಾಡಿ ಮತ್ತೆ ವಿಮರ್ಶಿಸಲು ಪ್ರಯತ್ನಿಸಿದರೆ ನನ್ನಲ್ಲಿ ಯಾವ ಒಳ್ಳೆಯದೂ ಇಲ್ಲದಿರುವುದರಿಂದ ನನ್ನನ್ನು ಕೈ ಬಿಡಬೇಕಾಗಿಬರುವುದು. ಆದುದರಿಂದ ಸರ್ವೋತ್ತಮರಾದ ನಿಮ್ಮ ನಿರ್ಹೇತುಕ ಕೃಪೆಯನ್ನು ನೋಡಿ ನಿಮ್ಮನ್ನು ಆಶ್ರಯಿಸಿದವರು ಏನೆಂದು ತಿಳಿಯುವರೋ?" ಎಂದು ಎದುರೆದುರಿಗೆ ವಿಜ್ಞಾಪನೆ ಮಾಡುತ್ತಾರೆ.

71. ಶಾರ್ನ್ದದೆನ್ ಶಿನ್ದೈಯುನ್ ತಾಳಿಣೈಕ್ಕೀಳ್, ಅನ್ಬು ತಾನಧಿಗಮ್
ಕೂರ್ನ್ದದತ್ತಾಮರೈ ತಾಳ್‌ಗಳುಕ್ಕು, ಉನ್ದನ್ ಗುಣಂಗಳುಕ್ಕೇ

ತೀರ್ನ್ದದು ಎನ್ ಶೆಯ್ಗೈ ಮುನ್ ಶೆಯ್ವಿನೈ ನೀ ಶೆಯ್ವಿನೈಯದನಾಲ್
ಪೇರ್ನ್ದದು, ವಣ್ಮೈಯಿರಾಮಾನುಶಾ ಎಮ್ಪೆರುನ್ದಗೈಯೇ ||

ಅರ್ಥ : — ವಣ್ಮೈ = ಉದಾರರಾದ, ಪೆರುನ್ದಗೈ = ಮಹಾಪ್ರಭಾವಶಾಲಿಗಳಾದ, ಎಮ್ ಇರಾಮಾನುಶಾ = ಸ್ವಾಮಿ ರಾಮಾನುಜರೇ. ಎನ್ ಶಿನ್ದೈ = ನನ್ನ ಮನಸ್ಸು, ಉನ್ = ನಿಮ್ಮ, ಇಣೈತ್ತಾಳ್ ಕೀೞ್ = ಒಂದಕ್ಕೊಂದು ಸಮಾನವಾಗಿರುವ ಎರಡು ಅಡಿಗಳ ಕೆಳಗೆ, ಶಾರ್ನ್ದದು = ನಿಶ್ಚಲವಾಗಿ ಸೇರಿತು. ಅತ್ತಾಮರೈತ್ತಾಳ್ಗಳುಕ್ಕು = ಆ ತಾವರೆ ಪುಷ್ಪಗಳಂತಿರುವ ಅಡಿಗಳಿಗೆ, ಅನ್ಬುತಾನ್ = ಪ್ರೀತಿರೂಪವಾದ ಭಕ್ತಿಯಾದರೋ, ಮಿಗವುಮ್ = ಅತ್ಯಧಿಕವಾಗಿ, ಕೂರ್ನ್ದದು = ಅತಿಶಯಿಸಿತು. ಎನ್ ಶೆಯ್ಗೈ = ನನ್ನ ವ್ಯಾಪಾರಗಳು, ಉನ್ ತನ್ ಗುಣಂಗಳುಕ್ಕೇ = ನಿಮ್ಮ ಗುಣಗಳಿಗೇ, ತೀರ್ನ್ದದು = ಪರಾಧೀನವಾಗಿವೆ. ಮುನ್ ಶೆಯ್ ವಿನೈ = ಪೂರ್ವದಲ್ಲಿ ಮಾಡಿದ ಪಾಪವೆಲ್ಲಾ, ನೀ ಶೆಯ್ ವಿನೈಯದನಾಲ್ = ನೀವು ಭಗವಂತನಲ್ಲಿ ಮಾಡಿದ ಪ್ರಪತ್ತಿಯಿಂದ - ಪೇರ್ನ್ದದು = ನಾಶವಾಯಿತು.

ತಾ : — ಈ ಪ್ರಕಾರ ಅಮುದನಾರ್ರವರು ಎದುರಿದುರಿಗೆ ವಿಜ್ಞಾಪನೆ ಮಾಡಿದ್ದಕ್ಕೆ ಸ್ವಾಮಿ ಎಂಬೆರುಮಾನಾರ್ರವರು "ಹೌದು ಹೌದು" ಎಂದು ಸಮ್ಮತಿಸಿ ತಮ್ಮ ವಿಶೇಷ ಕಟಾಕ್ಷದಿಂದ ಇವರ ಕರಣಗಳೆಲ್ಲಾ ಸ್ವವಿಷಯದಲ್ಲೇ ಸ್ಥಿರವಾಗಿ ನಿಂತಿರುವಂತೆ ಕೃಪೆಮಾಡಲು, ಅವರ ದಿವ್ಯ ಮುಖಮಂಡಲವನ್ನು ನೋಡಿ "ಪರಮಗುಹ್ಯವಾದ ಅರ್ಥವನ್ನು ಭೂರಿದಾನ ಮಾಡುವಂತಹ ಉದಾರ ಮನಸ್ಕರಾದ ರಾಮಾನುಜರೇ" ಎಂದು ಸಂಬೋಧಿಸಿ, ತಮ್ಮ ಮನಸ್ಸು ಅವರ ದಿವ್ಯ ಚರಣದ್ವಯಗಳಲ್ಲಿ ಪ್ರವಣವಾಗಿರುವ ಪರಿಯನ್ನೂ ಅದಿತ್ಯಚರಣಗಳ ಭೋಗ್ಯತೆಯಲ್ಲಿ ಆಸೆಗೊಂಡು ಪ್ರೇಮವು ತಮಗೆ ಅಧಿಕವಾಗಿರುವ ಪ್ರಕಾರವನ್ನೂ ತಾವು ಅವರ ಗುಣಗಳಲ್ಲಿ ಅತ್ಯಧೀನ ನಿಷ್ಠರಾಗಿ ಅವರ ದಾಸ್ಯದಲ್ಲಿ ಆಸಕ್ತರಾಗಿರುವ ಪ್ರಕಾರವನ್ನೂ, ತಮ್ಮ ಹಿಂದಿನ ಪಾಪಕರ್ಮಫಲವೆಲ್ಲಾ ಅವರ ವಿಷಯೀಕಾರದಲ್ಲಿ ತಮ್ಮನ್ನು ಬಿಟ್ಟು ಸುಮ್ಮನೇ ಓಡಿಹೋದ ಪ್ರಕಾರವನ್ನೂ ಸಂತೋಷದಿಂದ ವಿಜ್ಞಾಪನೆ ಮಾಡುತ್ತಾರೆ.

72. ಕೈತ್ತನರ್ ತೀಯಶಮಯಕ್ಕಲಗರೈ, ಕಾಸಿನಿಕ್ಕೇ
ಉಯ್ತ್ತನರ್ ತೂಯಮಱೈನೆಱಿತನ್ನೈ, ಎನ್ಱುನ್ನಿಯುಳ್ಳಮ್
ನೆಯ್ತ್ತನ್ಬೊಡಿರುನ್ದೇತ್ತುಮ್ ನಿಱೈಪುಗೞೋರುಡನೇ
ವೈತ್ತನನೆನ್ನೈ, ಇರಾಮಾನುಶನ್ ಮಿಕ್ಕ ವಣ್ಮೈ ಶೆಯ್ದೇ ||

ಅರ್ಥ :— ಇರಾಮಾನುಶನ್ = ಸ್ವಾಮಿ ರಾಮಾನುಜರು, ಮಿಕ್ಕ ವಣ್ಮೈ ಶೆಯ್ದು = ಅತಿಶಯವಾದ ಔದಾರ್ಯವನ್ನು ಮಾಡಿ : ತೀಯ = ಹೇಯವಾದ, ಶಮಯನ್ = ಮತವನ್ನವಲಂಬಿಸಿ, ಕಲಗರೈ = ಅಪಾರ್ಥಗಳಿಂದ ವಾದಿಸುವಂತಹ ಕಲಹ ಪ್ರಿಯರುಗಳನ್ನು, ಕೈತ್ತನನ್ = ಖಂಡಿಸಿದರು. ತೂಯ = ಪರಿಶುದ್ಧವಾದ, ಮಱೈನೆಱಿತನ್ನೈ = ವೇದಮಾರ್ಗಗಳನ್ನು, ಕಾಸಿನಿಕ್ಕು = ಭೂಲೋಕದಲ್ಲಿ - ಉಯ್ತ್ತನನ್ = ಸ್ಥಾಪಿಸಿದರು (ಭೂಮಿಯ ಜನಕ್ಕೆಲ್ಲಾ ವೇದದ ನಿಜವಾದ ಅರ್ಥವನ್ನು ತಿಳಿಸಿ ಉದ್ಧಾರ ಮಾಡಿದರು). ಎನ್ಱು = ಎಂದು, ಉನ್ನಿ = ಅನುಸಂಧಿಸಿ, ಉಳ್ಳಮ್ ನೆಯ್ತ್ತು = ಆದರವಾದ ಮನಸ್ಸಿನಿಂದ, ಅನ್ಬೊಡು ಇರುನ್ದು = ಪ್ರೀತಿಯೊಡನೆ, ಏತ್ತುಮ್ = ಸ್ತುತಿಸುವ, ನಿಱೈಪುಗೞೋರುಡನೇ = ಪೂರ್ಣ ಗುಣವಂತರೊಂದಿಗೆ, ಎನ್ನೈ = ನನ್ನನ್ನು, ವೈತ್ತನನ್ = ಸೇರಿಸಿಟ್ಟರು.

ತಾ :— ಹಿಂದಿನ ಪಾಶುರದಲ್ಲಿ ಎಂಪೆರುಮಾನಾರ್‌ರವರ ಔದಾರ್ಯದಿಂದ ಇವರ ಅಭಿಮತವನ್ನು ಕೊಟ್ಟು ಕೃಪೆಮಾಡಲು ಇವರು, ಅವರಿಂದ ಲಭಿಸಿದ ಪುರುಷಾರ್ಥಗಳನ್ನು ನೆನೆದು ಕೃತಾರ್ಥರಾದರು. ಇದರಲ್ಲಿ " ಸ್ವಾಮಿ ರಾಮಾನುಜರು ತಮ್ಮ ಔದಾರ್ಯಾತಿಶಯದಿಂದ ಅತಿ ಹೇಯವಾದ ವೇದ ಬಾಹ್ಯ ಮತಗಳನ್ನು ಅವಲಂಬಿಸಿ ಕಲಹ ಮಾಡುತ್ತಿರುವವರನ್ನು ಧೈರ್ಯವಾಗಿ ಎದುರಿಸಿ ನಿರಸನ ಮಾಡಿದರು. ಮತ್ತು ಅತ್ಯಂತ ಪರಿಶುದ್ಧವಾದ ವೇದಮಾರ್ಗವನ್ನು ಭೂಲೋಕದಲ್ಲಿ ಎಲ್ಲೆಲ್ಲಿಯೂ ಹರಡಿದರು " ಎಂದು ಹೇಳುತ್ತಾ ಪ್ರೀತಿಪ್ರಕರ್ಷದಿಂದ ಸ್ತೋತ್ರಮಾಡುವ ಮಹಾತ್ಮರೊಂದಿಗೆ ನನ್ನನ್ನು ಇಟ್ಟರು " ಎಂದು ಹೇಳಿಕೊಂಡು ಸಂತೋಷಿಸುತ್ತಾರೆ.

73. ವಣ್ಮೈಯಿನಾಲುಮ್ ತನ್ಮಾದಗವಾಲುಮ್, ಮದಿಪ್ಪುರೈಯುಮ್
ತಣ್ಮೈಯಿನಾಲು ಮಿತ್ತಾರಣಿಯೋರ್ಗಟ್ಕು, ತಾನ್ಶರಣಾಯ್
ಉಣ್ಮೈನಲ್ ಜ್ಞಾನಮುರೈತ್ತ ಇರಾಮಾನುಶನೈಯುನ್ನುಮ್
ತಿಣ್ಮೈಯಲ್ಲಾಲ್ ಎನಕ್ಕಿಲ್ಲೈ ಮತ್ತೋರ್ ನಿಲೈ ತೇರ್ನ್ದಿಡಿಲೇ ||

ಅರ್ಥ :— ತನ್ ವಣ್ಮೈಯಿನಾಲುಮ್ = ತಮ್ಮ ಔದಾರ್ಯದಿಂದಲೂ, ಮಾದಗವಾಲುಮ್ = ಮಹತ್ತಾದ ಕೃಪೆಯಿಂದಲೂ, ಮದಿಪ್ಪುರೈಯುಮ್ = ಚಂದ್ರನಿಗೆ ಸಮಾನವಾದ, ತಣ್ಮೈಯಿನಾಲುಮ್ = ಆಹ್ಲಾದಕರವಾದ ಶೀತಳ ಸ್ವಭಾವದಿಂದಲೂ, ಇತ್ತಾರಣಿಯೋರ್ಗಟ್ಕು = ಈ ಭೂಮಿಯಲ್ಲಿರುವವರಿಗೆ, ತಾನ್ಶರಣಾಯ್ = ತಾವೇ ರಕ್ಷಕರಾಗಿ, ಉಣ್ಮೈ = ಸತ್ಯವಾದ ಮತ್ತು, ನಲ್ = ವಿಲಕ್ಷಣ ಸಾಧಕವಾದ, ಜ್ಞಾನಮ್ ಉರೈತ್ತ = ಜ್ಞಾನವನ್ನು ಉಪದೇಶಿಸಿದ, ಇರಾಮಾನುಶನೈ = ಸ್ವಾಮಿ ರಾಮಾನುಜರನ್ನು, ಉನ್ನುಮ್ — ರಕ್ಷಕರನ್ನಾಗಿ ಅನುಸಂಧಿಸುವ, ತಿಣ್ಮೈಯಲ್ಲಾಲ್ = ಮನೋಬಲವಲ್ಲದೆ, ತೇರ್ನ್ದಿಡಿಲ್ = ಪರಿಶೀಲಿಸಿ ನೋಡಿದರೆ, ಎನಕ್ಕು = ನನಗೆ, ಮತ್ತೋರ್ ನಿಲೈ = ಬೇರೊಂದು ಸ್ಥಿತಿಯು, ಇಲ್ಲೈ = ಇಲ್ಲ.

ತಾ :—ತಮ್ಮ ಸರ್ವೋತ್ಕೃಷ್ಟವಾದ ಔದಾರ್ಯ ಗುಣದಿಂದಲೂ ಮಹತ್ತಾದ ಕೃಪೆಯಿಂದಲೂ, ಚಂದ್ರನಿಗೆ ಸಮಾನವಾದ ಆಹ್ಲಾದಕರವಾದ ಶಾಂತ ಸ್ವಭಾವದಿಂದಲೂ, ಈ ಭೂಮಿಯಲ್ಲಿರುವವರಿಗೆ ತಾವೇ ರಕ್ಷಕರಾಗಿ ತತ್ತ್ವಹಿತ ಪುರುಷಾರ್ಥಗಳ ನಿಜವಾದ ಸ್ವರೂಪವನ್ನು ತಿಳಿಸುವ ಸಾಧಕವಾದ ಜ್ಞಾನವನ್ನು ಉಪದೇಶಿಸಿದ ಸ್ವಾಮಿ ರಾಮಾನುಜರನ್ನು ಧ್ಯಾನಮಾಡುವ ಬಲವಾದ ಚಿತ್ತವಲ್ಲದೆ ನನಗೆ ಬೇರೊಂದು ಉಜ್ಜೀವನೋಪಾಯ ಇಲ್ಲವೆನ್ನುತ್ತಾರೆ (ಹೀಗೆ ತಮ್ಮ ಪಾರತಂತ್ರ್ಯಭಾವವನ್ನು ಬಿನ್ನವಿಸುತ್ತಾರೆ).

74. ತೇರಾರ್ಮರೈಯಿನ್ ತಿರಮೆನ್ರು, ಮಾಯವನ್ ತೀಯವರೈ
ಕೂರಾಳಿಕೊಂಡು ಕುರೈಪ್ಪದು, ಕೊಂಡಲನೈಯವಣ್ಮೈ
ಏರಾರ್ ಗುಣತ್ತೆಮ್ ಇರಾಮಾನುಶನವ್ವೆಳಿಲ್ಮರೈಯಿಲ್
ಶೇರಾದವರೈ ಚ್ಚಿದೈಪ್ಪದು, ಅಪ್ಪೋದೊರುಚಿಂದೈಶೆಯ್ದೇ ||

ಅರ್ಥ :—ಮರೈಯಿನ್ = ವೇದಗತ, ತಿರವರ್ = ಪ್ರಕಾರವನ್ನು, ತೇರಾರ್ ಎನ್ರು = ಅರಿಯರೆಂದು, ಮಾಯವನ್ = ಸರ್ವೇಶ್ವರನು, ತೀಯ ವರ್ರೈ = ತನ್ನ ಆಜ್ಞೆಯನ್ನು ಉಲ್ಲಂಘಿಸಿದ ದುಷ್ಟರನ್ನು, ಕೂರಾಳಿಕೊಣ್ಡು = ತೀಕ್ಷ್ಣವಾದ ಸುದರ್ಶನ ಚಕ್ರದಿಂದ, ಕುರೈಪ್ಪದು = ಶಿಕ್ಷಿಸುವನು - ಆದರೆ, ಕೊಣ್ಡಲ್ ಅನ್ನೈಯ = ಮೇಘದಂತೆ, ವಣ್ಮೈ = ಉದಾರರಾದ, ಮಿಕ್ಕ, ಏರಾರ್ = ಅತಿ ಭೋಗ್ಯವಾದ, ಗುಣತ್ತು = ಗುಣಗಳುಳ್ಳ, ಎಮ್ ಇರಾ ಮಾನುಶನ್ = ನಮ್ಮ ಸ್ವಾಮಿ ರಾಮಾನುಜರು, ಅವ್ವೊಳಿಲ್ ಮರೈಯಿಲ್ = ಆ ಮಂಗಳಕರ ಸುಂದರವಾದ ವೇದೋಕ್ತಮಾರ್ಗದಲ್ಲಿ, ಶೇರಾದವರ್ರೈ = ಸೇರದೇ ಇರುವವರನ್ನು, ಅಪ್ಪೋದು = ಆಯಾ ಕಾಲದಲ್ಲಿ, ಶೆನ್ನೈಶೆಯ್ತು = ಒಂದು ಸಲ ಸರಿಯಾದ ಯುಕ್ತಿಗಳಿಂದ ಯೋಚಿಸಿ, ಸಮಂಜಸವಾದ ಉತ್ತರಗ ಳನ್ನು ಕೊಟ್ಟೇ - ಶಿದೈಪ್ಪದು = ಖಂಡಿಸುವರು.

ತಾ :—ಹಿಂದಿನ ಪಾಶುರದಲ್ಲಿ ಶ್ರೀರಾಮಾನುಜರು ತಮ್ಮ ಕೃಪಾಕಾರ್ಯ ವಾದ ಔದಾರ್ಯದಿಂದ ಚೇತನರೆಲ್ಲರಿಗೂ ಯಥಾವಸ್ಥಿತ ಜ್ಞಾನೋಪದೇಶವನ್ನು ಮಾಡಿದರೆಂದು ತಿಳಿಸಿ ಈ ಪದ್ಯದಲ್ಲಿ—“ಸದಾ ಸದ್ವಿವೇಕ ಶೂನ್ಯರಾಗಿ ಸ್ವಾಜ್ಞಾ ತಲಂಘನೆಯಂಮಾಡಿ ನಡೆಯುತ್ತಿರುವ ದುಷ್ಟರನ್ನು ಸರ್ವೇಶ್ವರನು ಅನೇಕ ಅವ ತಾರಗಳನ್ನು ಮಾಡಿ, ಚಕ್ರಪಾಣಿಯಾಗಿ ಬಂದು ಅನೇಕ ಯತ್ನಗಳನ್ನು ಮಾಡಿ, ಬಹಳ ಶ್ರಮದಿಂದ ಅವರನ್ನು ನಾಶಮಾಡಿದನು. ವೇದಬಾಹ್ಯ ರನ್ನೂ ಕುದೃಷ್ಟಿಗಳನ್ನೂ ಶ್ರೀ ರಾಮಾನುಜರು ಸಮಯೋಚಿತವಾದ ಯುಕ್ತಿಗಳಿಂದ ಖಂಡಿಸಿದರು ” ಎಂದು ಅವರನ್ನು ಈ ಶ್ರೀ ರಂಗನಾಯಕರು ಕೊಂಡಾಡುತ್ತಾರೆ.

75. ಶೆಯಾ ತ್ತಲೈಚ್ಚಂಗಮ್ ಶೆಙ್ಗಮುತ್ತ ಮಿೀನುಮ್,
ತಿರುವರಂಗರ್
ಕೈತ್ತಲತ್ತಾಳಿಯುಮ್ ಶಂಗಮುಮೇನ್ದಿ, ನಮ್ ಕಣ್ಮುಗಪ್ಪೇ
ಮೊಯ್ತ್ತಲೈತ್ತುನ್ನೈ ವಿಡೇನೆನ್ರಿರುಕ್ಕಿಲುಮ್ ನಿನ್ಪುಗಳ್ಳಿ
ಮೊಯ್ತ್ತಲೈಕ್ಕುಮ್ ವನ್ದು, ಇರಾಮಾನುಶಾವೆನ್ನೈ
ಮುತ್ತುನಿನ್ರೇ ||

ಅರ್ಥ :—ಶೆಯ್‌ತ್ತಲೈ = ಗದ್ದೆಗಳಲ್ಲಿ ಶಂಗವ್ = ಶಂಖಗಳು, ಅದರಲ್ಲಿ - ಶೀರ್‌ಮುತ್ತಮ್ = ಶ್ಲಾಘ್ಯವಾದ ಮುತ್ತುಗಳನ್ನು, ಈನುಮ್ = ಪ್ರಸವಿಸುವ, ಅರಂಗರ್ = ಶ್ರೀರಂಗಕ್ಷೇತ್ರದಲ್ಲಿ ಶಯನಿಸಿರುವ, ಶ್ರೀರಂಗನಾಥಸ್ವಾಮಿಯು, ತಿರುಕ್ಕೈತಲತ್ತು = ಸುಂದರವಾದ ದಿವ್ಯ ಹಸ್ತಗಳಲ್ಲಿ, ಆಳಿಯುಮ್ = ಸುದರ್ಶನ ಚಕ್ರವನ್ನೂ, ಶಂಗಮುಮ್ = ಪಾಂಚಜನ್ಯವೆಂಬ ಶಂಖವನ್ನೂ, ಏನ್ದಿ = ಧರಿಸಿ ನಮ್ ಕಣ್‌ಮುಗಪ್ಪೇ = ನಮ್ಮ ಕಣ್ಣುಗಳ ಮುಂದೆ, ನೊಯ್‌ತ್ತು = ಸಾಕ್ಷಾತ್ತಾಗಿ ಬಂದು, ಅಲೈತ್ತು = ನನ್ನ ಮನಸ್ಸನ್ನು ಕದಲಿಸಿ (ಒಂದು ಸ್ಥಿಮಿತದಲ್ಲಿ ನಿಲ್ಲದಂತೆ ಓಡಿಯಾಡಿಸಿ), ಉನ್ನೈತ್ ವಿಡೇನ್ ಎನ್ರು = ನಿನ್ನನ್ನು ಬಿಡುವುದಿಲ್ಲವೆಂದು - ಇರುಕ್ಕಿಲುಮ್ = ಚಲಿಸದೆ ನಿಂತರೂ, ನಿನ್ ಪುಗರ್ಳ್ = ನಿಮ್ಮ ಕಲ್ಯಾಣಗುಣಗಳೇ, ಮನ್ದು = ಬಂದು, ಎನ್ನೈ = ನನ್ನನ್ನು, ಮುತ್ತುಮ್ = ಸಂಪೂರ್ಣವಾಗಿ, ಮೊಯ್‌ತ್ತು ನಿನ್ರು = ಸುತ್ತಿಕೊಂಡು ನಿಂತು, ಅಲೈಕ್ಕುಮ್ = ಆಕರ್ಷಿಸುತ್ತಿರುವುವು.

ತಾ :—ಹಿಂದೆ-ಅಮುದನಾರ್ರವರು ರಾಮಾನುಜರ ಗುಣಚೇಷ್ಟಿತಗಳನ್ನು ಅನುಸಂಧಿಸಿ ವಿದ್ಧರಾಗಿ ಹೇಳಿದ ವಾರ್ತೆಗಳನ್ನು ಎಂಬೆರುಮಾನಾರ್ರವರು ಕೇಳಿ "ಈಗ ನೀವು ಅಧ್ಯವಸಾಯಾತಿಶಯದಿಂದ ಹೀಗೆಲ್ಲಾ ಹೇಳಿದಿರಿ, ಆದರೆ-ಭಗವದ್ವಿಷಯದಲ್ಲಿ ಪ್ರಾವಣ್ಯರಾಗಿ ಅವರಲ್ಲಿರುವ ವೈಲಕ್ಷಣ್ಯಗಳನ್ನು ಕಣ್ಡು ಆ ರಸವನ್ನರಿತವರಾದಾಗ, ಈಗ ನನ್ನಲ್ಲಿ ಮಗ್ನರಾಗಿರುವ ಪ್ರಾವಣ್ಯವು ನೆಲೆ ನಿಲ್ಲುವುದೋ" ಎಂದು ಕೇಳಿದಾಗ-ಇವರು "ಸರ್ವೇಶ್ವರನು ಶಂಖಚಕ್ರಾದಿ ದಿವ್ಯಾಯುಧಾಲಂಕೃತನಾಗಿ ದಾಸನಾದ ನಾನಿರುವ ಸ್ಥಳವನ್ನು ಹುಡುಕಿಕೊಂಡು ಬಂದು ತನ್ನ ವೈಲಕ್ಷಣ್ಯವನ್ನೆಲ್ಲಾ ನನಗೆ ಸಂಪೂರ್ಣವಾಗಿ ತೋರಿಸಿ, "ನಿನ್ನನ್ನು ನಾನು ಬಿಡುವುದಿಲ್ಲ" ಎಂದು ನನ್ನ ಮುಂದೆ ನಿಂತರೂ ಕೂಡ ಅದರಲ್ಲಿ ಮನಸ್ಸು ಆಸಕ್ತವಾಗದೆ ನಿಮ್ಮ ಪಕ್ಕದಲ್ಲೇ ಇರಲು ಇಷ್ಟಪಡುವಂತೆ ನಿಮ್ಮ ಕಲ್ಯಾಣಗುಣಗಳೆಲ್ಲಾ ದಾಸನಾದ ನನ್ನನ್ನು ಸುತ್ತಲೂ ಮುತ್ತಿಕೊಂಡು ಬಂದು ಆಕರ್ಷಿಸುತ್ತಿರುವುವು". ಎಂದು ಶ್ರೀರಾಮಾನುಜರನ್ನು ನೋಡಿ ಬಿನ್ನವಿಸುತ್ತಾರೆ.

76. ನಿನ್ರವಣ್‌ಕೀರ್ತ್ತಿಯುಮ್ ನೀಳ್ ಪುನಲುಮ್, ನಿರೈವೇಂಗಡಪ್ಪೊರ್
ಕುನ್ರಮುಮ್ ವೈಗುನ್ದನಾಡುಮ್ ಕುಲವಿಯಪಾರ್‌ಕಡಲುಮ್
ಉನ್ತನಕ್ಕೆತ್ತನೈಯಿನ್ಬನ್ತರುಮುನಿಣೈಮಲರ್‌ತ್ತಾಳ್
ಎನ್ತನಕ್ಕುಮದು, ಇರಾಮಾನುಶಾವಿವೈಯೀನ್ದರುಳೇ ||

ಅರ್ಥ :—ನಿನ್ರ = ಶಾಶ್ವತವಾಗಿರುವ, ವಣ್‌ಕೀರ್ತಿಯುಮ್ = ಶ್ರೇಷ್ಠವಾದ ಕೀರ್ತಿಯೂ, ನೀಳ್‌ಪುನಲುಮ್ = ಸದಾ ಹರಿಯುತ್ತಲಿರುವ ಝರಿಗಳೂ, ನಿರೈ = ತುಂಬಿರುವ, ವೇಂಗಡಮ್ = ತಿರುವೆಂಗಡವೆಂಬ ಹೆಸರುಳ್ಳ, ಪ್ಪೊರ್ಕುನ್ರಮುಮ್ = ಅತ್ಯಂತ ಸುಂದರವಾದ ಬೆಟ್ಟವೂ, ವೈಕುನ್ದನಾಡುಮ್ = 'ಶ್ರೀವೈಕುಂಠ'ವೆಂಬ ಹೆಸರುಳ್ಳ ಸಿರಿನಾಡೂ, ಕುಲವಿಯ = ಸತ್ಪುರುಷರು ಕೊಂಡಾಡುವ, ಪಾಲ್‌ಕಡಲುಮ್ = ಕ್ಷೀರಸಮುದ್ರವೂ, ಉನ್ದನಕ್ಕು = ನಿಮಗೆ, ಎತ್ತನೈ ಇನ್ಬಮ್ ತರುಮ್ = ಎಷ್ಟು ಆನಂದವನ್ನುಂಟುಮಾಡುವುವೋ, ಎನ್ತನಕ್ಕು = ನನಗೆ, ಉನ್ = ನಿಮ್ಮ, ಮಲರ್ = ಪುಷ್ಪದಂತೆ ಭೋಗ್ಯವಾಗಿರುವ, ಇಣೈತ್ತಾಳ್ = ಸುಂದರವಾದ ಪಾದಗಳೂ, ಅದು = ಅಂಥಾ ಸುಖವನ್ನೂ ಆನಂದವನ್ನೂ ಕೊಡುವುವು, ಇರಾಮಾನುಶಾ = ಸ್ವಾಮಿ ರಾಮಾನುಜರೇ, ಇವೈ = ಇವುಗಳನ್ನು, ಅಂದರೆ ತಮ್ಮ ಸಿರಿಯಡಿಗಳನ್ನೂ, ಈನ್ದರುಳ್ = ನನಗೆ ಕೃಪೆಮಾಡಿ ಕೊಡಿ.

ತಾ :—"ಸ್ವಾಮಿ ರಾಮಾನುಜರೇ! ನಿಮಗೆ ಅಭಿಮತಗಳಾಗಿರುವ ಶಾಶ್ವತವಾದ ಕೀರ್ತಿಯನ್ನು ಪಡೆದ ಮತ್ತು ಉದ್ದವಾದ ಯಾವಾಗಲೂ ಹರಿಯುತ್ತಿರುವ ಝರಿಗಳುಳ್ಳ ಶ್ರೀ ವೆಂಕಟಾದ್ರಿಯೂ, ಶ್ರೀವೈಕುಂಠವೂ, ಕ್ಷೀರಾಬ್ಧಿಯೂ, ತಮಗೆ ಎಷ್ಟು ಆನಂದವನ್ನೂ ಸುಖವನ್ನೂ ಉಂಟುಮಾಡುವುವೋ, ಹೂವಿನಂತೆ ಮೃದುವಾಗಿಯೂ ಸುಂದರವಾಗಿಯೂ ಇರುವ ತಮ್ಮ ಈ ಎರಡು ಪಾದಗಳು ನನಗೆ ಅಷ್ಟು ಆನಂದವನ್ನೂ ಸುಖವನ್ನೂ ಉಂಟುಮಾಡುವುವು. ಆ ಪಾದಗಳನ್ನು ಕೃಪೆಮಾಡಿಕೊಡಬೇಕು" ಎಂದು ಆಶಿಸುತ್ತಾರೆ.

77. ಈನ್ದನನೀಯಾದ ಇನ್ನರುಳ್, ಎಣ್ಣಿಲ್ಮಱೈಕ್ಕುಱುಮ್ಬೈ
ಪಾಯ್ನ್ದನನಮ್ಮಱೈಪ್ಪಲ್ಪೊರುಳಾಲ್, ಇಪ್ಪಡಿಯನೈ
ತ್ತುಮ್
ಏಯ್ನ್ದನನ್ ಕೀರ್ತ್ತಿಯಿನಾಲೆನ್ವಿನೈಗಳೈ ವೇರ್ಪ್ಪಱಿಯ
ಕಾಯ್ನ್ದನನ್, ವಣ್ಮೈಯಿರಾಮಾನುಶರ್ಕ್ಕೆನ್ಕರುತ್ತಿನಿಯೇ ||

ಅರ್ಥ :— ಈಯಾದ = ಇದುವರೆಗೂ ಯಾರಿಗೂ ಕೊಡದ (ಉಪಕರಿಸದ), ಇನ್ನರುಳ್ = ವಿಲಕ್ಷಣ ಕೃಪೆಯನ್ನು . ಈನ್ದನನ್ = ನನಗೆ ಉಪಕರಿಸಿದರು, ಎಣ್ ಇಲ್ = ಅಸಂಖ್ಯಾತವಾದ, ಮಱೈಕ್ಕುಱುಮ್ಬೈ = ಕುದೃಷ್ಟಿ ಮತಗಳನ್ನು - ಅಮ್ಮಱೈ = ಆ ವೇದ ಪ್ರತಿಪಾದ್ಯಗಳಾದ, ಪಲ್ ಪೊರುಳುಮ್ = ಅನೇಕ ಯಥಾರ್ಥವಾದಗಳಿಂದ, ಪಾಯ್ನ್ದನನ್ = ಖಂಡಿಸಿದರು, ಇಪ್ಪಡಿಅನೈತ್ತುಮ್ = ಈ ಭೂಲೋಕದಲ್ಲಿ ಎಲ್ಲವನ್ನೂ, ಕೀರ್ತ್ತಿಯಿನಾಲ್ = ತಮ್ಮ ಕೀರ್ತಿಯಿಂದ, ಏಯ್ನ್ದನನ್ = ವ್ಯಾಪಿಸಿದರು, ಎನ್ ವಿನೈಗಳೈ = ನನ್ನ ಪಾಪಗಳನ್ನು, ವೇರ್ ಪಱಿಯ = ಬೇರುಸಹಿತ ಹೋಗುವಂತೆ. (ಸಮೂಲವಾಗಿ ನಾಶಹೊಂದುವಂತೆ), ಕಾಯ್ನ್ದನನ್ = ಓಡಿಸಿ ಕಿತ್ತು ಹಾಕಿದರು, ವಣ್ಮೈ = ಪರಮೋದಾರರಾದ, ಇರಾಮಾನುಶರ್ಕ್ಕು = ಸ್ವಾಮಿರಾಮಾನುಜರಿಗೆ, ಇನಿ = ಇನ್ನೂ, ಕರುತ್ತು ಎನ್ = ಅಭಿಪ್ರಾಯವೇನಿರುವುದೋ ಕಾಣೆನು.

ತಾ :— ಹಿಂದಿನ ಪಾಶುರದಲ್ಲಿ ಸ್ವಾಮಿ ರಾಮಾನುಜರನ್ನು ಕುರಿತು "ಸ್ವಾಮೀ ತಮ್ಮ ಪಾದಾರವಿಂದವನ್ನು ದಾಸನಾದ ನಾನು ಸರ್ವದಾ ಅನುಭವಿಸುವಂತೆ ನನಗೆ ಅವುಗಳನ್ನು ಕೃಪೆಮಾಡಿ ಕೊಡಬೇಕು" ಎನ್ನಲು, ಅವರು ಸಂತೋಷಿಸಿ ಆಶಿಸಿದಂತೆ ಚರಣಗಳನ್ನು ಕೃಪೆಯಿಂದ ಕೊಡಲು ಕೃತಾರ್ಥರಾಗಿ, "ವೇದ ವಿರೋಧಿಗಳಾದ ಕುದೃಷ್ಟಿಮತಗಳನ್ನು, ಪ್ರಮಾಣತಮವಾದ ಆ ವೇದಾರ್ಥಗಳಿಂದ ನಿರಸನಮಾಡಿ, ಈ ಭೂಮಿಯಲ್ಲೆಲ್ಲಾ ತಮ್ಮ ಯಶಸ್ಸನ್ನು ಹರಡಿದರು. ನನ್ನ ಪ್ರಾಪ್ತ ಪ್ರತಿಬಂಧಕ ಕರ್ಮಗಳ ಪಾಪಗಳನ್ನೆಲ್ಲಾ ಸಮೂಲವಾಗಿ ನಾಶವಾಗುವಂತೆ ಕಿತ್ತು ಹಾಕಿದರು. ಇಂಥಾ ಪರಮೋದಾರರಾದ ರಾಮಾನುಜರು ನನಗೆ ಇನ್ನೂ ಏನೇನು ಉಪಕಾರ ಮಾಡಬೇಕೆಂದಿರುವರೋ ಕಾಣೆನು. ಇದುವರೆಗೂ ಯಾರಲ್ಲಿಯೂ ತೋರಿಸದ ಕೃಪೆಯನ್ನು ನನ್ನಲ್ಲಿ ತೋರಿಸಿದುವರು." ಎನ್ನುತ್ತಾರೆ.

78. ಕರುತ್ತಿಲ್‌ಪುಗುನ್ದುಳ್ಳಿಲ್ ಕಳ್ಳಮ್‌ಕಳೈತ್ತಿ, ಕ್ಕರುದರಿಯ
ವರುತ್ತತ್ತಿನಾಲ್ ಮಿಗವಂಚಿತ್ತು, ನೀಯಿನ್ದ ಮಣ್ಣಗತ್ತೇ
ತಿರುತ್ತಿತ್ತಿರುಮಗಳ್ ಕೇಳ್ವನುಕ್ಕಾಕ್ಕಿಯಪಿನ್ನೆನ್ನೆಂಜಿಲ್
ಪೊರುತ್ತಪ್ಪಡಾದು, ಎಮ್ಮಿರಾಮಾನುಶಮತ್ತೋರ್ ಪೊಯ್
ಪೊರುಳೇ ||

ಅರ್ಥ :—ಎಮ್ ಇರಾಮಾನುಶಾ = ನಮ್ಮ ಸ್ವಾಮಿ ರಾಮಾನುಜರೇ, ಕರುತ್ತಿಲ್ ಪುಗುನ್ದು = (ನನ್ನ) ಮನಸ್ಸಿನಲ್ಲಿ ಪ್ರವೇಶಿಸಿ, ಉಳ್ಳಿಲ್ = ಆ ಮನಸ್ಸಿನಲ್ಲಿರುವ, ಕಳ್ಳಮ್ ಕಳತ್ತಿ = ಆತ್ಮಾಪಹಾರವೆಂಬ ಕಳ್ಳತನವನ್ನು ನಾಶಪಡಿಸಿ, ಕರುದರಿಯ = ತಿಳಿಯಲಶಕ್ಯವಾದ ಅಥವಾ ನೆನೆಯಲಶಕ್ಯವಾದ, ವರುತ್ತತ್ತಿನಾಲ್ = ಪ್ರಯಾಸದಿಂದ, ಮಿಗವಂಚಿತ್ತು = ಮರೆಮಾಚಿ ವಂಚಿಸಿ, ನೀ = ನೀವು, ತಿರುತ್ತಿ = (ನನ್ನನ್ನು) ತಿದ್ದಿ, ಇನ್ದ ಮಣ್ ಅಗತ್ತೇ = ಈ ಭೂಲೋಕದಲ್ಲೇ, ತಿರುಮಗಳ್ ಕೇಳ್ವನುಕ್ಕು = ಶ್ರೀ ಯಃಪತಿಗೆ, ಆಕ್ಕಿಯಪಿನ್ = ದಾಸನಾಗಿ ಮಾಡಿದ ಮೇಲೆ, ಎನ್ ನೆಂಜಿಲ್ = ನನ್ನ ಮನಸ್ಸಿನಲ್ಲಿ, ಮತ್ತೋರ್ ಪೊಯ್‌ಪ್ಪೊರುಳ್ = ಬೇರೊಂದು ಅಪಾರ್ಥವು, ಪೊರುತ್ತಪ್ಪಡಾದು = ಸ್ಥಾಪಿಸಲ್ಪಡಲಾರದು (ನಿಲ್ಲದು).

ತಾ :—ಹಿಂದಿನ ಪಾಶುರದಲ್ಲಿ ಲೋಕವೆಲ್ಲಾ ಭ್ರಮಿಸುವಂತೆ ಮಾಡಿ ನಾಶಪಡಿಸಿದ ಕುದೃಷ್ಟಿಗಳನ್ನು-ಪ್ರಬಲಪ್ರಮಾಣಗಳಿಂದ ಖಂಡಿಸಿ ತಮ್ಮ ಪಾಪಗಳನ್ನೆಲ್ಲಾ ಹೋಗಲಾಡಿಸಿ, ಇನ್ನೂ ತಮಗೆ ರಾಮಾನುಜರು ಏನೇನು ಉಪಕಾರಮಾಡಬೇಕೆಂದಿದ್ದಾರೋ ತಿಳಿಯದು ಎಂದು ರಾಮಾನುಜರ ಉಪಕಾರ ಪರಂಪರೆಯನ್ನು ಅನುಸಂಧಿಸಿ ಈ ಪಾಶುರದಲ್ಲಿ, "ಇದುವರೆಗೂ ವಿಷಯಾಂತರ ಪ್ರವಣನಾಗಿದ್ದ ನನ್ನನ್ನು ಬಹು ಪ್ರಯಾಸದಿಂದ ತಿದ್ದಿ ಆತ್ಮಾಪಹಾರವೆಂಬ ಕಳ್ಳತನವನ್ನು ನಾಶಪಡಿಸಿ. ಈ ಭೂಲೋಕದಲ್ಲೇ-ನನ್ನನ್ನು ಶೇಷಿಯಾದ ಶ್ರೀಯಃಪತಿಗೆ ದಾಸನನ್ನಾಗಿಮಾಡಿ ಕೃಪೆ ಮಾಡಿದ ಮೇಲೆ ಬೇರೆ ಅಯಥಾರ್ಥಗಳಾದ ಇತರ ವಿಷಯಗಳು ನನ್ನ ಮನಸ್ಸಿನಲ್ಲಿ ಸ್ಥಾಪಿಸಲ್ಪಡಲಾರವು-(ನಿಲ್ಲಲಾರವು) ಒಪ್ಪುವುದಿಲ್ಲ." ಎಂದು ಹೇಳುತ್ತಾರೆ.

79. ಪೊಯ್ಯೈಚ್ಚುರಕ್ಕುಮ್ಪೊರುಳೈತ್ತುರನ್ದು ಇನ್ದಪ್ಪೂತಲತ್ತೇ
ಮೆಯ್ಯೈಪ್ಪುರಕ್ಕುಮಿರಾಮಾನುಶನ್ನಿರ್ಕ, ವೇರುನಮ್ಮೈ
ಉಯ್ಯಕ್ಕೊಳ್ಳವಲ್ಲದೆಯ್ವಮಿಂಗುಯಾದೆನ್ರುಲರ್ನ್ದವಮೇ
ಐಯಪ್ಪಡಾನಿರ್ಪರ್, ವೈಯತ್ತುಳ್ಳೋರ್ ನಲ್ಲರಿ ವಿೞನ್ದೇ ||

ಅರ್ಥ :—ಪೊಯ್ಯೈ = ಅಪಾರ್ಥಗಳನ್ನು, ಶುರಕ್ಕುಮ್ = ಕಲ್ಪಿಸಿಕೊಂಡು ಸಾರುತ್ತಿರುವ, ಪೊರುಳೈ — (ಬಾಹ್ಯಮತಗಳ) ಅಸತ್ಯವಾದ ವಿರುದ್ಧಾರ್ಥಗಳನ್ನು, ತುರನ್ದು = ತಳ್ಳಿ, (ಓಡಿಸಿ), ಇನ್ದಪ್ಪೂತಲತ್ತೇ = ಈ ಭೂ ತಳದಲ್ಲಿ, ಮೆಯ್ಯೈ = ಸತ್ಯವಾದ ವೇದಾಂತಾರ್ಥಗಳನ್ನು, ಪುರಕ್ಕುಮ್ = ಉಪದೇಶಿಸಿ ರಕ್ಷಿಸಿದ, ಇರಾಮಾನುಶನ್ನಿರ್ಕ = ರಾಮಾನುಜರು ಯಾರಾದರೂ ತಮ್ಮ ಬಳಿಗೆ ಬರುವರೋ ಎಂದು ನಿರೀಕ್ಷಿಸಿಕೊಂಡು ನಿಂತಿರುವಾಗ, ನಮ್ಮೈ = ನಮ್ಮನ್ನು, ಉಯ್ಯಕ್ಕೊಳ್ಳವಲ್ಲ = ಉಜ್ಜೀವಿಸುವಂತೆ ಮಾಡಬಲ್ಲ, ವೇರು ದೆಯ್ವಮ್ = ಬೇರೊಂದು ದೇವತೆಯು-ಇಂಗುಯಾದು = ಇಲ್ಲಿಯಾವುದಿದೆ, ಎನ್ರು = ಎಂದು, ಉಲರ್ನ್ದು = (ಹುಡುಕಿ) ಅದರಿಂದ ದೇಹವೆಲ್ಲಾ ಬಾಡಿ ಹೋಗಲು ಕ್ಲೇಶಿಸಿ, ನಲ್ ಅರಿವು ಇೞನ್ದು = ಯಥಾರ್ಥಜ್ಞಾನವಿಲ್ಲದೆ, ವೈಯ್ಯತ್ತುಳ್ಳೋರ್ = ಈ ಭೂಲೋಕದಲ್ಲಿರುವವರು, ಅವಮೇ = ವ್ಯರ್ಥವಾಗಿ, ಐಯ್ಯಪ್ಪಡಾನಿರ್ಪರ್ = ಇನ್ನೂ ಸಂಶಯಪಡುತ್ತಿರುವರಲ್ಲಾ ಎಂದು ಅಮುದನಾರ್ರವರು ದುಃಖಿಸುತ್ತಾರೆ.

ತಾ :—ಹಿಂದಿನ ಪಾಶುರದಲ್ಲಿ ಎಂಬೆರುಮಾನಾರ್ರವರು ತಮ್ಮ ಮನೋದೋಷವನ್ನು ನೀಗಿಸಿ ಅದನ್ನು ತಿದ್ದಿ ಸಮ್ಯಜ್ಞಾನವನ್ನುಂಟುಮಾಡಿ ಶ್ರೀಯಃಪತಿಗೆ ಶೇಷನನ್ನಾಗಿ ಮಾಡಿದನಂತರ ತಮ್ಮ ಮನಸ್ಸು ಬೇರೊಬ್ಬರನ್ನು ಹುಡುಕಿಕೊಂಡು ಹೋಗುವುದಿಲ್ಲವೆಂದು ತಮ್ಮ ಅಧ್ಯವಸಾಯದಾರ್ಢ್ಯವನ್ನು ಹೇಳಿ - ಈ ಪಾಶುರದಲ್ಲಿ ತಮ್ಮ ಹಾಗೆಯೇ ಸಂಸಾರಿ ಚೇತನರುಗಳಿಗೂ ನಂಟುವದು ಉಚಿತವಾಗಿದ್ದರೂ ಹಾಗೆ ಮಾಡದೆ ಆತ್ಮದ ದೇಹಪರಿಮಾಣತ್ವ ಕ್ಷಣಿಕತ್ವ ಮುಂತಾದ ವಿರುದ್ಧಾರ್ಥಗಳನ್ನು ಬಾಯಿಗೆ ಬಂದ ಹಾಗೆ ಪ್ರಲಾಪಿಸುತ್ತಿರುವ ಬಾಹ್ಯ ಕುದೃಷ್ಟಿಗಳ ಮತ ಪ್ರಮೇಯವನ್ನು ವಾಸನೆಯೊಂದಿಗೆ ಓಡಿಸಿಬಿಟ್ಟು ಆ ವೇದದ ಅಪಾರ್ಥಗಳಿಂದ ವ್ಯಾಪ್ತವಾದ

ಭೂಲೋಕದಲ್ಲಿ ಸತ್ಯವಾದ ಅರ್ಥವನ್ನು ಪರಿಪಾಲಿಸಿ, ಸ್ವಾಮಿ ರಾಮಾನುಜರು ಇರುವಾಗ ಅವರನ್ನು ಬಿಟ್ಟು "ನಮ್ಮನ್ನು ರಕ್ಷಿಸುವ ಬೇರೊಂದು ದೈವವುಂಟೋ" ಎಂಬ ಮನಸ್ಸಿನ ಚಿಂತೆಯಿಂದ ಕೃಶರಾಗಿ ಹೋಗಿ ಸುಮ್ಮನೆ ಸಂಶಯಾತ್ಮರಾಗಿ ನಶಿಸಿ ಹೋಗುವವರುಗಳನ್ನು ಕಂಡು ಅವರಿಗಾಗಿ ಅಮುದನಾರ್ರವರು ದುಃಖಿಸಿ ಮರುಗುತ್ತಾರೆ.

80. ನಲ್ಲಾರ್ಪರವುಮಿರಾಮಾನುಶರ್, ತಿರುನಾಮಮ್ ನಮ್ಬ
ವಲ್ಲಾರ್ ತಿರತ್ತೈ ಮರವಾದವರ್‌ಗಳ್ ಯವರ್, ಅವರ್‌ಕ್ಕೇ
ಎಲ್ಲಾವಿಡತ್ತಿಲುಮೆನ್ರುಮೆಪ್ಪೋದಿಲುಮೆತ್ತೊಳುಮ್ಬುಮ್
ಶೊಲ್ಲಾಲ್ ಮನತ್ತಾಲ್ ಕರುಮತ್ತಿನಾಲ್, ಶೆಯ್ವನ್
ಶೋರ್ವಿನ್ರಿಯೇ ||

ಅರ್ಥ: — ನಲ್ಲಾರ್ = ಸತ್ಪುರುಷರು, ಪರವುಂ = ಹೊಗಳತಕ್ಕ ಇರಾಮಾನುಶರ್ = ಶ್ರೀ ರಾಮಾನುಜರ, ತಿರುನಾಮಮ್ = ದಿವ್ಯನಾಮವನ್ನು, ನಂಬವಲ್ಲಾರ್ ತಿರತ್ತೈ = (ತಮಗೆ ರಕ್ಷಕವು) ಎಂದು ನಂಬಿರುವವರ ಪ್ರಾಕಾರವನ್ನು, ಮರವಾದವರ್‌ಗಳ್ = ಮರೆಯದೆ ಸರ್ವದಾ ಅನುಸಂಧಾನ ಮಾಡಿಕೊಂಡಿರುವವರು, ಯವರ್ = ಯಾರೋ, ಅವರ್‌ಕ್ಕೇ = ಅವರಿಗೇನೇ, ಎಲ್ಲಾ ಇಡತ್ತಿಲುಮ್ = ಸರ್ವ ದೇಶದಲ್ಲೂ, ಎನ್ರುಮ್ = ಸರ್ವಕಾಲದಲ್ಲೂ, ಎಪ್ಪೋದಿಲುಂ = ಸರ್ವಾವಸ್ಥೆಗಳಲ್ಲೂ - ಎತ್ತೊಳುಮ್ಬುಮ್ = ಸರ್ವವಿಧ ಕೈಂಕರ್ಯಗಳಲ್ಲೂ, ಶೊಲ್ಲಾಲ್ = ಬಾಯಿಮಾತಿನಿಂದಲೂ, ಮನತ್ತಾಲ್ = ಮನಸ್ಸಿನಿಂದಲೂ, ಕರುಮತ್ತಿನಾಲ್ = ಶರೀರಕಾರ್ಯದಿಂದಲೂ - ಶೋರ್ವು ಇನ್ರಿಯೇ = ವಿರಾಮವಿಲ್ಲದೆ, (ಅವಿಚ್ಛಿನ್ನವಾಗಿ) ಶೆಯ್ವನ್ = ಉಪಕಾರ ಮಾಡುವೆನು . ಎಂದು ಅಮುದನಾರ್ರವರು ತಮ್ಮ ನಿಷ್ಠೆಯನ್ನು ಹೇಳುತ್ತಾರೆ.

ತಾ :—ಹಿಂದಿನ ಪಾಶುರದಲ್ಲಿ ಸ್ವಾಮಿ ರಾಮಾನುಜರು ದುರ್ಮತಗಳನ್ನು ನಿರಸನಮಾಡಿ ಪ್ರಾಮಾಣಿಕವಾದ ವೇದ ಮಾರ್ಗ ಪ್ರತಿಷ್ಠಾಪನವನ್ನು ಮಾಡಿದ್ದರೂ ಅಜ್ಞಾನಾವೃತವಾದ ಈ ಲೋಕದಲ್ಲಿರುವ ಚೇತನರು ಅವರನ್ನು ಆಶ್ರಯಿಸುವುದಕ್ಕೆ ಸಮ್ಮತಿಸದೇ "ಬೇರೊಬ್ಬ ರಕ್ಷಕರು ತಮಗೆ

"ಇರುವರೇ" ಎಂದು ಕಷ್ಟಪಟ್ಟು ಹುಡುಕಿ ಕಷ್ಟಪಡುತ್ತಿರುವರಲ್ಲಾ ಎಂದು ಅವರು ತಮ್ಮ ಪರಿಯನ್ನು ತಿಳಿಸಿ-ಈ ಪಾಶುರದಲ್ಲಿ 'ಅವರಂತೆ ಇರದೆ ಅವರಿಗಿಂತ ಅತ್ಯಂತ ವಿಲಕ್ಷಣರಾಗಿರುವ ಸ್ವಾಮಿ ರಾಮಾನುಜಾಚಾರ್ಯರ ದಿವ್ಯ ನಾಮವನ್ನೇ ಭಕ್ತಿವಿಶ್ವಾಸಗಳಿಂದ ರಕ್ಷಕನೆಂದು ನಂಬಿರುವ ಮಹಾತ್ಮರಲ್ಲಿ ಬಹ್ವಾದರರಾಗಿ ಸದಾ ಅವರನ್ನು ಮರೆಯದೇ ಇರುವವರಿಗೇ ಸರ್ವದೇಶ, ಸರ್ವಕಾಲ, ಸರ್ವಾವಸ್ಥೆಗಳಲ್ಲೂ, ಸರ್ವವಿಧ ಕೈಂಕರ್ಯಗಳಲ್ಲೂ, ಸರ್ವಕರಣಗಳಿಂದಲೂ ಸರ್ವರೂ ಅರಿಯುವಂತೆ ಉಪಕಾರಮಾಡುವೆನು' ಎಂದು ಅಮುದನಾರ್ರವರು ತಮ್ಮ ನಿಷ್ಠೆಯನ್ನು ತಿಳಿಸುತ್ತಾರೆ.

**81.** ಶೋರ್ವಿನ್ರಿಯುನ್ತನ್ ತುಣೈಯಡಿಕ್ಕೀೞ್, ತೊಣ್ಡು
ಪಟ್ಟವರ್ ಪಾಲ್
ಶಾರ್ವಿನ್ರಿನಿನ್ರವೆನಕ್ಕು ಅರಂಗನ್ ಶೆಯ್ಯ ತಾಳಿಣೈಗಳ್
ಪೇರ್ವಿನ್ರಿಯಿನ್ರುಪೆರುತ್ತ ಇರಾಮಾನುಶ ಇನಿಯುನ್
ಶೀರೊನ್ರಿಯ ಕರುಣೈಕ್ಕು ಇಲ್ಲೈ ಮಾರು ತೆರಿವುರಿಲೇ ||

ಅರ್ಥ :— ಶೋರ್ವಿನ್ರಿ = ವಿಚ್ಛೇದವಿಲ್ಲದೆ, ಉನ್ತನ್ = ನಿಮ್ಮ-ತುಣೈಯಡಿಕ್ಕೀೞ್ = ಸೇರಿಕೊಂಡಿರುವ ದಿವ್ಯ ಪಾದಗಳ ಕೆಳಗೆ, ತೊಣ್ಡು ಪಟ್ಟವರ್ ಪಾಲ್ = ಸೇವೆಮಾಡತಕ್ಕವರೊಡನೆ, ಶಾರ್ವು ಇನ್ರಿನಿನ್ರ = ಸೇರದೆಇರುವ, ಎನಕ್ಕು = ನನಗೆ, ಅರಂಗನ್ = ಶ್ರೀರಂಗನಾಥನ, ಶೆಯ್ಯ = ಪರಮ ಭೋಗ್ಯವಾದ, ಇಣೈತಾಳ್ ಗಳ್ = ಒಂದಕ್ಕೊಂದು ಸದೃಶವಾಗಿ, ಹೊಂದಿಕೊಂಡಿರುವ ಅಡಿದಾವರೆಗಳನ್ನು, ಪೇರ್ವಿನ್ರಿ = ಅವಿಚ್ಛಿನ್ನವಾಗಿ ಇನ್ರು = ಈಗ, ಪೆರುತ್ತುಮ್ = ಲಭಿಸುವಂತೆ ಮಾಡಿದ, ಇರಾಮಾನುಶಾ = ಸ್ವಾಮಿ ರಾಮಾನುಜರೇ ! ಇನಿ = ಇನ್ನುಮೇಲೆ, ಉನ್ = ನಿಮ್ಮ, ಶೀರ್ ಒನ್ರಿಯ = ಗೌರವಯುಕ್ತವಾದ ಮಹಾತ್ಮ್ಯವುಳ್ಳ, ಕರುಣೈಕ್ಕು = ಕೃಪೆಗೆ, ತೆರಿವುರಿಲ್ = ವಿಚಾರಮಾಡಿ ನೋಡಿದರೆ, ಮಾರುಇಲ್ಲೈ = ಸಮಾನವು ಬೇರೆ ಯಾವುದೂ ಇಲ್ಲವು.

ತಾ :—ಹಿಂದಿನ ಪಾಶುರದಲ್ಲಿ ಸರ್ವೋತ್ತಮರಾದ ಎಂಬೆರುಮಾನಾರ್ರವರ ಸಂಬಂಧಿಗಳಿಗೇ, ಸರ್ವದೇಶ, ಸರ್ವಕಾಲ, ಸರ್ವಾವಸ್ಥೆಗಳಲ್ಲೂ, ಸರ್ವ ಕರಣಗಳಿಂದಲೂ, ಸರ್ವವಿಧ ಕೈಂಕರ್ಯಗಳನ್ನು ಮಾಡುವೆನೆಂದು ಅವರಲ್ಲಿ ತಮಗಿದ್ದ ನಿಷ್ಠತೆಯನ್ನು ತಿಳಿಸಿ ಇದರಲ್ಲಿ " ಸ್ವಾಮಿ ಎಂಬೆರುಮಾನಾರ್ರವರ ದಿವ್ಯ ಮುಖಮಂಡಲವನ್ನು ನೋಡಿ ಇದುವರಿಗೂ ಶ್ರೀ ರಾಮಾನುಜರ ವಿಷಯದಲ್ಲಿ ಭಕ್ತಿಯುಳ್ಳವರಿಗೆ ಸೇವೆ (ಕೈಂಕರ್ಯ) ಮಾಡಲು ಇಚ್ಛಿಸದೇ ಇದ್ದ ನನ್ನನ್ನು, ರಂಗನಾಥನ ಭಕ್ತರಿಗೆ (ಭಾಗವತರಿಗೆ) ಕೈಂಕರ್ಯ ಮಾಡಿದವರಿಗೆ, ರಂಗನಾಥನ ಪಾದಗಳು ಲಭಿಸುವಂತೆ ಉಪಕರಿಸಿದ ಶ್ರೀರಾಮಾನುಜರ ಮಹತ್ತಾದ ಕೃಪೆಗೆ ಸಮಾನವಾದುದು ಬೇರೆ ಯಾವುದೂ ಇಲ್ಲ"-ವೆಂದು ಹೇಳುತ್ತಾರೆ.

82. ತೆರಿವುತ್ತ ಜ್ಞಾನಮ್ ಶೆರಿಯಪ್ಪೆರಾದು, ವೆನ್ದೀವಿನೈಯಾಲ್
ಉರುವತ್ತ ಜ್ಞಾನತ್ತುೞಲ್ಗಿನ್ರೇನೈ, ಒರುಪೊೞ್ದಿಲ್
ಪೊರುವತ್ತ ಕೇಳ್ವಿಯನಾಕ್ಕಿನಿನ್ರಾನೆನ್ನಪುಣ್ಣಿಯನೋ
ತೆರಿವುತ್ತ ಕೀರ್ತ್ತಿ, ಇರಾಮಾನುಶನೆನ್ನುಮ್ ಶೀರ್ಮುಗಿಲೇ ||

ಅರ್ಥ :—ತೆರಿವುಉತ್ತ = ವಿವೇಚನಾ ಶಕ್ತಿಯುಳ್ಳ, ಜ್ಞಾನಮ್ = ಜ್ಞಾನವನ್ನು, ಶೆರಿಯಪ್ಪೆರಾದು = ಹೊಂದದೆ, ವೆಮ್ ತೀವಿನೈಯಾಲ್ = ಅತಿಕ್ರೂರವಾದ ದುಷ್ಕರ್ಮದಿಂದ, ಉರುವುಅತ್ತ ಜ್ಞಾನತ್ತು = (ತನ್ನ ಸ್ವರೂಪವನ್ನು ನೀಗಿದ) ಅಜ್ಞಾನದಲ್ಲಿ, ಉೞಲ್ಗಿನ್ರಎನ್ನೈ = ಅಲ್ದಾಡುತ್ತಿರುವ ನನ್ನನ್ನು (ಭ್ರಮಿಸುತ್ತಿದ್ದ ನನ್ನನು)-ಒರುಪೊೞ್ದಿಲ್ = ಒಂದು ಕ್ಷಣದಲ್ಲಿ-ಪೊರುವುಅತ್ತ = ಅಸದೃಶವಾದ, ಕೇಳ್ವಿಯನಾಕ್ಕಿನಿನ್ರಾನ್ = ಶ್ರೋತೃವನ್ನಾಗಿ (ಪ್ರಸನ್ನನಾಗಿ) ಮಾಡಿದರು - ತೆರಿವುತ್ತ = ಜ್ಞಾನಪ್ರಕಾಶವಾದ, ಕೀರ್ತಿ = ಕೀರ್ತಿಯಿಂದ ಕೂಡಿದ, ಶೀರ್ಮುಗಿಲ್ ಎನ್ನುಮ್ = ಔದಾರ್ಯವುಳ್ಳ ಮೇಘದಂತೆ ಇರುವ - ಇರಾಮಾನುಶ = ಸ್ವಾಮಿ ರಾಮಾನುಜರು, ಎನ್ನ ಪುಣ್ಣಿಯನೋ = ಎಂಥಾ ಧಾರ್ಮಿಕರೋ (ನನಗೆ ತಿಳಿಯದು).

ತಾ:—"ಸಾಂಸಾರಿಕ ಪ್ರವೃತ್ತಿಗಳಲ್ಲಿ ಮಗ್ನವಾಗಿದ್ದು ಸಮ್ಯಜ್ಞಾನವನ್ನು ಹೊಂದಲಾರದೆ ಅತಿ ಕ್ರೂರವಾದ ದುಷ್ಕರ್ಮದಿಂದ, ದೇಹಾತ್ಮಾ

ಭಿಮಾನಿಯಾಗಿ, ಯಾವುದರಲ್ಲೂ ನಿಶ್ಚಿತತೆಯಾದ ಸ್ಥಿರತ್ವವಿಲ್ಲದೆ ಭ್ರಮಿಸಿ ತಿರುಗುತ್ತಿದ್ದ ನನ್ನನ್ನು . ತಾವಾಗಿಯೇ ಕೃಪೆಯಿಟ್ಟು ಕ್ಷಣಮಾತ್ರದಲ್ಲಿಯೇ ತತ್ವಹಿತ ಪುರುಷಾರ್ಥಗಳನ್ನು ಸಂಶಯಕ್ಕೆಡೆಯಿಲ್ಲದಂತೆ ಉಪದೇಶಿಸಿ ಪ್ರಸನ್ನ ನನ್ನಾಗಿ ಮಾಡಿದರು, ಜಲಸ್ಥಾನ ಭೇದವೆಣಿಸದೆ ವರ್ಷಿಸುವ ಮೇಘದಂತೆ ಪರಮೋದಾರರಾದ ಎಂಬೆರುಮಾನಾರ್ರವರು ಎಂಥಾ ಧಾರ್ಮಿಕರು" ಎಂದು ಕೊಂಡಾಡುತ್ತಾ ವಿದ್ಧರಾಗುತ್ತಾರೆ.

**83.** ಶೀರ್ ಕೊಣ್ಡು ಪೇರರಮ್ ಶೆಯ್ ದು, ನಲ್ವೀಡು
ಶೆರಿದುವೆನ್ನುಮ್
ಪಾರ್ ಕೊಣ್ಡ ಮೇನ್ಮೈಯರ್ ಕೂಟ್ಟನಲ್ಲೇನ್, ಉನ್ಪದ
ಯುಗಮಾಮ್
ಏರ್ ಕೊಣ್ಡ ವೀಟ್ಟೈಯೆಳಿದಿನಿಲೆಯ್ ದುವನುನ್ನಡೈಯ
ಕಾರ್ ಕೊಣ್ಡವಣ್ಮೈ, ಇರಾಮಾನುಶಾಇದುಕಣ್ಡು ಕೊಳ್ಳೇ ||

ಅರ್ಥ :—ಶೀರ್ ಕೊಣ್ಡು = ಶಮದಮಾದಿ ಸ್ವಭಾವದಿಂದ ಕೂಡಿ, ಪೇರ್ ಅರಮ್ ಶೆಯ್ ದು = ಪರಮ ಧರ್ಮವಾದ ಪ್ರಪತ್ತಿಮಾಡಿ, ನಲ್ ವೀಡು = ವಿಲಕ್ಷಣವಾದ ಮೋಕ್ಷವನ್ನು, ಶೆರಿದುಮ್ ಎನ್ನುಮ್ = ಹೊಂದುವೆವು ಎಂದು, ಪಾರ್ ಕೊಣ್ಡ = ಭೂಮಿಯಲ್ಲೆಲ್ಲಾ ವ್ಯಾಪಿಸಿರುವ, ಮೇನ್ಮೈಯರ್ = ಪ್ರಭಾವವುಳ್ಳ ಭಗವತ್ಪ್ರಪನ್ನರ, ಕೂಟ್ಟನಲ್ಲೇನ್ = ಸಮೂಹದಲ್ಲಿ ಸೇರಿದವನಲ್ಲ ನಾನು, ಇರಾಮಾನುಶಾ = ಓ ರಾಮಾನುಜರೇ ! ಉನ್ ಪದ ಯುಗಮಾಮ್ = ನಿಮ್ಮ ಎರಡು ಪಾದಗಳೆಂಬ, ಏರ್ ಕೊಣ್ಡ ವೀಟ್ಟೈ = ವಿಲಕ್ಷಣವಾದ ಮೋಕ್ಷವನ್ನು, ಎಳಿದಿನಿಲ್ = ಅತ್ಯಂತ ಸುಲಭವಾಗಿ, ಎಯ್ ದುವನ್ = ಹೊಂದುವೆನು, (ಇದಕ್ಕೆ ಕಾರಣವು) ಕಾರ್ ಕೊಣ್ಡ = ಮಳೆಗಾಲದ ನೀಲಿಮೇಘಕ್ಕಿಂತ ಹಿರಿದಾದ, ಉನ್ನುಡೈಯವಣ್ಮೈ = ನಿಮ್ಮ ಈ ಔದಾರ್ಯವೇ- ಕಂಡುಕೊಳ್ಳೇ = ಇದನ್ನು ನೀವೇ ತಿಳಿದುಕೊಳ್ಳಿ ಎಂದು ವಿಜ್ಞಾಪಿಸುತ್ತಾರೆ.

ತಾ :—ಹಿಂದಿನ ಪಾಶುರದಲ್ಲಿ ಇವರು ಸಂತೋಷದಿಂದ—" ಪೊರುವು ಅತ್ತ ಕೇಳ್ವಿಯನಾಕ್ಕಿನಿನ್ರಾನ್" ಎಂದು ಹೇಳಿದ್ದನ್ನು ಕೇಳಿ, ಶ್ರೀರಾಮಾನು

ಜರು "ಉಪಮಾನರಹಿತವಾದ ಶ್ರುತವನ್ನು ಹೊಂದುವಂತೆ ನಾನು ಮಾಡಿದೆನೆಂದು ನೀವು ನನ್ನನ್ನು ಶ್ಲಾಘಿಸಿದಿರಿ-ನಿಮ್ಮನ್ನೊಬ್ಬರನ್ನೇಯೋ ಹಾಗೆ ಮಾಡಿದುದು? ಈ ಲೋಕವನ್ನೇ ಹಾಗೆ ಮಾಡಿ ಪರಮಪದಕ್ಕೆ ಇಲ್ಲಿರುವವರೆಲ್ಲರನ್ನೂ ಕೊಂಡುಹೋಗುವುದಕ್ಕೆಂದೇ ನಾನು ಅವತರಿಸಿದುದು" ಆದ್ದರಿಂದ ನಿಮಗೂ ಇತರರಿಗೂ ವ್ಯತ್ಯಾಸವೇನೆಂದು ರಾಮಾನುಜರು ಕೇಳಿದಂತೆ ಭಾವಿಸಿ-ಅವರ ದಿವ್ಯ ಮುಖಮಂಡಲವನ್ನು ನೋಡಿ ಇವರು "ನಾನು ಇತರರಂತೆ ಭಗವಚ್ಛರಣಾಗತಿಯು ಆನಂದಾವಹವಾದ ಚರಣಗಳೆಂಬ ಮೋಕ್ಷವನ್ನು ನಿಮ್ಮ ಔದಾರ್ಯದಿಂದಲೇ ಹೊಂದುವೆನು ಎಂದು ಅವರಿಗೆ ವಿಜ್ಞಾಪಿಸುತ್ತಾರೆ.

**84.** ಕಣ್ಡುಕೊಣ್ಡೇನೆಮ್ಮಿರಾಮಾನುಶನ್ತನ್ನೈ, ಕಾಣ್ಡಲುಮೇ
ತೊಣ್ಡುಕೊಣ್ಡೇನವನ್ ತೊಣ್ಡರ್ ಪೊತ್ತಾಳಿಲ್, ಎನ್
ತೊಲ್ಲೈವೆನ್ನೋಯ್
ವಿಣ್ಡುಕೊಣ್ಡೇನವನ್ ಶೀರ್ ವೆಳ್ಳವಾರಿಯೈ ವಾಯ್ ಮಡುತ್ತಿ
ನ್ನ್ರುಣ್ಡುಕೊಣ್ಡೇನ್, ಇನ್ನಮುತ್ತನವೋದಿಲುಲಪ್ಪಿಲ್ಲೈಯೇ ||

ಅರ್ಥ :—ಎಮ್ ಇರಾಮಾನುಶನ್ತನ್ನೈ = ನಮ್ಮ ಸ್ವಾಮಿಯಾದ ರಾಮಾನುಜರನ್ನು, ಕಣ್ಡು ಕೊಣ್ಡೇನ್ = ಯಥಾವತ್ತಾಗಿ ಅರಿತುಕೊಣ್ಡೆನು - ಕಾಣ್ಡಲುಮೇ = ಹಾಗೆ ಅರಿತುಕೊಂಡೊಡನೆ, ಅವನ್ ತೊಣ್ಡರ್ = ಅವರ ದಾಸ್ಯವರ್ಗದವರ, ಪೊತ್ತಾಳಿಲ್ = ಸ್ಪೃಹಣೀಯವಾದ ಪಾದಗಳಲ್ಲಿ, ತೊಣ್ಡು ಕೊಣ್ಡೇನ್ = ದಾಸ್ಯವನ್ನು ವಹಿಸಿಕೊಂಡೆನು, ಎನ್ = ನನ್ನ, ತೊಲ್ಲೈ = ಅನಾದಿಯಾದ, ವೆನ್ = ಕ್ರೂರವಾದ, ನೋಯ್ = ಪಾಪಗಳನ್ನು, ವಿಣ್ಡುಕೊಣ್ಡೇನ್ = ಹೋಗಲಾಡಿಸಿಕೊಂಡೆನು, ಅವನ್ = ಅವರ, ಶೀರ್ ವೆಳ್ಳವಾರಿಯೈ = ಕಲ್ಯಾಣಗುಣ ಪ್ರವಾಹವನ್ನು. ವಾಯ್ ಮಡುತ್ತು = ಬಾಯ್ತೆರೆದು ಆ ಗುಣಗಳಿಗೆ ಉಚಿತವಾದ ಶಬ್ದರಾಶಿಯಿಂದ, ಇನ್ನ್ರುಉಣ್ಡು ಕೊಣ್ಡೇನ್ = ಈಗ ಸ್ತುತಿಸಿ ಧನ್ಯನಾದೆನು, (ಅನುಭವಿಸಿದೆನು) ಇನ್ನಮ್ = ಇನ್ನು, ಉತ್ತನ = ಅವರಿಂದ ನಾನು ಹೊಂದಿದ್ದನ್ನು, ಓದಿಲ್ = ಹೇಳಲುದ್ಯುಕ್ತನಾದರೆ, ಉಲಪ್ಪು ಇಲ್ಲೈ = ಅದಕ್ಕೆ ಕೊನೆಯೇ ಇಲ್ಲವು.

ತಾ :—ಹಿಂದಿನ ಪಾಶುರದಲ್ಲಿ "ಸ್ವಾರ್ಥವು ಪರ್ವತಿಸ್ವರ, ಭಗವದ್ಭಾಗವತರ, ಗೋಷ್ಠಿಗೂ ಸೇರಿದ ನನ್ನನ್ನು ಚರಮಪರ್ವವಾದ ರಾಮಾನುಜಾಚಾರ್ಯರ ಚರಣಾರವಿಂದಗಳನ್ನು ಪರಮ ಪ್ರಾಪ್ಯವಾಗಿ ನಂಬಿರುವೆನೆಂದು ಲೋಕದವರೆಲ್ಲಾ ತಿಳಿಯುವಹಾಗೆ ಮಾಡಿದರು ಎಂದು ಹೇಳಿ," ಇದರಲ್ಲಿ "ಪ್ರಾಪ್ತಶೇಷಿಯಾದ ಸ್ವಾಮಿ ರಾಮಾನುಜರನ್ನು ಕಣ್ಣಾರಕಂಡು ಆದರ್ಶನ ವೈಭವವು ಚಿಗುರಿ ಹರಡಿಕೊಂಡು ತದೀಯ ಪರ್ಯತ್ತವಾಗಿ ಬೆಳೆಯುವದರಿಂದ ಅವರ ಸಿರಿಯ ತಿರುವಡಿಗಳ ಸೇವೆ ಮಾಡಿ ಅತಿಕ್ರೂರವಾದ ದುಷ್ಕರ್ಮದ ಪಾಪಗಳನ್ನು ಸಂಪೂರ್ಣವಾಗಿ ಹೋಗಲಾಡಿಸಿಕೊಂಡೆನು—ಅವರ ಕಲ್ಯಾಣ ಗುಣಗಳನ್ನು ಬಾಯಿತುಂಬ ಸ್ತೋತ್ರಮಾಡಿ ಧನ್ಯನಾದೆನು. ಇನ್ನೂ ಅವರಿಂದ ನಾನು ಪಡೆದಿರುವ ಫಲಗಳನ್ನು ಹೇಳಲುದ್ಯುಕ್ತನಾದರೆ ಅದಕ್ಕೆ ಕೊನೆಯೇ ಇಲ್ಲ" ಎಂದು ಹೇಳಿ ಸಂತೋಷಿಸುತ್ತಾರೆ.

**85.** ಓದಿಯವೇದತ್ತಿನುಳ್ಪೊರುಳಾಯ್, ಅದನುಚ್ಚಿ ಮಿಕ್ಕ
ಶೋದಿಯೈನಾದನೆನವರಿಯಾದ್ದುಳಲ್ಗಿನ್ರ ತೊಣ್ಡರ್,
ಪೇದೈನ್ಮೈತೀರ್ತ್ತ ಇರಾಮಾನುಶನೈ ತೊಳುಮ್ಪೆರಿಯೋರ್
ಪಾದಮಲ್ಲಾಲೆನ್ತನ್ನಾರುಯಿರ್ಕ್ಕು, ಯಾದೊನ್ರುಮ್ಪತ್ತಿ
ಲ್ಲೈಯೇ ॥

ಅರ್ಥ :—ಓದಿಯ = ಅಭ್ಯಾಸಮಾಡಿದ, ವೇದತ್ತಿನ್ = ನಾಲ್ಕುವೇದಗಳ, ಉಳ್ಪೊರುಳಾಯ್ = ತಾತ್ಪರ್ಯಾರ್ಥವಾದ - ಅದನುಚ್ಚಿ = ಆ ವೇದಾಂತದಲ್ಲಿನ, ಮಿಕ್ಕಶೋದಿಯೈ = ಅತಿಶಯವಾಗಿ ಪ್ರಕಾಶಿಸುವ ಪರಂಜ್ಯೋತಿಯನ್ನು, ನಾದನೆನ = ನಾಥನೆಂದು, ಅರಿಯಾದು = ತಿಳಿದುಕೊಳ್ಳದೆ, ಉಳಲ್ಗಿನ್ರ = ಮೇಲಕ್ಕೂ ಕೆಳಕ್ಕೂ ಚಲಿಸಿ ಅಲ್ಲಾಡುತ್ತಿರುವ (ಭ್ರಮಿಸುವ), ತೊಣ್ಡರ್ = ಸಂಸಾರವಿಷಯಪ್ರವಣರ, ಪೇದೈನ್ಮೈ = ಅಜ್ಞಾನವನ್ನು, ತೀರ್ತ್ತ = ಹೋಗಲಾಡಿಸಿದ, ಇರಾಮಾನುಶನೈ = ಶ್ರೀ ರಾಮಾನುಜರನ್ನು, ತೊಳುಮ್ = ಭಜಿಸುವ, ಪೆರಿಯೋರ್ = ಮಹಾತ್ಮರ, ಪಾದಮಲ್ಲಾಲ್ = ಪಾದವಲ್ಲದೆ, ಎನ್ದನ್ನಾರುಯಿರ್ಕ್ಕು = ನನ್ನ ಆತ್ಮಕ್ಕೆ, ಯಾದೊನ್ರುಮ್ = ಬೇರೊಂದು ಆಶ್ರಯವೂ, ಇಲ್ಲೈಯೇ = ಇಲ್ಲವೇ ಇಲ್ಲ.

ತಾ :—"ಅಧ್ಯಯನವಿಧಿಯನ್ನನುಸರಿಸಿ ಕಲಿಯಬೇಕಾದ ವೇದದ ತಾತ್ಪರ್ಯಾರ್ಥವಾಗಿ ಆ ವೇದಗಳ ಶಿರಸ್ಸಾದ ವೇದಾಂತದಲ್ಲಿ ಪ್ರತಿಪಾದ್ಯನಾಗಿರುವವನೇ ನಮ್ಮ ರಕ್ಷಕನಾದ ಸ್ವಾಮಿ ಎಂದು ತಿಳಿದುಕೊಳ್ಳಲಾರದೇ ಇತರ ಅಪ್ರಾಪ್ತವಿಷಯಗಳಲ್ಲಿ ಆಸಕ್ತರಾಗಿ ಬಳಲುತ್ತಿರುವ ಸಂಸಾರಿಗಳ ಅಜ್ಞಾನವನ್ನು ಹೋಗಲಾಡಿಸಿದ ಸ್ವಾಮಿ ರಾಮಾನುಜರಿಗೆ ಅನನ್ಯಾರ್ಹಶೇಷರಾದ ಕೂರನಾಥರು, ದಾಶರಥಿ, ಮೊದಲಾದವರ ಪಾದಗಳಲ್ಲದೇ ನನ್ನ ಆತ್ಮಕ್ಕೆ ಬೇರೊಂದು ಆಶ್ರಯವೂ ಇಲ್ಲ" ಎಂದು ಅಮುದನಾರವರು ಹೇಳುತ್ತಾರೆ.

೮೬. ಪತ್ತಾಮನಿಶರೈಪ್ಪತ್ತಿ, ಅಪ್ಪತ್ತುವಿಡಾದವರೇ
ಉತ್ತಾರೆನವುೞನ್ರೋಡಿನೈಯೇನಿನಿ, ಒಳ್ಳಿಯನೂಲ್
ಕತ್ತಾರ್ಪರವುಮಿರಾಮಾನುಶನೈಕ್ಕರುದುಮುಳ್ಳಮ್
ಪೆತ್ತಾರ್ಯವರ್, ಅವರೆಮ್ಮೈನಿನ್ರಾಳುಮ್ಪೆರಿಯವರೇ ||

ಅರ್ಥ :— ಪತ್ತಾ = ಆಶ್ರಯವನ್ನು ನೀಡದ (ಕ್ಷುದ್ರರ), ಮನಿಶರೈ = ಕ್ಷುದ್ರಮನುಷ್ಯರನ್ನು, ಪತ್ತಿ = ಆಶ್ರಯಿಸಿ, ಅಪ್ಪತ್ತು ವಿಡಾದು = ಆ ಆಶ್ರಯವನ್ನು ಬಿಡದೇ, ಅವರೇ = ಆ ಮನುಷ್ಯರೇ, ಉತ್ತಾರೆನ = ಬಂಧುಗಳೆಂದು ಎಣಿಸಿ, ಉೞನ್ರೋಡಿ = ಅಲ್ಲಾಡಿ ದುಃಖಪಟ್ಟು, ಅವರ ಗೃಹಗಳಿಗೆ ಹುಡುಕಿಕೊಂಡುಹೋಗಿ, ಬಳಲಿ - ಇನಿ ನೈಯೇನ್ = ಇನ್ನು ಮೇಲೆ ಹೀಗೆ ಮನಾದಿ ಶಿಥಿಲನಾಗುವುದಿಲ್ಲ, ಒಳ್ಳಿಯನೂಲ್ = ತತ್ತ್ವಹಿತಪುರುಷಾರ್ಥಗಳನ್ನು ಯಥಾರ್ಥಪ್ರಕಾಶಕವಾಗಿ ತಿಳಿಸುವ ಶಾಸ್ತ್ರಗಳನ್ನು, ಕತ್ತಾರ್ = ಕಲಿತವರು, ಪರವುಮ್ = ಸ್ತುತಿಸತಕ್ಕ, ಇರಾಮಾನುಶನೈ = ಸ್ವಾಮಿ ರಾಮಾನುಜರನ್ನು, ಕರುದುಮ್ = ಧ್ಯಾನಿಸುವ, ಉಳ್ಳಮ್ ಪೆತ್ತಾರ್ = ಮನಸ್ಸನ್ನು ಹೊಂದಿದವರು, ಯವರ್ = ಯಾರೋ, ಅವರ್ = ಅಂಥವರು, ಎಮ್ಮೈ = ನಮ್ಮನ್ನು, ನಿನ್ರಾಳುಮ್ = ಸದಾ ಪರಿಪಾಲಿಸುವ, ಪೆರಿಯವರೇ = ಮಹಾತ್ಮರುಗಳೇ, (ಎನ್ನುವರು).

ತಾ :— ಮೊದಲೆಲ್ಲಾ ಅಪ್ರಾಪ್ತವಿಷಯಗಳನ್ನು ತಮಗೆ ಆಧಾರವೆಂದು ಆಶ್ರಯಿಸಿರುವವರನ್ನೇ "ನಾನು ಬಂಧುಗಳೆಂದು ನಂಬಿ ಭ್ರಮಿಸಿ ಬಡವಾಗಿ

ಶಿಥಿಲನಾದೆನು - ಇನ್ನು ಮೇಲೆ ಹೀಗೆ ಮಾಡುವುದಿಲ್ಲ. ತತ್ತ್ವಹಿತಪುರುಷಾರ್ಥಗಳನ್ನು ಸರಿಯಾಗಿ ತಿಳಿದುಕೊಂಡಿರುವ ಮಹಾತ್ಮರುಗಳಿಂದ ಸ್ತುತಿಸಲ್ಪಡುವ ಸ್ವಾಮಿ ಎಂಬೆರುಮಾನಾರ್ರವರನ್ನು ಧ್ಯಾನಿಸುವ ಮನಸ್ಸನ್ನುಳ್ಳವರು ಯಾರೇ ಆಗಿರಲಿ ಅವರುಗಳೇ ನನ್ನನ್ನು ಆಳತಕ್ಕವರು'' ಎನ್ನುತ್ತಾರೆ.

**87. ಪೆರಿಯವರ್ ಪೇಶಿಲುಮ್ಪೇದೈಯರ್ ಪೇಶಿಲುಮ್, ತನ್ ಗುಣಂಗಳ್**
**ಕ್ಕುರಿಯಶೊಲ್ಲೆನ್ರು ಮುಡೈಯವನೆನ್ರೆನ್ರು, ಉಣರ್ವಿಲ್ ಮಿಕ್ಕೋರ್**
**ತೆರಿಯುಮ್ ವಣ್‌ಕೀರ್ತ್ತಿ ಯಿರಾಮಾನುಶನ್ಮರೈ ತೇರ್ನ್ದುಲಗಿಲ್**
**ಪುರಿಯುಂನ್ನ ಜ್ಞಾನಮ್, ಪೊರುನ್ದಾದವರೈ ಪ್ಪೊರುಮ್ ಕಲಿಯೇ॥**

ಅರ್ಥ :— ಪೆರಿಯವರ್ = ಮಹಾತ್ಮರು, ಪೇಶಿಲುಮ್ = ಹೇಳಿದರೂ, ಪೇದೈಯರ್ = ಮೂಢರು (ಅಜ್ಞರು), ಪೇಶಿಲುಮ್ = ಹೇಳಿದರೂ, ತನ್, ಗುಣಂಗಳುಕ್ಕುರಿಯ = ತನ್ನ ಗುಣಗಳಿಗೆ ತಕ್ಕಂಥಾ, ಶೊಲ್ = ತಿರುನಾಮಗಳನ್ನು (ಮಾತುಗಳನ್ನು), ಎನ್ರುಮ್ = ಯಾವಾಗಲೂ, ಉಡೈಯವನ್ ಎನ್ರೆನ್ರು = ಉಳ್ಳವನೆಂದೆಂದು, ಉಣರ್ವಿಲ್ ಮಿಕ್ಕೋರ್ = ಜ್ಞಾನಾಧಿಕರಲ್ಲಿ ಹಿರಿಯರಾದವರು, ತೆರಿಯುಮ್ = ತಿಳಿಯುವ, ವಣ್ ಕೀರ್ತ್ತಿ = ಶ್ರೇಷ್ಠವಾದ ಯಶಸ್ಸುಳ್ಳವರಾದ, ಇರಾಮಾನುಶನ್ = ಸ್ವಾಮಿ ರಾಮಾನುಜರು, ಮರೈತೇರ್ನ್ದು = ವೇದವನ್ನು ಚೆನ್ನಾಗಿ ವಿಮರ್ಶಿಸಿ ಗ್ರಹಿಸಿ - ಉಲಗಿಲ್ = ಈ ಲೋಕದಲ್ಲಿ, ಪುರಿಯುಮ್ = ಉಪದೇಶಿಸಲುಪಕರಿಸಿದ-ನಲ್ ಜ್ಞಾನಂ = ಸುಜ್ಞಾನವನ್ನು, ಪೊರುನ್ದಾದವರೈ = ಹೊಂದದೇ ಇರುವವರನ್ನು, ಪೊರುಮ್ ಕಲಿಯೇ = ಕಲಿಸಂಭಂಧವಾದ ದೋಷವು ಬಂದು ಆಕ್ರಮಿಸುವುದು ಎನ್ನುತ್ತಾರೆ.

ತಾ :— ಶ್ರೀರಾಮಾನುಜರು ಪರತ್ವಸೌಲಭ್ಯಾದಿ ಗುಣಪರಿಪೂರ್ಣರಾಗಿರುವರು. ಆದುದರಿಂದ ಜ್ಞಾನಾಧಿಕರೂ, ಹಿರಿಯರೂ, ಅಜ್ಞಾನಿಗಳಾದ

ನಮ್ಮಂಥಾ ನೀಚ ಅಧಿಕಾರಿಗಳೂ ಸ್ತೋತ್ರಮಾಡತೊಡಗಿದರೆ ಅವರವರ ಯೋಗ್ಯತಾಶಕ್ತಿಗೆತಕ್ಕ ಮಾತುಗಳಿಂದ ಸ್ತುತಿಸಲು ಅನುಗುಣವಾದ ಸ್ವರೂಪ ರೂಪ ಗುಣವಿಭೂತಿಗಳನ್ನುಳ್ಳ ಸ್ವಾಮಿ ರಾಮಾನುಜರು. ವೇದಾರ್ಥಗಳನ್ನು ಚನ್ನಾಗಿ ಪರಿಶೀಲಿಸಿ ಉಪದೇಶಿಸಿದ ವಿಲಕ್ಷಣವಾದ ಜ್ಞಾನವನ್ನು ಹೊಂದದೇ ಇರುವವರನ್ನು ಕಲಿಯು ಬಾಧಿಸುವುದು " ಮತ್ತು ಬುದ್ಧಿಭ್ರಮಣೆಯನ್ನುಂಟು ಮಾಡುವುದು. ಅಂಥಾ ಸುಜ್ಞಾನವನ್ನು ಪಡೆದ ನನ್ನನ್ನು ಕಲಿಯು ಆಕ್ರಮಿಸಲಾರದು. ಆದ್ದರಿಂದ ಈ ಜ್ಞಾನ ವ್ಯವಸಾಯವು ಯಾವದಾತ್ಮಭಾವಿಯಾಗಿ ನಡೆಯುವದರಲ್ಲಿ ಯಾವ ಬಾಧಕವೂ ಇರುವುದಿಲ್ಲ ಎನ್ನುತ್ತಾರೆ.

೮೮. ಕಲಿಮಿಕ್ಕಶೆನ್ನೆಲ್ ಕೞನಿಕ್ಕುಱೈಯಲ್ ಕಲೈಪ್ಪೆರುಮಾನ್
ಒಲಿಮಿಕ್ಕಪಾಡಲೈಯುಣ್ಡು ತನ್ನುಳ್ಳಮ್ ತಡಿತ್ತು, ಅದನಾಲ್
ವಲಿಮಿಕ್ಕ ಶೀಯಮಿರಾಮಾನುಶನ್ ಮಱೈವಾದಿಯರಾಮ್
ಪುಲಿಮಿಕ್ಕದೆನ್ರು, ಇಪ್ಪುವನತ್ತಿಲ್ವನ್ದನ್ದು ಪೋತ್ತುವನೇ ||

ಅರ್ಥ :—ಕಲಿಮಿಕ್ಕ = ಉತ್ತು, ಬಿತ್ತಿ, ನಾಟಿಹಾಕಿ, ನೀರುಹಾಯಿಸಿ, ಫಲಬಂದಾಗ ಕೊಯ್ಯುವ ರೈತರ ಕೋಲಾಹಲದಿಂದ ತುಂಬಿರುವ–ಅಥವಾ, ಸಾರವತ್ತಾಗಿರುವ, ಶೆನ್ನೆಲ್ = ಕೆಂಪು ಭತ್ತ ಬೆಳೆಯುವ, ಕ್ಕೞನಿ = ಗದ್ದೆ ಬಯಲುಗಳಿರುವ, ಕುಱೈಯಲ್ = ತಿರುಕ್ಕುರೈಯಲೂರಿಗೆ ನಿರ್ವಾಹಕರಾಗಿ ಅವತರಿಸಿದ, ಕಲೈಪ್ಪೆರುಮಾನ್ = " ಪೆರಿಯ ತಿರುಮೊಳಿ " ಎಂಬ ದಿವ್ಯ ಪ್ರಬಂಧವನ್ನು ಬರೆದು ಪ್ರಸಾದಿಸಿದ ತಿರುಮಂಗೈಯಾಳ್ವಾರ್ರವರ, ಒಲಿಮಿಕ್ಕ ಪಾಡಲೈ = ಉಚ್ಚಸ್ವರದೊಡನೆ ಹಾಡುವ, ಪೆರಿಯತಿರುಮೊಳಿ, ತಿರುಕ್ಕುರ, ನ್ದಾಂಡಕಮ್, ತಿರುನೆಡುನ್ದಾಂಡಕಮ್ ಮೊದಲಾದ ದಿವ್ಯ ಪ್ರಬಂಧ ಗಳನ್ನು, ಉಂಡು = ಅನುಭವಿಸಿ (ಕೇಳಿ), ತನ್ = ತಮ್ಮ, ಉಳ್ಳಮ್ = ಮನಸ್ಸನ್ನೆ - ತಡಿತ್ತು = ತುಂಬಿಕೊಂಡು, ಅದನಾಲ್ = ಆದರಿಂದ ಬಂದ, ವಲಿಮಿಕ್ಕ = ಅತ್ಯಂತ ಬಲಶಾಲಿಯಾದ, ಶೀಯಮ್ = ಸಿಂಹದಂತಿರುವ, ಇರಾಮಾನುಶನ್ = ಸ್ವಾಮಿ ರಾಮಾನುಜರು - ಮಱೈ = ವೇದವನ್ನು ಅಂಗೀಕರಿಸಿ - ವಾದಿಯರಾಮ್ = ದುರ್ವಾದ ಮಾಡುತ್ತಿರುವ ವೇದಬಾಹ್ಯರಾದ ಕುದೃಷ್ಟಿಗಳು, ಪುಲಿಮಿಕ್ಕದೆನ್ರು = ಹುಲಿಗಳುಹೆಚ್ಚಿದ

ವೆಂದು - (ಅವರುಗಳನ್ನು ನಿರಸನ ಮಾಡಲು ಬಂದ ಸಿಂಹರಾಜನಂತೆ)-ಇವ್ವುವನತ್ತಿಲ್ = ಈ ಭೂಲೋಕದಲ್ಲಿ, ವಂದವ್ವೈ = ಬಂದು ಅವತರಿಸಿದ ಪ್ರಕಾರವನ್ನು, ಪೋತ್ತುವನೇ = ಸ್ತುತಿಸುವೆನು ಎನ್ನುತ್ತಾರೆ.

ತಾ:—ಹಿಂದಿನ ಪಾಶುರದಲ್ಲಿ ಸ್ವಾಮಿ ಎಂಬೆರುಮಾನಾರ್ರವರು, ಪರಮ ಕೃಪೆಯಿಂದ, ಲೋಕದವರಿಗೆಲ್ಲಾ ಜ್ಞಾನವನ್ನು ಉಪದೇಶಿಸುವುದಕ್ಕಾಗಿ, ಪರಮ ಪದದಿಂದ ಬಂದು ಲೋಕೋದ್ಧಾರಕ್ಕಾಗಿ ಈ ಭೂಮಿಯಲ್ಲಿ ಅವತರಿಸಿದ ಪ್ರಕಾರವನ್ನು ನೆನೆದು, "ಸೊಗಸಾದ ಕೆಂಪುಭತ್ತದ ಪೈರುಗಳು ಬೆಳೆಯುವ ಸಾರವತ್ತಾದ ಗದ್ದೆ ಬೈಲುಗಳಿಂದ ಆವೃತವಾಗಿರುವ ತಿರುಕ್ಕುರೈಯಲೂರು ಎಂಬ ದಿವ್ಯಸ್ಥಳಕ್ಕೆ ನಿರ್ವಾಹಕರಾದ ತಿರುಮಂಗೈಯಾಳ್ವಾರ್ರವರು ಹಾಡಿದ ದಿವ್ಯಪ್ರಬಂಧಗಳಾದ "ಪೆರಿಯತಿರುಮೊಳಿ" ಮೊದಲಾದವುಗಳನ್ನು ಉಚ್ಚಸ್ವರದಿಂದ ಹಾಡಿ ನಲಿದು ಅದರಿಂದ ಉದ್ದೀಪಿತರಾಗಿ ಅವರ ಪ್ರತಿಪಕ್ಷದವರಾದ ವೇದಬಾಹ್ಯರಾದ ಕುದೃಷ್ಟಿಗಳೆಂಬ ಹುಲಿಗಳು ಈ ಭೂಲೋಕದಲ್ಲಿ ಹೆಚ್ಚಾಗಿಬಿಟ್ಟಿರು ಎಂದು ನೆನೆದು ಶತ್ರುನಿರಸನ ಸಾಮರ್ಥ್ಯವುಳ್ಳ ಸಿಂಹದಂತೆ, ಅವರ ಮತಗಳನ್ನು ಖಂಡಿಸಲು ಈ ಭೂತಲದಲ್ಲಿ ಅವತರಿಸಿದ ರಾಮಾನುಜಾಚಾರ್ಯರ ವೈಭವವನ್ನು ಕೊಂಡಾಡುವೆನು" ಎನ್ನುತ್ತಾರೆ.

**89.** ಪೋತ್ತರುಮ್ ಶೀಲತ್ತಿ ರಾಮಾನುಶನಿನ್ಪುಗಳ್ತೆರಿನ್ದು
ಶಾತ್ತುವನೇಲದು ತಾಳ್ವು, ಅದುತೀರಿಲ್, ಉನ್ಶೀರ್ ತನಕ್ಕೋರ್
ಏತ್ತಮೆನ್ರೇಕೊಣ್ಡಿರುಕ್ಕಿಲು ನೆನ್ಮನಮೇತ್ತಿಯನ್ರಿ
ಆತ್ತಗಿಲ್ಲಾದು, ಇದರ್ಕ್ಕೆನ್ನಿನೈವಾಯೆನ್ರಿಟ್ಟಂಬುವನೇ ||

ಅರ್ಥ:—ಪೋತ್ತರುಮ್ = ಸಂಪೂರ್ಣವಾಗಿ ಸ್ತುತಿಸಲಶಕ್ಯವಾದ, ಶೀಲತ್ತು = ಗುಣಗಳುಳ್ಳ-ಇರಾಮಾನುಶಾ = ಸ್ವಾಮಿ ರಾಮಾನುಜರೇ - ನಿನ್ಪುಗಳ್ = ನಿಮ್ಮ ಕಲ್ಯಾಣಗುಣಗಳನ್ನು, ತೆರಿನ್ದು = ಪರಿಶೀಲಿಸಿ ತಿಳಿದು, ಶಾತ್ತುವನೇಲ್ = ಹೊಗಳುವೆನೆಂದರೆ (ಮಂಗಳಾಶಾಸನ ಮಾಡುವೆನೆಂದರೆ), ಅದು = ಆ ಸ್ತುತಿಯು, ತಾಳ್ವು = ನ್ಯೂನತೆಯಾಗುವುದು (ನಿಮ್ಮ ಗೌರವಕ್ಕೆ ಕಡಿಮೆಯಾಗುವುದು), ಅದುತೀರಿಲ್ = ಹಾಗೆ ನಾನು ಸ್ತುತಿಸದೇ ಇದ್ದರೆ.

ಉನ್ ಶೀರ್ ತನಕ್ಕು — ನಿಮ್ಮ ಕಲ್ಯಾಣಗುಣಗಳಿಗೆ, ಓರ್ ಏತ್ತಮ್ = ಒಂದು ಮಹಿಮೆಯು, ಎನ್ರೇಕೊಂಡೇಯಿರುಕ್ಕಿಲುಮ್ = ಎಂದು ಚೆನ್ನಾಗಿ ತಿಳಿದುಕೊಂಡಿದ್ದರೂ, ಎನ್ ಮನಮ್ = ನನ್ನ ಮನಸ್ಸು-ಏತ್ತಿಯನ್ರಿ — ಸ್ತೋತ್ರಮಾಡದೆ - ಆತ್ತಗಿಲ್ಲಾದು = ಸುಮ್ಮನಿರಲು ಒಡಂಬಡುವುದಿಲ್ಲ. ಇದರ್ಕು — ಈ ಸ್ತೋತ್ರಮಾಡಿದ್ದಕ್ಕೆ, ಎನ್ ನಿನೈವಾಯ್ — ನಿಮ್ಮ ಮನಸ್ಸಿನಲ್ಲಿ ಏನನ್ನು ಎಣಿಸುತ್ತೀರೋ, ಎನ್ರು — ಅಂಜುವನ್ = ಎಂಬುದಾಗಿ ಭಯ ಪಡುತ್ತೇನೆ- ಎನ್ನುತ್ತಾರೆ.

ಭಾ :— ಹಿಂದಿನ ಪಾಶುರದಲ್ಲಿ - ಕುದೃಷ್ಟಿಗಳಾಗಿರುವ ಹುಲಿಗಳನ್ನು - ನಿರಸನ ಮಾಡುವುದಕ್ಕೆ ಸಿಂಹದಂತೆ ಅವತರಿಸಿದ ಎಂಬೆರುಮಾನಾರ್ರವರನ್ನು ಸ್ತುತಿಸುತ್ತೇನೆಂದು ಹೇಳಿ, ಇದರಲ್ಲಿ - "ಶೀಲಗುಣಾಢ್ಯರಾದ ಸ್ವಾಮಿ ಎಂಬೆರುಮಾನಾರ್ರವರನ್ನು ಅತ್ಯಂತ ಅಧಮನಾದ ನಾನು ಸ್ತುತಿಸಿದರೆ ಅದರಿಂದ ತಮ್ಮ ಗೌರವಕ್ಕೆ ಏನು ಕೊರತೆ ಉಂಟಾಗುವುದೋ ?" ಎಂದು, "ಹಾಗೆ ನಿಮ್ಮನ್ನು ಸ್ತುತಿಸದೇ ಇರುವುದೇ ಮೇಲೆಂದು ಚೆನ್ನಾಗಿ ತಿಳಿದುಕೊಂಡಿದ್ದು, ನನ್ನ ಚಂಚಲವಾದ ಮನಸ್ಸು ನಿಮ್ಮನ್ನು ಸ್ತುತಿಸದೇ ಸುಮ್ಮನಿರಲು ಒಡಂಬಡುವುದಿಲ್ಲ. ಆದರೆ, ನಿಮ್ಮ ಮಹಾಮಹಿಮೆಯನ್ನೂ ನನ್ನ ಅಲ್ಪತನವನ್ನೂ ನೆನೆದು ನೀವು ನನ್ನ ವಿಚಾರದಲ್ಲಿ ಏನನ್ನು ಎಣಿಸುತ್ತೀರೋ! ಏನೆಂದು ತಿಳಿಯುತ್ತೀರೋ ಎಂದು ನಾನು ಯಾವಾಗಲೂ ಅಂಜುತ್ತಿರುವೆನು" ಎಂದು (ವಿಜ್ಞಾಪಿಸಿಕೊಳ್ಳುತ್ತಾರೆ).

**90.** ನಿನೈಯಾರ್ ಪಿರವಿಯೈ ನೀಕ್ಕುಮ್ಪಿರಾನೈ, ಇನ್ನೀಣಿಲತ್ತೇ
ಎನೈಯಾಳವನ್ದ ಇರಾಮಾನುಶನೈ, ಇರುಂಕವಿಗಳ್
ಪುನೈಯಾರ್ ಪುನೈಯುಮ್ ಪೆರಿಯವರ್ ತಾಳ್ಗಳಿಲ್
ಪೂನ್ದೊಡೈಯಲ್
ವನೈಯಾರ್, ಪಿರಪ್ಪಿಲ್ ವರುನ್ದುವರ್ ಮಾನ್ದರ್ ಅರುಳ್ ಶುರನ್ದೇ ||

ಅರ್ಥ :— ಪಿರವಿಯೈ = ಜನ್ಮವನ್ನು, ನೀಕ್ಕುಮ್ = ಹೋಗಲಾಡಿಸ ಬಲ್ಲ, ಪಿರಾನೈ = ಉಪಕಾರಕರಾದ ಸ್ವಾಮಿ ರಾಮಾನುಜರನ್ನು -ನಿನೈಯಾರ್ = ನೆನೆಯುವುದಿಲ್ಲ. ಇನ್ನೀಣಿಲತ್ತೇ = ಈ ವಿಶಾಲವಾದ ಭೂಮಿಯಲ್ಲಿ,

ಎನ್ನೈ = ನನ್ನನ್ನು, ಆಳವಂದ = ಪರಿಪಾಲಿಸಲು ಅವತರಿಸಿಬಂದ, ಇರಾಮಾನುಶನ್ನೈ = ಸ್ವಾಮಿ ಎಂಪೆರುಮಾನಾರ್‌ರವರನ್ನು ಕುರಿತು, ಇರುಮ್ ಕವಿಗಳ್ = ಹಿರಿಯ ಕಾವ್ಯಗಳನ್ನು, ಪುನೈಯಾರ್ = ರಚಿಸುವುದಿಲ್ಲ, ಪುನೈಯುಮವರ್ = ಹಾಗೆ ಕಾವ್ಯಗಳನ್ನು ರಚಿಸಿ ವಾಚಕ ಕೈಂಕರ್ಯವನ್ನು ಮಾಡುವ ಮಹಾತ್ಮರ, ತಾಳ್‌ಗಳಿಲ್ = ಶ್ರೀಪಾದಗಳಲ್ಲಿ, ಪೂನ್ತೊಡೈಯಲ್ = ಪುಷ್ಪ ಮಾಲಿಕೆಗಳನ್ನು, ವನೈಯಾರ್ = ಸಮರ್ಪಿಸುವುದಿಲ್ಲ. ಮಾನ್ದರ್ = ಮನುಷ್ಯರು, ಮರುಳ್‌ಕೊಂಡು = ವಿಶೇಷ ಅಜ್ಞಾನವನ್ನು ಹೊಂದಿ, ಪಿರಪ್ಪಿಲ್ = ಜನ್ಮದಲ್ಲಿ, ವರುನ್ದುವರ್ = ದುಃಖಗಳನ್ನು ಅನುಭವಿಸುವರು.

ತಾ: — ಹಿಂದಿನ ಪಾಶುರದಲ್ಲಿ ಸ್ವಾಮಿ ಎಂಬೆರುಮಾನಾರ್‌ರವರ ಮಹತ್ವವನ್ನೂ ಅವರನ್ನು ಸ್ತೋತ್ರಮಾಡಲು ತಮಗಿರುವ ಅನರ್ಹತೆಯನ್ನೂ ಅನುಸಂಧಿಸಿ ಈ ವಿಷಯದಲ್ಲಿ, ತಾವು ಸ್ತುತಿಸಲು ಹೊರಟಿದ್ದು ಬಹಳ ಸಾಹಸದ ಕಾರ್ಯವಲ್ಲವೇ ಎಂದು ಸಂಶಯಿಸಿ ಭಯಪಟ್ಟುಕೊಂಡಿರುವುದನ್ನು ಕಂಡು ಆಚಾರ್ಯರು ಆ ಭಯ ತೀರುವಂತೆ ಕಟಾಕ್ಷಿಸಿದರು. ಆಗ ನಿರ್ಭಯರಾಗಿ ಅವರನ್ನು ಸ್ತುತಿಸಲು ಉಪಕ್ರಮಿಸಿದರು. ಇದರಲ್ಲಿ ಸ್ವಾಮಿ ಎಂಬೆರುಮಾನಾರ್‌ರವರು ಯೋಗ್ಯಾಯೋಗ್ಯ ವಿಭಾಗವಿಲ್ಲದೆ ಸರ್ವರನ್ನೂ ಕಟಾಕ್ಷಿಸಿ ತಮ್ಮನ್ನು ನೆನೆಯುವವರ ಭಾವಸಾಗರವನ್ನು ಶೋಷಿಸುವುದಕ್ಕಾಗಿ ಈ ಭೂಮಿಯಲ್ಲಿ ಅವತರಿಸಿದ್ದರೂ, ಈ ಲೌಕಿಕರು ಅವರನ್ನು ನೆನೆಯುವುದಿಲ್ಲ (ಸ್ಮರಿಸುವುದಿಲ್ಲ). ಪ್ರಾಚುರ್ಯಂತವಾಗಿ ನನ್ನನ್ನು ರಕ್ಷಿಸುವುದಕ್ಕಾಗಿ ನಾನಿದ್ದ ಸ್ಥಳವನ್ನು ಹುಡಿಕಿಕೊಂಡು ಬಂದ ಇವರನ್ನು ಇಂಪಾದ ಮತ್ತು ಶ್ರೇಷ್ಠವಾದ ಕವಿತೆಗಳಿಂದ ಸ್ತುತಿಸುವುದಿಲ್ಲ, ಹಾಗೆ ಸ್ತುತಿಸುವುದಕ್ಕೆ ತಮಗೆ ಅಧಿಕಾರವಿಲ್ಲದೇ ಹೋದರೂ ಅವರನ್ನು ಸ್ತುತಿಸುವ ಮಹಾತ್ಮರ ಅಡಿಗಳಲ್ಲಿ ಪುಷ್ಪಮಾಲಿಕೆಗಳನ್ನು ಸಮರ್ಪಿಸಿ ಆರಾಧಿಸುವುದಿಲ್ಲವಲ್ಲಾ! ಅಯ್ಯೋ! ಇವುಗಳಿಗೆಲ್ಲಾ ಅನುಕೂಲವಾಗಿರುವ ಜನ್ಮವನ್ನು ಪಡೆದೂ ತಿಳಿಗೇಡಿತನದಿಂದ ಜನ್ಮ ಪರಂಪರೆಗೆ ಒಳಗಾಗಿ ಕ್ಲೇಶಪಡುತ್ತಿರುವರಲ್ಲಾ ಎಂದು ಅವರುಗಳಿಗಾಗಿ ಮರುಗುತ್ತಾರೆ.

**91.** ಮರುಳ್ ಶುರನ್ದಾಗಮ ವಾದಿಯರ್ ಕೂರುಮ್,
ಅವಪ್ಪೊರುಳಾಮ್
ಇರುಳ್ ಶುರನ್ದೆಯ್ತ್ತವುಲಗಿರುಳ್ ನೀಂಗ, ತನ್ನೀಣ್ಡಿಯಶೀರ್
ಅರುಳ್ ಶುರನ್ದೆಲ್ಲಾ ವುಯಿರ್‌ಗಟ್ಕುಮ್ ನಾದನರಂಗನೆನ್ನುಮ್
ಪೊರುಳ್ ಶುರನ್ದಾನ್, ಎಮ್ಮಿರಾಮಾನುಶನ್ ಮಿಕ್ಕ ಪುಣ್ಣಿಯನೇ||

ಅರ್ಥ :—ಮರುಳ್ = ಅಜ್ಞಾನವು, ಶುರನ್ದು = ಆವರಿಸಿರುವ, ಆಗಮವಾದಿಯರ್ = ರುದ್ರಪ್ರೋಕ್ತವಾದ ಶೈವಾಗಮವನ್ನು ಅವಲಂಬಿಸಿ ವಾದಮಾಡುವ ಪಾಶುಪತಾದಿಗಳು, ಕೂರುಮ್ = ರುದ್ರನೇ ಪರತತ್ತ್ವವೆಂದು ಹೇಳುವ, ಅವಪ್ಪೊರುಳಾಮ್ = ಅಪಾರ್ಥಗಳಿಂದ, ಇರುಳ್ ಶುರನ್ದು = ಅಜ್ಞಾನವೆಂಬ ಕತ್ತಲೆ ಕವಿದುಕೊಂಡು, ಎಯ್ತ್ತ = ಅದರಿಂದ ಶಿಥಿಲವಾಗಿರುವ, ಉಲಗು ಇರುಳ್ = ಲೋಕದ ಜನರ ಕತ್ತಲೆಯು, ನೀಂಗ = ತೊಲಗುವಂತೆ, ತನ್ = ತನ್ನ, ಈಣ್ಡಿಯಶೀರ್ = ಪರಮ ಭೋಗ್ಯ ಕಲ್ಯಾಣಗುಣಗಳಿಂದ, ಅರುಳ್ ಶುರನ್ದು = ಕೃಪಾಕಟಾಕ್ಷವನ್ನು ಉದಾರವಾಗಿ ಬೀರಿ, ಎಲ್ಲಾ ಉಯಿರ್‌ಗಟ್ಕುಂ = ಸಕಲ ಪ್ರಾಣಿಗಳಿಗೂ, ನಾಥನ್ = ಸ್ವಾಮಿ (ಶೇಷಿಯು), ಅರಂಗನ್ = ಶ್ರೀ ರಂಗನಾಥಸ್ವಾಮಿಯೇ - ಎನ್ನುಮ್ = ಎಂದು ತಿಳಿಸುವ, ಪೊರುಳ್ = ತತ್ತ್ವಾರ್ಥವನ್ನು, ಶುರನ್ದಾನ್ = ಉಪದೇಶಿಸಿದರು, ಎಮ್ ಇರಾಮಾನುಶನ್ = ನಮ್ಮ ಸ್ವಾಮಿ ರಾಮಾನುಜರು, ಮಿಕ್ಕಪುಣ್ಣಿಯನೇ = ಮಹಾ ಧಾರ್ಮಿಕರು—ಎಂದು ಕೊಂಡಾಡುತ್ತಾರೆ.

ತಾ|| ಹಿಂದಿನ ಪಾಶುರದಲ್ಲಿ ಲೌಕಿಕರು "ನಿತ್ಯಸಂಸಾರಿಗಳಾಗಿರುವವರನ್ನು, ಅಲ್ಪಾನುಕೂಲವುಳ್ಳವರನ್ನು ಒಂದೇಸಮನಾಗಿ ಉದ್ಧರಿಸಿದ ಸರ್ವೋತ್ತಮರಾದ ಸ್ವಾಮಿ ರಾಮಾನುಜರನ್ನು ಅನುವರ್ತಿಸದೆ ಗರ್ಭನಿರ್ಭಾಗ್ಯರಾಗಿ ಹೋದರು" ಎಂದು ಅವರುಗಳ ಪರಿಯನ್ನು ಹೇಳಿ, ಈ ಪಾಶುರದಲ್ಲಿ "ತಮೋಗುಣದಿಂದ ಜ್ಞಾನವನ್ನು ಕಳೆದುಕೊಂಡು ರುದ್ರ ಪ್ರೋಕ್ತವಾದ ಶೈವಾಗಮವನ್ನು ಪ್ರಮಾಣವಾಗಿ ಸ್ವೀಕರಿಸಿ ರುದ್ರ ಪಕ್ಷಪಾತಿಗಳಾದ ಪಾಶುಪತರು ವಾದಿಸಿದ ದುಸ್ತರ್ಕಗಳೆಂಬ ಅನ್ಧಕಾರವು ಭೂಲೋಕದಿಂದ ಅಗಲುವಂತೆ ಮಾಡಿದ ರಾಮಾನುಜಾಚಾರ್ಯರು ತಮ್ಮ ನಿರ್ಹೇತುಕ ಪರಮ ಕೃಪೆಯನ್ನು

ಸಕಲ ಚೇತನರ ಮೇಲೂ ಬೇರೆ ಲೋಕದಲ್ಲಿ ಎಲ್ಲರಿಗೂ ಆಶ್ರಯಿಸಲು ಸುಲಭನಾಗಿ ಕಣ್ಣಿಗೆ ಗೋಚರನಾಗಿ ಶ್ರೀರಂಗ ಕ್ಷೇತ್ರದಲ್ಲಿ ನೆಲೆಸಿರುವ ಶ್ರೀರಂಗನಾಥನೇ ನಮಗೆ ಸ್ವಾಮಿ (ಶೇಷಿ)" ಎಂಬ ಅಂಶವನ್ನು ಉಪದೇಶಿಸಿದರು. "ಈ ಹಿರಿಯತತ್ವವನ್ನು ಭೂಲೋಕದವರಿಗೆಲ್ಲಾ ಭೂರಿದಾನಮಾಡಿದ "ರಾಮಾನುಜರು ಪರಮ ಧಾರ್ಮಿಕರು" ಎಂದು ಅವರು ಮಾಡಿದ ಉಪಕಾರವನ್ನು ನೆನೆದು ಅವರನ್ನು ಕೊಂಡಾಡುತ್ತಾರೆ ಅಮುದನಾರವರು.

**92.** **ಪುಣ್ಣಿಯನೋನ್ಬು ಪುರಿನ್ದುಮಿಲೇನ್, ಅಡಿಪೋತ್ತಿ ಶೆಯ್ಯುಮ್**
**ನುಣ್ಣರುಮ್ ಕೇಳ್ವಿನುವನ್ರುಮಿಲೇನ್, ಶೆಮ್ಮೈನೂಲ್ ಪುಲವರ್**
**ಕ್ಕೆಣ್ಣರುಮ್ ಕೀರ್ತ್ತಿ ಯಿರಾಮಾನುಶ ಇನ್ರುನೀ ಪುಗುನ್ದೆನ್**
**ಕಣ್ಣುಳ್ಳುಮ್ ನೆಂಜುಳ್ಳುಮ್, ನಿನ್ರವಿಕ್ಕಾರಣಮ್**
**ಕಟ್ಟುರೈಯೇ ||**

ಅರ್ಥ:—ಪುಣ್ಣಿಯಮ್ ನೋನ್ಬು = ಪುಣ್ಯವ್ರತವನ್ನು, ಪುರಿನ್ದುಮಿಲೇನ್ = ಮಾಡಿದವನೂ ಅಲ್ಲ, ಅಡಿಪೋತ್ತಿ ಶೆಯ್ಯುಮ್ = ಶ್ರೀಪಾದಗಳನ್ನು ಆಶ್ರಯಿಸಿ ಸ್ತುತಿಸಲು ತಕ್ಕ, ನುಣ್ ಅರುಮ್ = ಸೂಕ್ಷ್ಮವೂ ದುರ್ಲಭವೂ ಆದ, ಕೇಳ್ವಿ = ಕೇಳಿ ತಿಳಿಯುವ ಅರ್ಥಶ್ರವಣವನ್ನೂ, ನುವನ್ರುಮಿಲ್ಲೇನ್ = ಅಪೇಕ್ಷಿಸಿದವನೂ ಅಲ್ಲ-ಶೆಮ್ಮೈನೂಲ್ = ಋಜುವಾದ ಶಾಸ್ತ್ರರೂಪವಾದ ಕವಿತ್ವವನ್ನು, ಪುಲವರ್ಕ್ಕು = ಹೇಳಬಲ್ಲ (ಮಾಡಬಲ್ಲ) ವಿದ್ವಾಂಸರುಗಳಿಗೆ, ಎಣ್ ಅರುಮ್ ಕೀರ್ತ್ತಿ = ಅಚಿಂತ್ಯವೂ ದುರ್ಲಭವೂ ಆದ ಕೀರ್ತಿಯುಳ್ಳ, ಇರಾಮಾನುಶಾ = ಸ್ವಾಮಿ ರಾಮಾನುಜಾಚಾರ್ಯರೇ, ನೀ ಇನ್ರುಪುಗುನ್ದು = ನೀವು ಈಗ ನನ್ನ ಬಳಿ ಪ್ರವೇಶಿಸಿ, ಎನ್ ಕಣ್ಣುಳ್ಳುಮ್ = ನನ್ನ ಕಣ್ಣಿನಲ್ಲೂ-ನೆಂಜುಳ್ಳುಮ್ = ಮನಸ್ಸಿನಲ್ಲೂ - ನಿನ್ರ = ಪ್ರಕಾಶವಾಗಿ ನಿಂತಿರುವುದರ, ಇಕ್ಕಾರಣಮ್ = ಕಾರಣವನ್ನು, ಕಟ್ಟುರೈಯೇ = ದಯವಿಟ್ಟು ಹೇಳಬೇಕು.

ಅವ: —ಹಿಂದಿನ ಪಾಶುರದಲ್ಲಿ "ಶ್ರೀರಂಗನಾಥನೇ "ಸ್ವಾಮಿ (ಶೇಷಿ)" ಎಂದು ಸಕಲ ಚೇತನರಿಗೂ ಉಪದೇಶಿಸಿದ ಪರಮ ಧಾರ್ಮಿಕರು ಎಂಬೆರುಮಾನಾರ್." ಎಂದು ಹೇಳಿ ಇದರಲ್ಲಿ ಸ್ವಾಮಿ ರಾಮಾನುಜರ ದರ್ಶನೀಯವಾದ ಮುಖಮಂಡಲವನ್ನು ನೋಡಿ "ನಾನು ಇದುವರೆವಿಗೂ ನನಗೆ ತಿಳಿದಂತೆ ಒಂದು ಸತ್ಕಾರ್ಯವನ್ನೂ ಮಾಡಿಲ್ಲ, ಹಾಗೆ ಉತ್ತಾರಕರವಾಗಿರುವ ಒಂದು

ಸೂಕ್ಷ್ಮವಾದ ವಿಶೇಷಾರ್ಥವನ್ನು ಕೇಳಬೇಕೆಂದು ಆಸೆಪಡಲೂ ಇಲ್ಲ. ನಾನು
ಹೇಗಿದ್ದರೂ, ಸತ್ ಶಾಸ್ತ್ರ ಪ್ರವೀಣರಾದ ವಿದ್ವಾಂಸರುಗಳಿಂದಲೂ
ಇಷ್ಟೆಂದು ಎಣಿಸಲಸಾಧ್ಯವಾದ ಗುಣಸಮೃದ್ಧಿಯಿಂದ ಕೂಡಿರುವ ಕೀರ್ತಿ
ಯನ್ನುಳ್ಳ ನೀವು ಇಂದಿನವರೆಗೂ ಸುಮ್ಮನೇ ಇದ್ದು ಈಗ ನನ್ನ ಸಮೀಪಕ್ಕೆ
ಅನುಗ್ರಹಪೂರ್ವಕವಾಗಿ ಪ್ರವೇಶಿಸಿ ಹೊರಗಣ್ಣಿಗೂ, ಒಳಗಣ್ಣಿಗೂ ವಿಷ
ಯವಾಗಿ ನಿಂತಿರುವಿರಲ್ಲಾ ಇದೇನಾಶ್ಚರ್ಯವೋ! ಇದಕ್ಕೆ ಕಾರಣವನ್ನು
ನೀವೇ ಹೇಳಬೇಕು" ಎಂದು ವಿಜ್ಞಾಪಿಸಿಕೊಳ್ಳುತ್ತಾರೆ—ಅಮುದನಾರ್ರವರು.

93. ಕಟ್ಟಿಪ್ಪೊರುಳೈಮರೈಪ್ಪೊರುಳೆನ್ರು, ಕಯವರ್ ಶೊಲ್ಲುಮ್
ಪೆಟ್ಟೈಕ್ಕೆಡುಕ್ಕುಮ್ ಪಿರಾನಲ್ಲನೇ, ಎನ್ ಪೆರುವಿನೈಯೈ
ಕಿಟ್ಟಿಕ್ಕಿೞಂಕೊಡುತನ್ನರುಳೆನ್ನುಮ್ ಒಳ್ ವಾಳುರುವಿ
ವೆಟ್ಟಿಕ್ಕಳೈಂದ, ಇರಾಮಾನುಶನೆನ್ನುಮ್ ಮೆಯ್ ತ್ತವನೇ ||

ಅರ್ಥ :—ಎನ್ ಪೆರುವಿನೈಯೈ—ನಾನು ಮಾಡಿದ ಅನೇಕ ಮಹಾ
ಪಾಪಗಳನ್ನು, ಕಿಟ್ಟಿ = ಸಮೀಪಿಸಿ, ಕಿೞಂಕೊಡು = ಅದರ ದುರ್ವಾಸನೆ
ಯೆಂಬ ಬೇರಿನೊಡನೆ - ತನ್ ಅರುಳ್ ಎನ್ನುಂ = ತಮ್ಮ ಕೃಪೆಯೆಂಬ,
ಒಳ್ ವಾಳ್ = ತೀಕ್ಷ್ಣವಾದ ಹರಿತವಾದ ಕತ್ತಿಯನ್ನು - ಉರುವಿ = ಒರೆ
ಯಿಂದ ತೆಗೆದು ಬೀಸಿ, ವೆಟ್ಟಿಕ್ಕಳೈಂದ = ಕತ್ತರಿಸಿ ನಾಶಪಡಿಸಿದ, ಮೆಯ್ ತ್ತ
ವನ್ ಎನ್ನುಮ್ = ಸತ್ಯವಾದ ತಪಸನ್ನು ಮಾಡಿದವರೆಂದು ಹೇಳಲ್ಪಡುವ
(ಶರಣಾಗತಿಮಾಡಿದವರೆಂದು), ಇರಾಮಾನುಶರ್ = ಸ್ವಾಮಿ ರಾಮಾನುಜರು,
ಕಟ್ಟಿಪ್ಪೊರುಳೈ = ನಿಹೀನವಾದ ಅರ್ಥಗಳನ್ನು, ಮರೈ = ಆ ವೇದಗಳ,
ಪ್ಪೊರುಳ್ ಎನ್ರು = ತಾತ್ಪರ್ಯವೆನ್ನುವ, ಕಯವರ್ = ಸಾಮರ್ಥ್ಯವುಳ್ಳ
ಕುದೃಷ್ಟಿಗಳು, ಶೊಲ್ಲುವರ್ = ಹೇಳುವ, ಪೆಟ್ಟೈ = ಭ್ರಾಮಕ ವಾಕ್ಯಗಳನ್ನು,
ಕೆಡುಕ್ಕುಮ್ = ತಮ್ಮ ಭಾಷ್ಯಗಳಿಂದ ಖಂಡಿಸಿ ಹೋಗಲಾಡಿಸಿದ, ಪಿರಾ
ನಲ್ಲನೇ = ಉಪಕಾರಕರಲ್ಲವೇ!

ತಾ:—ಹಿಂದಿನ ಪಾಶುರದಲ್ಲಿ, ಸ್ವಾಮಿ ರಾಮಾನುಜರು ತಮ್ಮ ಪಕ್ಷ
ದಲ್ಲಿ ನಿರ್ಹೇತುಕವಾಗಿ ಕೃಪೆಮಾಡಿ ಅಂಗೀಕರಿಸಿದ್ದಕ್ಕೆ ಕಾರಣವನ್ನು ತಾವೇ

ಹೇಳಬೇಕೆಂದು ಕೇಳಿ ಅದಕ್ಕೆ ಅವರಿಂದ ಯಾವ ಉತ್ತರವೂ ದೊರೆಯದೆ ಹೋದ್ದರಿಂದ, ಇದರಲ್ಲಿ-"ನನ್ನ ಪ್ರಬಲವಾದ ಮಹಾಪಾತಕಗಳನ್ನೆಲ್ಲಾ ತಾವೇ ಸಂಕಲ್ಪಿಸಿ ಅವುಗಳನ್ನು ಬುಡಸಹಿತ ತಮ್ಮ ಕೃಪೆಯೆಂಬ ಹರಿತವಾದ ಖಡ್ಗದಿಂದ-ಕತ್ತರಿಸಿ ಹೋಗಲಾಡಿಸಿದರು" ಎಂದೂ, ಮತ್ತು "ಪ್ರಪನ್ನಕುಲಕ್ಕೆಲ್ಲಾ ಉತ್ತಾರಕರಾದ ಸ್ವಾಮಿ ರಾಮಾನುಜರು, ಅಜ್ಞಾನವಿಜೃಂಭಿತಗಳಾದ ಅಪಾರ್ಥಗಳನ್ನೆಲ್ಲಾ ಸತ್ಯಪ್ರಮಾಣವಾದ ವೇದಾರ್ಥಗಳೆಂದು ಸಾರುವ ಪರಮ ಮೂಢರಾದ ಕುದೃಷ್ಟಿಗಳು ಹೇಳುವ ಮತ್ತು ಭ್ರಾಮಕವಾದ ವಾಕ್ಯಗಳನ್ನು ನಿರ್ಮೂಲವಾಗಿ ಹೋಗಲಾಡಿಸಿದರು." ಎಂದೂ ಹೀಗೆ ಪರಮೋಪಕಾರಕರಾದ ಶ್ರೀ ರಾಮಾನುಜರು ಮಾಡುವುದೆಲ್ಲಾ ನಿರ್ಹೇತುಕವಾದುದು" ಎಂದು ತಿಳಿದು ಅದನ್ನೆಲ್ಲಾ ಈ ಪದ್ಯದಲ್ಲಿ ಕೊಂಡಾಡಿದ್ದಾರೆ.

**94.** **ತವನ್ದರುಮ್ ಶೆಲ್ವಮ್ ತಗವುಮ್ ತರುಮ್, ಶರಿಯಾಪ್ಪಿರವಿ**
**ಪವನ್ದರುಮ್ ತೀವಿನೈಪಾತ್ತಿತ್ತರುಮ್, ಪರನ್ದಾಮಮೆನ್ನುಮ್**
**ತಿವನ್ದರುಮ್ ತೀದಿಲ್ ರಾಮಾನುಶನ್ ತನ್ನೈಚ್ಚಾರ್ನ್ದವರ್ಗಳ್**
**ಕುವನ್ದರುನ್ದೇನ್, ಅವನ್‌ಶೀರ್ ಅನ್ರಿಯಾನೊನ್ರುಮುಳ್**
**ಮಗಿಳ್ನ್ದೇ ||**

ಅರ್ಥ :—ತೀದು ಇಲ್ = ದೋಷಗಳೊಂದೂ ಇಲ್ಲದ, ಇರಾಮಾನುಶನ್ = ಸ್ವಾಮಿ ರಾಮಾನುಜರು, ತನ್ನೈ = ತಮ್ಮನ್ನು, ಶಾರ್ನ್ದವರ್ಗಳ್ಕು = ಆಶ್ರಯಿಸಿದವರಿಗೆ - ತವಮ್ ತರುಮ್ = ಶರಣಾಗತಿ ಎಂಬ ತಪೋನಿಷ್ಠೆಯನ್ನು ಅನುಗ್ರಹಿಸುವರು, ಶೆಲ್ವಮ್ = ಭಕ್ತಿ ಎಂಬ ಸಂಪತ್ತನ್ನು, ತಗವುಮ್ ತರುಮ್ = ಸ್ವರೂಪಾನುರೂಪವಾಗಿ ಕೊಡುವರು, ಶರಿಯಾ = ನಶಿಸಿಹೋಗುವಂಥಾ, ಪಿರವಿ = ಜನ್ಮ ಪ್ರಯುಕ್ತವಾದ, ಪವಂತರುಮ್ = ಸಂಸಾರಸಂಬಂಧವಾದ ಕ್ಲೇಶಗಳನ್ನು ಮೇಲೆ ಮೇಲೆ ಉಂಟುಮಾಡುತ್ತಿರುವ, ತೀವಿನೈ = ಕ್ರೂರವಾದ ಪಾಪಕರ್ಮಗಳನ್ನು, ಪಾತ್ತಿತ್ತರುಮ್ = ಪುಡಿಪುಡಿಯಾಗಿ ಮಾಡಿ ಹೋಗಲಾಡಿಸುವರು, ಪರನ್ದಾಮಮೆನ್ನುಮ್ = ಪರಂಧಾಮವೆಂದು ಹೇಳಲ್ಪಡುವ- ತಿವಮ್ ತರುಮ್ = 'ಪರಮಾಕಾಶ' ಎಂಬ ಆ ವೈಕುಂಠವು ಲಭಿಸುವಂತೆ ಮಾಡುವರು - (ಹೀಗೆ ಅವರು ಎಲ್ಲವನ್ನೂ

ತಂದವನು ಕೂಡ), ಯಾನ್ = ನಾನು, ಅವನ್ ಶೀರನ್ರಿ = ಅವರ ಕಲ್ಯಾಣ ಗುಣಗಳನ್ನಲ್ಲದೆ, ಒನ್ರುಮ್ = ಬೇರೊಂದನ್ನೂ - ಉಳ್ ಮಹಿಳ್ನ್ದು = ಮನಃ ಪ್ರೀತಿಯಿಂದ, ಉವನ್ದು = ಆಶಿಪಟ್ಟು, ಅರುನ್ದೇನ್ = ಅನುಭವಿಸುವುದಿಲ್ಲ.

ತಾ: ಹಿಂದಿನ ಪಾಶುರದಲ್ಲಿ ತಮ್ಮನ್ನು ನಿರ್ಹೇತುಕವಾಗಿ ಅಂಗೀಕರಿಸಿ ಅನಾದಿಯಾದ ಪಾಪಗಳನ್ನು(ಮತ್ತೆ ಹಿಂಸಿಸದಂತೆ)ತಮ್ಮ ಕೃಪೆಯೆಂಬ ಖಡ್ಗದಿಂದ ಛೇದಿಸಿ ಅದರಿಂದ - ಸಕಲ ಪ್ರಸನ್ನ ಜನ ಕೂಟಸ್ಥರಾದ ಆ ಎಂಬೆರುಮಾನಾರ್ರವರು, ಲೋಕದಲ್ಲಿ ಬೆಳೆದಿರುವ ಅಪಸಿದ್ಧಾಂತಗಳನ್ನೇ ವೇದಾರ್ಥಗಳೆಂದು ಭ್ರಮಿಸುವಂತೆ ಮಾಡುವ ಕುದೃಷ್ಟಿಗಳ ಕುಚೋದ್ಯಗಳನ್ನು ನಿವೃತ್ತಿಮಾಡಿದ್ದು ಪರಮೋಪಕಾರಕವೆಂದು ಕೊಂಡಾಡಿ, ಇದರಲ್ಲಿ ಅಂಥಾ ಸ್ವಾಮಿ ಎಂಬೆರುಮಾನಾರ್ರವರೇ ತಮ್ಮನ್ನು ಆಶ್ರಯಿಸಿದವರಿಗೆ ಸರ್ವೋತ್ತಾರಕಹೇತುವಾದ 'ಶರಣಾಗತಿ ನಿಷ್ಠೆ' ಎಂಬ ಸ್ವಪತ್ತ್ಯುಪಾಯವನ್ನೂ, ತದುತ್ತರಕಾಲ ಕೃತ್ಯವಾದ ಕೈಂಕರ್ಯ ರೂಪವಾದ ಸಂಪತ್ತನ್ನೂ, ಸಂಸಾರ ಸಂಬಂಧ ಮೂಲವಾದ ಕ್ರೂರ ಪಾಪಗಳನ್ನೆಲ್ಲಾ ಸಮೂಲವಾಗಿ ಹೋಗಲಾಡಿಸಿ ಪರಮ ಪುರುಷಾರ್ಥವಾದ ಮೋಕ್ಷವನ್ನೂ, ಕ್ರಮವಾಗಿ ಅನುಗ್ರಹಿಸಿ ಉಪಕರಿಸಿರುವರು. "ಅವರ ಕಲ್ಯಾಣ ಗುಣಗಳನ್ನು ಬಿಟ್ಟು ಬೇರೊಂದನ್ನೂ ಆದರದಿಂದ ನಾನು ಅನುಭವಿಸುವುದಿಲ್ಲ" ಎಂದು ತಮ್ಮ ಅಧ್ಯವಸಾಯವನ್ನು ಹೇಳುತ್ತಾರೆ.

**95.** ಉಣ್ಣಿನ್ರುಯಿರ್‌ಗಳುಕ್ಕುತ್ತನವೇಶೆಯ್ದು, ಅವರ್ಕ್ಕುಯ್ವೇ
ಪಣ್ಣುಮ್ಪರನುಮ್ ಪರಿವಿಲನಾಮ್ಪಡಿ, ಪಲ್ಲುಯಿರ್ಕ್ಕುಮ್
ವಿಣ್ಣಿನ್‌ತಲೈನಿನ್ರು ವೀಡಳಿಪ್ಪಾನೆಮ್ಮಿರಾಮಾನುಶನ್
ಮಣ್ಣಿನ್‌ತಲತ್ತುದಿತ್ತು, ಮರೈನಾಲುಮ್ ವಳರ್‌ತ್ತನನೇ ||

ಅರ್ಥ:—ಉಳ್‌ನಿನ್ರು = ಹೃದಯದೊಳಗೆ ಪ್ರವೇಶಿಸಿ ನಿಂತು, ಉಯಿರ್‌ಗಳುಕ್ಕು = ಚೇತನರಿಗೆಲ್ಲಾ, ಉತ್ತನವೇಶೆಯ್ದು = ಉಜ್ಜೀವಿಸಲು ತಕ್ಕ ಕೃಷಿ(ವ್ಯಾಪಾರ)ಯನ್ನು ಮಾಡಿ, ಅವರ್‌ಕ್ಕು = ಆ ಪ್ರಾಣಿಗಳಿಗೆ,

ಉಯ್ವೇ = ಉಜ್ಜೀವನ ಪ್ರಕಾರವನ್ನೇ ; ಪಣ್ಣುಮ್ = ಉಂಟುಮಾಡುವ, ಪರನುಮ್ = ಸರ್ವೇಶ್ವರನೂ ಕೂಡ ಇವರಂತೆ, ಪರಿವಿಲನಾಮ್ಪಡಿ = ಸ್ನೇಹ (ಪಕ್ಷಪಾತ) ವಿಲ್ಲದವನೆನ್ನುವ ಹಾಗೆ; ಪಲ್ ಉಯಿರ್ಕ್ಕುಮ್ = ಸಕಲ ಜೀವಾತ್ಮರುಗಳಿಗೂ, ವೀಡಳಿಪ್ಪಾನ್ = ಮೋಕ್ಷವನ್ನು ಕೊಟ್ಟು ಅನುಗ್ರಹಿಸುವುದಕ್ಕಾಗಿ, ಎಮ್ ಇರಾಮಾನುಶನ್ = ನಮ್ಮ ಸ್ವಾಮಿ ರಾಮಾನುಜರು, ವಿಣ್ಣಿನ್ ತಲೈನಿನ್ರು = ಶ್ರೀ ವೈಕುಂಠದಿಂದ, ಇಮ್ಮಣ್ಣಿನ್ ತಲತ್ತುದಿತ್ತು = ಈ ಭೂಲೋಕದಲ್ಲಿ ಅವತರಿಸಿ, ಮರೈನಾಲುಮ್ = ನಾಲ್ಕು ವೇದಗಳನ್ನೂ, ವಳರ್ತ್ತನನ್ = ಯಾವ ಪ್ರತಿಬಂಧಕವೂ ಇಲ್ಲದೆ ವೃದ್ಧಿಪಡಿಸಿದರು.

ತಾ :— ಸಕಲ ಜೀವಾತ್ಮರುಗಳಿಗೂ ಅಂತರ್ಯಾಮಿಯಾಗಿ ಅವರವರ ಸಕಲ ಪ್ರವೃತ್ತಿ ನಿವೃತ್ತಿ ಕಾರ್ಯಗಳನ್ನು ಮಾಡುತ್ತಿರುವ ಆ ಸರ್ವೇಶ್ವರನೂ ಇರುವಂತೆ ಆಶ್ರಿತರಲ್ಲಿ ವ್ಯಾಮೋಹವನ್ನು ಹೊಂದಿದವನಲ್ಲವೆನ್ನುವಂತೆ ತಮ್ಮ ಜ್ಞಾನವೈರಾಗ್ಯಾದಿ ಸದ್ಗುಣ ವಿಶೇಷಗಳಿಂದ ಸಂಸಾರಿಗಳಿಂದ ಅತ್ಯಂತ ಭಿನ್ನರಾಗಿರುವ ಇವರು ಪರಮ ಪ್ರಾಪ್ಯವನ್ನು, ಎಲ್ಲಾ ಚೇತನರಿಗೂ ಕೊಡುವುದಕ್ಕಾಗಿ, ಯಾವ ಸಂಸಾರ ದೋಷಗಂಧರಹಿತರಾದರೂ, ಈ ಭೂಮಿಯಲ್ಲಿ ಪರಾರ್ಥವಾಗಿ ಎಂಬೆರುಮಾನಾರಾಗಿ ಅವತರಿಸಿ ಸರ್ವಕಾಲದಲ್ಲೂ ಉತ್ಕೃಷ್ಟವಾದ ನಾಲ್ಕು ವೇದಗಳೂ, ಪ್ರಕಾಶಕವಾಗಿ ಪ್ರಾಚುರ್ಯದಿಂದ ವೃದ್ಧಿಹೊಂದುವಂತೆ ಮಾಡಿ, ಶ್ರೀಮದ್ವೇದಮಾರ್ಗ ಪ್ರತಿಷ್ಠಾಪನಾಚಾರ್ಯರೆಂದು ಪ್ರಸಿದ್ಧಿಯನ್ನು ಪಡೆದವರಾದರು.

**96. ವಳರುಮ್ಪಿಣಿಕೊಣ್ಡ ವಲ್ವಿನೈಯಾಲ್, ಮಿಕ್ಕನಲ್ ವಿನೈಯಿಲ್**
**ಕಿಳರುಮ್ ತುಣಿವುಕಿಡೈತ್ತರಿಯಾದು, ಮುಡೈತ್ತಲೈಯೂನ್**
**ತಳರುಮಳವುಮ್ ತರಿತ್ತುಮ್ ವಿೞುನ್ದುಮ್ ತನಿತಿರಿವೇರ್**
**ಕ್ಕುಳರೆಮ್ಮಿರೈವರ್, ಇರಾಮಾನುಶನ್ತನ್ನೈ ಯುತ್ತವರೇ ||**

ಅರ್ಥ :— ವಳರುಮ್ = ವೃದ್ಧಿ ಹೊಂದುತ್ತಿರುವ, ಪಿಣಿಕೊಣ್ಡ = ವ್ಯಾಧಿ (ದುಃಖ) ಯನ್ನು ಬೆಳೆಸುವ, ವಲ್ ವಿನೈಯಾಲ್ = ಪ್ರಬಲವಾದ ಪಾಪಕರ್ಮಗಳಿಂದ, ಮಿಕ್ಕ = ಶ್ರೇಷ್ಠವಾದ, ನಲ್ ವಿನೈಯಿಲ್ = ವಿಲಕ್ಷಣ

ವಾದ ಶರಣಾಗತಿ ಧರ್ಮದಲ್ಲಿ, ಶೆಳಿಯುವರ್ = ಪ್ರವೃತ್ತಿಯಾಗುವ, ತುಣಿವು — ಮಹಾ ವಿಶ್ವಾಸವನ್ನು, ತಿಗೈತ್ತಿಯಲಾದು = ನೆಟ್ಟಗೆ ಹೊಂದದೇನೆ. ಮುನ್ಸೈತ್ತೀವಿನೈ = ದುರ್ಗಂಧ ಪ್ರಚುರವಾದ. ಉಡಲ್ = ಈ ಶರೀರವು, ತಳರುಮ್ಪೋದು = ಶಿಥಿಲವಾಗಿ ಹೋಗುವವರೆಗೆ. ತನಿತ್ತುಂ = ಶೇರಿ ಇರುಂದು, ಐಮ್ಪುಲನ್ = ಶಬ್ದಾದಿ ವಿಷಯಗಳಲ್ಲಿ ಮುಳುಗಿಯೂ. ಅನಿತಿರುಕ್ಕುಂ = ಅಸಹಾಯನಾಗಿ, ಏಕಾಂಗಿಯಾಗಿ ಸಿಲುಕಿಕೊಂಡಿರುವ ನನಗೆ, ಎನ್ = ನನ್ನ, ಇರ್ವ್ವರ್ = ಸ್ವಾಮಿಯಾಗಿರುವ, ಇರಾಮಾನುಸನ್ ತನ್ನೈ = ರಾಮಾನುಜಾಚಾರ್ಯರನ್ನು, ಉತ್ತವರ್ = ಆಶ್ರಯಿಸಿದವರು, ಉಳರ್ = (ಉತ್ತಾರಕರಾಗಿ) ಇರುವರು.

ತಾ:— ಹಿಂದಿನ ಪಾಶುರದಲ್ಲಿ ಜೀವನರ ಸಂರಕ್ಷಣಾರ್ಥವಾಗಿ ರಾಮಾನುಜರು ಈ ಭೂಲೋಕದಲ್ಲಿ ಅವತರಿಸಿ ವೇದವೇದಾಂತ ಪ್ರವರ್ತನಮಾಡಿ ಉಪಕರಿಸಿದರೆಂದು ಹೇಳಿ, ಈ ಪಾಶುರದಲ್ಲಿ ಪಕ್ಕದಲ್ಲಿದ್ದವರು "ಮೋಕ್ಷಾಧಿಕಾರಿಗಳಿಗೆ ಹೇಳಿದ ಶರಣಾಗತಿಯಲ್ಲಿ ನಿಷ್ಠರಾಗಿದ್ದೀರೋ?" ಎಂದು ಕೇಳಲು, ಅದಕ್ಕೆ ಪ್ರತ್ಯುತ್ತರವಾಗಿ "ಶರಣಾಗತಿಯನ್ನು ಹೊಂದುವುದಕ್ಕೆ ಪ್ರತಿಬಂಧಕಗಳಾದ ಪ್ರಬಲ ಕರ್ಮಗಳಿಂದಲೂ, ಅವುಗಳಿಗಿಂತಲೂ, ಮಹಾ ವಿಶ್ವಾಸವಿಲ್ಲದೆ ಇರುವುದರಿಂದಲೂ ದುರ್ಗಂಧ ಪ್ರಚುರವಾಗಿಯೂ ರಕ್ತ ಮಾಂಸಾದಿಗಳಿಂದ ತುಂಬಿದ ಶರೀರವು ಸಂಪೂರ್ಣವಾಗಿ ನಾಶವಾಗುವವರೆಗೂ ಸುಖದುಃಖಾನುಭವವನ್ನು ಮಾಡುತ್ತಾ, ತಾಪತ್ರಯಗಳಿಗೆ ಸಿಕ್ಕಿ ಕಷ್ಟಪಟ್ಟುಕೊಂಡು ಸಹಾಯವಿಲ್ಲದೆ ಇರುವ ನನಗೆ, ಆ ಚರಮೋಪಾಯವಾದ ರಾಮಾನುಜರಿಗಿಂತ ಬಹಳ ಸುಲಭರಾಗಿರುವ, ಆ ಮಹಾತ್ಮರನ್ನು ಸರ್ವವಿಧ (ಮೋಕ್ಷಾಧಿಕಾರಿಗಳನ್ನು) ಬಂಧುವೆಂದೂ ಸ್ವಾಮಿಯೆಂದೂ ನಂಬಿ ಆಶ್ರಯಿಸಿರುವ ಮಹಾತ್ಮರನ್ನೇ ನನಗೆ ದಾರಿಯಲ್ಲಿ ಸಹಾಯಕರೆಂದೂ, ರಕ್ಷಕರೆಂದೂ, ದೃಢವಾಗಿ ನಂಬಿರುವೆನು" ಎನ್ನುತ್ತಾರೆ.

97. ತನ್ನೈಯುತ್ತಾಳ್ಚೆಯ್ಯುಂ ತನ್ಮೈಯಿನೋರ್, ಮನ್ನು
ತಾಮರೈತ್ತಾಳ್
ತನ್ನೈಯುತ್ತಾಳ್ಚೆಯ್ಯವೆನ್ನೈಯುತ್ತಾನಿನ್ರು, ತನ್ ತಗವಾಲ್

ತನ್ನೈಯುತ್ತಾರನ್ತಿತನ್ನೈಯುತ್ತಾರಿಲ್ಲೈಯೆನ್ನರಿನ್ದು
ತನ್ನೈಯುತ್ತಾಟ್ಟೈ, ಇರಾಮಾನುಶನ್ ಗುಣಮ್ ಶಾತ್ತುಮ್ ||

ಅರ್ಥ :—ತನ್ನೈ ಉತ್ತಾರ್ ಅನ್ರಿ = ತಮ್ಮನ್ನು ಆಶ್ರಯಿಸಿದವರಲ್ಲದೆ - ತನ್ನೈ ಉತ್ತಾರ್ರೈ = ತಮ್ಮನ್ನು ಆಶ್ರಯಿಸಿದವರ, ಗುಣಮ್ ಶಾತ್ತುಮ್ = ಗುಣವನ್ನು ಹೊಗಳುವ, ತನ್ನೈ ಉತ್ತಾರ್ರೈ = ಸ್ವಭಾವವುಳ್ಳವರು, ಇಲ್ಲೈ ಎನ್ರುರಿನ್ದು = ಒಬ್ಬರೂ ಇಲ್ಲವೆಂದು ತಿಳಿದುಕೊಂಡು, ತನ್ನೈ ಉತ್ತು = ತಮ್ಮನ್ನು ಆಶ್ರಯಿಸಿ, ಆಳ್ ಶೆಯ್ಯುಮ್ = ದಾಸ್ಯವೃತ್ತಿಯನ್ನು ಮಾಡುವ, ತನ್ನೈಯಿನೋರ್ = ಸ್ವಭಾವವುಳ್ಳವರ, ಮನ್ನು = ಪರಸ್ಪರ ಹೊಂದಿಕೊಂಡಿರುವ, ತಾಮರೈ = ತಾವರೇ ಪುಷ್ಪದಂತೆ ಪರಮ ಭೋಗ್ಯವಾಗಿರುವ, ತಾಳ್ ತನ್ನೈ = ಶ್ರೀಪಾದಗಳನ್ನು - ಉತ್ತು = ಆಶ್ರಯಿಸಿ ಆಳ್ ಶೆಯ್ಯ = ಅವರ ಸೇವೆಯನ್ನು ಮಾಡುವಂತೆ, ಇರಾಮಾನುಶನ್ — ಸ್ವಾಮಿ ರಾಮಾನುಜರು, ತನ್ ತಹವಾಲ್ = ತಮಗೆ ಸಹಜವಾದ ಕೃಪೆಯಿಂದ, ಇನ್ರು = ಈಗ, ಎನ್ನೈ = ನನ್ನನ್ನು, ಉತ್ತಾನ್ = ಅಂಗೀಕರಿಸಿದರು, ಎಂದು ಅವರ ಕೃಪಾಕಟಾಕ್ಷವನ್ನು ಹೊಗಳುತ್ತಾರೆ.

ತಾ :—ಹಿಂದಿನ ಪಾಶುರದಲ್ಲಿ " ತೇರ್ವುಱಮತ್ತಿರಿಯೋರ್ " ಎಂದು ಇರುವವರೇ ತಮಗೆ ಆಶ್ರಿತ ರಕ್ಷಕರು ಎಂದರು. ಇದರಲ್ಲಿ " ತಿಕ್ಕುತ್ತಕೀರ್ತಿ " ಎಂಬ ದಿಗಂತಗಳಲ್ಲೆಲ್ಲಾ ವ್ಯಾಪಿಸಿರುವ ರಾಮಾನುಜಾಚಾರ್ಯರ ವೈಭವವನ್ನು ಕಣ್ಣುಗಳಿಂದ ಕಂಡೂ, ಕಿವಿಗಳಿಂದ ಕೇಳಿಯೂ, ತಮ್ಮ ಹತ್ತಿರದಲ್ಲಿ ಕೈಂಕರ್ಯ ಮಾಡುವವರನ್ನು ಬಿಟ್ಟು ತಮ್ಮ ಅನನ್ಯಭಕ್ತರಿಗೆ ಸೇವೆಮಾಡುವವರು ಸಿಕ್ಕುವದಿಲ್ಲನೆಂದು ಮನಗಂಡು, ಮೊದಮೊದಲೇ ತಮ್ಮ ಸಂಬಂಧಿ ಸಂಬಂಧಿಗಳಿಗೆ ನನ್ನನ್ನು ಆಳಾಗಿ ಮಾಡಿದುದರಿಂದ, ಈ ರುಚಿ ನನಗೆ ಅವರ ಕೃಪೆಯಿಂದ ಉಂಟಾಯಿತು " ಎನ್ನುತ್ತಾರೆ.

೯೮. ಇಡುಮೋಯಿನಿಯೆಂಬುಮರ್ಕ್ಕತ್ತಿಲ್, ಇನ್ನುಮ್ ನರಗಿಲಿಟ್ಟು
ಚ್ಚುಡುಮೋಯೆನತ್ತೈತ್ತೊಡರ್ ತರುತೊಲ್ಲೈ, ಶುಲ್ಲಿಲ್
ಪಿರಪ್ಪಿಲ್

ನಡುಮೋಯಿನಿ ನಮ್ಮಿರಾಮಾನುಶನ್ನಮ್ಮೈ ನಮ್ ವಶತ್ತೇ
ವಿಡುಮೋಶರಣಮೆನ್ರಾಲ್, ಮನಮೇ ನೈಯಲ್
ಮೇವುದರ್ಕೇ ॥

ಅರ್ಥ :—ನಮ್ ಇರಾಮಾನುಶನ್ = ನಮ್ಮ ಸ್ವಾಮಿ ರಾಮಾನುಜರು, ಶರಣಮೆನ್ರಾಲ್ = ನಮಗೆ ನೀವು (ರಕ್ಷಕರು) ಎಂದು ಒಂದುಸಲ ಹೇಳಿದರೆ. ಅಂದರೆ "ನಿಮ್ಮನ್ನು ಆಶ್ರಯಿಸಿದೇನೆ" ಎಂದರೆ, ಇನಿಯ-ಭೋಗ್ಯವಾದ, ಸುಖಕರವಾದ - ಶುವರ್ಕ್ಕತ್ತಿಲ್ = ಸ್ವರ್ಗದಲ್ಲಿ, ಅವರನ್ನು ಇಡುಮೋ = ಇಡುವರೇ, ಇನ್ನುಮ್ = ಇನ್ನೂ, ನರಗಿಲ್ ಇಟ್ಟು = ನರಕದಲ್ಲಿಟ್ಟು, ಶುಡುಮೋ = ಸುಡುವರೋ! (ತಪಿಸುವಂತೆ ಮಾಡುವರೋ), ಅವತ್ತೈ = ಆ ಸ್ವರ್ಗನರಕಗಳನ್ನು, ತೊಡರ್ ತರು = ಅನುಸರಿಸುವ, ತೊಲ್ಲೈ = ಅನಾದಿಯಾದ, ಶುಳಲ್ = ತಿರಿಗಿ ತಿರಿಗಿ ಬರುತ್ತಿರುವ, ಪಿರಪ್ಪಿಲ್ = ಜನ್ಮಪರಂಪರೆಯಲ್ಲಿ, ಇಡುಮೋ = ಇಡುವರೋ-(ನಿಲ್ಲಿಸುವರೋ), ಇನಿ = ಇನ್ನುಮೇಲೆ: ನಮ್ಮೈ = ನಮ್ಮನ್ನು, ನಮ್ ವಶತ್ತೇ = ನಮ್ಮ ಸ್ವಾಧೀನದಲ್ಲಿ-ವಿಡುಮೋ = ಬಿಡುವರೋ. (ಹಾಗಿದ್ದರೆ) ಮೇವುದರ್ಕು = ಫಲಪ್ರಾಪ್ತಿ ನಿಮಿತ್ತವಾಗಿ, ಮನಮೇ = ಓ ಮನಸ್ಸೇ, ನೈಯಲ್ = ಶೈಥಿಲ್ಯಹೊಂದಿ ಕೊರಗಬೇಡ, (ಯೋಚಿಸು - ಎನ್ನುತ್ತಾರೆ).

ತಾ :—ಅಮುದನಾರ್ರವರು, ತಮ್ಮನ್ನು ಶ್ರೀ ರಾಮಾನುಜರು ಸರ್ವೋತ್ಕೃಷ್ಟವಾದ ಅಧಿಕಾರದಲ್ಲಿ ಸೇರಿಸಿದ ಉಪಕಾರವನ್ನು ಅನುಸಂಧಿಸಿ ಹೃಷ್ಟರಾಗಿರಲು, ಇವರ ಮನಸ್ಸು ಇವರಿಗೆ "ನೀವು ಹೀಗೆ ಹೇಳಿದಾಗ್ಯೂ ಸರ್ವಾಂತರ್ಯಾಮಿಯಾದ ಸರ್ವೇಶ್ವರನು ಅನಾದಿ ಕಾಲದಿಂದಲೂ ಜನರಿಗೆ ಅವರವರ ಕರ್ಮಾನುಗುಣವಾಗಿ ಫಲವನ್ನು ಕೊಡುವಂತೆ ಸಂಕಲ್ಪಿಸಿಕೊಂಡಿರುವುದರಿಂದ, ನಮ್ಮ ಕರ್ಮವನ್ನು ಕಟಾಕ್ಷಿಸಿ ಇಲ್ಲಿಯವರಿಸಿಗೂ ಸ್ವರ್ಗ ನರಕಗಳ ಗರ್ಭದಲ್ಲಿ ಎಡಬಿಡದೆ ಕ್ರಮವಾಗಿ ಸಂಚರಿಸುವಂತೆ ಮಾಡುತ್ತಿದ್ದನಲ್ಲವೇ? ಆ ಕರ್ಮಗಳಿಗೆ ಕಾರಣವಾದ ಪ್ರಕೃತಿ (ದೇಹ) ಸಂಬಂಧ ನಮಗಿನ್ನೂ ಇರುವುದರಿಂದ ದುರ್ವಾಸನಾಸಂಚಯದಿಂದ ಪುನಃಪುನಃ ಭಗವಂತನ ನಿಗ್ರಹಕ್ಕೆ ಕಾರಣವಾದ ದುಷ್ಕರ್ಮಗಳಲ್ಲಿ ಅನ್ವಯಿಸುವುದಕ್ಕೆ ಅವಕಾಶವಿದೆಯಲ್ಲಾ, ಫಲಬಂದರಲ್ಲವೇ! ನೀವು ಈರೀತಿ ನಿರ್ಭರರಾಗಿ ಹೇಳಬಹುದು ಎಂದು

ನೆಸಾಗುತ್ತಿರಲು, ಈ ಅಮುದನಾರ್ರವರು ಮನಸ್ಸನ್ನು ಕುರಿತು, ಶ್ರೀ ರಾಮಾನುಜಾಚಾರ್ಯರು ತಮ್ಮನ್ನು "ಶರಣಂ; "ನಿಮ್ಮನ್ನು ನಾನು ಮರೆಹೊಕ್ಕಿರುವೆನು'' ಎಂದು ಹೇಳತಕ್ಕ ಚೇತನರನ್ನು ಸ್ವರ್ಗದಲ್ಲಿಯಾಗಲಿ ನರಕದಲ್ಲಿಯಾಗಲಿ ಇಟ್ಟು ದುಃಖಪಡುವಂತೆ ಮಾಡುವುದಿಲ್ಲ; ಕರ್ಮಶೇಷದಿಂದ ಪ್ರಕೃತ ಮಂಡಲದಲ್ಲಿ ಪುನಃಪುನಃ ಹುಟ್ಟುವಂತೆಯೂ ಮಾಡುವುದಿಲ್ಲ, ಉತ್ತಮವಾದ ಮೋಕ್ಷಸಾಮ್ರಾಜ್ಯವನ್ನು ಕೊಡುವರು, ಆದುದರಿಂದ ಫಲದ ವಿಷಯದಲ್ಲಿ ಹೇ ಮನಸ್ಸೇ ನೀನು ಕೊಂಚವೂ ಚಿಂತೆ ಪಡಬೇಕಾಗಿಲ್ಲ. ಉಪಾಸಕರಿಗೆ ಪ್ರಾರಬ್ಧ ಕರ್ಮ ಕಳೆಯುವವರಿಗೂ ಸಂಸಾರದ ತೊಂದರೆ ಇರುವಹಾಗೆ "ಶ್ರೀ ರಾಮಾನುಜರನ್ನು ಆಶ್ರಯಿಸಿ ಭಾಗವತ ಕೈಂಕರ್ಯ ನಿರತರಾದವರಿಗೆ ಸಂಸಾರ ತಾಪತ್ರಯವಿರುವುದಿಲ್ಲ'' ಎಂದು ಮನಸ್ಸಿಗೆ ಧೈರ್ಯವನ್ನು ಹೇಳುತ್ತಾರೆ.

99. ತರ್ಕಚ್ಚಮಣರುಂ, ಶಾಕ್ಕಿಯಪ್ಪೇಯ್‌ಗಳುಮ್, ತಾಳ್
ಶಡೈಯೋನ್
ಶೊಱ್ಕತ್ತ ಶೋಮ್ಬರುಮ್ ಶೂನಿಯವಾದರುಮ್, ನಾನ್ಮ
ಱೈಯುಮ್,
ನಿಱ್ಕ ಕುಱುಮ್ಬುಶೆಯ್ಯುಮ್ ನೀಶರುಮ್ಮಾಣ್ಡನರ್ ನೀಣಿಲತ್ತೇ
ಪೊಱ್ಕಱ್ಪಗಮ್, ಎಮ್ಮಿರಾಮಾನುಶಮುನಿ ಪೋನ್ದ ಪಿನ್ನೇ!!

ಅರ್ಥ:—ತರ್ಕ = ತರ್ಕವಾದದಿಂದ ತಮ್ಮ ಮತವನ್ನು ಸ್ಥಾಪನೆ ಮಾಡುತ್ತಿರುವ, ಚ್ಚಮಣರುಂ — ಕ್ಷಪಣಕರೆಂಬ ಜೈನರೂ, ಪೇಯ್ = ಪಿಶಾಚ ಸ್ವರೂಪರಾದ, ಶಾಕ್ಕಿಯರ್‌ಗಳುಮ್ = ಬೌದ್ಧರೂ, ತಾಳ್ ಶಡೈಯೋನ್ = ಜೋಲಾಡುತ್ತಿರುವ ಜಟೆಯುಳ್ಳ ರುದ್ರನ, ಶೊಱ್ ಕತ್ತ = ವಚನರೂಪವಾದ ಶೈವಾಗಮವನ್ನು ಅಭ್ಯಸಿಸಿರುವ, ಶೋಮ್ಬರುಮ್ = ತಾಮಸ ಸ್ವಭಾವರಾದ ಶೈವರೂ, ಶೂನಿಯವಾದರು = ಪ್ರಮಾಣ, ಪ್ರಮೇಯ, ಪ್ರಮಾತೃಗಳೆಂಬ ತತ್ವತ್ರಯಗಳಾದ ಶಾಸ್ತ್ರ ವಿಧಿಯೇ ಇಲ್ಲವೆಂದು ಸರ್ವಶೂನ್ಯವಾದ ಮಾಡುವ ಮಾಧ್ಯಮಿಕರೂ, (ಇವರುಗಳಂತಲ್ಲದೆ), ನಾಲ್‌ಮಱೈಯುಮ್ — ನಾಲ್ಕು ವೇದಗಳೂ, ನಿಱ್ಕ = ಪ್ರಬಲವಾದ ಪ್ರಮಾಣವಾಗಿ ನಿಂತಿರುವಾಗ, ಕುಱುಮ್ಬುಶೆಯ್ = ವೇದವಾಕ್ಯಗಳಿಗೆ ವಿಪರೀತಾರ್ಥಗಳನ್ನು ಕಲ್ಪಿಸಿ ಮೋಸ

ಗೊಳಿಸುವ, ನೀಚರುಮ್ = ನೀಚರಾದ ಕುದೃಷ್ಟಿಗಳೂ, ಪೊನ್ ಕಱ್ಪಕಮ್ = ಅಂದವಾದ ಕಲ್ಪವೃಕ್ಷದಂತೆ ಇರುವ - ಎಮ್ ಇರಾಮಾನುಶ ಮುನಿ = ನಮ್ಮ ರಾಮಾನುಜಾಚಾರ್ಯರೆಂಬ ಮುನಿವರ್ಯರು, ನೀಳ್ ನಿಲತ್ತೇ = ಈ ವಿಶಾಲವಾದ ಭೂಮಂಡಲದಲ್ಲಿ, ಪೋನ್ದ ಪಿನ್ = ಅವತರಿಸಿದಮೇಲೆ, ಮಾಣ್ಡನರ್ = (ಮೇಲೆ ಹೇಳಿದ ಮತಸ್ಥರೆಲ್ಲಾ) ನಾಶವಾದರು, ಎನ್ನುತ್ತಾರೆ.

ತಾ :—ಹಿಂದಿನ ಪಾಶುರದಲ್ಲಿ ಸ್ವಾಮಿ ಎಂಬೆರುಮಾನಾರ್ರವರನ್ನು ಆಶ್ರಯಿಸಿದಮೇಲೆ "ನಮ್ಮೈನಮನ್ ತಮರ್ ತೀಣ್ಡುವರೋ" ಎಂದು ಇವರು ಮಹಾವಿಶ್ವಾಸದಿಂದ ಹೇಳುತ್ತಲು, "ಅದುಸತ್ಯ" ಆದರೂ ನಮ್ಮ ಜ್ಞಾನವನ್ನೂ ತದನುರೂಪವಾದ ಅನುಷ್ಠಾನವನ್ನು ಕ್ರಮವಾಗಿ ತಿಳಿಸತಕ್ಕ ವೇದವು ಪ್ರಕಾಶಕ್ಕೆ ಬರದಂತೆ ಅದನ್ನು ಮೂಲೆಗೆತಳ್ಳಿ ಉಪದ್ರವವನ್ನುಂಟುಮಾಡಿದ ಬಾಹ್ಯಕುದೃಷ್ಟಿಗಳು ಪ್ರಬಲಿಸಿ ರಾಜ್ಯಭಾರವಮಾಡುತ್ತಿರುವ ದೇಶವಲ್ಲವೇ ಇದು? ಎಂದು ಕೇಳಿದವರಿಗೆ: ಸಕಲ ಪುರುಷಾರ್ಥಗಳನ್ನೂ ಕೊಡುವ ಸುಂದರವಾದ ಕಲ್ಪವೃಕ್ಷದಂತಿರುವ ಸ್ವಾಮಿ ರಾಮಾನುಜರು ಈ ಮಹಾ ಪೃಥ್ವಿಯಲ್ಲಿ ಅವತರಿಸಿದ ಮೇಲೆ ಅಂಥಾ ಮಹಾ ನೀಚ ಮತಾನುಯಾಯಿಗಳೆಲ್ಲಾ ಸಮೂಲವಾಗಿ ನಾಶವಾಗಿಹೋದರು ಎಂದು ಹೇಳುತ್ತಾರೆ.

**100.** ಪೋನ್ದದೆನ್ನೆಂಜೆನ್ನುಮ್ಪೊನ್ವಣ್ಡು, ಉನದಡಿಪ್ಪೋದಿಲೊಣ್ ಶೀರ್

ಆಮ್ತೆಳಿತೇನುಣ್ಡಮರ್ನ್ದಿಡವೇಣ್ಡಿ, ನಿನ್ಪಾಲದುವೇ
ಈನ್ದಿಡವೇಣ್ಡುಮ್ ಇರಾಮಾನುಶ ಇದುಅನ್ರಿಒನ್ರುಮ್
ಮಾನ್ದಗಿಲ್ಲಾದು, ಇನಿಮಱ್ಱೊನ್ರುಕಾಟ್ಟಿ ಮಯಕ್ಕಿಡಲೇ ||

ಅರ್ಥ :—ಎನ್ ನೆಂಜುಎನ್ನುಮ್ = ನನ್ನ ಮನಸ್ಸೆಂಬ, ಪೊನ್ ವಣ್ಡು = ಸುಂದರವಾದ ದುಂಬಿಯು, ಉನದು ಅಡಿಪ್ಪೋದಿಲ್ = ನಿಮ್ಮ ಅಡಿಗಳೆಂಬ ತಾವರೆ ಪುಷ್ಪದಳಗಳಲ್ಲಿನ - ಒಣ್ ಶೀರಾಮ್ = ದಿವ್ಯವಾದ ಕಲ್ಯಾಣಗುಣಗಳೆನ್ನುವ, ತೆಳಿತೇನ್ = ನಿರ್ಮಲವಾದ ಜೇನನ್ನು (ಮಕರಂದವನ್ನು), ಉಣ್ಡು = ಪಾನಮಾಡಿಕೊಂಡು, ಅಮರ್ನ್ದಿಡವೇಣ್ಡಿ = ಅಲ್ಲೇ ನಿತ್ಯ ವಾಸಮಾಡಿಕೊಂಡಿರಬೇಕೆಂದು ಬಯಸಿ, ನಿನ್ಪಾಲ್ = ನಿಮ್ಮ ಬಳಿ,

ಈನ್ದದು = ಬಂದಿದೆ. ಇರಾಮಾನುಶ = ಶ್ರೀ ರಾಮಾನುಜರೇ, ಅದುವೇ ಈನ್ದಿಡವೇಣ್ಡುಮ್ = ಅದನ್ನೇ ಕೊಟ್ಟು ಕೃಪೆಮಾಡಬೇಕು, ಇದು ಅನ್ರಿ = ಇದನ್ನು ಬಿಟ್ಟು, ಒನ್ರುಮ್ = ಮತ್ತಾವುದನ್ನೂ ಕೂಡ, ಮಾನ್ದಗಿಲ್ಲಾದು = ಭುಜಿಸಲಾರದು (ಅನುಭವಿಸುವುದಿಲ್ಲ), ಇನಿ = ಇನ್ನುಮೇಲೆ, ಮತ್ತೊನ್ರು = ಬೇರೆ ಒಂದನ್ನು, ಕಾಟ್ಟಿ = ತೋರಿಸಿ, ಮಯಕ್ಕಿಡಲೇ = ಮೋಹಪಡಿಸಬೇಡಿರಿ, ಎನ್ನುತ್ತಾರೆ.

ತಾ :— ಹಿಂದಿನ ಪಾಶುರಗಳೆರಡರಲ್ಲಿಯೂ ಪ್ರಾಪ್ತಿ ನಿಮಿತ್ತವಾಗಿ ಕ್ಲೇಶಿಸುತ್ತಿದ್ದ ತಮ್ಮ ಮನಸ್ಸನ್ನು ಕುರಿತು "ನಾನು ಚರಮಪರ್ವವಾದವರನ್ನು ಒಂದು ಸಲ ಆಶ್ರಯಿಸಿದ ಮಾತ್ರಕ್ಕೆ ನಮ್ಮನ್ನು ನಮ್ಮ ವಶದಲ್ಲೇ ಬಿಟ್ಟು ಬಿಡುವುದಿಲ್ಲವೆಂದು ಉಪದೇಶಿಸಿ ತಿಳುವಳಿಕೆಯನ್ನಿತ್ತು ಭೂಲೋಕದಲ್ಲಿ ಬಾಹ್ಯ ಕುದೃಷ್ಟಿಗಳು ವ್ಯಾಪಿಸಿ ಲೋಕದವರನ್ನೆಲ್ಲಾ ಮೋಹಗೊಳಿಸಿ ಹಾಳು ಮಾಡುತ್ತಿದ್ದ ಕಾಲದಲ್ಲಿ ವೇದಮಾರ್ಗ ಪ್ರತಿಷ್ಠಾಪನೆಯ ಮೂಲಕ ಅವರನ್ನೆಲ್ಲಾ ಜಯಿಸಿ ತಮಗೆ "ಕಲ್ಪವೃಕ್ಷ" ಪ್ರಾಯರಾಗಿದ್ದ ಪ್ರಕಾರವನ್ನು ತಿಳಿಸಿದಮೇಲೆ ಶ್ರೀ ರುಕ್ಮಿಣೀದೇವಿಯವರು ಆಶ್ಚರ್ಯದಿಂದ ಶ್ರೀ ಕೃಷ್ಣನ ಸ್ವರೂಪಗುಣ ವೈಭವಗಳನ್ನೆಲ್ಲಾ ಕೇಳಿ ಆ ಮಹಾಪುರುಷನನ್ನೇ ವರಿಸಬೇಕೆಂದು ಬಯಸಿ ಮತ್ತೊಬ್ಬ ನೀಚ ಪುರುಷನನ್ನು ತಂದು ತನಗೆ ಎಲ್ಲಿ ಕಟ್ಟಿಬಿಡುವರೋ" ಎಂದು ಭಯಪಟ್ಟಹಾಗೆ, ತಮ್ಮ ಮನಸ್ಸು ಸ್ವಾಮಿ ರಾಮಾನುಜರ ದಿವ್ಯ ಚರಣಗಳಲ್ಲಿರುವ ಮಕರಂದವನ್ನು ಬಾಯಲ್ಲಿ ತುಂಬಿ ಕೊಂಡು, "ಜೇನನ್ನು ಆತುರದಿಂದ ಪಾನಮಾಡುವ ದುಂಬಿಯಂತೆ" ಇರುವ ಪ್ರಕಾರವನ್ನು ಕಟಾಕ್ಷಿಸಿ ಸ್ವಾಮಿ ಎಂಬೆರುಮಾನಾರವರಿಗೆ ಅದರ ಬೆಳೆಯನ್ನು ವಿಜ್ಞಾಪಿಸಿಕೊಂಡು, ಇನ್ನು ಯಾವುದಾದರೂ ಬೇರೊಂದು ವಿಷಯವನ್ನು ತೋರಿಸಿ ನನ್ನನ್ನು ನೀವು ಮೋಹಗೊಳಿಸಬೇಡಿ ಎಂದು ಪ್ರಾರ್ಥಿಸುತ್ತಾರೆ.

**101.** ಮಯಕ್ಕುಮಿರುವಿನೈ ವಲ್ಲಿಯಿಲ್ ಪೂಣ್ಡು. ಮದಿಮಯಂಗಿ
ತುಯಕ್ಕುಂಪಿಱವಿಯಿಲ್ ತೋನ್ರಿಯವೆನ್ನೈ, ತುಯರಗತ್ತಿ
ಉಯಕ್ಕೊಣ್ಡು ನಲ್ಗುಮಿರಾಮಾನುಶನೆನ್ರತುನ್ನೈಯುನ್ನಿ
ನಯಕ್ಕುಮವರ್ಕ್ಕಿದಿೞುಕ್ಕೆನ್ಬರ್, ನಲ್ಲವರೆನ್ರುಂ ನೆಂಜೇ ||

ಅರ್ಥ : — ಮಯಕ್ಕುಮ್ = ಮೋಹಪಡಿಸುತ್ತಿರುವ, ಇರುವಿನೈ = ಪುಣ್ಯಪಾಪಗಳೆಂಬ ಎರಡು ವಿಧವಾದ ಕರ್ಮಗಳ, ವಲ್ಲಿಯಿಲ್ = ಬಳ್ಳಿಯಂತೆ ಇರುವ, ಬಲೆಯಿಂದ, ತುಯಕ್ಕುಮ್ = ಸಂಶಯವನ್ನುಂಟುಮಾಡುವ (ಭ್ರಮಿಸುವಂತೆ ಮಾಡುವ), ಪಿರವಿಯಿಲ್ = ಜನ್ಮ ಪರಂಪರೆಯಲ್ಲಿ (ಸಂಸಾರ ವಲ್ಲಿ) ತೋನ್ರಿಯ ಎನ್ನೈ = ಜನಿಸಿದ ನನ್ನನ್ನು, ತುಯರ್ ಅಗತ್ತಿ = ದುಃಖಗಳನ್ನೆಲ್ಲಾ ನೀಗಿಸಿ, ಉಯಕ್ಕೊಣ್ಡು = ಉಜ್ಜೀವಿಸುವಂತೆ ಮಾಡಿ, ನಲ್ಗುಮ್ = ನನ್ನನ್ನು ಪ್ರೀತಿಸಿ ಸ್ನೇಹಿತನನ್ನಾಗಿ ಮಾಡಿಕೊಂಡ, ಇರಾಮಾನುಶ = ಸ್ವಾಮಿ ರಾಮಾನುಜರೇ, ಎನ್ರದು ಇದು = ನಾನು ಹೇಳಿದ ಇದು, ಉನ್ನೈ ಉನ್ನಿ = ನಿಮ್ಮನ್ನು ಸದಾ ಧ್ಯಾನಿಸಿ - ನೈನ್ದು = ಶಿಥಿಲರಾಗಿ - ಎನ್ರುಮ್ = ಸರ್ವ ಕಾಲದಲ್ಲೂ, ನಯಕ್ಕುಮ್ ಅವರ್ಕ್ಕು = (ಯಾವಾಗಲೂ) ಪ್ರೀತಿ ಮಾಡುವವರಿಗೆ, ನಲ್ಲವರ್ = ಸತ್ಪುರುಷರು, "ಇೞುಕ್ಕು" ಎನ್ಬರ್ = ದೋಷವೆಂದು ಹೇಳುವರು.

ತಾ : — ಈ ಪಾಶುರದಲ್ಲಿ "ಬನ್ಧಾಯ ವಿಷಯಾಸಂಗಿ ಮುಕ್ತ್ಯೈ ನಿರ್ವಿಷಯಂ ಮನಃ" ಎಂಬ ಮನಸ್ಸುಳ್ಳವನಾಗಿ ಅನೇಕ ದುಷ್ಕರ್ಮಗಳಾದ ಜನ್ಮ ಪರಂಪರೆಗಳಲ್ಲಿ ನರಳಿಕೊಂಡಿರುವ ನನ್ನನ್ನು ಅಂಗೀಕರಿಸಿ ಉಜ್ಜೀವಿಸುವಂತೆ ಮಾಡಿ ಆ ದುಷ್ಕರ್ಮ ಫಲವಾದ ಜನ್ಮ ಪರಂಪರೆಯೆಂಬ ಸಂಸಾರ ಬನ್ಧನವೆಂಬ ಬಲೆಯಿಂದ ಬಿಡಿಸಿ ಕೃಪೆಮಾಡಿದ ರಾಮಾನುಜರೇ! ಎಂದು ನಿಮ್ಮ ಪ್ರಭಾವವನ್ನು ಮರೆಯದೆ ಹಿಂದೆ ನಾವು ಹಲವು ಪಾಶುರಗಳಲ್ಲಿ ಹೇಳಿದ್ದು; ನಿಮ್ಮನ್ನೇ ಸದಾ ಅನುಸಂಧಿಸಿ ಕರಗಿ (ಶಿಥಿಲವಾಗಿ) ಹೋಗುವವರಿಗೆ ದೋಷವಾಗಿ ತೋರುವುದು ಎಂದು ಜ್ಞಾನಾಧಿಕರು ಸರ್ವದಾ ಹೇಳುವರಲ್ಲವೇ ಎಂದು ಸ್ವಾಮಿ ರಾಮಾನುಜರನ್ನು ನೋಡಿ ವಿಜ್ಞಾಪನೆ ಮಾಡುತ್ತಾರೆ.

**102.** ನೈಯುಮ್ ಮನಮುನ್ ಗುಣಂಗಳೈ ಯುನ್ನಿ, ಎನ್ನಾವಿರುನ್ದೆಮ್<br>
ಐಯನಿ ರಾಮಾನುಶನೆನ್ರಳೈಕ್ಕುಮ್, ಅರುವಿನೈಯೇನ್<br>
ಕೈಯುಮ್ ತೊೞುಮ್ ಕಣ್ಣುರುದಿಡುಮ್ ಕಾಣಕ್ಕಡಲ್<br>
ಪುಡೈಶೂೞ್<br>
ವೈಯಮಿದನಿಲ್, ಉನ್ವಣ್ಮೈಯೆನ್ಪಾಲೆನ್ವಳರ್ನ್ದದುವೇ ||

ಅರ್ಥ :—ಮನಮ್ = (ನನ್ನ) ಮನಸ್ಸು, ಉನ್ ಗುಣಙ್ಗಳೈ = ನಿಮ್ಮ ಗುಣಗಳನ್ನು, ಉನ್ನಿ = ಅನುಸಂಧಿಸಿ, ನೈಯುಮ್ = ಶಿಥಿಲವಾಗುತ್ತಿದೆ. ಎನ್ ನಾ = ನನ್ನ ನಾಲಿಗೆಯು, ಇರುನ್ದು = ಸದಾ ಒಂದೇ ಸಮನಾಗಿ, ಎಮ್ ಐಯನ್ = ನನ್ನ ನಿರುಪಾಧಿಕ ಬಂಧು, ಇರಾಮಾನುಶನ್ = ಶ್ರೀಮದ್ರಾಮಾನುಜರು, ಎನ್ರು = ಎಂದು, ಅೞೈಕ್ಕುಮ್ = ಹೇಳುತ್ತಿದೆ. ಅರುವಿನೈಯೇನ್ = ಮಹಾ ಪಾಪಿಯಾದ ನನ್ನ, ಕೈಯುಮ್ = ಹಸ್ತಗಳು, ತೊೞುಮ್ = ಅಂಜಲಿಮಾಡಿ ನಮಸ್ಕರಿಸುತ್ತಿವೆ - ಕಣ್ = ನೇತ್ರಗಳು, ಕಾಣ = ನೋಡಲು, ಕರುದಿಡುಮ್ = ಆಶೆಪಡುತ್ತಿವೆ. ಕಡಲ್ = ಸಮುದ್ರವು, ಪುಡೈಶೂೞ್ = ಸುತ್ತಲೂ ಬಳಸಿರುವ, ವೈಯಮಿದನಿಲ್ = ಈ ಭೂಲೋಕದಲ್ಲಿ, ಉನ್ ವಣ್ಮೈ = ನಿಮ್ಮ ಔದಾರ್ಯವು, ಎನ್ಪಾಲ್ = ನನ್ನ ವಿಷಯದಲ್ಲಿ, ಎನ್ ವಳರ್ನ್ದದು = ಯಾವ ಕಾರಣದಿಂದ - ಇಷ್ಟೊಂದು ವೃದ್ಧಿಹೊಂದಿತು ? ಎಂದು ಹೇಳುತ್ತಾರೆ.

ತಾ :—ಹಿಂದಿನ ಪಾಶುರದಲ್ಲಿ ಸ್ವಾಮಿ ಎಂಬೆರುಮಾನಾರ್ರವರ ಭೋಗ್ಯತೆಯಲ್ಲಿ ಆಸಕ್ತನಾಗಿರದೆ ಅವರ ಪಾವನತ್ವವನ್ನು ಕೊಂಡಾಡಿದ್ದು, ಅವರನ್ನು ಅನುಸಂಧಿಸಿ ಶಿಥಿಲರಾಗಿರುವವರುಗಳಿಗೆ ಅಶಕ್ಯವಾಗಿರುವುದೆಂದು ಹೇಳಿ ಈ ಪಾಶುರದಲ್ಲಿ "ಅವರುಗಳ ವಿಷಯದಲ್ಲಿ ದೋಷವು ತೀರುವಂತೆ ಅಂತಃಕರಣಗಳೂ, ಬಾಹ್ಯಕರಣಗಳೂ ಭೇದವಿಲ್ಲದೆ ಎಲ್ಲಾ ಸ್ವಾಮಿ ಎಂಬೆರುಮಾನಾರ್ರವರಲ್ಲಿ ಅತಿಮಾತ್ರ ಪ್ರಾವಣ್ಯದಿಂದ ಸಕ್ತನಾಗಿ ಮುಳುಗಿವೆ" ಎಂದು ಹೇಳುತ್ತಾ "ಈ ಭೂಲೋಕದಲ್ಲಿರುವ ಎಲ್ಲಾ ಚೇತನರನ್ನೂ ಬಿಟ್ಟು ನಿಮ್ಮ ಔದಾರ್ಯವು ನನ್ನೊಬ್ಬನಮೇಲೆ ವಿಶೇಷವಾಗಿ ಬೆಳೆದು ಬರುವುದಕ್ಕೆ ಕಾರಣವೇನು ?" ಎಂದು ಅವರನ್ನೆ ಕೇಳುತ್ತಾರೆ.

**103.** ವಳರ್ನ್ದವೆಙ್ ಕೋಪಮಡಙ್ಗಲೊನ್ರಾಯ್,
ಅನ್ರುವಾಳವುಣನ್
ಕಿಳರ್ನ್ದ ಪೊನ್ನಾಗಮ್ ಕಿೞಿತ್ತವನ್, ಕೀರ್ತಿಪ್ಪಯಿರೆೞುನ್ದು
ವಿಳೈನ್ದಿಡುಮ್ ಶಿನ್ದೈ ಇರಾಮಾನುಶನೆನ್ದನ್ ಮೆಯ್ವಿನೈ
ನೋಯ್
ಕಳೈನ್ದು ನನ್ಞಾನಮಳಿತ್ತನನ್, ಕೈಯಿಲ್ಕನಿಯೆನ್ನವೇ ||

ಅರ್ಥ:—ವಳರ್‌ನ್ದ = ಅಭಿವೃದ್ಧಿಯನ್ನು ಹೊಂದಿದ, ವೆಮ್ = ಅತಿ ತೀಕ್ಷ್ಣವಾದ, ಕೋಪಮ್ = ಕೋಪವುಳ್ಳ, ಒನ್ರು ಮಡಂಗಲಾಯ್ = ಒಂದು ಅದ್ವಿತೀಯವಾದ ನರಸಿಂಹ ರೂಪವನ್ನು ತಾಳಿ, ಅನ್ರು = ಆಗ (ಅಂದರೆ ಭಕ್ತ ಪ್ರಹ್ಲಾದನನ್ನು ಹೆತ್ತ ತಂದೆ ಹಿರಣ್ಯಕಶಿಪು ಬಾಧಿಸುತ್ತಿದ್ದ) ಆ ಕಾಲದಲ್ಲಿ-ವಾಳ್ ಅವುಣನ್ = ಖಡ್ಗಹಸ್ತನಾಗಿಯೇ ತಿರುಗುತ್ತಿದ್ದ ಹಿರಣ್ಯಾಸುರನ, ಕಿಳರ್‌ನ್ದ = ಚೆನ್ನಾಗಿ ಬೆಳೆದಿದ್ದ, ಪೊನ್ ಆಕಮ್ = ಸ್ವರ್ಣವರ್ಣದಿಂದಕೂಡಿದಶರೀರವನ್ನು, ಕೀಣ್ಡವನ್ = ಸೀಳಿದವನ-ಕೀರ್‌ತ್ತಿ = ಕೀರ್ತಿಯೆಂ-ಪಯಿರ್ = ಪೈರು (ಸಸ್ಯವು), ಎೞುನ್ದು = ಚಿಗುರಿ, ವಿಳೈನ್ದಿಡುಮ್ = ದೊಡ್ಡದಾಗಿ ಬೆಳೆದು ಫಲವನ್ನು ಕೊಡತಕ್ಕ, ಶಿನ್ದೈ = ಮನಸ್ಸನ್ನುಳ್ಳ, ಇರಾಮಾನುಶನ್ = ಸ್ವಾಮಿ ರಾಮಾನುಜರು, ಎನ್ದನ್ = ನನ್ನ, ಮೆಯ್ಯ್ = ಶರೀರದಿಂದ ಮಾಡಲ್ಪಟ್ಟ-ವಿನೈ = ಪಾಪ ಕರ್ಮಗಳಿಂದ ಉಂಟಾದ, ನೋಯ್ = ವ್ಯಾಧಿಗಳನ್ನು, ಕಳೈನ್ದು = ಹೋಗಲಾಡಿಸಿ, ಕೈಯಿಲ್ ಕನಿಯೆನ್ನ = ಹಸ್ತದಲ್ಲಿರುವ ಹಣ್ಣಿನಂತೆ ಸುಲಭವಾಗಿ ಸುವ್ಯಕ್ತವಾಗಿರುವಂತೆ, ನಲ್‌ಜ್ಞಾನಮ್ = ಸುಜ್ಞಾನವನ್ನು, ಅಳಿತ್ತನನ್ = ದಯೆಯಿಂದ ಕರುಣಿಸಿದರು.

ತಾ:—ಅತ್ಯಂತ ಕೋಪಾವಿಷ್ಟನಾಗಿರುವ ಅದ್ವಿತೀಯವಾದ ನರಸಿಂಹ ರೂಪವನ್ನು ಕೊಂಡಾಡಿ ಸ್ವಾಶ್ರಿತರಾದ ದೇವತೆಗಳ ಸ್ಥಾನಗಳನ್ನು ಆಕ್ರಮಿಸಿ ತಾನೇ ಸರ್ವೇಶ್ವರನೆಂದೆಣಿಸಿ ಲೋಕದವರನ್ನೆಲ್ಲಾ ಬಾಧಿಸುವುದಕ್ಕಾಗಿಯೇ ಖಡ್ಗಪಾಣಿಯಾಗಿ ಮೂರು ಲೋಕದ ಏಕಚಕ್ರಾಧಿಪತ್ಯವನ್ನು ಮಾಡಿಕೊಂಡು ತಿರುಗುತ್ತಿದ್ದ ಆ ಹಿರಣ್ಯಕಶಿಪುವಿನ ಸುವರ್ಣದಂತಿದ್ದ ಶರೀರವನ್ನು ಅನಾಯಾಸವಾಗಿ ಸೀಳಿ ಬಿಸಾಡಿದ-ಸರ್ವೇಶ್ವರನಾದ ನರಸಿಂಹನ ದಿವ್ಯ ಕೀರ್ತಿಯನ್ನು ತಮ್ಮ ಹೃದಯದಲ್ಲಿ ಸದಾ ಧ್ಯಾನಮಾಡುತ್ತಿರುವ ಯತಿವರ್ಯರಾದ ಸ್ವಾಮಿ ಎಂಬೆರುಮಾನಾರ್‌ರವರು ನನ್ನ ಆಧ್ಯಾತ್ಮಿಕಾದಿ ದುಃಖಗಳನ್ನು ಸಮೂಲವಾಗಿ ಹೋಗಲಾಡಿಸಿ ಅಂಗೈಯಲ್ಲಿರುವ ನೆಲ್ಲಿಕಾಯಿಯಂತೆ ತತ್ವ ಹಿತಪುರುಷಾರ್ಥಗಳ ನಿಜವಾದ ಸ್ವರೂಪವನ್ನು ತಾವಾಗಿಯೇ ಸ್ಫುಟವಾಗಿ ಉಪದೇಶಿಸಿ ನನಗೆ ಪ್ರಜ್ಞೆಯನ್ನು ಕರುಣಿಸಿದರು" ಎಂದು ಹೇಳುತ್ತಾರೆ.

**104.** **ಕೈಯಿಲ್ಕನಿಯೆನ್ನ ಕಣ್ಣನೈಕ್ಕಾಟ್ಟಿತ್ತರಿಲುಮ್, ಉನ್ದನ್**
**ಮೆಯ್ಯಿಲ್ ಪಿರಂಗಿಯ ಶೀರನ್ರಿ ವೇಣ್ಡಿಲನ್ಯಾನ್, ನಿರಯ**

ತೊತ್ತುಯ್ಯಿಲ್ ಕಿಡಕ್ಕಿಲುಮ್ ಶೋದಿವಿಣ್ ಶೇರಿಲುಮ್

ಇನ್ನರುಳ್ ನೀ

ತೀರ್ಮೈಯ್ಯಿಲ್ ತರಿಕ್ಕಿಲೇನ್, ಅರಾವಣೈಯಾ ನೆನ್ನಪ್ಪನ್ ಶೊಣ್ಣಾಲೇ॥

ಅರ್ಥ :— ಶ್ರೀಪ್ರನ್ = ಶ್ಲಾಘ್ಯನಾದ, ಶೊಣ್ಣಾಲ್ = ಮೋಹದಂತೆ ಕರಮೋಹಾರವಾದ, ಎನ್ ಅರಾವಣೈಯಾ = ನನ್ನ ಒಡೆಯನಾದ ರಾಮಾನುಜರೇ! ಕಣ್ಣನ್ನೈ = ಅತ್ಯಂತಸುಲಭನಾದ ಕೃಷ್ಣನನ್ನು, ಕೈಯಿಲ್ ಕನಿ ಯೆನ್ನ = ಅಂಗೈಯಲ್ಲಿರುವ ಹಣ್ಣಿನಂತೆ, ಕಾಟ್ಟಿತ್ತರಿನುಮ್ — ತೋರಿಸಿ ಕೊಟ್ಟರೂ, ಉನ್ ತನ್ = ನಿಮ್ಮ, ಮೆಯ್ಯಿಲ್ = ದಿವ್ಯ ಮಂಗಳ ವಿಗ್ರಹ ದಲ್ಲಿ, ಪಿರಂಗಿಯ = ಪ್ರಕಾಶಿಸುತ್ತಿರುವ, ಶೀರ್ ಅನ್ರಿ — ಸೌಂದರ್ಯ ಲಾವಣ್ಯ ಗುಣಗಳನ್ನು ಬಿಟ್ಟು, ಯಾನ್ ವೇಣ್ಡಿಲನ್ = ನಾನು ಮತ್ತೊಂದನ್ನೂ ಅಪೇಕ್ಷಿಸುವುದಿಲ್ಲ. ನಿರಯತ್ತೊತ್ತುಯ್ಯಿಲ್ = ನರಕಪ್ರಾಯವಾದ ಸಂಸಾರವೆಂಬ ಕೆಸರಿನಲ್ಲಿ - ಕಿಡಕ್ಕಿಲುಮ್ = ಬಿದ್ದಿದ್ದರೂ, ಶೋದಿವಿಣ್ ಶೇರಿಲುಮ್ = (ಅಯ್ಯೋ! ಪಾಪ ನಮ್ಮವನೇ ಆಗಿರುತ್ತಾನೆ ಎಂದು) ನಿರವಧಿಕ ತೇಜೋ ರೂಪವಾದ ಪರಮಪದದಲ್ಲಿ ಸೇರಿಸಿದರೂ, ಇನ್ನರುಳ್ = ನಿಮ್ಮ ಗುಣಾನುಭವವನ್ನು ಮಾಡುವಂತೆ ಕರುಣಿಸಿದರೆ, ನೀರ್ಮೈಯ್ಯಿಲ್ = ನೀವು ಮಾಡಿದ ಕೃಪಾತಿಶಯದಿಂದ - ತರಿಕ್ಕಿಲೇನ್ = ಪ್ರಾಣವನ್ನು ಧರಿಸಿಕೊಂಡಿರುವೆನು.

ತಾ:-"ನೀವು ಸಕಲ ಜನಮನೋಹಾರಿಗಳಾದ ದಿವ್ಯಚೇಷ್ಟಿತಂಗಳನ್ನು ಮಾಡಿದ ಆ ಶ್ರೀಕೃಷ್ಣಪರಮಾತ್ಮನನ್ನು ಕರತಲಾಮಲಕವಾಗಿ ತೋರಿಸಿ ಕೊಟ್ಟರೂ ನಿಮ್ಮ ದಿವ್ಯಮಂಗಳ ವಿಗ್ರಹದಲ್ಲಿ ಪ್ರಕಾಶವಾಗಿ ನಿಂತಿರುವ ಕಲ್ಯಾಣಗುಣಗಳನ್ನು ಬಿಟ್ಟು ನಾನು ಬೇರೊಂದು ವಿಷಯವನ್ನೂ ಬೇಡು ವುದಿಲ್ಲ (ಅಪೇಕ್ಷಿಸುವುದಿಲ್ಲ). ಅವರೆ, ಇವನು ಹೀಗೆ ಮೂರ್ಖನಾಗಿ ಹೇಳ ಬಹುದೋ ಎಂದು ಕೋಪಿಸಿಕೊಂಡು ನನ್ನನ್ನು ಸಂಸಾರವೆಂಬ ನರಕದಲ್ಲಿ ತಳ್ಳಿದರೂ; ನನ್ನನ್ನು ಅಭ್ರಮಿಸಿದ್ದಾನೆಂದು ನಿರವಧಿಕ ತೇಜೋ ರೂಪವಾದ ಪರಮಪದದಲ್ಲಿ(ಕೊಂಡುಹೋಗಿ) ಸೇರಿಸಿದರೂ, ಮಳೆ ಮುಗಿಲಿನಂತೆ ಕರಮೋ ದಾರರಾಗಿರುವ ಸ್ವಾಮಿ ಎಂಬೆರುಮಾನಾರ್ಯರೇ! ನಿಮ್ಮ ದಿವ್ಯ ಮಂಗಳ ವಿಗ್ರಹವನ್ನು ಅನುಭವಿಸುವುದಕ್ಕೆ ಕಾರಣವಾದ ನಿರ್ಹೇತುಕ ಪರಮ ಕೃಪೆ

ಯಿಂದ ವಿಭೂತಿದ್ವಯದಲ್ಲಿ ಯಾವುದಾದರೂ ಒಂದು ಭಾಗದಲ್ಲಿ ಕಾಲೂರಿ ನಿಂತು ಧರಿಸುವೆನು, ಇಲ್ಲದಿದ್ದರೆ ಒಂದು ಕಡೆಯಲ್ಲಿ ಇರಲೂ ಸಾಧ್ಯವಿಲ್ಲ" ಎನ್ನುತ್ತಾರೆ.

105. ಶೆೞುನ್ದಿರೈಪ್ಪಾರ್ಕಡಲ್ಕಣ್ತುಯಿಲ್ ಮಾಯನ್, ತಿರುವಡಿಕ್ಕೀೞ್
ವಿೞುನ್ದಿರುಪ್ಪಾರ್, ನೆಂಜಿಲ್ಮೇವುನಲ್ ಞಾನಿ,
ನಲ್ವೇದಿಯರ್ಗಳ್
ತೊೞುಮ್ ತಿರುಪ್ಪಾದನ್ ಇರಾಮಾನುಶನೈತ್ತೊೞುಮ್ಪೆರಿಯೋರ್
ಎೞುನ್ದಿರೈತ್ತಾಡುಮಿಡಮ್, ಅಡಿಯೇನುಕ್ಕಿರುಪ್ಪಿಡಮೇ ||

ಅರ್ಥ :- ಶೆೞುನ್ ತಿರೈ — ರಮ್ಯವಾದ ಅಲೆಗಳುಳ್ಳ, ಪಾರ್ಕಡಲ್ = ಕ್ಷೀರಸಮುದ್ರದಲ್ಲಿ, ಕಣ್ ತುಯಿಲ್ — ಯೋಗನಿದ್ರೆಯಲ್ಲಿರುವ, ಮಾಯನ್ = ಆಶ್ಚರ್ಯಗುಣಚೇಷ್ಟಿತನಾದ ಸರ್ವೇಶ್ವರನ, ತಿರುವಡಿಕ್ಕೀೞ್ — ದಿವ್ಯ ಚರಣಗಳ ಕೆಳಗೆ, ವಿೞುನ್ದಿರುಪ್ಪಾರ್ = ಸರ್ವಕಾಲದಲ್ಲೂ ಬಿದ್ದಿರುವವರು, ನೆಂಜಿಲ್ — ತಮ್ಮ ಮನಸ್ಸಿನಲ್ಲಿ, ಮೇವುಮ್ = ಆಶಿಸುವ. ನಲ್ ಞಾನರ್ — ಒಳ್ಳೆ ಜ್ಞಾನವುಳ್ಳ - ನಲ್ ವೇದಿಯರ್ಗಳ್ = ಪರಮ ವೈದಿಕರು, ತೊೞುಮ್ = ಭಜಿಸುವ (ನಮಿಸುವ), ತಿರುಪ್ಪಾದನ್ = ದಿವ್ಯ ಪಾದಗಳನ್ನುಳ್ಳ, ಇರಾಮಾನುಶನೈ = ಶ್ರೀ ರಾಮಾನುಜರನ್ನು - ತೊೞುಮ್ = ಸೇವೆ ಮಾಡಿಕೊಂಡಿರುವ, ಪೆರಿಯೋರ್ = ಮಹಾತ್ಮರುಗಳು, ಎೞುನ್ದು = ಎದ್ದು ನಿಂತುಕೊಂಡು, ಇರೈತ್ತು = ಗಟ್ಟಿಯಾಗಿ ಹಾಡಿ - ಆಡುಮ್ = ನರ್ತನ ಮಾಡುತ್ತಿರುವ (ವಾಸಿಸುವ), ಇಡಮ್ = ಸ್ಥಳವು, ಅಡಿಯೇನುಕ್ಕು = ದಾಸನಾದ ನನಗೆ, ಇರುಪ್ಪಿಡಮ್ = ವಾಸಸ್ಥಾನವಾಗಿರುವುದು.

ತಾ:— ಸುಂದರವಾದ ಕ್ಷೀರಸಮುದ್ರದಲ್ಲಿ, ಯೋಗ ನಿದ್ರೆಯಲ್ಲಿರುವ ಸರ್ವೇಶ್ವರನ ಗುಣಗಳಲ್ಲಿ ಮಗ್ನರಾಗಿರುವ, ನಿಶ್ಚಿಂತರಾದ ತಪೋಧನರುಗಳು ಆಶಿಸುವ ವಿಲಕ್ಷಣ ಜ್ಞಾನವುಳ್ಳ, ಪರಮ ವೈದಿಕೋತ್ತಮರಿಂದ ಅನವರತವೂ ಸೇವಿಸಲ್ಪಡುತ್ತಿರುವ ದಿವ್ಯಚರಣಗಳನ್ನುಳ್ಳ ಸ್ವಾಮಿ ಎಂಬೆರುಮಾನಾರ್‌ರವರನ್ನು ಸದಾ ಗಾಯನ, ನರ್ತನಾದಿಗಳಿಂದ ಅನುಭವಿಸಿಕೊಂಡಿರುವವರುಗಳು, ವಾಸಮಾಡಿಕೊಂಡಿರುವ ಸ್ಥಳವೇ ಅವರ ದಾಸನಾದ ನನಗೆ ವಾಸದ

ಪ್ರವೇಶವು '' ಎಂದು ಅರಿತು, ಹಿಂದೆ ತಾವು ಹೇಳಿದ ಸ್ವಾರಸ್ಯವನ್ನು ಅನುಭವಿಸುವುದಕ್ಕೆ ತಕ್ಕ ಬೀಜವನ್ನು ಈ ಪದ್ಯದಲ್ಲಿ ನಿಷ್ಕರ್ಷಿಸಿ ಹೇಳುತ್ತಾರೆ.

106. ಇರುಪ್ಪಿಡಮ್ ವೈಗುನ್ದಮ್ ವೇಂಗಡಮ್, ಮಾಲಿರುಞ್
ಶೋಲೈಯೆನ್ನುಮ್
ಪೊರುಪ್ಪಿಡಮ್ ಮಾಯನುಕ್ಕೆನ್ಬರ್ ನಲ್ಲೋರ್,
ಅವ್ವೈ ತನ್ನೊಡುಮ್ ವ
ನ್ದಿರುಪ್ಪಿಡಮಾಯನಿರಾಮಾನುಶನ್ಮನತ್ತಿನ್ರವನ್ ವ
ನ್ದಿರುಪ್ಪಿಡಮ್, ಎನ್ತನಿದಯತ್ತುಳ್ಳೇ ತನಕ್ಕಿನ್ಬುರವೇ ||

ಅರ್ಥ :—ಮಾಯನುಕ್ಕು = ಆಶ್ಚರ್ಯಭೂತನಾದ ಸರ್ವೇಶ್ವರನಿಗೆ, ಇರುಪ್ಪಿಡಮ್ = ವಾಸಸ್ಥಾನವು, ವೈಗುನ್ದಮ್ = ಶ್ರೀವೈಕುಂಠ, ವೇಂಗಡಮ್ = ತಿರುವೇಂಗಡಂ ಎಂಬ ತಿರುಪತಿಬೆಟ್ಟ. ಮಾಲಿರುಞ್ಚೋಲೈ ಎನ್ನುಮ್ = ತಿರುಮಾಲಿರುಞ್ಚೋಲೈ ಎಂಬ ಪ್ರಸಿದ್ಧವಾದ, ಪೊರುಪ್ಪು ಇಡಮ್ = ಗಿರಿಪ್ರದೇಶವೆಂದು ನಲ್ಲೋರ್ = ಸಜ್ಜನರು (ಜ್ಞಾನಿಗಳು) ಎನ್ಬರ್ = ಹೇಳುವರು. ಮಾಯನ್ = ಹೀಗೆ ಇರುವ ಆ ಸರ್ವೇಶ್ವರನು, ಅವ್ವೈ ತನ್ನೊಡುಮ್ ವನ್ದು = ಆ ದಿವ್ಯದೇಶಗಳೊಡನೆ ಬಂದು, ಇರುಪ್ಪಿಡಮ್ = ವಾಸಮಾಡುತ್ತಿರುವ ಸ್ಥಳವು, ಇರಾಮಾನುಶನ್ ಮನತ್ತು = ಸ್ವಾಮಿ ಎಂಬೆರುಮಾನಾರ್ರವರ ಹೃದಯದಲ್ಲಿ. ಇನ್ರು = ಈಗ, ಅವನ್ ವನ್ದು = ಶ್ರೀ ರಾಮಾನುಜರು ಬಂದು, ತನಕ್ಕು = ತಮಗೆ ಇನ್ಬು ಉರ = ಸಂತೋಷವಾಗುವಂತೆ, ಇರುಪ್ಪಿಡಮ್ = ನೆಲೆಸಿರುವ ಸ್ಥಳವು, ಎನ್ ತನ್ = ನನ್ನ ಇದಯತ್ತುಳ್ಳೇ = ಹೃದಯದೊಳಗೆ.

ತಾ:—ವೇದ, ಮತ್ತು ತದಂಗಗಳಾದಿ ಶ್ರುತಿವಾಕ್ಯವಾದ, ಸ್ಮೃತಿ, ಇತಿಹಾಸ, ಪುರಾಣಾದಿಗಳಲ್ಲಿ ಪರಿಶೀಲನೆ ಮಾಡಿರುವವರು, ಆ ಸರ್ವೇಶ್ವರನಿಗೆ ಪ್ರಿಯತಮವಾದ, ವೈಕುಂಠ, ವೇಂಕಟಗಿರಿ, ತಿರುಮಾಲಿರುಞ್ಚೋಲೈ, ಎಂಬ ನಗರಿ ಮೊದಲಾದ ದಿವ್ಯ ಸ್ಥಳಗಳು ಎಂದು ಹೇಳುವರು. ಆ ಸರ್ವೇಶ್ವರನು ಈ ದಿವ್ಯ ಸ್ಥಳಗಳೊಡನೆ ಬಂದು, ಸ್ವಾಮಿ ಎಂಬೆರುಮಾನಾರ್ರವರ ಹೃದಯದಲ್ಲಿ ಅತ್ಯಂತ ಪ್ರೀತಿ ಪುರಸ್ಸರವಾಗಿ ತಾನೇ ಅಪೇಕ್ಷೆಯಿಂದ ವಾಸಿಸು

ತ್ತಾನೆ. ಈಗ ಅದರಂತೆ ಆ ದಿವ್ಯ ದೇಶಗಳೊಡನೆ, ಆ ದಿವ್ಯ ದೇಶಗಳ ಪತಿಯಾದ ಸರ್ವೇಶ್ವರನೊಡನೆಯೂ ಅತ್ಯಂತಾದರದಿಂದ ಸ್ವಾಮಿ ಎಂಬೆರುಮಾನಾರ್ರವರು ಬಂದು ನನ್ನ ಹೃದಯದಲ್ಲಿ ಬಹಳ ಸಂತೋಷದಿಂದ ನೆಲೆಸಿರುವರು ಎಂದು ತಿಳಿಸಿ ತಿರುವರಂಗತ್ತಮುದನಾರ್ರವರು ಹೃಷ್ಟರಾಗುತ್ತಾರೆ.

107. ಇನ್ಬುತ್ತ ಶೀಲತ್ತಿರಾಮಾನುಶ, ಎನ್ರುಮೆವ್ವಿಡತ್ತು
ಎನ್ಬುತ್ತನೋಯುಡಲ್ ತೋರುಮ್ಪಿರನ್ದಿರನ್ದು, ಎಣ್ಣರಿಯ
ತುನ್ಬುತ್ತುವೀಯಿನುಮ್ ಶೊಲ್ಲುವದೊನ್ರುಣ್ಡು
ಉನ್‌ತೊಣ್ಡರ್‌ಕಟ್ಕೇ
ಅನ್ಬುತ್ತಿರುಕ್ಕುಮ್ಪಡಿ, ಎನ್ನೈಯಾಕ್ಕಿಯಂಗಾಳ್ ಪಡುತ್ತೇ ||

ಅರ್ಥ :— ಇನ್ಬು ಉತ್ತ — ಆನಂದಭರಿತರಾಗಿ - ಶೀಲತ್ತು = ಸೌಶೀಲ್ಯವುಳ್ಳ. ಇರಾಮಾನುಶ = ಶ್ರೀರಾಮಾನುಜರೇ! ಶೊಲ್ಲುವದು = ನಿಮಗೆ ಹೇಳಿ ವಿಜ್ಞಾಪಿಸಿಕೊಳ್ಳುವುದು ಒನ್ರುಣ್ಡು = ಒಂದು ಇದೆ (ಅದೇನೆಂದರೆ), ಎನ್ಬು ಉತ್ತ — ಅಸ್ಥಿಗತವಾಗಿರುವ, ನೋಯ್ — ವ್ಯಾಧಿಗಳನ್ನುಳ್ಳ, ಉಡಲ್ ತೋರುಮ್ = ಶರೀರಗಳಲ್ಲಿ, ಪಿರನ್ದು = ಹುಟ್ಟಿ, ಇರನ್ದು = ಮರಣ ಹೊಂದಿಯೂ, ಎಣ್ ಅರಿಯ = ಲೆಕ್ಕವಿಲ್ಲದ, ತುನ್ಬು ಉತ್ತು = ದುಃಖಗಳನ್ನು ಅನುಭವಿಸಿ, ವೀಯಿನುಮ್ — ನಶಿಸಿಹೋದರೂ, ಎನ್ರುಮ್ = ಎಲ್ಲಾ ಕಾಲದಲ್ಲೂ, ಎವ್ವಿಡತ್ತುಮ್ = ಎಲ್ಲಾ ದೇಶಗಳಲ್ಲಿಯೂ, ಉನ್ ತೊಣ್ಡರ್ ಕಟ್ಕೇ — ನಿಮ್ಮ ದಾಸರವಿಷಯದಲ್ಲಿಯೇ - ಅನ್ಬು ಉತ್ತು ಇರುಕ್ಕುಮ್ಪಡಿ = ಪ್ರೀತಿ ವಿಶ್ವಾಸಗಳನ್ನು ಹೊಂದಿರುವಂತೆ. ಆಕ್ಕಿ = ಮಾಡಿ, ಎನ್ನೈ = ನನ್ನನ್ನು, ಅಂಗು ಆಳ್ ಪಡುತ್ತು — ಅವರುಗಳಿಗೆ ದಾಸನನ್ನಾಗಿ ಮಾಡಿರಿ.

ತಾ :— 'ಸರ್ವೇಶ್ವರನಲ್ಲಿ ನಿರತಿಶಯವಾದ, ವ್ಯಾಮೋಹ, ಸೌಶೀಲ್ಯವನ್ನು ಉಳ್ಳ ಶ್ರೀ ರಾಮಾನುಜರೇ!, ಎಂದು ಅವರನ್ನು ಸಂಬೋಧಿಸಿ, 'ಅಸ್ಥಿಗತವಾಗಿ ನಿಂತು ಪೀಡಿಸುವ ವ್ಯಾಧಿಗಳಿಗೆ ಭಾಜ್ಯನಾದ ನಾನಾ ಶರೀರಗಳಲ್ಲಿ ಹುಟ್ಟುವುದು, ಮತ್ತು ಮರಣಹೊಂದುವುದು, ಮುಂತಾದ ಅಸಂಖ್ಯಾತವಾದ ದುಃಖಗಳನ್ನು ಅನುಭವಿಸಿ ನಾಶಹೊಂದಿದರೂ ಸರ್ವಕಾಲ, ಸರ್ವದೇಶ, ಸರ್ವಾವಸ್ಥೆಗಳಲ್ಲೂ ನಿಮಗೆ ಅನನ್ಯಾರ್ಹರಾಗಿರುವವರ ವಿಷಯದಲ್ಲಿ ಅತಿ ವ್ಯಾಮುಗ್ಧರಾಗಿ, ಅವರುಗಳಿಗೆ ನಾನು ಕ್ರಯವಿಕ್ರಯಾರ್ಹನಾಗಿ,

ಅವರ ಸೇವೆಯನ್ನು ಮಾಡುವಂತೆ ದಾಸನಾದ ನನ್ನನ್ನು ಮಾಡಬೇಕೆಂದು ತಮ್ಮ ಅಪೇಕ್ಷೆಯನ್ನು ವಿಜ್ಞಾಪಿಸಿಕೊಳ್ಳುತ್ತಾರೆ.

**108.** ಅಂಕಯಲ್ ಪಾಯ್ವಯಲ್ ತೆನ್ನರಂಗನ್, ಅಣಿಯಾಗ
ಮನ್ನುಮ್
ಪಂಗಯಮಾಮಲರ್ಪ್ಪಾವೈಯೈಪ್ಪೋಱ್ಱುದುಮ್,
ಪತ್ತಿಯೆಲ್ಲಾಮ್
ತಂಗಿಯದೆನ್ನತ್ತಳೈತ್ತುನೆಂಜೇ ನನ್ದಲೈಮಿಶೈಯೇ
ಪೊಂಗಿಯಕೀರ್ತ್ತಿ, ಇರಾಮಾನುಶನಡಿಪ್ಪೂಮನ್ನವೇ ॥

ಅರ್ಥ: — ನೆಂಜೇ — ಓ ಮನಸ್ಸೇ! ಪತ್ತಿ — ಭಕ್ತಿ, ಎಲ್ಲಾಮ್ — ಸಂಪೂರ್ಣವಾಗಿ, ತಂಗಿಯದೆನ್ನ — ನೆಲೆಸಿರುವಂತೆ, ತಳೈತ್ತು — ಸಮೃದ್ಧಿಯಾಗಿ ಬೆಳೆದು, ಪೊಂಗಿಯ — ವಿಸ್ತೃತವಾದ, ಕೀರ್ತ್ತಿ — ಯಶಸ್ಸುಳ್ಳ, ಇರಾಮಾನುಶನ್ — ಶ್ರೀ ರಾಮಾನುಜರು, ಅಡಿಪ್ಪೂ — ಶ್ರೀಪಾದವೆಂಬ ಪುಷ್ಪವು, ನಮ್ ತಲೈಮಿಶೈ — ನಮ್ಮ ಶಿರಸ್ಸಿನಮೇಲೆ, ಮನ್ನ — ನಿತ್ಯವಾಸಮಾಡುವಂತೆ, ಅಮ್ — ರಮ್ಯವಾದ, ಕಯಲ್ — ಮತ್ಸ್ಯಗಳು, ಪಾಯ್ — ಹಾರಾಡುತ್ತಿರುವ, ವಯಲ್ — ಬಯಲುಗಳಿರುವ, ತೆನ್ — ಸುಂದರವಾದ, ಅರಂಗನ್ — ಶ್ರೀರಂಗದಲ್ಲಿ ಶಯನಿಸಿರುವ ಪೆರಿಯ ಪೆರುಮಾಳ್ ಎಂಬ ಶ್ರೀರಂಗನಾಥರ - ಅಣಿ — ಸುಂದರವಾದ, ಆಗಮ್ — ವಕ್ಷಸ್ಥಳದಲ್ಲಿ - ಮನ್ನುಮ್ — ನಿತ್ಯವಾಸಮಾಡುವ ಮಾ — ಶ್ಲಾಘ್ಯವಾದ ಪಂಗಯಮಲರ್ — ಕಮಲ ಪುಷ್ಪದಲ್ಲಿ ವಾಸಮಾಡುವ,(ಜನಿಸಿದ), ಪಾವೈಯೈ — ಶ್ರೀರಂಗನಾಯಕಿಯನ್ನು, ಪೋಱ್ಱುದುಮ್ — ಆಶ್ರಯಿಸುತ್ತೇನೆ - (ಆಶ್ರಯಿಸೋಣ).

ತಾ:— ಇದರಲ್ಲಿ ಸ್ವಾಮಿ ಎಂಬೆರುಮಾನಾರ್‌ರವರು ಪುಷ್ಪದಂತೆ ಸುಕುಮಾರವಾದ ತಮ್ಮ ದಿವ್ಯಚರಣಗಳಿಂದ ನಮ್ಮ ತಲೆಯನ್ನು ಅಲಂಕರಿಸಿ, ಅಲ್ಲಿಯೇ ಅವು ಸದಾ ನೆಲೆಸಿರುವಂತೆ ಕೃಪೆಗೈದಿರುವುದರಿಂದ ಆ ಪರಿಗ್ರಹಾತಿಶಯವನ್ನು ಕೊಂಡು ದಿವ್ಯ ದಂಪತಿಗಳಾದ, ಶ್ರೀ ಮತ್ತು ಶ್ರೀಯಃಪತಿಗಳಿಬ್ಬರಿಗೂ ಮಂಗಳಾಶಾಸನ ಮಾಡೋಣವೆಂದು, ಭಕ್ತಿತತ್ವವೆಲ್ಲಾ, ತಮ್ಮಲ್ಲಿಯೇ ನೆಲೆಸಿತೆನ್ನುವಹಾಗೆ ಅತ್ಯಭಿವೃದ್ಧವಾಗಿರುವ ತಮ್ಮ ಮನಸ್ಸಿಗೆ ತಾವು ಪಡೆದ ಫಲವನ್ನು ತಿಳಿಸಿ, ಈ ಪ್ರಬಂಧ ಪರಿಸಮಾಪ್ತಿಯನ್ನು ಮಾಡಿದ್ದಾರೆ.

॥ ಓಂ ॥

# ತಿದ್ದುಪಡಿಗಳು

ದಯೆಗೈದು ಮುಂದಿನವನ್ನು ತಿದ್ದಿಕೊಂಡು ಓದಬೇಕಾಗಿ ಕೋರಿಕೆ.

—ಅನುವಾದಕ

| ಪುಟ | ಸಾಲು | ತಪ್ಪು | ಒಪ್ಪು | ಪುಟ | ಸಾಲು | ತಪ್ಪು | ಒಪ್ಪು |
|---|---|---|---|---|---|---|---|
| i | 18 | ಗೋತ್ತು | ಗೊತ್ತು | 17 | 21 | ನ್ಯತ್ತಿ | ವೃತ್ತಿ |
| v | 18 | ಸ್ತ್ರೀ | ಶ್ರೀ | 17 | 24 | ಪಾ | ಜ್ಞಾ |
| 3 | 3 | ಜೀ | ಚೇ | 18 | 15 | ಪ | ಶ |
| 3 | 13 | ಸಂಬಂ | ಸಂಬಂಧ | 18 | 22 | ನ್ನೆ | ನ್ನೇ |
| „ | 14 | ಪ್ಪೀದು | ಪ್ಪೀದು | 19 | 2 | ಭಕ್ತಿ | ಭಕ್ತಿ |
| „ | 16 | ಸತ್ತು | ಸತ್ತೀ | 20 | 7 | ಗ | ಕ |
| „ | 20 | ವಗಿತ | ವಗಿತು | „ | 11 | ಕಲ್ಪೆ | ಕಲ್ಪೆ |
| 4 | 7 | ಕೆ | — | „ | „ | ಪತ್ತೆ | ಪತ |
| „ | „ | ಶ್ಯಾವಿ. | ಶ್ಯಾವಿ | „ | 19 | ಗತಿ | ಗತಿ |
| „ | 8 | ಕ್ಕ | ಕ. | „ | 22 | ಪಿಂಛಳ | ಪಿಂತಳ |
| „ | 21 | ತ್ರಿ | ತ್ರೀ | 22 | 15 | ಕೊಂತೆ | ಕೊಂಡತೆ |
| 5 | 8 | ಮ್ಯತ್ಸ್ಯ | ಮತ್ಸ್ಯ | 22 | 15 | ಅಂದ್ರೆ | ಅಂದರೆ |
| | 22 | ಉನ್ನ | ಮನ್ನ | 23 | 18 | ಕೊಡ್ಡುಂಡು | ಕೊಡ್ಡುಡು |
| | 23 | ಮ | ಸಾಂ | 22 | „ | ಕೊ | ಕೋ |
| 7 | 11 | ಉತ್ತ | ಉತ್ತ | 22 | 24 | ಧ್ರ | ಧ್ರ |
| 8 | 2 | ರಸೋಳ್ಳ | ರಸೋಹುಳ್ಳ | 24 | 2 | ಶಮರ್ | ಶಮ್ಮ |
| 9 | 9 | ಲ್ಲ | ದ್ದ | „ | 17 | ಸುಖಗಳು | ಒತ್ತಿಗೆ |
| „ | 14 | ನಾವಿನವರು | ನಾವ್ಯನವರು | 27 | 11 | ನೊಟ್ಟರ್ | ನೊಟ್ಟೆರ್ |
| 10 | 1 | ನೆನ್ನು | ನೆನ್ನು | 28 | 25 | ಪ್ರೀಯ | ಖಾಂಯ |
| 10 | 3 | ನ್ನನರ್ನ | ನ್ನರ್ನ | 29 | 16 | ಮೋಡಿ | ಮೋಡಿ. |
| 11 | 10 | ಪ್ರಕರ್ಷ | ಪ್ರಕರ್ಷ | „ | 17 | ಸ್ತೋತ್ರ | ಸ್ತೋತ್ರ |
| 14 | 8 | ಕಾಲು | ಕಾಲು. | „ | 26 | ತರ | ಕರ |
| „ | 9 | ಹಾಳ್ | ತಪ್ಪಳ್ | 33 | 1 | ಭಸ್ತ್ರಿ | ಭಸ್ತ್ರೀ |
| 15 | 7 | ಕನ್ನ | ಕನ್ನ | 34 | 8 | ಜೀ | ಜ್ಞೇ |
| 16 | 23 | ಗಳಲ್ಲಿ | ಗಳನ್ನು | 38 | 10 | ಯೆನ್ನು | ಯೆನ್ನು |
| 17 | 3 | ಲೆಲ್ಲಾ | ಲೆಲ್ಲಾ | | 15 | ಕಣ್ಣಿನ್ನ | ಕಣ್ಣಿನ್ನ |
| | | | ವ್ಯಾಪಿಸಿರುವ | | 19 | ತನ್ನಲ | ತನ್ನಲ್ಲ |
| 17 | 4 | ವ್ಯಾಪಿಸಿರುವ | — — | 39 | 16 | ಕಳ್ಳ | ಕಳ್ಳ |
| 17 | 5 | [ಶರಣಾವರ್ | ಶರಣಾವರ್ | 43 | 4 | ಸ್ತ್ಯ | ಸ್ತ್ಯ |
| = ತಿರುಪತಿಗೆಳೆಂಬ, ಪದುಮನಾಭರ್ = | | | | | 14 | ಕ್ಕೇ | ಕ್ಕೆ |
| ತಾವರೆ ಹೂವಿನಿಂದ] | | | | 44 | 11 | ಸಾಕ್ಷಿ | ಸಾಕ್ಷಿ |
| 17 | 5 | ಶನ್ನು | ಇರುಳ್ | „ | 18 | ಬ | ಪ |
| | | | ಶನ್ನು | „ | 20 | ಪರು | ಶೇರು |

| ಪುಟ | ಸಾಲು | ತಪ್ಪು | ಒಪ್ಪು | ಪುಟ | ಸಾಲು | ತಪ್ಪು | ಒಪ್ಪು |
|---|---|---|---|---|---|---|---|
| 45 | 1 | ಕಿಕ್ಕೆಲ | ದಿಕ್ಕೆಲ | 76 | 25 | ಕಳ್ಳಿತ್ತು | ಕಳ್ಳಿತ್ತಿ |
| ,, | 6 | ಪೆರು | ಪೊರು | 77 | 17 | ತಿನ್ನೆನೊತ್ತು | ತಿನ್ನೆನೊತ್ತೇ |
| ,, | 19 | ಶೀಲ | ಶಿಲ | 79 | 24 | ಕ್ಕನ್ | ಕ್ಕ |
| ,, | 23 | ಯೆವಾನ್ಸರಿ | ಯೆವಾನ್ಸರಂ | ,, | 25 | ನಾ | ನ್ನ |
| 46 | 2 | ಜಲತಭಾಗ | ಜಲತಲಭಾಗ | 80 | 14 | ಸಮಾಚೀನ | ಸಮೀಚೀನ |
| 47 | 8 | ಚೆಪ್ಟೀಲ್ | ಚೆಪ್ಟಲ್ | 81 | 8 | ನರ್ಕು | ನರ್ಕ್ |
| 48 | 15 | ಪಡಿ | ಕಡಿ | ,, | 20 | ದರು | ತರು |
| 49 | 1 | ಶ್ರೀಷ್ಟ | ಶೀಷ | ,, | 22 | ಸ್ತ್ರ್ತಿ | ಸ್ತ್ರಿ |
| ,, | 11 | ವನ್ನು | ನನ್ನು | ,, | 23 | ಣಸ್ವ | ಣಜಸ್ವ |
| 50 | 2 | ವೀ | ವೇ | ,, | 24 | ದರು | ತರು |
| 50 | 23 | ಭೂಮಿ | ಪೂಮಿ | 82 | 2 | ಹೊಂದಿಸಿ } | ಹೊಂದಿಸಿದ |
| 50 | 25 | ನಮುಕ್ಕುವನ್ | ನಮುಕ್ಕು | | | ಸಂಹರಿಸಿದ } | |
| 51 | 1 | ದಿಲ್ | ತಿಲ್ | ,, | 8 | ಹೋಗ | ಹೋಗದಿ |
| ,, | 12 | ಇಡುಕಲ್ | ಈಲ್ ಕಲ್ | 83 | 22 | ತಪ್ಪನ್ನೆ | ತಪ್ಪವ |
| 52 | 4 | ಕಿ | ಕೆ | 86 | 1 | ಗ್ರ | ಗೆ |
| ,, | 12 | ದರ್ಶಿ | ದರ್ಶೆ | ,, | 21 | ದಿಕ್ಕ | ದಿಕ್ಕ |
| 53 | 17 | ಕಣ್ಣು | ಕಣ್ಣ | 87 | 2 | ನೆರಿತ್ತನ್ನೆ | ನೆರತನ್ನೆ |
| ,, | 24 | ದರಾ | ದವರಾ | ,, | 4 | ನನೆನೆ | ನನೆನ್ನೆ |
| 54 | 16 | ದಲಾ | ದಲ | 89 | 9 | ಕನ್ನೆ | ಕಂದ್ಯೆ (ಕಿನ್ನೆ) |
| 55 | 5 | ಅಗ್ರಿ | ಅಗ್ನಿ | 91 | 3 | ಸಿಕ್ಕಿ | ಸ್ತಿಕ್ಕಿ |
| 56 | 1 | ತುರತ್ತುವನ್ | ತುರಕ್ಕುವನ್ | 98 | 8 | ನೆನ್ಸುವನ್ | ವೊನ್ಸುವನ್ |
| 59 | 25 | ಪ್ರಮಾಣ | ಪ್ರಣಾಮ | 104 | 17 | ನೆಲ | ನೇಲ |
| 60 | 3 | ಕೇತ್ತಿ | ಕೆತ್ತಿ | 105 | 10 | ತ್ತೆನೆಂದು | ತ್ತೇನೆಂದು |
| 60 | 21 | ದಿನಾ | ದಿನಾ | 106 | 16 | ಕೋಶಿಸು | ಕೋಶಿಸು |
| 61 | 18 | ರುವನ್ | + ಕ್ಕರುವನ್ | 107 | 9 | ಅವಸ್ವರು | ಅವಸ್ವರು |
| 61 | ,, | ಸಿಕ್ಕ | ಸಿಗ | 108 | 7 | ಪ್ರೋರ್ತಿ | ಪೋತ್ತಿ |
| 68 | 16 | ಸನ್ತೋಷ | ಸನ್ತೋಷ | 109 | 5 | ಹೊರಿತ | ಹೊರ |
| 69 | 24 | ನಿನ್ನೆಯಾದ | ನಿನ್ನೆಯಾನಿ | 110 | 4 | ಪ್ರಸನ್ನ | ಪ್ರಸನ್ನ |
| 72 | 1 | ಭ್ರಮಿತಂ | ಭ್ರಮಿಪ್ಪೊ(ತ್ತ) | 111 | 19 | ಅವರುಯ್ತವೇ | ಅವರು |
| 72 | 5 | ನೊರುದಿ | ನೊಟ್ಟೀದಿ | | | | ಯವೇ |
| 75 | 9 | ಕೊತ್ತನೆಮ್ಮ | ಕೊತ್ತೇನೆಮ್ಮು | ,, | | ತ್ತಲ್ಲೆಯಾ | ತ್ತಲ್ಲೆಯಾ |
| ,, | ,, | ಕನ್ರಸ್ | ಕರ್ಕೊಲ್ | 113 | 26 | ತ್ತಾಳ್ತಯ್ಯ | ತ್ತಾಳ್ಕಯ್ಯ |
| ,, | 22 | ಕಯುನಾನ್ | ಕಯುವನ್ | 115 | 12 | ಇಡುವೇ | ನಡುವೇ |
| 76 | 6 | ಚೇತನೂ | ಚೇತನೋ | ,, | 13 | ನಿತುವೋ | ನಿಡುವೇ |
| ,, | 10 | ಕಳ್ಳಿತ್ತು | ಕಳ್ಳಿತ್ತಿ | 119 | 26 | ಮಿಂದ | ಮಿದ |
| ,, | ,, | ಇನ್ರು | ಇಪ್ರು | 120 | 24 | ಕೀರ್ತಿ | ಕೀರ್ತ್ತಿ |